# ಹಂಪಿ ಪರಿಸರದ ಆದಿಮಾನವ ನೆಲೆಗಳು

## ಶಬ್ದಪಾರಮಾರ್ಗಮಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವ ಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ-ಕನ್ನಡಿಗ-ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು, ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ "ವಿಕಾಸ" ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ : ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿ ರೂಪುಗೊಂಡಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. "ಕನ್ನಡದ್ದೇ ಮಾದರಿ"ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ. ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನ ಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾ ಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ. ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ

ವಿವರಿಸುತ್ತಾ ಬಂದಿದೆ. ಅಂದರೆ ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

'ಹಂಪಿ ಪರಿಸರದ ಆದಿಮಾನವ ನೆಲಗಳು' ಕೃತಿಯಲ್ಲಿ ವಿಶ್ವವಿಖ್ಯಾತ ವಿಶ್ವಪರಂಪರೆಯ ಹಂಪಿಯ ಭೌಗೋಳಿಕ ಪರಿಸರದ ಪ್ರಾಗೈತಿಹಾಸಿಕ ಕಾಲದಿಂದಲೂ ಮಾನವನ ಅನಾಗರಿಕ ಸ್ಥಿತಿಯಿಂದ ನಾಗರಿಕ ಸ್ಥಿತಿಯವರೆಗಿನ ಕಾಲ ಅತ್ಯಂತ ವಿಶಿಷ್ಟ ಹಾಗೂ ವೈವಿಧ್ಯತೆಯಿಂದ ಕೂಡಿರುವಂತದ್ದು. ಆದಿಮಾನವನ ವಿಕಸನದ ಹಂತಗಳನ್ನು ಹಾಗೂ ಆದಿಮಾನವ ಸಾಂಸ್ಕೃತಿಕ ಜೀವನ ನಡೆಸುತ್ತಿದ್ದ ಎಂಬುದರ ಬಗ್ಗೆ ದೊರೆಯುವ ಹಲವು ಪ್ರಾಚ್ಯ ಅವಶೇಷಗಳಾದ ಗುಹೆಗಳು, ಕಲ್ಲಾಸರೆಗಳು, ಕೈಗೊಡಲಿಗಳು ಕುಟ್ಟಿದ, ಕೊರೆದ, ವರ್ಣ ಹಾಗೂ ರೇಖಾಚಿತ್ರಗಳು ಕಲ್ಲೋರಿಗಳಂತಹ ಮಾಹಿತಿಯ ಆಧಾರಗಳನ್ನು, ಆದಿಮಾನವ ಸಾಮಾಜಿಕ ಸಾಂಸ್ಕೃತಿಕ ಹಾಗೂ ಧಾರ್ಮಿಕ ವಿಧಿ-ವಿಧಾನಗಳ ವಿವರವಾದ ಮಾಹಿತಿಗಳನ್ನು ಈ ಕೃತಿ ಹೊಂದಿದೆ. ಇದನ್ನು ರಚಿಸಿಕೊಟ್ಟ ಮಾನವಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರು ಹಾಗೂ ಸಹಾಯಕ ಪ್ರಾಧ್ಯಾಪಕರು ಆದ ಡಾ.ಎಲ್.ಶ್ರೀನಿವಾಸ ಅವರಿಗೆ ಅಭಿನಂದನೆಗಳು.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ.ಮಂಜುನಾಥ ಬೇವಿನಕಟ್ಟಿ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ.ಸುಜ್ಞಾನ ಮೂರ್ತಿ ಅವರಿಗೆ ಅಭಾರಿಯಾಗಿದ್ದೇನೆ.

**ಡಾ. ಎ. ಮುರಿಗೆಪ್ಪ**
ಕುಲಪತಿ

# ನನ್ನ ಮಾತು

"ಸೌರ ಮಂಡಲ"ದ ಒಂಭತ್ತು ಗ್ರಹಗಳಲ್ಲಿ ಭೂಮಿಯೂ ಒಂದು ಗ್ರಹವಾಗಿದೆ. ಸುಮಾರು ಹದಿನೈದು ಬಿಲಿಯನ್ ವರ್ಷಗಳ ಹಿಂದೆ ವಿಶ್ವವು ಧೂಳು ಮತ್ತು ಅನಿಲಗಳ ಮಹಾರಾಶಿಯಾಗಿತ್ತು. ಈ ರಾಶಿಯ ಅಧಿಕ ಸಾಂದ್ರತೆಯಿಂದ ಕುದಿಯಲು ಪ್ರಾರಂಭಿಸಿದಾಗ ಕೇಂದ್ರ ಬಿಂದುವಿನಲ್ಲಿ ಶಾಖ ಹೆಚ್ಚಾಗಿ ಅದು ಸ್ಫೋಟಿಸತೊಡಗಿತು. ಇದನ್ನು **ಮಹಾಸ್ಫೋಟ (ಬಿಗ ಬ್ಯಾಂಗ್)** ಎಂದು ಕರೆಯಲಾಗುತ್ತದೆ. ಇಂದು ಸುಮಾರು ೪೬೦ ಕೋಟಿ ವರ್ಷಗಳ ಹಿಂದೆ ಘಟಿಸಿರಬೇಕೆಂಬ ಊಹೆ ಇದೆ. ಇಂತಹದೊಂದು ಪ್ರಕ್ರಿಯೆಯಲ್ಲಿ ಧೂಳು, ಅಖಿಲ ಕಣಗಳ ಮುದ್ದೆಯಾಗಿ ಹೊರಬಿದ್ದ ಕಾಯವೇ ಭೂಮಿಯಾಗಿ ರೂಪುಗೊಂಡಿತು. ಪ್ರಾರಂಭದಲ್ಲಿ ಕುದಿಯುತ್ತಿದ್ದ ಅನಿಲರಾಶಿ ಕ್ರಮೇಣಾ ತಂಪಾಗ ತೊಡಗಿದಾಗ ಭೂಮಿಯ ಕಕ್ಷೇ ರಚಿತವಾಯಿತು. ಇದರಲ್ಲಿದ್ದ ಲೋಹಗಳು ಅವುಗಳ ತೂಕಕ್ಕನುಗುಣವಾಗಿ ಭೂ-ಚಿಪ್ಪಿನಲ್ಲಿ ಸಂಗ್ರಹಗೊಂಡವು. ಅನಿಲಗಳು ಸೋರುತ್ತಾ ವಾತಾವರಣ ಸೃಷ್ಟಿಸಿದವು. ವಾತಾವರಣವು ಅನಿಲದ ಕವಚವಾಗಿ ನೈಟ್ರೋಜನ್, ಕಾರ್ಬನ್ ಡೈ ಆಕ್ಸೈಡ್, ಕಾರ್ಬನ್ ಮೋನಾಕ್ಸೈಡ್, ಮೀಥೇನ್, ಅಮೋನಿಯಂ, ನೀರು ಮುಂತಾದ ಸಂಯುಕ್ತಗಳುಂಟಾದವು ಹೀಗೆ ರೂಪಿತವಾದ ಭೂಮಿ ಸತತವಾಗಿ ಬಾಹ್ಯ ಮತ್ತು ಆಂತರಿಕ ಬದಲಾವಣೆ ಮತ್ತು ಮಾರ್ಪಾಡುಗಳಿಗೆ ಒಳಗಾಗುತ್ತಾ ಸಾಗಿದೆ. ಭೂಮಿ ಹುಟ್ಟಿದ ಅನೇಕ ಕೋಟಿ ವರ್ಷಗಳ ನಂತರ ಇದರ ಮೇಲೆ ಜೀವಿಯ ಉಗಮವಾಯಿತು. ಇತ್ತೀಚಿನ ಹೊಸ ವೈಜ್ಞಾನಿಕ ಸಂಶೋಧನೆಗಳು ಭೂಮಿ ಹುಟ್ಟು ೪೬೦ ಕೋಟಿ (೪.೬ ಮಿಲಿಯನ್) ವರ್ಷಗಳಾಗಿದ್ದರೂ, ಜೀವ ವಿಕಾಸ ಕ್ರಮದಲ್ಲಿ ಜೀವಿ ಹುಟ್ಟಿರುವುದು ಸುಮಾರು ೩೫೦ ಕೋಟಿ (೩.೫ ಮಿಲಿಯನ್) ವರ್ಷಗಳ ಹಿಂದೆ ಮಾತ್ರ ಎಂದು ಸಾಬೀತು ಮಾಡಿವೆ. ೩ ಮಿಲಿಯನ್ ವರ್ಷಗಳ ಹಿಂದೆ ಭೂಮಿಯನ್ನು ಮೇಲೆ ಮೊಟ್ಟಮೊದಲಿಗೆ ಜೀವಿಗಳು ಕಾಣಿಸಿಕೊಂಡವು.

ಇಡೀ ಜೀವಸಂಕುಲದ ವಿಕಾಸ ಕ್ರಮದಲ್ಲಿ ಮಾನವನಿಗೆ ಒಂದು ವಿಶೇಷ ಸ್ಥಾನವಿದೆ. ಅನಿಲಾವೃತವಾಗಿದ್ದ ಭೂಮಿಯಲ್ಲಿನ ಅತಿ ಸಣ್ಣ ಸಜೀವ ಪರಮಾಣುಗಳಿಂದ ಅತ್ಯಂತ ಸಂಕೀರ್ಣ ವ್ಯವಸ್ಥೆಯಲ್ಲಿ ಮಾನವ ಉಗಮವಾಗಿರಬೇಕೆಂಬ ಅಭಿಪ್ರಾಯವಿದೆ. ದೀರ್ಘಾವಧಿಯ ಭೂ ಇತಿಹಾಸಕ್ಕೆ ಹೋಲಿಸಿದರೆ ಮಾನವನ ಪೂರ್ವಜರ ಹುಟ್ಟು ಕೇವಲ ೬೫ ಬಿಲಿಯನ್ ವರ್ಷಗಳಷ್ಟೇ ಆದ ದಾಖಲೆ ಸಿಗುತ್ತದೆ. ಅಂದರೆ ಆದಿ ಮಾನವನ ಉಗಮವಾಗಿ ಸರಿ ಸುಮಾರು ೧೪ ಮಿಲಿಯನ್ ವರ್ಷಗಳಾಗಿದ್ದರೆ ಆಧುನಿಕ ಮಾನವನ ಉಗಮ ಕೇವಲ

೩ ಮಿಲಿಯನ್ ವರ್ಷಗಳ ಹಿಂದಷ್ಟೇ ಆಗಿದೆ ಎನ್ನಬಹುದು. ಇಷ್ಟೊಂದು ಸುದೀರ್ಘ ಇತಿಹಾಸ ಹೊಂದಿರುವ ಮಾನವನ ಇತಿಹಾಸ ಮತ್ತು ಅವನ ಸಂಸ್ಕೃತಿಯ ಕುರಿತು ಇಲ್ಲಿಯವರೆಗೆ ಅಭ್ಯಸಿಸಿದ ಎಲ್ಲಾ ಮಾನವಿಕ ವಿಷಯಗಳು (Humanities) ತಮ್ಮದೇ ಆದ ದೃಷ್ಟಿಕೋನದಲ್ಲಿ ಇಡೀ ಮನುಷ್ಯ ಕುಲದ ಸಾಂಸ್ಕೃತಿಕ ಇತಿಹಾಸವನ್ನು ವಿಭಿನ್ನವಾಗಿ ಅರ್ಥೈಸಿವೆ. ಆದರೆ ಮಾನವಶಾಸ್ತ್ರದ ಹಿನ್ನೆಲೆಯಲ್ಲಿ ಆದಿಮಾನವನ ಒಟ್ಟು ಜೀವನಕ್ರಮವನ್ನು ಮಾನವಶಾಸ್ತ್ರ ಪುರಾತತ್ವಶಾಸ್ತ್ರ ಮತ್ತು Ethnology (ಮಾನವ ಕುಲಶಾಸ್ತ್ರ) ಗಳ ಸಹಾಯದಿಂದ ನಿರೂಪಿಸಬೇಕೆಂಬುದು ನನ್ನ ಬಹುದಿನದ ಬಯಕೆ. ಈ ಹಿನ್ನಲೆಯಲ್ಲಿ ನಾನು ಮಾಡಿದ ಮೊದಲ ಪ್ರಯತ್ನವೇ **"ಹಂಪಿಪರಿಸರದ ಆದಿಮಾನವನ ನೆಲೆಗಳು"** ಎನ್ನುವುದು.

ವಿಶ್ವವಿಖ್ಯಾತ ಹಂಪಿ ಮತ್ತು ಅದರ ಸುತ್ತಲಿನ ಭೌಗೋಳಿಕ ಪರಿಸರವು ಪ್ರಾಗೈತಿಹಾಸಿಕ ಕಾಲದಿಂದ ಮಾನವನ ವಾಸಕ್ಕೆ ಅವಕಾಶ ಮಾಡಿಕೊಟ್ಟಿದೆ. ಇಲ್ಲಿನ ಮಾನವ ಅನಾಗರಿಕ ಸ್ಥಿತಿಯಿಂದ ನಾಗರಿಕ ಸ್ಥಿತಿಗೆ ಕಾಲಿಟ್ಟವರೆಗಿನ ಕಾಲಾವಧಿ ಅತ್ಯಂತ ವೈವಿಧ್ಯ ಮತ್ತು ವೈಶಿಷ್ಟ್ಯತೆಯಿಂದ ಕೂಡಿದ್ದು, ಅಧ್ಯಯನಕ್ಕೆ ಯೋಗ್ಯವಾಗಿದೆ. ಆದಿಮಾನವನ ವಿಕಸನದ ಹಂತಗಳನ್ನು ಮತ್ತು ಅವನ ಅಂದಿನ ಆದಿಮ ಸಾಂಸ್ಕೃತಿಕ ಬದುಕನ್ನು ಈ ಪರಿಸರದಲ್ಲಿ ದೊರೆಯುವ ಹಲವು ಪ್ರಾಚ್ಯ ಅವಶೇಷಗಳ ಸಹಾಯದಿಂದ ದೃಢಪಡಿಸಬಹುದು. ಇಲ್ಲಿನ ವಿವಿಧ ನೆಲೆಗಳು, ಗುಹೆ, ಕಲ್ಲಾಸರೆಗಳು ಕೈಗೊಡಲಿ, ಮಡಕೆಚೂರು, ರೇಖಾ, ಕುಟ್ಟಿದ, ಕೊರೆದ ಹಾಗೂ ವರ್ಣಚಿತ್ರಗಳು ಮತ್ತು ಕಲ್ಗೋರಿಯಂಥಹ ವ್ಯಕ್ತ ಆಧಾರಗಳು ಅಂದಿನ ಆದಿಮಾನವನ ಜೀವನ ಕ್ರಮ ಮತ್ತು ಅಂದಿನ ಆದಿಮ ಸಂಸ್ಕೃತಿಯನ್ನು ಅರಿಯಲು ಏಕಮೇವ ಆಧಾರಗಳಾಗಿವೆ. ಇವುಗಳ ಸಹಾಯದಿಂದ ಅಂದಿನ ಆದಿಮಾನವನ ಜೀವನ, ಸಮಾಜಿಕ ಮತ್ತು ಧಾರ್ಮಿಕ ವಿಧಿ, ವಿಧಾನಗಳ ವಿವರಗಳು ನಮಗೆ ಸ್ಪಷ್ಟವಾಗುತ್ತವೆ. ಈ ಪರಿಸರದಲ್ಲಿನ ಆದಿಮಾನವನ ನೆಲೆಗಳಲ್ಲಿನ ಮೇಲಿನ ಎಲ್ಲಾ ಮಹತ್ವದ ಮಾಹಿತಿಗಳನ್ನು ಈ ಕೃತಿ ಒಳಗೊಂಡಿದ್ದು, ಇದೊಂದು ವಿಶೇಷ ಅಧ್ಯಯನ ಎಂಬುದಕ್ಕೆ ಸಾಕ್ಷಿಯಾಗಿದೆ.

ಬಹು ಜನ ನಿರ್ಲಕ್ಷಿತ ಮತ್ತು ವ್ಯಾಪಕ ಕ್ಷೇತ್ರ ಕಾರ್ಯವನ್ನು ಅವಲಂಬಿಸಿದ ಅಧ್ಯಯನವು ನನ್ನ ಅನಿರತ ಶ್ರಮವಾಗಿದೆ. ಈ ಕೃತಿಯು ರೂಪುಗೊಳ್ಳಲ್ಲು ಎಲ್ಲಾ ರೀತಿಯ ಸಲಹೆ ಸೂಚನೆಗಳನ್ನು ನೀಡಿದ ಸಹಕರಿಸಿದ ಮಾನ್ಯ ಕುಲಪತಿಗಳಾದ ಡಾ. ಎ. ಮುರಿಗೆಪ್ಪ ಅವರಿಗೂ, ಮಾನ್ಯ ಕುಲಸಚಿವರು ಹಾಗೂ ಪ್ರಸಾರಾಂಗದ ನಿರ್ದೇಶಕರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರಿಗೂ, ಪ್ರಾಧ್ಯಾಪಕರುಗಳಾದ ಡಾ. ಹಿ.ಚಿ. ಬೋರಲಿಂಗಯ್ಯ ಅವರಿಗೂ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ ಸಮಾಜ ವಿಜ್ಞಾನ ನಿಕಾಯದ ಡೀನರಾದ ಡಾ. ಟಿ.ಆರ್. ಚಂದ್ರಶೇಖರ ಅವರಿಗೆ ನನ್ನ ಕೃತಜ್ಞತೆಗಳು.

ಈ ಕೃತಿಯ ಮೊದಲು ಕರಡು ತಿದ್ದಿ ಸಲಹೆ ಸೂಚನೆಗಳನ್ನು ನೀಡಿದ ಪ್ರಸಾರಾಂಗದ ಸಹಾಯಕ ನಿರ್ದೇಶಕರುಗಳಾದ ಎಚ್.ಬಿ. ರವೀಂದ್ರ, ಬಿ.ಸುಜ್ಞಾನಮೂರ್ತಿ ಹಾಗೂ ಜೈನುಲ್ಲಾ ಬಳ್ಳಾರಿ ಅವರಿಗೂ ಕ್ಷೇತ್ರಕಾರ್ಯದ ಸಮಯದಲ್ಲಿ ಎಲ್ಲಾ ರೀತಿಯಲ್ಲಿಯು ಸಹಕರಿಸಿದ ಗೆಳೆಯರಾದ ಹಂಪಿ ಅಭಿವೃದ್ಧಿ ಪ್ರಾಧಿಕಾರದ ಗೆಳೆಯ ಡಾ. ಹೆಚ್. ತಿಪ್ಪೇಸ್ವಾಮಿ ಅವರಿಗೂ, ಗೆಳೆಯರಾದ ನಿರ್ವಾಣಿ ಕಂಬಾರ, ಗುರುಮೂತಿ, ಕೆ.ಎಲ್. ರಾಜಶೇಖರ, ಹೆಚ್. ಶ್ರೀನಿವಾಸ, ಸಿ.ಸಿ. ಪೂವಯ್ಯ, ಬಿ. ವೆಂಕಟೇಶ, ಕೃಷ್ಣಕುಮಾರ್ ಬಿ.ವಿ., ಆರ್.ವಿ. ದೇಶಪಾಂಡೆ, ಈರೇಶಪ್ಪ ಅವರಿಗೂ ನನ್ನ ಸಹೋದ್ಯೋಗಿಯಾದ ಡಾ.ತಾರಿಹಳ್ಳಿ ಹನುಮಂತಪ್ಪ ಅವರಿಗೂ ವಿಭಾಗದ ಕಿರಿಯ ಸಹಾಯಕರಾದ ಗಾದಿಲಿಂಗಪ್ಪ ತಿಂದಪ್ಪ ಅವರಿಗೂ ನನ್ನ ಕೃತಜ್ಞತೆಗಳು.

ಅಂದವಾಗಿ ಅಕ್ಷರ ಜೋಡಿಸಿಕೊಟ್ಟ ಶ್ರೀಮತಿ ಎ.ನಾಗವೇಣಿ, ವೀರೇಶ, ಕು.ಸುಮ ಹಾಗೂ ಶ್ರೀನಿವಾಸ ಕೆ.ಕಲಾಲ್ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

**ಡಾ. ಎಲ್. ಶ್ರೀನಿವಾಸ**

# ೧. ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

**ಪೀಠಿಕೆ**

ವಿಶ್ವವಿಖ್ಯಾತ "ಹಂಪಿ" ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿದೆ. ಇದು ಉತ್ತರ ಅಕ್ಷಾಂಶ ೧೫.೧೮.೫°ಯಿಂದ ೧೫.೨೧°ಯವರೆಗೆ ಮತ್ತು ಪೂರ್ವ ರೇಖಾಂಶ ೭೮.೨೭೫°ಯಿಂದ ೭೮.೩೦°ಯಲ್ಲಿದೆ. ಹಂಪಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ, ಅಂದಿನ ಆಡಳಿತದ ಕೇಂದ್ರವಾಗಿ ಮೆರೆದಿದೆ. ಪುರಾಣ ಕಾಲದಿಂದ ಪ್ರಸಿದ್ಧವಾಗಿರುವ ಇದು ಹಲವು ವೈಶಿಷ್ಟ್ಯಗಳಿಗೆ ಹೆಸರುವಾಸಿಯಾಗಿದೆ. ಇಲ್ಲಿನ ಭೌಗೋಳಿಕ ಪರಿಸರವು ಪ್ರಾಗ್ಐತಿಹಾಸಿಕ ಕಾಲದಿಂದ ಮಾನವನ ವಾಸಕ್ಕೆ ಅವಕಾಶ ಮಾಡಿಕೊಟ್ಟಿದೆ. ಹಂಪಿ ಮತ್ತು ಅದರ ಸುತ್ತಮುತ್ತ ಹಲವಾರು ಆದಿಮಾನವರ ನೆಲೆಗಳಿವೆ. ಇವುಗಳಲ್ಲಿ ದೊರೆಯುವ ಕೈಕೊಡಲಿ, ಮಡಕೆ ಚೂರು, ರೇಖಾ, ಕುಟ್ಟಿದ, ಕೊರೆದ ಹಾಗೂ ವರ್ಣಚಿತ್ರಗಳು ಮತ್ತು ಕಲ್ಗೋರಿ ಮುಂತಾದವುಗಳು ಅಂದಿನ ಜೀವನ ಕ್ರಮ ಮತ್ತು ಸಂಸ್ಕೃತಿಯನ್ನು ಅರಿಯಲು ಏಕಮೇವ ಆಧಾರಗಳಾಗಿವೆ. ಇವುಗಳ ಸಹಾಯದಿಂದ ಆಣಮಾನವನ ಸಾಮಾಜಿಕ ಮತ್ತು ಧಾರ್ಮಿಕ ವಿವರಗಳನ್ನು ಅರಿಯಬಹುದಾಗಿದೆ.

**ಅಧ್ಯಯನದ ಉದ್ದೇಶ**

ಸೂರ್ಯ, ಒಂಬತ್ತು ಗ್ರಹಗಳು, ಕ್ಷುದ್ರಗ್ರಹಗಳು, ಉಲ್ಕೆ, ಉಪಗ್ರಹಗಳು, ಧೂಮಕೇತು ಇವೆಲ್ಲವನ್ನು ಒಂದು ಕುಟುಂಬವೆಂದು ಪರಿಗಣಿಸಿ ಅದನ್ನು 'ಸೌರಮಂಡಲ' ಎನ್ನುತ್ತೇವೆ. ಒಂಬತ್ತು ಗ್ರಹಗಳಲ್ಲಿ ಭೂಮಿಯೂ ಒಂದು ಗ್ರಹ. ಸುಮಾರು ಹದಿನೈದು ಬಿಲಿಯನ್ ವರ್ಷಗಳ ಹಿಂದೆ ವಿಶ್ವವು ದೂಳು ಮತ್ತು ಅನಿಲಗಳ ಮಹಾರಾಶಿಯಾಗಿತ್ತು. ಈ ರಾಶಿಯು ಅಧಿಕ ಸಾಂದ್ರತೆಯಿಂದ ಕುಸಿಯಲು ಪ್ರಾರಂಭಿಸಿದಾಗ ಕೇಂದ್ರ ಬಿಂದುವಿನಲ್ಲಿ ಶಾಖ ಹೆಚ್ಚಾಗಿ ಅದು ಸ್ಫೋಟಿಸತೊಡಗಿತು. ಇದನ್ನೇ ಮಹಾಸ್ಫೋಟ (ಬಿಗ್ ಬ್ಯಾಂಗ್) ಎಂದು ಕರೆಯುತ್ತೇವೆ. ಇದು ಸುಮಾರು ೪೬೦ ಕೋಟಿ ವರ್ಷಗಳ ಹಿಂದೆ ಘಟಿಸಿರಬೇಕೆಂಬ ಊಹೆ ಇದೆ. ಇಂತಹದೊಂದು ಪ್ರಕ್ರಿಯೆಯಲ್ಲಿ ದೂಳು, ಅನಿಲ ಕಣಗಳ ಮುದ್ದೆಯಾಗಿ ಹೊರಬಿದ್ದ ಕಾಯವೇ ಭೂಮಿಯಾಗಿ ರೂಪುಗೊಂಡಿತು. ಪ್ರಾರಂಭದಲ್ಲಿ ಕುದಿಯುತ್ತಿದ್ದ ಅನಿಲರಾಶಿ ಕ್ರಮೇಣ ತಂಪಾಗತೊಡಗಿದಾಗ ಭೂಮಿಯ ಕಕ್ಷೆ ರಚಿತವಾಯಿತು. ಇದರಲ್ಲಿದ್ದುದು ಲೋಹಗಳು. ಅವುಗಳ ತೂಕಕ್ಕನುಗುಣವಾಗಿ ಭೂಮಿಯಲ್ಲಿ ಸಂಗ್ರಹಗೊಂಡವು. ಅನಿಲಗಳು ಸೋರುತ್ತಾ ವಾತಾವರಣ ಸೃಷ್ಟಿಸಿದವು. ವಾತಾವರಣವು ಅನಿಲದ ಕವಚವಾಗಿ ನೈಟ್ರೋಜನ್, ಕಾರ್ಬನ್ ಡೈ ಆಕ್ಸೈಡ್, ಕಾರ್ಬನ್ ಮೋನಾಕ್ಸೈಡ್, ಮೀಥೇನ್, ಅಮೋನಿಯ, ನೀರು ಮುಂತಾದ ಸಂಯುಕ್ತಗಳುಂಟಾದವು. ಹೀಗೆ ರೂಪವಾದ ಭೂಮಿ ಸತತವಾಗಿ ಬಾಹ್ಯ ಮತ್ತು ಆಂತರಿಕ ಬದಲಾವಣೆಗಳನ್ನು ಹೊಂದುತ್ತಾ ತನ್ನ ರಚನೆಯಲ್ಲಿ ಅನೇಕ ಮಾರ್ಪಾಡುಗಳನ್ನು ಹೊಂದುತ್ತಾ ಸಾಗಿದೆ. ಭೂಮಿ ಹುಟ್ಟಿದ ಅನೇಕ ಕೋಟಿ ವರ್ಷಗಳ ನಂತರ ಇದರ ಮೇಲೆ ಜೀವಿಯ ಉಗಮವಾಯಿತು.[1] ಜೀವದ ಉತ್ಪತ್ತಿ ಅಥವಾ ಉಗಮದ ಬಗ್ಗೆ ವಿವಿಧ ಧಾರ್ಮಿಕ ಗ್ರಂಥಗಳಲ್ಲಿ ವಿಭಿನ್ನ ಬಗೆಯ ವಿವರಗಳಿವೆ. ಹೆಚ್ಚಿನ ವಿವರಣೆಗಳಲ್ಲಿ ಇಡೀ ಜೀವರಾಶಿಯನ್ನು ಭಗವಂತ ಪ್ರತ್ಯೇಕವಾಗಿ ಸೃಷ್ಟಿಸಿದ್ದಾನೆಂದು ಬಣ್ಣಿಸಲಾಗಿದೆ. ಧರ್ಮದ ಆಧಾರ ಅದಕ್ಕೆ ಇದ್ದಿದ್ದರಿಂದ ಪ್ರಶ್ನಾತೀತವಾಗಿ ಸಮಾಜ ಅದನ್ನು ಅಲ್ಲಗಳೆಯದೇ ಅಂಗೀಕರಿಸುತ್ತ ಬಂದಿದೆ. ಆದರೆ ಇತ್ತೀಚಿನ ವೈಜ್ಞಾನಿಕ ಸಂಶೋಧನೆಗಳು ಜೀವ ವಿಕಾಸದ ಬಗ್ಗೆ ಹೊಸ ಹೊಸ ವಿವರಗಳನ್ನು ನೀಡಿವೆ. ಭೂಮಿ ಹುಟ್ಟಿ ೪೬೦ ಕೋಟಿ (೪.೬ ಮಿಲಿಯನ್) ವರ್ಷಗಳಾಗಿದ್ದರೂ, ಜೀವಿ ಹುಟ್ಟಿರುವುದು ಸುಮಾರು ೩೫೦ ಕೋಟಿ (೩.೫ ಮಿಲಿಯನ್) ವರ್ಷಗಳ ಹಿಂದೆ. ಅನಿಲ ಕೂಪವಾಗಿದ್ದ, ಭೂಮಿಯಲ್ಲಿನ ಅತಿ ಸಣ್ಣ ಸಜೀವ ಪರಮಾಣುಗಳಿಂದ ಅತ್ಯಂತ ಸಂಕೀರ್ಣ ವ್ಯವಸ್ಥೆಯಲ್ಲಿ ಮಾನವ ಉಗಮವಾಗಿರಬೇಕೆಂದು ಅಭಿಪ್ರಾಯ ಪಡೆಯಲಾಗಿದೆ.[2]

ಇಡೀ ಜೀವಸಂಕುಲದ ವಿಕಾಸ ಕ್ರಮದಲ್ಲಿ ಮಾನವನಿಗೆ ಒಂದು ವಿಶೇಷ ಸ್ಥಾನವಿದೆ. ದೀರ್ಘಾವಧಿಯ ಭೂ ಇತಿಹಾಸಕ್ಕೆ ಹೋಲಿಸಿದರೆ ಮಾನವನ ಪೂರ್ವಜರ ಹುಟ್ಟು ಕೇವಲ ೬೫ ಮಿಲಿಯನ್ ವರ್ಷಗಳ ಹಿಂದಷ್ಟೇ ಆದ ದಾಖಲೆ ಸಿಗುತ್ತದೆ. ಆದಿ

ಮಾನವನ ಉಗಮವಾಗಿ ಸರಿ ಸುಮಾರು ೧೪ ಮಿಲಿಯನ್ ವರ್ಷಗಳಾಗಿದ್ದರೆ, ಆಧುನಿಕ ಮಾನವನ ಉಗಮ ಕೇವಲ ೨ ಮಿಲಿಯನ್ ವರ್ಷಗಳ ಹಿಂದಷ್ಟೇ ಆಗಿದೆ ಎನ್ನಬಹುದು.[3]

ಇಡೀ ಮನುಕುಲದ ಇತಿಹಾಸವನ್ನು ಸಮಗ್ರವಾಗಿ ಅಧ್ಯಯನ ಮಾಡುವುದು ಕಷ್ಟಸಾಧ್ಯ. ಆದರೆ ಮಾನವನ ಜೀವನಕ್ರಮವನ್ನು ಬಿಡಿಬಿಡಿಯಾಗಿ ತೋರಿಸುವ ನಿಟ್ಟಿನಲ್ಲಿ ಅದನ್ನು ವಿವಿಧ ದೃಷ್ಟಿಕೋನಗಳಿಂದ ವಿಶ್ಲೇಷಣೆ ಮಾಡಲಾಗುತ್ತದೆ. ಇಲ್ಲಿಯ ವರೆಗೆ ಅಧ್ಯಯನ ಮಾಡಿರುವ ವಿದ್ವಾಂಸರ ಪ್ರಯತ್ನವನ್ನು ಗಮನಿಸಿದರೆ ಪ್ರಮುಖವಾಗಿ ಮೂರು ವಿಧಗಳು ಕಂಡುಬರುತ್ತವೆ.

೧. ಕಾಲವನ್ನು ಆಧಾರವಾಗಿ ಇಟ್ಟುಕೊಂಡು ರಚಿತವಾದ ಮಾನವನ ಇತಿಹಾಸ.

೨. ಆಯಾ ಪ್ರದೇಶದ ಭೌಗೋಳಿಕ ಪರಿಸರ ಮತ್ತು ಮಾನವನ ನೆಲೆಗಳನ್ನು ಆಧಾರವಾಗಿಟ್ಟುಕೊಂಡು ರಚಿತವಾಗಿರುವ ಮಾನವನ ಇತಿಹಾಸ.

೩. ಮಾನವನ ವಿವಿಧ ನೆಲೆಗಳನ್ನು ಪ್ರತ್ಯೇಕವಾಗಿ ಅಂದರೆ ಆಯಾ ನೆಲೆಗಳ ಹೆಸರಿನಲ್ಲಿ ಮಾಡಿರುವ ಅಧ್ಯಯನಗಳು.

ಹಂಪಿ ಪ್ರಾಚೀನ ಕಾಲದಿಂದಲೂ ಉತ್ತಮ ಭೌಗೋಳಿಕ ಪರಿಸರ ಹೊಂದಿದೆ. ಇದರಿಂದಾಗಿ ಆದಿಮಾನವ ಹಂಪಿ ಪರಿಸರದ ವಿವಿಧ ನೆಲೆಗಳಲ್ಲಿ ಹಿಂದಿನಿಂದಲೂ ವಾಸಿಸುತ್ತಾ ಬಂದಿದ್ದಾನೆ. ಇಲ್ಲಿ ನೆಲೆಯೂರಿದ ಆದಿಮಾನವ ತನ್ನ ಹಲವು ಕುರುಹುಗಳನ್ನು ಇಲ್ಲಿ ಬಿಟ್ಟು ಹೋಗಿದ್ದಾನೆ. ಇವು ಅಂದಿನ ಸಂಸ್ಕೃತಿಯನ್ನು, ಅವನ ಜೀವನ ಶೈಲಿಯನ್ನು ಅರಿಯಲು ಏಕಮೇವ ಆಧಾರಗಳಾಗಿವೆ. ಈ ಹಿನ್ನೆಲೆಯಲ್ಲಿ ಹಂಪಿ ಪರಿಸರದ ಪ್ರಾಗೈತಿಹಾಸಿಕ ಕಾಲದ ಆದಿಮಾನವನ ನೆಲೆಗಳನ್ನು ಮತ್ತು ಅವುಗಳ ಮಹತ್ವವನ್ನು ಪುರಾತತ್ವ ಮತ್ತು ಮಾನವಶಾಸ್ತ್ರ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು ಈ ಸಂಶೋಧನೆಯ ಮುಖ್ಯ ಉದ್ದೇಶಗಳಾಗಿವೆ.

ಹಂಪಿ ಪರಿಸರದಲ್ಲಿ ಆದಿಮಾನವನಿಗೆ ಸೇರಿದ ಸುಮಾರು ೨೮೦ಕ್ಕೂ ಹೆಚ್ಚು ನೆಲೆಗಳಿವೆ. ಅವುಗಳಲ್ಲಿ ಮುಖ್ಯವಾಗಿ ಹಿರೇಬೆನಕಲ್, ಚಿಕ್ಕ ಜಂತಕಲ್, ಆನೆಗುಂದಿ, ಮಲ್ಲಾಪುರ (ಗಂಗಾವತಿ ತಾಲೂಕು), ಕಮಲಾಪುರ, ಕಾಳಗಟ್ಟಿ, ಕಾರಿಗನೂರು, ಸಂಕ್ಲಪುರ, ವೆಂಕಟಾಪುರ, ಧರ್ಮಸಾಗರ, ಬೈಲುವದ್ದಿಗೇರಿ, ನಲ್ಲಾಪುರ, ಮೆಟ್ರಿ, ಕಂಪ್ಲಿ (ಹೊಸಪೇಟೆ ತಾಲೂಕು), ಹುಲಿಕುಂಟೆ, ಕುಮತಿ ಜರಿಮಲೆ, ಸಿಡೆಗಲ್ಲು, ಜಿ.ಬಿ.ಹಳ್ಳಿ, ಹಂಪಿ, ಬುಕ್ಕಸಾಗರ (ಕೂಡ್ಲಿಗಿ ತಾಲೂಕು), ಪಿಕ್ಕಿಹಾಳ್, ಸಂಗನಕಲ್ಲು, ನಿಟ್ಟೂರು, ಉದೇಗುಳಂ, ಕಪ್ಪಗಲ್ಲು, ಬ್ರೂಸ್ ಪೇಟ್ ಬೆಟ್ಟ (ಬಳ್ಳಾರಿ ತಾಲೂಕು), ಕುಡಿತಿನಿ, ದರೋಜಿ (ಸಂಡೂರು ತಾಲೂಕು), ನುಂಕೆಮಲೆ, ಜಟ್ಟಿಂಗರಾಮೇಶ್ವರ, ಬ್ರಹ್ಮಗಿರಿ, ಸಿದ್ದಾಪುರ, ಮೊಳಕಾಲ್ಮುರು (ತಾಲೂಕು) ಅಲ್ಲದೆ ನೀಲಗುಂದ, ಬಾಗಳಿ, (ಹೂವಿನ ಹಡಗಲಿ ತಾಲೂಕು), ಅರಿಷಿಣಗೊಂದಿ, ಆಸಗೋಡು, ಚೆಪ್ಪನಕೆರೆ (ಚಿತ್ರದುರ್ಗ ತಾಲೂಕು)ಗಳಲ್ಲಿ ಪ್ರಮುಖ ಆದಿಮಾನವ ನೆಲೆಗಳು ಕಂಡುಬರುತ್ತವೆ. ಕೆಲವು ಕಡೆ ಈ ನೆಲೆಗಳು ಸಾಕಷ್ಟು ದುಃಸ್ಥಿತಿಯಲ್ಲಿ ಇದ್ದರೆ, ಇನ್ನೂ ಕೆಲವು ಕಡೆ ಕಾಲನ ತುಳಿತಕ್ಕೆ ಸಿಕ್ಕು ಅವನತಿಯತ್ತ ಮುಖ ಮಾಡಿರುವ ನೆಲೆಗಳು ಈ ಭೌಗೋಳಿಕ ಪರಿಸರದಲ್ಲಿರುವುದು ವಿಪರ್ಯಾಸ. ಹಂಪಿ ಪರಿಸರದ ಆದಿಮಾನವನ ಕುರಿತು ಅಲ್ಲಲ್ಲಿ ಕೆಲವು ಅಧ್ಯಯನಗಳು ನಡೆದಿದ್ದರೂ ಎಲ್ಲಿಯೂ ಸಮಗ್ರವಾದ ಅಧ್ಯಯನ ನಡೆದಿಲ್ಲ. ಈ ಕೊರತೆಯನ್ನು ತುಂಬಲು ವ್ಯವಸ್ಥಿತ ಅಧ್ಯಯನದ ಅವಶ್ಯಕತೆ ಇದೆ. ಇಲ್ಲಿನ ಆದಿಮಾನವನ ನೆಲೆಗಳು ಅವುಗಳ ಭೌಗೋಳಿಕ ಸ್ಥಾನ, ಆ ನೆಲೆಗಳ ವೈಶಿಷ್ಟ್ಯ. ಆ ನೆಲೆಯಲ್ಲಿ ದೊರೆಯುವ ಪ್ರಾಕ್‌ಚಾರಿತ್ರಿಕ ಕುರುಹುಗಳ ವಿಶೇಷತೆ. ಮುಂತಾದವುಗಳನ್ನು ಇಲ್ಲಿ ಗಮನದಲ್ಲಿ ಇಟ್ಟುಕೊಳ್ಳಲಾಗಿದೆ. ಇವುಗಳನ್ನು ಸ್ಥೂಲವಾಗಿ ಚರ್ಚಿಸಿ ಒಂದು ಚಿತ್ರಣ ನೀಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ನಾಗರಾಜರಾವ್ ಎಂ.ಎಸ್., 'ಪ್ರೋಟೋ ಹಿಸ್ಟಾರಿಕ್ ಕಲ್ಚರ್ ಆಫ್ ದಿ ತುಂಗಭದ್ರಾ ವ್ಯಾಲಿ' ಎನ್ನುವ ಕೃತಿಯಲ್ಲಿ ಈ ಭಾಗದ ಕೆಲವು ಆದಿಮಾನವನ ನೆಲೆಗಳ ಕುರಿತು ದಾಖಲಿಸಿದ್ದಾರೆ. ಕೆ.ಬಿ. ಶಿವತಾರಕ ಅವರು "ಕರ್ನಾಟಕ ಪುರಾತತ್ವ ನೆಲೆಗಳು" ಎನ್ನುವ ಕೃತಿಯಲ್ಲಿ ಆದಿಮಾನವನ ಇಲ್ಲಿನ ಕೆಲವು ನೆಲೆಗಳನ್ನು ದಾಖಲೆ ಮಾಡಿದ್ದಾರೆ. ಹಾಗೇ ಸಂಗನಕಲ್ಲು, ಪಿಕ್ಲಿಹಾಳ್, ಕಪ್ಪಗಲ್ಲಿನಲ್ಲಿ ನಡೆದ ಉತ್ಖನನ ನೆಲೆಗಳ ಮಹತ್ವವನ್ನು ಸುಬ್ಬಾರಾವ್, ಪೆದ್ದಯ್ಯ, ಆಲ್‌ಚಿನ್. ಬಿ. ಮತ್ತು ಎಫ್.ಆ. ಅಲ್‌ಚಿನ್, ಅನ್ಸರಿ. ಜೆಡ್.ಡಿ. ಮಜುಂದಾರ್, ಮೊದಲಾದ ವಿದ್ವಾಂಸರು ತಮ್ಮ ವಿವಿಧ ಉತ್ಖನನ ವರದಿಗಳಲ್ಲಿ ಆ ನೆಲೆಗಳ ಮಹತ್ವವನ್ನು ದಾಖಲಿಸಿದ್ದಾರೆ. ಕನ್ನಡ

ವಿಶ್ವವಿದ್ಯಾಲಯದ ಡಾ.ವಾಸುದೇವ ಬಡಿಗೇರ್, ಡಾ. ಸೋಮಶೇಖರ್, ಡಾ.ಕೊಟ್ರೇಶ್, ಡಾ.ಬಾಲಸುಬ್ರಮಣ್ಯ, ಡಾ.ಲಕ್ಷ್ಮಣ ತೆಲಗಾವಿ, ಡಾ.ಎಚ್.ತಿಪ್ಪೇಸ್ವಾಮಿ ಇವರು ಅಲ್ಲಲ್ಲಿ ಬಿಡಿ ಲೇಖನಗಳನ್ನು ಈ ಪರಿಸರದ ಕುರಿತು ಪ್ರಕಟಿಸಿದ್ದಾರೆ. ಇನ್ನೂ ಕೆಲ ಲೇಖನಗಳು ಸಂಸ್ಮರಣ ಗ್ರಂಥಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಹಂಪಿ ಪರಿಸರದ ಆದಿಮಾನವನ ಕುರಿತು ಅಧ್ಯಯನ ಮಾಡುವವರಿಗೆ ಮೂಲ ಸಾಮಗ್ರಿಗಳು ಸಾಕಷ್ಟು ಇವೆ. ಇವು ಕಾಲಾಂತರದಲ್ಲಿ ರೂಪಾಂತರಗೊಂಡು, ಇಲ್ಲವೇ ಮೂಲ ರೂಪದಲ್ಲಿಯೇ ಇಂದಿಗೂ ಉಳಿದು ಬಂದಿವೆ. ಇವುಗಳ ವ್ಯಾಪಕ ಸಮೀಕ್ಷೆ ನಡೆಯಬೇಕಿದೆ. ಇಲ್ಲಿನ ನೆಲೆಗಳ ವೈಶಿಷ್ಟ್ಯತೆ ಹಾಗೂ ಕರ್ನಾಟಕದ ಇತರೆಡೆ ದೊರೆಯುವ ಆದಿಮಾನವನ ನೆಲೆಗಳಿಗೂ ಇರುವ ಸಂಬಂಧ, ಹೋಲಿಕೆ, ವ್ಯತ್ಯಾಸ ಮತ್ತು ಪ್ರಭಾವವೇನು ಎಂಬುದನ್ನು ಪರಿಶೀಲಿಸಬೇಕಿದೆ. ಅಲ್ಲದೇ ಈ ಸಂಸ್ಕೃತಿಯ ಪಸರುವಿಕೆಯಲ್ಲಾದ ಬದಲಾವಣೆ, ಅವುಗಳ ವಿಸ್ತಾರದ ಕುರಿತು ತಾರ್ಕಿಕವಾಗಿ ವಿಶ್ಲೇಷಿಸಬೇಕಾದ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಸಂಶೋಧನೆಯು ಕೆಳಕಂಡ ಉದ್ದೇಶಗಳನ್ನು ಹೊಂದಿದೆ.

೧. ಹಂಪಿ ಪರಿಸರದಲ್ಲಿ ಕಂಡುಬರುವ (ವಿವಿಧ ತಾಲೂಕುಗಳಲ್ಲಿ) ಆದಿಮಾನವ ನೆಲೆಗಳನ್ನು ಒಂದೆಡೆ ಪ್ರಾಥಮಿಕವಾಗಿ ದಾಖಲಿಸುವುದು (ಅನ್ವೇಷಣೆ, ಉತ್ಖನನಗೊಂಡ ನೆಲೆಗಳು).

೨. ವಿಶ್ವ ಪ್ರಸಿದ್ಧಿ ಪಡೆದ ಹಂಪಿಯನ್ನು ಕೇಂದ್ರವಾಗಿಟ್ಟುಕೊಂಡು ಅದರ ಸುತ್ತಲಿನ ೧೦೦ ಕಿ.ಮೀ. ವ್ಯಾಪ್ತಿಯನ್ನು ಕೋ ಮತ್ತು ಬಪ್ಪರ್ ಜೋನ್ ಎನ್ನುವ ಎರಡು ವಿವಿಧ ವಲಯಗಳನ್ನಾಗಿ (ತಲಾ ೫೦ ಕಿ.ಮೀ. ವ್ಯಾಪ್ತಿಯಲ್ಲಿ) ವಿಭಾಗಿಸಿಕೊಂಡು ಇಲ್ಲಿ ಕಾಣಬರುವ ನೆಲೆಗಳ ವೈಶಿಷ್ಟ್ಯತೆಯನ್ನು ದಾಖಲಿಸುವುದು.

೩. ದೊರೆಯುಬಹುದಾದ ಅವಶೇಷಗಳನ್ನು ಆಧಾರವಾಗಿಟ್ಟುಕೊಂಡು ಆದಿಮಾನವನ ಜೀವನಕ್ರಮ, ವೈಶಿಷ್ಟ್ಯತೆ ಮೊದಲಾದ ವಿವರಗಳನ್ನು ವಿಶ್ಲೇಷಿಸುವುದು.

೪. ಈ ಭಾಗದ ನೆಲೆಗಳ ಜೊತೆ ಕರ್ನಾಟಕದ ಇತರೆ ಭಾಗದ ಆದಿಮಾನವನ ನೆಲೆಗಳನ್ನು ತುಲನಾತ್ಮಕವಾಗಿ ವಿಶ್ಲೇಷಿಸುವುದು ಈ ಯೋಜನೆಯ ಮತ್ತೊಂದು ಉದ್ದೇಶವಾಗಿದೆ.

೫. ಪ್ರಕಟಿತ ಮತ್ತು ಅಪ್ರಕಟಿತ ಮಾಹಿತಿಗಳನ್ನು ಅನುಸರಿಸಿ ಈ ಭಾಗದ ಆದಿಮಾನವ ನೆಲೆಗಳು, ಅವುಗಳಲ್ಲಿನ ಮಹತ್ವ, ಅವುಗಳ ಆಧಾರದ ಮೇಲೆ ಈ ಸಂಸ್ಕೃತಿಯ ಹರಿವು ವಿಸ್ತಾರಗಳನ್ನು ದಾಖಲಿಸುವುದು.

೬. ದೊರೆತ ಅವಶೇಷಗಳನ್ನು ಆಧಾರವಾಗಿಟ್ಟುಕೊಂಡು ಅಂದಿನ ಜೀವನ ಕ್ರಮ ನಿರೂಪಿಸುವುದು.

೭. ಈ ನೆಲೆಗಳ ಕುರಿತು ಜನರಲ್ಲಿ ಮನೆ ಮಾಡಿಕೊಂಡಿರುವ ದಂತಕಥೆ, ಐತಿಹ್ಯಗಳನ್ನು ಪೂರಕವಾಗಿ ದಾಖಲಿಸುವುದು ಈ ಸಂಶೋಧನೆಯ ಮತ್ತೊಂದು ಉದ್ದೇಶವಾಗಿದೆ.

**ಅಧ್ಯಯನ ವ್ಯಾಪ್ತಿ ಮತ್ತು ವಿಧಾನ**

ವರದಿಗಳು, ಪ್ರಕಟಿತ ಕೃತಿಗಳ ನೆರವಿನಿಂದ ಈ ಪರಿಸರದಲ್ಲಿ ಕಾಣಬರುವ ಆದಿಮಾನವ ನೆಲೆಗಳು ಪ್ರಪತ್ರವೊಂದನ್ನು ಮೊದಲಿಗೆ ಮಾಡಿಕೊಳ್ಳಲಾಯಿತು. ಕೇಂದ್ರ ಮತ್ತು ರಾಜ್ಯ ಪುರಾತತ್ವ ಇಲಾಖೆಗಳಿಂದ ಈ ನೆಲೆಗಳ ಬಗ್ಗೆ ಮಾಹಿತಿ ಪಡೆದು ಕ್ಷೇತ್ರ ಕಾರ್ಯ ಮಾಡಬೇಕಾದ ಸ್ಥಳಗಳನ್ನು ಖಚಿತಪಡಿಸಿಕೊಳ್ಳಲಾಯಿತು. ನೆಲೆಗಳ ಸ್ಥಳ, ಹೆಸರು, ತಾಲೂಕು, ಜಿಲ್ಲೆ ದೊರೆಯುವ ಅವಶೇಷಗಳು ಅವುಗಳ ವಿವರ, ನಕ್ಷೆ ಇತರೆ ವಿವರ ಇರುವ ಪ್ರಪತ್ರವನ್ನು ಸಿದ್ಧಪಡಿಸಿಕೊಳ್ಳಲಾಯಿತು. ನಂತರ ಕ್ಷೇತ್ರಕಾರ್ಯ ಕೈಗೊಂಡು, ಪ್ರಪತ್ರವನ್ನು ಭರ್ತಿ ಮಾಡಿಕೊಂಡು ಬೇಕಾದ ಛಾಯಾಚಿತ್ರಗಳನ್ನು ತೆಗೆದುಕೊಂಡು ಬರಲಾಯಿತು. ಮೊದಲು ಪ್ರಕಟಿತ ಗ್ರಂಥ ಮತ್ತು ವರದಿಗಳಿಂದ ಸಂಗ್ರಹಿಸಲಾದ ಟಿಪ್ಪಣಿ, ಇತ್ಯಾದಿ ಮಾಹಿತಿಗಳನ್ನೆಲ್ಲ ಕಲೆ ಹಾಕಿ, ತಾತ್ವಿಕವಾಗಿ ಚಿಂತಿಸಿ, ಈ ವರದಿಯನ್ನು

ಸಿದ್ಧಪಡಿಸಲಾಯಿತು. ಪ್ರಕಟಿತ ಗ್ರಂಥಗಳಲ್ಲಿ ಉಲ್ಲೇಖವಾಗಿರುವ ಕೆಲವು ಸ್ಥಳಗಳಲ್ಲಿ ಇಂದು ಆದಿಮಾನವ ನೆಲೆಯ ಯಾವುದೇ ಕುರುಹುಗಳು ದೊರೆಯುವುದಿಲ್ಲ. ಆದ ಕಾರಣ ಅಂಥ ಸ್ಥಳಗಳಲ್ಲಿ ಈ ಕಾಲದ ನೆಲೆಗಳು ಇದ್ದಿರಬಹುದೆಂದು ಊಹಿಸಲಾಗಿದೆ. ಇಲ್ಲಿನ ನೆಲೆಗಳಲ್ಲಿ ದೊರೆತ ಅವಶೇಷಗಳ ಆಧಾರದ ಮೇಲೆ ಅವುಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಕ್ಷೇತ್ರ ಪರಿವೀಕ್ಷಣಾ ಕಾರ್ಯದಲ್ಲಿ ತೆಗೆದ ಛಾಯಾಚಿತ್ರಗಳು, ನಕ್ಷೆಗಳು ಈ ಅಧ್ಯಯನಕ್ಕೆ ಪೂರಕ ಮಾಹಿತಿ ನೀಡುತ್ತವೆ. ಹೀಗೆ ಪ್ರಕಟಿತ ಮಾಹಿತಿಯ ಆಧಾರದ ಮೇಲೆ ಈ ಸಂಸ್ಕೃತಿಯನ್ನು ಗುರುತಿಸಲು ಪ್ರಯತ್ನಿಸಿದಾಗ ಅವುಗಳ ಹರಿವು ವಿಸ್ತಾರವಾಗಿರುವುದು ಕಂಡುಬರುತ್ತದೆ.

ಪ್ರಸ್ತುತ ಈ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಸಂಶೋಧಿಸಿದ ಮಾಹಿತಿ ಪೂರಕ ಸಾಮಗ್ರಿಯಾಗಿದೆ. ಇಲ್ಲಿಯವರೆಗೆ ಬಂದಿರಬಹುದಾದ ಪ್ರಕಟಿತ ಕೃತಿಗಳಿಂದ, ನಿಯತಕಾಲಿಕೆ, ಸಂಸ್ಮರಣ ಗ್ರಂಥಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಅಲ್ಲದೇ ಈ ಕ್ಷೇತ್ರದ ಮೇಲೆ ರಚಿತವಾಗಿರುವ ಕೆಲ ಅಪ್ರಕಟಿತ ಲೇಖನ ಮತ್ತು ಕೃತಿಗಳನ್ನು ಅಭ್ಯಾಸ ಮಾಡಿ ಇವುಗಳ ಆಧಾರದ ಮೇಲೆ ಈ ವರದಿಯನ್ನು ಸಿದ್ಧಪಡಿಸಲಾಗಿದೆ. ಈ ಅಧ್ಯಯನದ ಅಂತ್ಯದಲ್ಲಿ ಇದಕ್ಕೆ ಸಂಬಂಧಿಸಿದ ಛಾಯಾಚಿತ್ರ, ರೇಖಾಚಿತ್ರ, ನಕ್ಷೆಗಳನ್ನು ನೀಡಲಾಗಿದೆ. ಹಾಗೆಯೇ ಅನುಬಂಧಗಳಲ್ಲಿ ಕೆಲ ಐತಿಹ್ಯ ಮತ್ತು ದಂತಕಥೆಗಳ ಮಾಹಿತಿಯನ್ನು ನೀಡಿದೆ.

[1] ಡಾ. ಲೀಲಾ ಎಸ್.ಎಸ್. ೧೦೦೩, ಜೀವವಿಕಾಸ, ಪು.೧-೩.

[2] ಅದೇ ಪು.೪೦.

[3] ಅದೇ ಪು. ೬೧.

# ೧. ಹಂಪಿ ಪರಿಸರದ ಭೌಗೋಳಿಕ ಲಕ್ಷಣಗಳು ಮತ್ತು ಪ್ರಭಾವ

ಮಾನವನ ಉಗಮ, ವಿಕಾಸ ಹಾಗು ಅಭಿವೃದ್ಧಿಯಲ್ಲಿ ಪರಿಸರ ಗಮನಾರ್ಹ ಪಾತ್ರವಹಿಸಿದೆ. ಅಷ್ಟೇ ಅಲ್ಲದೆ ಇಡೀ ಜೀವಸಂಕುಲದ ಉಳಿವು ಅಲ್ಲಿನ ಪರಿಸರವನ್ನು ಅವಲಂಬಿಸಿರುತ್ತದೆ ಎಂಬುದು ಅದರ ಮಹತ್ವವನ್ನು ಎತ್ತಿ ತೋರಿಸುತ್ತದೆ.

ಹಂಪಿ ಪರಿಸರದ ಮಾನವ ಆದಿಕಾಲದಿಂದ ಅನೇಕ ಬದಲಾವಣೆಗಳೊಂದಿಗೆ ನಾಗರಿಕತೆಯತ್ತ ಸಾಗಲು ಇಲ್ಲಿನ ಸುತ್ತಮುತ್ತಲಿನ ಭೌಗೋಳಿಕ ಪರಿಸರವೇ ಕಾರಣ. ಈ ಪರಿಸರ ಮಾನವನ ಸರ್ವಾಂಗೀಣ ಅಭಿವೃದ್ಧಿಗೆ ತನ್ನದೇ ಆದ ಕೊಡುಗೆ ನೀಡಿದೆ. ಆದಿಮಾನವ ಇಲ್ಲಿನ ನಿಸರ್ಗದತ್ತವಾದ ಸಂಪತ್ತನ್ನು ತನ್ನ ನಿತ್ಯ ಬಳಕೆಗಾಗಿ ಬಳಸಿಕೊಂಡು ತಾನು ಬೆಳವಣಿಗೆ ಹೊಂದಿದ್ದನ್ನು ಕಾಣಬಹುದಾಗಿದೆ.

**ಭೌಗೋಳಿಕ ಲಕ್ಷಣಗಳು**

ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿಗೆ ಸೇರಿದ ಹಂಪಿ ೧೪.೩೦೦-೧೫.೧೫೦° ಉ. ಅಕ್ಷಾಂಶ ಮತ್ತು ೧೫.೪೦೦-೭೭.೧೧೦° ರೇಖಾಂಶಗಳ ನಡುವೆ ಇದೆ. ಇದರ ಪೂರ್ವಕ್ಕೆ ಬಳ್ಳಾರಿ ತಾಲೂಕು (ನಂತರ ಮುಂದುವರಿದು ಆಂಧ್ರ ಪ್ರದೇಶದ ಅನಂತಪುರ ಹಾಗೂ ಕರ್ನೂಲ್) ಪಶ್ಚಿಮಕ್ಕೆ ದಾವಣಗೆರೆ, ಗದಗ, ದಕ್ಷಿಣಕ್ಕೆ ಚಿತ್ರದುರ್ಗ, ಉತ್ತರಕ್ಕೆ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳು ಗಡಿಗಳಾಗಿವೆ.

[1]

ಹಂಪಿಯ ಕೇಂದ್ರಭಾಗದಿಂದ ೬೦ ಕಿ.ಮೀ. ವ್ಯಾಪ್ತಿಯ ಇಲ್ಲಿನ ಭೂ-ಭಾಗವನ್ನು ಹಂಪಿ ಪರಿಸರ ಎಂದು ಇಲ್ಲಿ ಪರಿಗಣಿಸಲಾಗಿದ್ದು, ಇಂದು ಇದರಲ್ಲಿ ಬರಬಹುದಾದ ವಿವಿಧ ತಾಲೂಕುಗಳ ಭೂಭಾಗದ ಲಕ್ಷಣಗಳನ್ನು ಈ ಮುಂದಿನಂತೆ ವಿವರಿಸಲಾಗಿದೆ.

## ೧. ಭೂರಚನೆ ಮತ್ತು ಶಿಲಾಸಂಪತ್ತು

ಇಲ್ಲಿನ ಭೌಗೋಳಿಕ ಪರಿಸರವು ಬೆಟ್ಟ, ಖನಿಜಗಳಿಂದ ಮತ್ತು ಗ್ರಾನೈಟ್ ಶಿಲೆಗಳಿಂದ ಕಂಗೊಳಿಸುತ್ತಿದೆ. ಸಾಮಾನ್ಯವಾಗಿ ಕ್ರಿಸ್ಟಸ್ ಲೈನ್‌ಸಿಸ್ಟ್ (ಸ್ಫಟಿಕಾತ್ಮಕ ಪದರು ಶಿಲೆ), ಎಪಿಡಿಯೋರಾಯಿಟ್ಸ ಗ್ರಾನೈಟ್ (ಜಂಬಿಟ್ಟಿಗೆ) ಮತ್ತು ಲೇಟರ್ ಗ್ರಾನೈಟ್ಸ್ ಶಿಲಾಪದರುಗಳಿಂದ ಕೂಡಿದೆ. ಅಲ್ಲಲ್ಲಿ ಡೈಕ್ ಶಿಲೆ ಕಂಡುಬರುತ್ತದೆ. ಕ್ರಿಸ್ಟಲೈನ್‌ಸಿಸ್ಟ್, ಎಪಿಡೊರಾಯಿಟ್ಸ್, ಗ್ರಾನೈಟ್ ಮೊದಲಾದ ಶಿಲೆಗಳು ಇಲ್ಲಿ ದೊರೆಯುತ್ತವೆ. ಇವುಗಳನ್ನು ಧಾರವಾಡ ಪ್ರದೇಶದಲ್ಲಿರುವಂತೆ ಹಳೇ ಮಾದರಿಯೆಂದು ಗುರುತಿಸಲಾಗಿದೆ.

ಹಂಪಿ ಪ್ರದೇಶವು ದಕ್ಷಿಣದಿಂದ ಉತ್ತರಕ್ಕೆ ಇಳಿಜಾರಾಗಿದ್ದು ಬೆಟ್ಟದಿಂದಾವರಿಸಿದೆ. ಸಂಡೂರು, ಕೂಡ್ಲಿಗಿ, ಹರಪನಹಳ್ಳಿ, ಗುಡೇಕೋಟೆ, ಹೊಸಪೇಟೆ, ಕಂಪ್ಲಿ, ದರೋಜಿ, ಕುರುಗೋಡು, ಬಳ್ಳಾರಿ ಮುಂತಾದ ಸ್ಥಳಗಳಲ್ಲಿ ದೊಡ್ಡ ದೊಡ್ಡ ಬೆಟ್ಟಗಳಿವೆ. ಸಂಡೂರು ಕುಮಾರಸ್ವಾಮಿ ಬೆಟ್ಟ (೧.೩೭ ಮೀ.) ರಾಮನಮಲೈ ಬೆಟ್ಟ (೯೯೨ ಮೀ.) ಜಂಬುನಾಥ ಗುಡ್ಡ (೯೦೮ ಮೀ.) ಎತ್ತರದ ಶಿಖರಗಳನ್ನು ಹೊಂದಿವೆ. ಕೂಡ್ಲಿಗಿ ಬೆಟ್ಟಗಳು ಎರಡು ಸಾಲುಗಳಲ್ಲಿವೆ. ಅವುಗಳಲ್ಲಿ ಒಂದು ಶ್ರೇಣಿ ಆನೆಕಲ್ಲುದುರ್ಗ (೭೨೪ ಮೀ.) ಇನ್ನೊಂದು ಜರಿಮಲೆ ಗುಡ್ಡ (೮೩೮ ಮೀ.) ಹಾಗೂ ಆನೆಗುಂದಿ ಬೆಟ್ಟ, ಹಿರೇಬೆನಕಲ್ ಮತ್ತು ಕಮ್ಮಟದುರ್ಗಗಳ ಬೆಟ್ಟಗಳು ಸಹಾ ಎತ್ತರದ ಶಿಖರಗಳನ್ನು ಹೊಂದಿವೆ. ಗುಡೇಕೋಟೆಯಿಂದ ಈಶ್ಯಾನಕ್ಕೆ ಹರಡಿರುವ ಗುಡೇಕೋಟೆ ಬೆಟ್ಟ ಚಿನ್ನ ಹಗರಿನದಿ ದಾಟಿ ಚಿತ್ರದುರ್ಗ ಜಿಲ್ಲೆಯ ಸೆರಗಿನಲ್ಲಿ ಹಾದು ಹೋಗುತ್ತದೆ. ಹಡಗಲಿ, ಹರಪನಹಳ್ಳಿ ತಾಲೂಕುಗಳ ಮಲ್ಲಪ್ಪನಗುಡ್ಡ (೯೨೮ ಮೀ.) ತುಂಗಭದ್ರಾ ನದಿ ದಂಡೆಯ ಹೊನ್ನೂರಿನ ಬಳಿ ಪ್ರಾರಂಭವಾಗಿ ಆಗ್ನೇಯ ಕಡೆಗೆ ಹಬ್ಬಿದೆ. ಮಲ್ಲಪ್ಪನ ಗುಡ್ಡದ ನೈರುತ್ಯಕ್ಕಿರುವ ಕಲ್ಲಪ್ಪನ ಗುಡ್ಡ ವಾಯುವ್ಯದಿಂದ ಈಶಾನ್ಯಕ್ಕೆ ಸಾಗಿದ್ದು ಇದರಲ್ಲಿ ನರಸಿಂಹದೇವರ ಗುಡ್ಡ ಸೇರಿದಂತೆ ಉಚ್ಚಂಗಿಯಲ್ಲಿ ಕೊನೆಗೊಳ್ಳುತ್ತದೆ.[2] ಪೂರ್ವ ಹಾಗೂ ಪಶ್ಚಿಮದ ನಡುವೆ ಸಂಡೂರು ಬೆಟ್ಟಗಳ ಶ್ರೇಣಿಯಿದೆ. ಇವು ಈಶಾನ್ಯದಿಂದ ಆಗ್ನೇಯದವರೆಗೂ ಹರಡಿವೆ. ಸಿರುಗುಪ್ಪ ಹಾಗೂ ಬಳ್ಳಾರಿ ಜಿಲ್ಲೆಯ ಪೂರ್ವದ ಭಾಗ ಬಯಲು ಪ್ರದೇಶವಾಗಿವೆ. ಈ ಭಾಗ ಸಮತಟ್ಟಾಗಿರುವುದರಿಂದ ನೀರಿನ ಶೇಖರಣೆಗೆ ಕಣಿವೆಗಳು ವಿರಳವಾಗಿವೆ. ಅಲ್ಲಲ್ಲಿ ಇರುವ ತಗ್ಗಿನಿಂದಾಗಿ ಮಳೆಗಾಲದ ನೀರು ಇಂಗುವಂಥ ವ್ಯವಸ್ಥೆಯಿದೆ. ಈ ಪ್ರದೇಶವು ಸಮತಟ್ಟಾಗಿರುವುದರಿಂದ ಯಾವುದೇ ಹೆಚ್ಚಿನ ಮರಗಿಡಗಳು ಇರುವುದಿಲ್ಲ. ಅಲ್ಲಲ್ಲಿ ಸಣ್ಣಬೆಟ್ಟಗಳ ಸಾಲುಗಳನ್ನು ಕಾಣಬಹುದು. ಈ ಸಾಲು ಒಂದು ತುದಿಯಿಂದ ಇನ್ನೊಂದು ತುದಿಯವರೆಗೂ ಅಂದರೆ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣಕ್ಕೆ ಹಬ್ಬಿವೆ. ಇವು ಅಲ್ಲಲ್ಲಿ ಸಣ್ಣ ದ್ವೀಪಗಳ ರೀತಿಯಾಗಿ ಮೇಲೆದ್ದಿರುವುದನ್ನು ಕಾಣಬಹುದು. ಈ ರೀತಿ ಅಲ್ಲಲ್ಲಿ ಬೆಟ್ಟಗಳು ಗುಂಪುಗಳಾಗಿರುವುದನ್ನು ಸಾಮಾನ್ಯವಾಗಿ ದಖ್ಖನ್ ಪ್ರಸ್ಥಭೂಮಿಯ ಹಲವೆಡೆ ಕಾಣಬಹುದು. ಈ ಲಕ್ಷಣಗಳು ಹಂಪಿಯ ಪೂರ್ವದಿಕ್ಕಿನಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಆದರೆ ಹಡಗಲಿಯ ಭಾಗದಲ್ಲಿ ಮೇಲ್ಕಂಡ ಲಕ್ಷಣಗಳು ಸ್ವಲ್ಪ ಭಿನ್ನವಾಗಿವೆ. ಇಲ್ಲಿಯ ಬೆಟ್ಟ ಗುಡ್ಡಗಳು ಪೂರ್ವದಲ್ಲಿ ಕಂಡುಬರುವ ಭೂಪ್ರದೇಶಕ್ಕಿಂತ ಭಿನ್ನವಾಗಿವೆ. ಬೆಟ್ಟ ಗುಡ್ಡಗಳಿರುವುದರಿಂದ ಇಲ್ಲಿ ಮಳೆ ಜಾಸ್ತಿ ಬೀಳುತ್ತದೆ. ಒರಟಾದ ನೆಲ ಹಾಗೂ ಎತ್ತರದ ದಿಣ್ಣೆಗಳು ಇಲ್ಲಿವೆ. ಇವು ಇಳಿಜಾರನ್ನು ಉತ್ತರದ ಕಡೆ ಹೊಂದಿವೆ. ಇದರಿಂದಾಗಿ ಮಳೆಯ ನೀರು ಉತ್ತರದಲ್ಲಿರುವ ಜೀವನದಿ ತುಂಗಭದ್ರೆಗೆ ಹರಿಯುತ್ತದೆ. ಪಶ್ಚಿಮದಲ್ಲಿ ಭೂ ಮೇಲ್ಮೈ ಎತ್ತರದಲ್ಲಿರುವುದರಿಂದ ಕುರುಚಲು ಗಿಡದ ಸಣ್ಣ ಕಾಡುಗಳಿವೆ. ಸಂಡೂರು ಬೆಟ್ಟಗಳ ಶ್ರೇಣಿಯು ಮಧ್ಯದಲ್ಲಿರುವುದರಿಂದ ಜಿಲ್ಲೆಯಲ್ಲಿ ಎದ್ದು ಕಾಣುತ್ತದೆ. ಅಲ್ಲದೆ ಅದು ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರಿನ ಅಗಾಧ ಭಂಡಾರವನ್ನು ಹೊಂದಿದೆ. ಆದುದರಿಂದ ಈ ಪ್ರದೇಶ ಕಬ್ಬಿಣ ಹಾಗೂ ಮ್ಯಾಂಗನೀಸ್ ಅದಿರಿನ ಗಣಿಗಾರಿಕೆಗೆ ಹೆಸರುವಾಸಿಯಾಗಿದೆ. ಮೇಲೆ ತಿಳಿಸಿದ ಬೆಟ್ಟಗಳ ಸಾಲುಗಳಲ್ಲದೆ ಈ ಜಿಲ್ಲೆಯಲ್ಲಿ ಕೆಲವು ಬಿಡಿ ಬಿಡಿಯಾದ ಬೆಟ್ಟಗಳ ಗುಂಪುಗಳಿವೆ. ಸಂಡೂರು ಬೆಟ್ಟಗಳ ಎತ್ತರಕ್ಕೆ ದರೋಜಿ ಬೆಟ್ಟಗಳಿವೆ. ಇದು ದರೋಜಿ ಗ್ರಾಮದ ಬಳಿ ಇದೆ. ದರೋಜಿ ಹಾಗು ಸಂಡೂರು ಬೆಟ್ಟಗಳ ನಡುವೆ ಕಣಿವೆ ಪ್ರದೇಶವಿದ್ದು ವ್ಯವಸಾಯಕ್ಕೆ ಅನುಕೂಲವಾಗಿದೆ. ಅಲ್ಲದೆ ಫಲವತ್ತಾದ ಭೂಮಿಯನ್ನು ಹೊಂದಿದೆ. ನೀರಾವರಿಯಿಂದಾಗಿ ಹಸಿರು ಕಂಗೊಳಿಸುತ್ತಿದೆ. ದರೋಜಿ ಬೆಟ್ಟಗಳ ಉತ್ತರಕ್ಕೆ ಕಂಪ್ಲಿ ಬೆಟ್ಟಗಳ ಸಾಲುಗಳಿವೆ. ಈ ಎರಡೂ ಬೆಟ್ಟಗಳ ಸಾಲಿನ ನಡುವಿನ ಭೂಪ್ರದೇಶದ ಕಣಿವೆಯಲ್ಲಿ ವ್ಯವಸಾಯಕ್ಕೆ ಅನುಕೂಲವಾಗಿದೆ. ಅಲ್ಲದೆ ಫಲವತ್ತಾದ ಭೂಮಿಯನ್ನು ಹೊಂದಿದೆ. ನೀರಾವರಿಯಿಂದಾಗಿ ಹಸಿರು ಕಂಗೊಳಿಸುತ್ತಿದೆ. ದರೋಜಿ ಬೆಟ್ಟಗಳ ಉತ್ತರಕ್ಕೆ ಕಂಪ್ಲಿ ಬೆಟ್ಟಗಳ ಸಾಲುಗಳಿವೆ. ಈ ಎರಡೂ ಬೆಟ್ಟಗಳ ಸಾಲಿನ ನಡುವಿನ ಭೂಪ್ರದೇಶದ ಕಣಿವೆಯಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯಿದೆ. ಕಂಪ್ಲಿ ಬೆಟ್ಟಗಳ ಸಾಲಿನಂತೆ ಇನ್ನೊಂದು ಬೆಟ್ಟಗಳ ಸಾಲು ಕುರುಗೋಡು ಪ್ರದೇಶದಲ್ಲಿ ಕಂಡುಬರುತ್ತದೆ. ಇವುಗಳನ್ನು ಕುರುಗೋಡು ಬೆಟ್ಟಗಳು ಎಂದು ಕರೆಯಲಾಗುತ್ತದೆ.

ಇದು ಉತ್ತರ ಪೂರ್ವ ದಿಕ್ಕಿಗಿದೆ. ಈ ಬೆಟ್ಟಗಳ ಸಾಲು ಸ್ವಲ್ಪ ದೂರದವರೆಗೆ ಮಾತ್ರ ಹರಡಿದೆ. ಹೀಗೆಯೇ ಕೆಲವು ಬೆಟ್ಟಗಳು ಎಂದರೆ ಬಳ್ಳಾರಿಯಲ್ಲಿರುವ ಬೆಟ್ಟಗಳ ಸಾಲು ಈ ಬೆಟ್ಟಗಳು ಗುಂಪುಗಳ ರೀತಿಯಿದ್ದು ಎತ್ತರವಾಗಿ ಕಂಡುಬರುತ್ತವೆ.

ಕುರುಗೋಡು ಪ್ರದೇಶವು ಹಲವು ಬೆಟ್ಟ ಗುಡ್ಡಗಳಿಂದ ಕೂಡಿದೆ. ಇಲ್ಲಿನ ಅತಿ ಗರಿಷ್ಠವಾದ ಬೆಟ್ಟದ ಎತ್ತರ ೫೯೯ ಮೀ.ಗಳು ಇಡೀ ಬೆಟ್ಟಗಳು ಗ್ರಾನೈಟ್ ನೈಸ್‌ಶಿಲೆಗಳಿಂದ ಕೂಡಿವೆ. ಇದರಲ್ಲಿ ಕೋಳಿಗುಡ್ಡದ ಕಲ್ಲಿನ ಸಮೂಹ ಒಂದು ಒತ್ತಾದ ರೀತಿ ಹರಡಿದೆ. ಇಲ್ಲಿನ ಪ್ರತಿ ಬೆಟ್ಟಕ್ಕೂ ಒಂದೊಂದು ಹೆಸರಿದೆ. ಅವುಗಳನ್ನು ಕಂದಾಯ ಇಲಾಖೆಯ ದಾಖಲೆಯಲ್ಲಿ ಜಿಲೆಲಿಕೊಂಡ, ಹನುಮನಕೊಂಡ, ನಿಶಾನಿಕೊಂಡ, ಅಲಬಾವಿಕೊಂಡ, ರಾಮನಕೊಂಡ, ಬೆಂಕನಕೊಂಡ, ಬೈರಿಕಲ್ಲು ಮುಂತಾಗಿ ಗುರುತಿಸಲಾಗಿದೆ.[3]ಬೆಟ್ಟಗಳ ನಡುವೆ ಅಲ್ಲಲ್ಲಿ ಸಣ್ಣ ಬಯಲುಪ್ರದೇಶವಿದೆ. ಅಲ್ಲಿಯ ತಗ್ಗು ಸಮೂಹವನ್ನು ಅತಿ ಎತ್ತರದಿಂದ ಸುಮಾರು ೧೦೦೦ ಅಡಿಯಿಂದ ನೋಡಿದರೆ ಪೂರ್ವಾಭಿಮುಖವಾಗಿ ಕುಳಿತ ಬಸವನ ರೀತಿ ಕಾಣುತ್ತದೆ.

ಸಂಡೂರು ಬೆಟ್ಟಗಳಲ್ಲಿ ಮಲ್ಲಪ್ಪನಗುಡ್ಡ ಮತ್ತು ಕಲ್ಲಹಲಿಗುಂದ, ಧಾರವಾಡ ನಿಶ್ಟಾ ಶಿಲಾಶ್ರೇಣಿಯನ್ನು ಹೊಂದಿದೆ. ದರೋಜಿ, ಕಂಪ್ಲಿ, ಕುರುಗೋಡು, ಹಂಪಿಯ ಬೆಟ್ಟಗಳನ್ನು ಸೇರಿಸಿಕೊಂಡು ಎಲ್ಲವೂ ಗ್ರಾನೈಟ್‌ಶಿಲೆಗಳನ್ನು ಹೊಂದಿವೆ. ಇಲ್ಲಿನ ನಿಶ್ಟಾ ಶಿಲಾವರ್ಗದ ಶ್ರೇಣಿಗಳಲ್ಲಿ ಎತ್ತರದ ಕೋಡು ಬೆಟ್ಟಗಳನ್ನು ಕಾಣಬಹುದು. ಅದರೊಡನೆ ದೊಡ್ಡ ಕೋರಕಲ್ಲಿನ ಕಣಿವೆಗಳು ಇವೆ. ಸಾಮಾನ್ಯವಾಗಿ ಈ ಗ್ರಾನೈಟ್ ಬೆಟ್ಟಗಳಲ್ಲಿ ಕಲ್ಲುಗಳ ಕುಪ್ಪೆಗಳು, ದೊಡ್ಡ ದೊಡ್ಡ ರಾಶಿಯಾಗಿದ್ದು ಇಲ್ಲಿ ಬೆಟ್ಟಗಳ ಗುಂಪನ್ನು ಕಾಣಬಹುದಾಗಿದೆ. ಈ ರೀತಿಯ ಬೆಟ್ಟಗಳ ಗುಂಪನ್ನು ರಾಯಚೂರು-ಚಿತ್ರದುರ್ಗ ಮತ್ತು ಬಳ್ಳಾರಿಯ ಕೆಲವು ಪ್ರದೇಶಗಳಲ್ಲಿ ಕಾಣಬಹುದು. ಈ ಬೆಟ್ಟಗಳ ವಿಶೇಷತೆ ಎಂದರೆ ಇವು ಅಸಾಮಾನ್ಯ ಕಂದು ಇಲ್ಲವೆ ಬೂದು ವರ್ಣದಲ್ಲಿದ್ದು, ಈಗಾಗಲೆ ತಿಳಿಸಿರುವ ಗ್ರಾನೈಟ್ ಶಿಲಾವರ್ಗಕ್ಕೆ ಸೇರಿವೆ.[4]ಈ ಪ್ರದೇಶದಲ್ಲಿ ಸಾಮಾನ್ಯವಾಗಿ ದೊಡ್ಡ ಬಂಡೆಗಳು ಸೀಳಿವೆ. ಹೀಗೆ ಬಿರುಕು ಬಿಟ್ಟು ಸೀಳಿದವುಗಳಲ್ಲಿ ಕೆಲವು ಮುಂಚಾಚಿ ಕಲ್ಲಾಸರೆಗಳಾದರೆ, ಕೆಲವು ಗುಹೆಗಳಾಗಿವೆ. ಸಹಸ್ರಾರು ವರ್ಷಗಳ ನಿರಂತರವಾದ ಸವಕಳಿಯಿಂದ ಗುಹೆಗಳು ಇಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಇವು ಆದಿಮಾನವನ ವಸತಿಗೆ ಆಸರೆಯಾಗಿದ್ದವು.

ಈ ಬೆಟ್ಟ ಗುಡ್ಡಗಳಲ್ಲಿನ ಗುಹೆಗಳು, ಕಲ್ಲಾಸರೆಗಳು ಆದಿಮಾನವನ ವಾಸಕ್ಕೆ ಒಂದೆಡೆ ಸಹಕಾರಿಯಾದರೆ, ಇನ್ನೊಂದಡೆ ಇಲ್ಲಿನ ಶಿಲೆ ಆಯುಧೋಪಕರಣಗಳನ್ನು ತಯಾರಿಸಿಕೊಳ್ಳಲು ಸಹಕಾರಿಯಾಗಿದ್ದರಿಂದ ಈ ಪರಿಸರದಲ್ಲಿ ಅಂದಿನ ಮಾನವ ನೆಲೆ ನಿಲ್ಲಲ್ಲು ಸಹಕಾರಿಯಾಯಿತು.

**೨. ಮಣ್ಣು ಮತ್ತು ಖನಿಜ ಸಂಪತ್ತು**

ಈ ಪ್ರದೇಶದಲ್ಲಿ ಮರಳು ಮಿಶ್ರಿತ ಕೆಂಪುಮಣ್ಣು ಮತ್ತು ಫಲವತ್ತಾದ ಜೇಡಿಮಣ್ಣು ಹರಡಿದೆ. ಮರಳು ಮಿಶ್ರಿತ ಕೆಂಪುಮಣ್ಣು ಸಾಮಾನ್ಯವಾಗಿ ತುಂಗಭದ್ರಾ-ಹಗರಿನದಿ ಪ್ರದೇಶಗಳಲ್ಲಿ ಕಂಡುಬರುತ್ತದೆ. ಕಪ್ಪು ಜೇಡಿಮಣ್ಣು ಹಡಗಲಿ ತಾಲೂಕು ಪ್ರದೇಶದಲ್ಲಿದೆ. ಈ ಭಾಗದಲ್ಲಿ ಹೇರಳವಾದ ಖನಿಜ ಸಂಪತ್ತು ದೊರೆಯುತ್ತದೆ. ಈ ಭೂಭಾಗವನ್ನು "ಖನಿಜಗಳ ನಿಧಿ" ಎಂದರೂ ತಪ್ಪಲ್ಲ. ಖನಿಜಗಳಲ್ಲೆಲ್ಲ ಅತಿ ಮುಖ್ಯವಾದುದೆಂದರೆ ಕಬ್ಬಿಣದ ಅದಿರು. ಪ್ರಾಚೀನ ಕಾಲದಿಂದಲೂ ಇದರ ಉಪಯೋಗದಿಂದ ಮಾನವನು ನಗರೀಕೃತ ಸಂಸ್ಕೃತಿಯೆಡೆಗೆ ಹೆಜ್ಜೆ ಹಾಕಿದನು. ಇಲ್ಲಿ ದೊರೆಯುವ ವಿವಿಧ ಬಗೆಯ ಖನಿಜಗಳ ವಿವರ ಇಂತಿದೆ. [5]

| | | |
|---|---|---|
| ೧. | ಕಬ್ಬಿಣದ ಅದಿರು | ಸಂಡೂರು, ನಂದಿಹಳ್ಳಿ, ಹೊಸಪೇಟೆ ಸುತ್ತಮುತ್ತ |
| ೨. | ಮ್ಯಾಂಗನೀಸ್ | ದೇವಗಿರಿ, ಸುಬ್ರಾಯನಹಳ್ಳಿ, ರಾಮಘಡ. |
| ೩. | ತಾಮ್ರ | ಹರಪನಹಳ್ಳಿ, ಚಿನ್ನಾಪುರ, ರಾಮಘಡ, ತಾಮ್ರಪರ್ವತ. |
| ೪. | ಸತು | ಮೆಟ್ರಿ. |
| ೫. | ಮ್ಯಾಗ್ನೆಸೈಟ್ | ತೋರಣಗಲ್ಲು. |
| ೬. | ಬಂಗಾರ | ಶೃಂಗಮರಡಿ, ಬೆಟಗೇರಿ, ತಾರಾನಗರ, ಕಂಚೂರು. |

| | | |
|---|---|---|
| ೭. | ಜಿಪ್ಸಮ್ | ತಾಳುರು, ಉತ್ತನೂರು, ಹಿರೆಹಡಗಲಿ, ಚಿನ್ನಹಳ್ಳಿ, |
| ೮. | ಜೇಡಿಮಣ್ಣು | ಹಲವಾಗಲು, ಸುಬ್ರಾಯನಹಳ್ಳಿ, ಯರನಹಳ್ಳಿ, ಬೆನಕಲ್, ತುಂಬರಗುಡ್ಡ. |
| ೯. | ಸುಣ್ಣಕಲ್ಲು | ತೋರಣಗಲ್ಲು, ಮೆಟ್ರಿ, ಉಬ್ಬಲಗಂಡಿ, ದೇವಲಾಪುರ, ಮಲ್ಲಪ್ಪನಗುಡ್ಡ. |
| ೧೦. | ಬಳಪದ ಕಲ್ಲು | ಅರಸಾಪುರ, ನೀಲಗುಂದ. |
| ೧೧. | ಹಳದಿ ಓಕರ್ | ತಮರಿ, ರಾಮಘಡ, ಬಲದಗುಡ್ಡ. |
| ೧೨. | ರೆಡ್ ಓಕರ್ | ಜಾನಿಕುಂಟೆ, ಜಂಬುನಾಥಹಳ್ಳಿ, ವ್ಯಾಸನಕೆರೆ, ಕರಡಿಕೊಳ್ಳ |
| ೧೩. | ಬೆಣಚಕಲ್ಲು | ನಾಗಲಾಪುರ, ರಾಜಾಪುರ, ಗಾದಿಗನೂರು, ಅಂಕಮನಾಳ, ರಾಮದುರ್ಗ, ಕಡೆಬಾಗಿಲು.[6] |
| ೧೪. | ಮಿನರಲ್ ವಾಟರ್ | ಹರಿಶಂಕರ, ಜೋಗಿಕೊಳ್ಳ. |
| ೧೫. | ವಜ್ರ | ದೇವಗೊಂಡನಹಳ್ಳಿ. |
| ೧೬. | ಬೆಸಾಲ್ಟ್ | ತಿಮ್ಮಾಪುರ. |

ಈ ಮೇಲಿನ ರೀತಿಯ ಮಣ್ಣು ಮಾನವರು ಕೃಷಿ ಚಟುವಟಿಕೆಗಳನ್ನು ಮಾಡಲು ಸಹಕಾರಿಯಾಯಿತು. ಇಲ್ಲಿ ದೊರೆಯುವ ಖನಿಜ ಸಂಪತ್ತು ಅಂದಿನಿಂದ ಇಂದಿನವರೆಗೆ ವಿವಿಧ ರೀತಿಯಲ್ಲಿ ಉಪಯುಕ್ತವಾಗಿದೆ.

**೪. ಅರಣ್ಯ ಮತ್ತು ನದಿಗಳು**

ಈ ಪರಿಸರದ ಭೌಗೋಳಿಕ ವಿಸ್ತೀರ್ಣ ೨೯,೫೬,೭೯೨ ಹೆಕ್ಟೇರುಗಳು. ಅದರಲ್ಲಿ ಅರಣ್ಯ ಪ್ರದೇಶ ೧೮,೧೯,೨೦೭ ಹೆಕ್ಟೇರುಗಳಿದೆ. ಇಲ್ಲಿನ ತಾಲೂಕುಗಳಲ್ಲಿ ಶೇ. ೪೦ರಷ್ಟು ಅರಣ್ಯವಿದೆ. ಇವುಗಳಲ್ಲಿ ಹೆಚ್ಚಿನ ಪ್ರಮಾಣ ಅಂದರೆ ೧,೦೪,೯೭೯ ಹೆಕ್ಟೇರು ಅರಣ್ಯ ಪ್ರದೇಶ ಹೊಸಪೇಟೆ, ಕೂಡ್ಲಿಗಿ, ಸಂಡೂರು ತಾಲೂಕುಗಳಲ್ಲಿದೆ.

ಈ ಪ್ರದೇಶವು ಮುಂಗಾರು ಹಾಗು ಹಿಂಗಾರು ಮಳೆಯ ಸೆರಗಿನ ಪ್ರದೇಶವಾಗಿದೆ. ಆದುದರಿಂದ ಇಲ್ಲಿ ಅಲ್ಬೇಜಿಯ, ಅಕೇಶಿಯ, ಅರಾಬಿಕ್, ಯುಪೋರ್, ಬಿಯಾಸ ಜಾತಿಗಳಿಗೆ ಸೇರಿದ ಕುರಚಲು ಮರಗಿಡಗಳು ಹೆಚ್ಚಾಗಿ ಬೆಳೆಯುತ್ತವೆ. ಇಂತಹ ಮರಗಿಡದ ಪ್ರದೇಶವನ್ನು ಅವಲಂಬಿಸುವ ಪ್ರಾಣಿಗಳಾದ ಮೊಲ, ಜಿಂಕೆಯಂತಹ ಸಣ್ಣ ಸಸ್ತನಿ ಪ್ರಾಣಿಗಳು ಇಲ್ಲಿ ಕಂಡುಬರುತ್ತವೆ. ಇದಕ್ಕೆ ಪೂರಕವಾಗಿ ಹೇಳುವುದಾದರೆ ತೆಕ್ಕಲಕೋಟೆ, ಸಂಗನಕಲ್ಲು ಹಳ್ಳೂರಿನಲ್ಲಿ ಆಲ್ಬಿಯುಯಾ ಆಕಾಹಿಯ ಗುಂಪಿಗೆ ಸೇರಿದ ಸಸ್ಯಗಳು ಬೆಳೆಯುತ್ತಿದ್ದವು. ತೆಕ್ಕಲಕೋಟೆ ಸಂಗನಕಲ್ಲು, ಹಳ್ಳೂರಿನಲ್ಲಿ ದೊರೆತಿರುವ ಇದ್ದಿಲಿನಿಂದ ಈ ಸಸ್ಯಗಳನ್ನು ಗುರುತಿಸಲಾಗಿದೆ.[7]ಇಂದಿಗೂ ಸಹ ಉರುವಲು ಬೇಸಾಯದ ಉಪಕರಣಗಳಿಗೆ ಇವನ್ನು ಬಳಸುತ್ತಾರೆ. ಈ ಪ್ರದೇಶವು ಕಪ್ಪು ಎರೆಮ್ಮಣಿನಿಂದ ಕೂಡಿದೆ.

ಇಲ್ಲಿ ಹರಿಯುವ ನದಿಗಳಲ್ಲಿ ತುಂಗಭದ್ರ ಮುಖ್ಯವಾದುದು. ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತಿರುವ ಇದು ಚಿಕ್ಕಮಗಳೂರು ಜಿಲ್ಲೆಯ ಪಶ್ಚಿಮ ಬೆಟ್ಟಸಾಲಿನ ವರಹ ಪರ್ವತದಲ್ಲಿ ಉಗಮವಾಗುವ ಎರಡು ನದಿಗಳು ಶಿವಮೊಗ್ಗ ಜಿಲ್ಲೆಯ ಕೂಡಲಿಯಲ್ಲಿ ಬಂದು ಸೇರುತ್ತವೆ. ಅವುಗಳಲ್ಲಿ ಒಂದು ತುಂಗಾ ಇನ್ನೊಂದು ಭದ್ರಾ. ಎರಡೂ ಕಲೆತು ಮುಂದೆ ಸಾಗಿದಾಗ ತುಂಗಭದ್ರಾ ಎಂದು ಕರೆಯಲಾಗುತ್ತದೆ.

ಈ ನದಿ ಪಶ್ಚಿಮದಲ್ಲಿ ಧಾರವಾಡ, ಉತ್ತರದಲ್ಲಿ ಕೊಪ್ಪಳ ಹಾಗು ರಾಯಚೂರು ಜಿಲ್ಲೆಗಳಿಗೆ ಗಡಿಯಾಗಿ ಪರಿಣಮಿಸಿದೆ. ತುಂಗಭದ್ರಾ ನದಿಗೆ ಬಂದು ಸೇರುವ ಹಗರಿ, ಚಿಕ್ಕಹಗರಿ ನದಿಗಳು ಪ್ರಾಚೀನ ಕಾಲದಿಂದಲೂ ಕೃಷಿ ಅಭಿವೃದ್ಧಿಗೆ ನೀರನ್ನೊದಗಿಸುತ್ತಿವೆ.

ತುಂಗಭದ್ರಾ ನದಿಯ ಉಲ್ಲೇಖ ರಾಮಾಯಣ ಮತ್ತು ಪುರಾಣಗಳಲ್ಲಿ ಬಂದಿದೆ. ಮಹಾಭಾರತದಲ್ಲಿ ಜಾಹ್ನವಿ, ಕೃಷ್ಣವೇಣಿಗಳ ಜೊತೆಗೆ ತುಂಗಾವೇಣಿ ಎಂಬ ಹೆಸರು ಬರುತ್ತದೆ. ಇಂದಿಗೂ ಪವಿತ್ರ ಕ್ಷೇತ್ರವಾದ ಹಂಪಿಯಲ್ಲಿ ಈ ನದಿಗೆ 'ಪಂಪಾತೀರ್ಥ'ವೆಂದೇ

ಕರೆಯಲಾಗುತ್ತದೆ. ಇದರ ನೀರು ರುಚಿಕರವಾಗಿದೆ, ಇದರಿಂದ 'ಗಂಗಾಸ್ನಾನ, ತುಂಗಾಪಾನ' ಎಂಬ ನಾಣ್ಣುಡಿಯೇ ಈ ಪರಿಸರದಲ್ಲಿ ಬೆಳೆದು ಬಂದಿರುವುದು ಗಮನಾರ್ಹ.

ತುಂಗಭದ್ರಾ ನದಿ ಬಳ್ಳಾರಿ ಜಿಲ್ಲೆಯನ್ನು ಹರಪನಹಳ್ಳಿ ತಾಲೂಕಿನ ಕಡತಿ ಎಂಬ ಗ್ರಾಮದಲ್ಲಿ ಪ್ರವೇಶಿಸಿ ಹಗರಿಬೊಮ್ಮನಹಳ್ಳಿ, ಹೊಸಪೇಟೆ ಮತ್ತು ಸಿರುಗುಪ್ಪ ತಾಲೂಕುಗಳನ್ನೊಳಗೊಂಡಂತೆ ೩೨೦ ಕಿ.ಮೀ. ಚಲಿಸಿ ಆಲೂರು ತಾಲೂಕಿನ ಚಲ್‌ಕೂಡಲೂರು ಬಳಿ ಆಂಧ್ರ ಪ್ರದೇಶವನ್ನು ಸೇರುತ್ತದೆ.[8]

ತುಂಗಭದ್ರಾ ನದಿಗೆ ಬಂದು ಸೇರವು ಹಗರಿ, ಚಿಕ್ಕಹಗರಿಗಳಲ್ಲದೆ ಚಿನ್ನ ಹಗರಿಯನ್ನೊಳಗೊಂಡಂತೆ ಅನೇಕ ಹಳ್ಳಗಳು ಈ ಪ್ರದೇಶದಲ್ಲಿ ಹರಿಯುತ್ತವೆ. ತುಂಗಭದ್ರಾ ನದಿಯಂತೆ ಹಗರಿಯೂ ಚಿಕ್ಕಮಗಳೂರು ಜಿಲ್ಲೆಯ ಮಲ್ಲಯ್ಯನಗರಿ ಮತ್ತು ತಂಗಲಿಯಲ್ಲಿಯ ಎರಡು ನದಿಗಳನ್ನು ವೇದ ಮತ್ತು ಆವತಿ ಎಂದು ಕರೆಯಲಾಗಿದೆ. ಇವೆರಡೂ ಚಿತ್ರದುರ್ಗ ಜಿಲ್ಲೆಯಲ್ಲಿ ಸೇರಿ ವೇದಾವತಿ ಎಂದು ಕರೆಸಿಕೊಂಡು ನಂತರ ಬಳ್ಳಾರಿ ಜಿಲ್ಲೆಯನ್ನು (ರೂಪನಗುಡಿಯಲ್ಲಿ) ಪ್ರವೇಶಿಸುತ್ತದೆ. ಈ ಪ್ರದೇಶದ ಶಾಸನಗಳು ಇದನ್ನು 'ಅಹರಿ' 'ಅಗ-ಹರಿ' (ಅಘಹರಿ) (ಪಾಪವನ್ನು ತೊಳೆಯುವ) ಎಂದು ಕರೆದಿವೆ. ಈ ಪ್ರದೇಶದಲ್ಲಿ ೯೨.೮ ಕಿ.ಮೀ. ಸಾಗಿ ಸಿರುಗುಪ್ಪ ತಾಲೂಕಿನ ಸಿದ್ಧರಗಡ್ಡೆ ಹಳ್ಳಿಯಲ್ಲಿ ತುಂಗಭದ್ರಾ ನದಿಯನ್ನು ಸೇರುತ್ತದೆ. ವಿಶಾಲವಾಗಿ ಹರಿದಿರುವ ಈ ನದಿ ನೀರನ್ನು ಪ್ರಾಚೀನ ಕಾಲದಿಂದಲೂ ತೋಟ ಗದ್ದೆಗಳಿಗೆ ಬಳಸಿಕೊಳ್ಳಲಾಗಿದೆ.[9]

ತುಂಗಭದ್ರೆಯ ಇನ್ನೊಂದು ಉಪನದಿ ಚಿಕ್ಕಹಗರಿ ಚಿತ್ರದುರ್ಗ ಜಿಲ್ಲೆಯಲ್ಲಿ ಉಗಮವಾಗಿ, ಹರಪನಹಳ್ಳಿ ತಾಲೂಕಿನ ಅಂಜಿಗೇರಿಯಲ್ಲಿ ಪ್ರವೇಶಿಸುತ್ತದೆ. ಹರಪನಹಳ್ಳಿ ಹಡಗಲಿ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ತಾಲೂಕಗಳಲ್ಲಿ ಹರಿಯುವ ಇದು ಒಟ್ಟು ೪೦ ಕಿ.ಮೀ. ಸಾಗಿ ತುಂಗಭದ್ರೆಯನ್ನು ಸೇರುತ್ತದೆ.

ಅದೇ ರೀತಿ ಚಿನ್ನಹಗರಿ ನದಿಯು ಚಿತ್ರದುರ್ಗ ಜಿಲ್ಲೆಯಲ್ಲಿ ಉಗಮಗೊಂಡು ಕೂಡ್ಲಿಗಿಯ ದಕ್ಷಿಣಕ್ಕೆ ಕಲ್ಲಹಳ್ಳಿ ಪ್ರದೇಶವನ್ನು ಪ್ರವೇಶಿಸುತ್ತದೆ. ಇದನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ಜಿನಗಿಹಳ್ಳ ಎಂದು ಕರೆಯಲಾಗುತ್ತದೆ. ಬಳ್ಳಾರಿ-ಚಿತ್ರದುರ್ಗ ಜಿಲ್ಲೆಗಳ ಗಡಿಯಾಗಿ ಪರಿಣಮಿಸಿರುವ ಇದು ಆಂಧ್ರ ಪ್ರದೇಶದ ರಾಯದುರ್ಗ ತಾಲೂಕಿನ ಉತ್ತರದಲ್ಲಿ ಹಗರಿ ನದಿಗೆ ಬಂದು ಕೂಡುತ್ತದೆ. ಪೆದ್ದವಂಕಾ ಎಂದು ಕರೆಯುವ ಒಂದು ನೀರಿನ ಹರಿಯು ತಾಮ್ರಪರ್ವತದಲ್ಲಿ ಹುಟ್ಟಿ ಕುಮತಿಯಲ್ಲಿ ಈ ಚಿನ್ನಹಗರಿ ಉಪನದಿಗೆ ಬಂದು ಸೇರುತ್ತದೆ.[10]

ಈ ಮೂರು ಉಪನದಿಗಳೊಂದಿಗೆ ಆಯಾ ಸ್ಥಳಗಳಲ್ಲಿ ಅನೇಕ ಹಳ್ಳಗಳು ಉಗಮವಾಗಿ ತುಂಗಭದ್ರಾ ನದಿ ಇಲ್ಲವೆ ಈ ಉಪನದಿಗಳನ್ನು ಕೂಡಿಕೊಳ್ಳುತ್ತವೆ. ಹಗರನೂರು ಹಳ್ಳ, ಪಂಪಸಾಗರ ಹಳ್ಳ, ಗುರಿಪುರ ಹಳ್ಳ, ನಾರಿಹಳ್ಳ (ಇದನ್ನು ಕ್ರಿ.ಶ. ೧೫೪೧ ರ ಶಾಸನ "ನಾರಾಯಣಿ" ಎಂದು ಕರೆದಿದೆ)[11]ಹರವನಮಹಳ್ಳ (ಕಾಪ್ರಿವಂಕ), ಮಾದಿಹಳ್ಳ, ತೆಲಗಿಹಳ್ಳ, ಇಟ್ಟಗಿಹಳ್ಳ ಮಾರಹಳ್ಳ (ಹರಪನಹಳ್ಳಿ) ತಿಪ್ಪಾಪುರಹಳ್ಳ, ಹಿರೇಹಳ್ಳ(ಹಡಗಲಿ) ಮೊದಲಾದವು ಪ್ರಮುಖವಾದವು. ಇಲ್ಲಿನ ಅರಣ್ಯ ಮನುಷ್ಯನಿಗೆ ಅವಶ್ಯಕವಾದ ಹಣ್ಣು ಹಂಪಲು, ಮರಮುಟ್ಟು, ಉರುವಲು, ಔಷಧಿಗೆ ಉಪಯುಕ್ತವಾದ ಗಿಡ, ನಾರು-ಬೇರುಗಳನ್ನು ಒದಗಿಸಿದೆ. ಅಲ್ಲದೆ ಇಲ್ಲಿನ ನದಿ, ಹಳ್ಳಗಳು ಮನುಷ್ಯನಿಗೆ ಅವಶ್ಯಕವಾಗಿಬೇಕಾದ ಜೀವಸೆಲೆ(ನೀರು) ಯನ್ನು ಒದಗಿಸಿ ಅವನ ಅವಶ್ಯಕತೆಗಳನ್ನು ಪೂರೈಸಿದೆ.

**೫. ವಾಯುಗುಣ ಮತ್ತು ಪ್ರಾಣಿ-ಪಕ್ಷಿ ಹಾಗೂ ಮುಖ್ಯ ಬೆಳೆಗಳು**

ಬೇಸಿಗೆ ಕಾಲವು ಫೆಬ್ರವರಿ ಅಂತ್ಯದಿಂದ ಆರಂಭವಾಗಿ ಜೂನ್‌ತಿಂಗಳವರೆಗೆ ಇರುತ್ತದೆ. ಆಗ ಉಷ್ಣಾಂಶ ಸರಾಸರಿ ೧೬೭° ಸೆ.ವರೆಗೆ ಇರುತ್ತದೆ. ಕೆಲವು ಸಲ ಇದು ೪೫ ರಿಂದ ೪೯° ಸೆ. ವರೆಗೆ ಏರುತ್ತದೆ. ಜುಲೈ ತಿಂಗಳಲ್ಲಿ ಆರಂಭವಾಗುವ ಮಳೆಗಾಲ ನವೆಂಬರ್ ತಿಂಗಳವರೆಗೆ ಇರುತ್ತದೆ. ಮಳೆಯ ವಾರ್ಷಿಕ ಸರಾಸರಿ ೫೭೪.೯ ಮಿ.ಮೀ. ಇರುತ್ತದೆ. ನವೆಂಬರ್ ಕೊನೆಯಿಂದ ಫೆಬ್ರವರಿಯವರೆಗೆ ಚಳಿಗಾಲವಿರುತ್ತದೆ. ಶುಷ್ಕ ವಾತಾವರಣವಿರುವ ಈ ಪ್ರದೇಶ ಮನುಷ್ಯನ ವಾಸಕ್ಕೆ ಅತ್ಯಂತ ಯೋಗ್ಯವಾಗಿದೆ.

ಈ ಪ್ರದೇಶದ ಕಾಡು ಹಾಗೂ ಬೆಟ್ಟಗುಡ್ಡಗಳಲ್ಲಿ ಚಿರತೆ, ಕರಡಿ, ಕಾಡುಹಂದಿ, ಮುಳ್ಳುಹಂದಿ, ನರಿ, ಜಿಂಕೆ, ತೋಳ ಮೊದಲಾದ ಕಾಡುಪ್ರಾಣಿಗಳು ಹಾಗೂ ನವಿಲು, ಕಾಗೆ, ಗೂಗೆ, ನೀರುಕೋಳಿ, ನೀರುಹಂದಿ, ಗುಬ್ಬಿ, ಕಿಂಗ್‌ಫಿಷ್‌ರ್ ಮುಂತಾದ ಪಕ್ಷಿಗಳು ಕಂಡುಬರುತ್ತವೆ. ತುಂಗಭದ್ರಾ ನದಿ ನೀರಿನಲ್ಲಿ ಮೊಸಳೆಗಳಿವೆ.[12]

ತುಂಗಭದ್ರಾ ಮತ್ತು ಅದರ ಉಪನದಿಗಳ ಹಾಗೂ ಹಳ್ಳ, ಕೆರೆಗಳ ನೀರನ್ನು ಬಳಸಿಕೊಂಡು ಇಲ್ಲವೆ ಮಳೆಯಾಶ್ರಿತ ನೀರಿನ ಸಹಾಯದಿಂದ ಭತ್ತ, ಗೋದಿ, ಜೋಳ, ಗೋವಿನಜೋಳ, ರಾಗಿ, ತೊಗರಿ, ಕಡಲೆ ಮೊದಲಾದ ಧಾನ್ಯಗಳು ಹಾಗೂ ಕಬ್ಬು, ಹತ್ತಿ, ಬಾಳೆ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತದೆ.

ಈ ರೀತಿಯ ಎಲ್ಲ ಸವಲತ್ತುಗಳು ಈ ಭೂಭಾಗದಲ್ಲಿ ಇದ್ದಿದ್ದರಿಂದ ಹಂಪಿ, ಆನೆಗುಂದಿ, ನಿಟ್ಟೂರು, ತೆಕ್ಕಲಕೋಟೆ, ಸಂಗನಕಲ್ಲು, ಕಪ್ಪಗಲಲ್ಲು, ಕುಡತಿನಿ, ಕಾಕುಬಾಳ, ಹಿರೇಬೆನಕಲ್ಲು, ಮಲ್ಲಾಪುರ ಮೊದಲಾದ ಸ್ಥಳಗಳಲ್ಲಿ ಆದಿಶಿಲಾಯುಗದಿಂದ ಆದಿಮಾನವನು ವಾಸಿಸಿದ್ದಾನೆ. ಮುಂದೆ ಈ ಭೂ ಭಾಗದಲ್ಲಿ ಪ್ರಬಲ ರಾಜ್ಯಗಳನ್ನು ಕಟ್ಟಲು ಇಲ್ಲಿನ ಭೌಗೋಳಿಕ ಪರಿಸರವು ಸಹಕಾರಿಯಾಯಿತು. ಇದರಿಂದಾಗಿಯೇ ಹಂಪಿ-ಆನೆಗುಂದಿ ಮುಂತಾದ ನೆಲೆಗಳಲ್ಲಿ ಮನುಷ್ಯ ಪ್ರಾಗೈತಿಹಾಸಿಕ ಕಾಲದಿಂದ ಇತಿಹಾಸ ಕಾಲದಲ್ಲಿ ವಾಸಿಸುತ್ತ ಆ ಪರಂಪರೆ ಇಂದಿಗೂ ಮುಂದುವರಿಯಲು ಕಾರಣವಾಗಿದೆ.

ಬೆಟ್ಟಗಳಿಂದ ಸುತ್ತುವರಿದ ಎತ್ತರವಾದ ಈ ಭೂ ಪ್ರದೇಶ ಪ್ರಕೃತಿದತ್ತ ಸುರಕ್ಷತೆಯನ್ನು ನೀಡಿದೆ. ಇಂತಹ ಬೆಟ್ಟಗಳ ಸಾಲಿನಲ್ಲಿ ನದಿ, ಸಣ್ಣನದಿ, ಹಳ್ಳಗಳು ಹರಿಯುವುದು ಸಾಮಾನ್ಯ. ಈ ನೀರಿನ ಪ್ರದೇಶದ ಆಸುಪಾಸಿನಲ್ಲಿ ಇರುವ ಫಲವತ್ತಾದ ಮಣ್ಣಿನಿಂದಾಗಿ ಕೃಷಿಗೆ ಯೋಗ್ಯವಾದ ಪ್ರದೇಶ ದೊರಕಿದೆ. ಮಣ್ಣು ಫಲವತ್ತಾದರೂ ಇಲ್ಲಿ ಮಳೆ ಕಡಿಮೆಯಾದ್ದರಿಂದ ಇತ್ತೀಚಿನವರೆಗೂ ಈ ಪ್ರದೇಶ ಒಣ ಬೇಸಾಯಕ್ಕೆ ಒಳಪಟ್ಟಿತ್ತು. ಆದರೆ ತುಂಗಭದ್ರಾ ಆಣೆಕಟ್ಟು ನಿರ್ಮಾಣದಿಂದ, ತೋಡಿದ ಕಾಲುವೆಗಳಿಂದಾಗಿ ಇಂದು ನೀರಾವರಿ ಭೂಮಿಯಾಗಿದೆ. ಇಲ್ಲಿಯ ಭೂ ಭೌತಿಕ ಸ್ವರೂಪ ಇಲ್ಲಿ ದೊರೆಯುವ ಅದಿರು, ಖನಿಜ, ಶಿಲಾಸ್ತೋಮ, ಮಣ್ಣು, ಸಸ್ಯಗಳು ಮಾನವನಿಗೆ ಸಹಕಾರಿಯಾಗಿದ್ದವು. ಇದುವೇ ಪ್ರಾಚೀನ ಮನುಷ್ಯ ಒಕ್ಕಲು ಸಂಸ್ಕೃತಿ ಆರಂಭಿಸಲು ಪ್ರೇರಣೆಯಾಯಿತು. ಒಟ್ಟಾರೆ ಹೇಳುವುದಾದರೆ ಭೌಗೋಳಿಕವಾಗಿ ಇದು ಪ್ರಾಚೀನ ಪ್ರದೇಶವಾಗಿದ್ದು, ವಿಶಾಲವಾಗಿ ಹರಡಿಕೊಂಡಿದೆ. ಇಲ್ಲಿ ಹರಿಯುವ ತುಂಗಭದ್ರಾ ಹಲವು ರೀತಿಯಲ್ಲಿ ಜನಜೀವನದ ಮೇಲೆ ಪ್ರಭಾವ ಬೀರಿದೆ. ಅಲ್ಲದೆ ಅನೇಕ ಸಂಸ್ಕೃತಿಗಳ ಏಳ್ಗೆಗೂ ಕಾರಣವಾಗಿದೆ. ಇಲ್ಲಿನ ಬೆಟ್ಟಗುಡ್ಡಗಳಲ್ಲಿ ದೊರೆಯುವ ನೀರನ್ನು ಆಧರಿಸಿ ಆದಿಮಾನವ ಈ ಸ್ಥಳವನ್ನು ಆಯ್ಕೆ ಮಾಡಿಕೊಂಡನು. ವ್ಯವಸಾಯದ ಕಸುಬನ್ನು ಆತ ಕರಗತ ಮಾಡಿಕೊಂಡ ನಂತರ ಈ ಸ್ಥಳಗಳಲ್ಲಿದ್ದ ಉತ್ತಮವಾದ ಭೂಮಿ ವ್ಯವಸಾಯಕ್ಕೆ ಆಸರೆಯಾಯಿತು. ಇದು ಮುಂದೆ ಹಲವು ಸಂಸ್ಕೃತಿಗಳ ಉಗಮಕ್ಕೆ ಕಾರಣವಾಯಿತು. ಫಲವತ್ತಾದ ಭೂಮಿ. ದೊಡ್ಡ ದೊಡ್ಡ ಬಂಡೆಗಳನ್ನು ಹೊತ್ತ ಬೆಟ್ಟಗಳು, ನಿಸರ್ಗ ನಿರ್ಮಿತ ಮತ್ತು ಕೊರೆದು ತಯಾರಿಸಿದ ಗವಿಗಳು, ತಾಮ್ರ, ಕಬ್ಬಿಣ, ಚಿನ್ನದ ಅದಿರು, ತುಂಗಭದ್ರಾ ಮತ್ತು ಅದರ ಉಪನದಿಗಳ ನೀರಿನ ಸರಬರಾಜು, ಕಾಡು ಮೊದಲಾದ ಭೌಗೋಳಿಕ ಅನುಕೂಲತೆಗಳಿಂದ ಪ್ರಾಗೈತಿಹಾಸ ಕಾಲದಿಂದಲೂ ಮಾನವನ ವಾಸಸ್ಥಾನವಾಗುವುದಕ್ಕೆ ಈ ಪ್ರದೇಶ ಕಾರಣವಾಯಿತು ಎಂದು ಹೇಳಬಹುದು.

---

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

[1] ನಾಯಕ ಹಾ.ಮಾ.(ಸಂ), ಕನ್ನಡ ವಿಷಯ ವಿಶ್ವಕೋಶ ಪು. ೯೮೬೫-೯೭

[2] ಅದೇ.

[3] Gazetteer of India, Bellary District

[4] ಅದೇ.

[5] ಚಂದ್ರಶೇಖರ ಟಿ.ಆರ್.ಬಳ್ಳಾರಿ ಜಿಲ್ಲೆಯ ನಿಸರ್ಗ ಸಂಪತ್ತು. ಪು. ೪೭-೭೮

[6] ರಾಯಚೂರು ಜಿಲ್ಲಾ ಗೆಜಟಿಯ್, ಪು. ೮-೧೨

[7] Subba Rao. B., Stone age Culture of Bellary and Sankalia H.D. Mesolithic and premesolithic Industries from Excavations at Sanganakalu, Bellary.

[8] ಅದೇ.

[9] ಚಿತ್ರದುರ್ಗ ಗೆಜಟಿಯ್, ಪು. ೬-೧೭

[10] ಅದೇ.

[11] S.I.I.IX (i), 104, 1046,

[12] ನೋಡಿ: ಬಳ್ಳಾರಿ ಮತ್ತು ರಾಯಚೂರು ಜಿಲ್ಲಾ ಗೆಜಟಿಯರ್

# ೩. ಕರ್ನಾಟಕದಲ್ಲಿ ಆದಿಮಾನವನ ಸಂಸ್ಕೃತಿ ಮತ್ತು ಮಹತ್ವ

## (೧)

ಭೂಮಿಯ ಹುಟ್ಟು ಸುಮಾರು ೬ ಕೋಟಿ (ಮಿಲಿಯನ್) ವರ್ಷಗಳಷ್ಟು ಹಿಂದೆ ಆಯಿತು. ನಂತರ ಮೊದಲ ಜೀವಿ ಸುಮಾರು ೩೫೦-೪೦೦ ಕೋಟಿ (೩.೫-೪) ಮಿಲಿಯನ್ ವರ್ಷಗಳ ಹಿಂದೆ ಸಂಭವಿಸಿರಬಹುದಾದ ಊಹೆ ಇದೆ.[1] ಮಾನವ ಈ ಜೀವವಿಕಾಸದ ಏಣಿಯಲ್ಲಿ ಎತ್ತರಕ್ಕೆ ಏರಿರುವ ಒಂದು ಜೀವಿ. ಈ ದೀರ್ಘಾವಧಿ ಭೂ ಇತಿಹಾಸಕ್ಕೆ ಹೋಲಿಸಿದರೆ ಮಾನವನ ಪೂರ್ವಜರ ಹುಟ್ಟು ಕೇವಲ ೬೫ ಮಿಲಿಯನ್ ವರ್ಷಗಳ ಹಿಂದಷ್ಟೆ ಆಗಿರುವ ದಾಖಲೆ ಸಿಗುತ್ತದೆ. ಆದಿಮಾನವ ಉಗಮವಾಗಿ ಸರಿ ಸುಮಾರು ೧೪ ಮಿಲಿಯನ್ ವರ್ಷಗಳಾಗಿದ್ದರೆ, ಆಧುನಿಕ ಮಾನವನ ಉಗಮ ಕೇವಲ ೨ ಮಿಲಿಯನ್ ವರ್ಷಗಳ ಹಿಂದಷ್ಟೇ ಆಗಿದೆ ಎನ್ನಬಹುದು.[2] ಮಾನವ ಕೋತಿ, ವಾನರರನ್ನೊಳಗೊಂಡ ಪ್ರೈಮೋಟ ಗಣಕ್ಕೂ, ಸಸ್ತನಿ ವರ್ಗಕ್ಕೂ ಸೇರಿದ್ದಾನೆ. ಇಡೀ ಪ್ರಾಣಿ ಜಗತ್ತಿನಲ್ಲಿ ಮಾನವನಿಗೆ ಒಂದು ವ್ಯವಸ್ಥಿತ ಸ್ಥಾನವಿದೆ.

ಭಾರತದಲ್ಲಿ ಆದಿಮಾನವ ಪ್ರಾಗೈತಿಹಾಸಿಕ ಕಾಲದ ವಿವಿಧ ಕಾಲಘಟ್ಟಗಳಲ್ಲಿ ಜೀವಿಸಿದ್ದ ಹಲವಾರು ಉದಾಹರಣೆಗಳು ದೊರೆತಿವೆ. ಕರ್ನಾಟಕವು ಇದಕ್ಕೆ ಹೊರತಾಗಿಲ್ಲ. ದಖನ್‌ಪ್ರಸ್ಥಭೂಮಿಗೆ ಸೇರಿದ ಕರ್ನಾಟಕವು ಭೌಗೋಳಿಕವಾಗಿ ಆಯಕಟ್ಟಿನ ಭಾಗದಲ್ಲಿದೆ. ಇಲ್ಲಿನ ಪರಿಸರವು ಮಾನವನ ವಾಸಕ್ಕೆ ಅತ್ಯಂತ ಅನುಕೂಲಕರವಾಗಿದ್ದರಿಂದ ಅತಿ ಪ್ರಾಚೀನ ಕಾಲದಿಂದಲೂ ಇವನ ಜೀವನೋಪಾಯದ ಚಟುವಟಿಕೆಗಳು ಇಲ್ಲಿ ಆರಂಭವಾಗಿರುವುದನ್ನು ಗುರುತಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಪುರಾತತ್ವ ಇಲಾಖೆ ಹಾಗೂ ಕರ್ನಾಟಕ, ಮೈಸೂರು, ಬೆಂಗಳೂರು, ಕನ್ನಡ ವಿಶ್ವವಿದ್ಯಾಲಯಗಳ ಸಂಶೋಧಕ ವಿದ್ವಾಂಸರು ಮತ್ತು ಕೆಲ ಸಂಘ ಸಂಸ್ಥೆಗಳು,[3] ಹವ್ಯಾಸಿ ಸಂಶೋಧಕರು, ವಿದ್ವಾಂಸರು ನಡೆಸಿದ ಉತ್ಖನನ, ಅನ್ವೇಷಣಾ ಕಾರ್ಯದಿಂದ ಕರ್ನಾಟಕದಲ್ಲಿ ಹಲವಾರು ಆದಿಮಾನವನ ನೆಲೆಗಳು ಬೆಳಕಿಗೆ ಬಂದಿವೆ. ಮಾನವ ಆದಿಮ ಹಂತದಿಂದ ನಾಗರಿಕ ಹಂತಕ್ಕೆ ತಲುಪುವವರೆಗಿನ ಕಾಲವನ್ನು ಇಲ್ಲವೇ ಮಾನವ ಅಕ್ಷರ ಜ್ಞಾನವನ್ನು ಕಂಡುಕೊಳ್ಳದೆ ಇದ್ದ ಕಾಲವನ್ನು ಪ್ರಾಗೈತಿಹಾಸಿಕ ಕಾಲವೆಂದು ಅಥವಾ ಇತಿಹಾಸ ಪೂರ್ವಕಾಲವೆಂದು ಕರೆಯುತ್ತಾರೆ.[4]ಮಾನವನ ಅಕ್ಷರ ಜ್ಞಾನವನ್ನು ಕಂಡುಕೊಂಡು ನಂತರದ ಕಾಲವನ್ನು ಚಾರಿತ್ರಿಕ ಕಾಲ ಎನ್ನುತ್ತಾರೆ. ಪ್ರಾಗೈತಿಹಾಸಿಕ ಕಾಲದ ಈ ಕಾಲಘಟ್ಟವನ್ನು ಶಿಲಾಯುಗ, ಲೋಹಯುಗ ಎಂಬ ಎರಡು ವಿಭಾಗಗಳನ್ನಾಗಿ ಮಾಡಲಾಗಿದೆ.

ಈ ಎರಡು ಯುಗಗಳಲ್ಲಿ ಹಳೇಶಿಲಾಯುಗ, ಸೂಕ್ಷ್ಮಶಿಲಾಯುಗ, ನವ ಶಿಲಾಯುಗ, ಶಿಲಾತಾಮ್ರಯುಗ, ಬೃಹತ್ ಶಿಲಾಯುಗ (ಕಬ್ಬಿಣಯುಗ) ಎಂದು ವಿಭಾಗಿಸಲಾಗಿದೆ.[5] ಸುಮಾರು ೫ ಲಕ್ಷ ವರ್ಷಗಳ ಹಿಂದಿನಿಂದ ಆದಿ ಇತಿಹಾಸ ಕಾಲದವರೆಗಿನ ಬೆಳವಣಿಗೆಯನ್ನು ಕರ್ನಾಟಕ ಅದರ ನೆರೆಯ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡುಗಳಲ್ಲಿಯ ಕ್ಷೇತ್ರ ಶೋಧನೆ ಮತ್ತು

ಉತ್ಖನನಗಳಲ್ಲಿ ದೊರೆತ ಅವಶೇಷಗಳು ದೃಢಪಡಿಸಿವೆ. ಇವುಗಳ ಆಧಾರದ ಮೇಲೆ ಕೆಲವರು ಈ ಕಾಲಗಳನ್ನು ೭ ಘಟ್ಟಗಳಾಗಿ ವಿಭಾಗಿಸಿದ್ದಾರೆ.[6]ಕರ್ನಾಟಕದಲ್ಲಿ ಆದಿಮಾನವ ಸಂಸ್ಕೃತಿ ಹೇಗೆ ಬೆಳವಣಿಗೆ ಹೊಂದಿತು ಎಂಬುದನ್ನು ಈ ಮುಂದಿನಂತೆ ಗಮನಿಸಬಹುದಾಗಿದೆ.

**೧. ಹಳೇಶಿಲಾಯುಗ (Paleolittaic)**: ಗ್ರೀಕ್‌ಭಾಷೆಯಲ್ಲಿ ಪ್ಯಾಲಿಯೋ ಎಂದರೆ ಹಳೆಯ ಎಂದು, ಲಿತಿಕ್‌ಎಂದರೆ ಶಿಲೆ ಎಂದು ಅರ್ಥ. ಈ ಕಾಲದಲ್ಲಿ ಮಾನವ ಶಿಲೆಯಿಂದ ಮಾತ್ರ ಬಹುತೇಕ ಉಪಕರಣಗಳನ್ನು ತಯಾರಿಸಿಕೊಂಡು ಅವುಗಳನ್ನು ತನ್ನ ಬಳಕೆಗೆ ಬಳಸಿಕೊಂಡಿದ್ದರಿಂದ ಮತ್ತು ಅವನ ರೀತಿ ನೀತಿಗಳೂ ಸಾಕಷ್ಟು ಸುಧಾರಿಸದೇ ಇನ್ನೂ ಆದಿಮ ಹಂತದಲ್ಲಿ ಇದ್ದಿದ್ದರಿಂದ ಈ ಕಾಲಘಟ್ಟವನ್ನು ಹಳೇ ಶಿಲಾಯುಗ ಸಂಸ್ಕೃತಿ (ಪ್ಯಾಲಿಯೋಲಿತಿಕ್ ಕಲ್ಚರ್) ಎಂದು ಕರೆಯಲಾಗುತ್ತದೆ. ಅಧ್ಯಯನದ ಅನುಕೂಲಕ್ಕಾಗಿ ಆದಿಮಾನವನ ಈ ಜೀವನ ಕ್ರಮವನ್ನು ಪುನಃ ಮೂರು ಭಾಗಗಳಾಗಿ ಮುಂದಿನಂತೆ ವಿಭಾಗಿಸಲಾಗಿದೆ.

೧. ಆದಿ ಹಳೇಶಿಲಾಯುಗ (೭ ಲಕ್ಷ ಅಥವಾ ಅದಕ್ಕೂ ಮುಂಚೆ)

೨. ಮಧ್ಯ ಹಳೇಶಿಲಾಯುಗ (ಕ್ರಿ.ಪೂ. ೭೦,೦೦೦ ೩೦,೦೦೦)

೩. ಅಂತ್ಯ ಹಳೇಶಿಲಾಯುಗ (ಕ್ರಿ.ಪೂ. ४೦,೦೦೦ ೧೦,೦೦೦)

**೧. ಆದಿ ಹಳೇಶಿಲಾಯುಗ (ಅಪ್ಪರ್ ಪ್ಯಾಲಿಯೋಲಿತಿಕ್ )**

ಸುಮಾರು ೭ ಲಕ್ಷದಿಂದ ೧.೨೫ ಲಕ್ಷ ವರ್ಷಗಳಷ್ಟು ಹಳೆಯದೆಂದು ಗುರುತಿಸಲಾದ ಆದಿ ಹಳೇಶಿಲಾಯುಗದ ಅವಶೇಷಗಳು ಭಾರತದಾದ್ಯಂತ ಅನೇಕ ಸ್ಥಳಗಳಲ್ಲಿ ಕಂಡು ಬಂದಿವೆ. ಕರ್ನಾಟಕದಲ್ಲಿ ಈ ಸಂಸ್ಕೃತಿಗೆ ಸೇರಿದ ಸ್ಥಳಗಳು ವಿವಿಧೆಡೆ ದೊರೆಕಿವೆ. ಅವುಗಳಲ್ಲಿ ಕೃಷ್ಣಾ ಮೇಲ್ದಂಡೆ ಮತ್ತು ಘಟಪ್ರಭಾದ ೧೫ ಸ್ಥಳಗಳಲ್ಲಿ ಹಾಗೂ ಕಲಾದಗಿ, ಅನಗವಾಡಿ (ಬಿಜಾಪುರ), ಗುಲಬಾಳ್ ಕಿಬ್ಬನಹಳ್ಳಿ (ತುಮಕೂರು ಜಿಲ್ಲೆ), ಸುರಪುರ (ಗುಲ್ಬರ್ಗಾ, ತಾಲೂಕು ಜಿಲ್ಲೆ) ನಿಟ್ಟೂರು (ಸಿರುಗುಪ್ಪ ತಾ. ಬಳ್ಳಾರಿ ಜಿ.), ಹುಣಸಗಿ (ಸುರಪುರ ತಾ. ಗುಲ್ಬರ್ಗಾ ಜಿ.) ನೆಲೆಗಳು ಪ್ರಮುಖವಾಗಿವೆ. ಬಿಜಾಪುರ ಜಿಲ್ಲೆಯ ಅನಗವಾಡಿ ಈ ಸಂಸ್ಕೃತಿಗೆ ಸೇರಿದ ಪ್ರಮುಖ ನೆಲೆ. ಇಲ್ಲಿ ಆದಿ, ಮಧ್ಯ, ಅಂತ್ಯ ಶಿಲಾಯುಗದ ಅವಶೇಷಗಳು ದೊರಕಿವೆ. ಇಲ್ಲಿ ನಡೆದ ಉತ್ಖನನದಿಂದ ಹಿಮಯುಗದ ಕೊನೆಯ ಕಾಲಕ್ಕೆ ಹೋಲುವಂತಹ ಹಲವು ಉಪಕರಣಗಳು ದೊರೆತಿವೆ. ಅವುಗಳಲ್ಲಿ ಕೊಡಲಿ ಮಚ್ಚುಗತ್ತಿ. ಸೀಳುಗತ್ತಿ, ಹೆರೆಯುವ ಚಕ್ಕೆ ಇವುಗಳಲ್ಲಿ ಕೈಕೊಡಲಿಗಳು ಹೇರಳ ಪ್ರಮಾಣದಲ್ಲಿದ್ದವು. ಸೀಳುಗತ್ತಿಗಳು ಮತ್ತು ಮಚ್ಚುಗತ್ತಿಗಳು ಇಳಿಮುಖ ಪ್ರಮಾಣದಲ್ಲಿವೆ. 'ಯು' ಆಕಾರದ ಸೀಳುಗತ್ತಿಗಳು ಹೆಚ್ಚಾಗಿವೆ. ಫ್ರಾನ್ಸ್‌ದೇಶದ ಆದಿ ಹಳೆಶಿಲಾಯುಗದ ಮಾದರಿ ನೆಲೆಯಾದ ಸ್ಟೆಂಟ್ ಅಶೂಲ್‌ನಲ್ಲಿ ದೊರೆತ ಆಯುಧಗಳಿಗೆ ಇಲ್ಲಿನ ಆಯುಧಗಳು ಹೋಲಿಕೆಯಾಗುತ್ತವೆ. ಇದು ಬಹುಮಟ್ಟಿಗೆ ಯುರೋಪಿನ ಆಶೋಲ್ ಹಂತಕ್ಕೆ ತುಂಬ ಸಮೀಪವಾಗಿದೆ. ದೊಡ್ಡ ದೊಡ್ಡ ಚಕ್ಕೆಗಳನ್ನು ಉಪಕರಣಗಳ ಸ್ಥೂಲ ರೂಪರೇಖೆಗೆ ಬೇಕಾದ ಆಕೃತಿಗಳನ್ನು ಮತ್ತು ಅವುಗಳನ್ನು ಬೇಕಾದೆಡೆಗಳಲ್ಲಿ ಸರಿಪಡಿಸಿ ಸರಿಯಾಗಿ ರೂಪಿಸುವುದಕ್ಕೋಸ್ಕರ ಕಲ್ಲನ್ನು ಕಲ್ಲಿಗೆ ಹೊಡೆದು ತೆಗೆಯುವ, ಕಡಿಮೆ ಭಾರದ, ಉದ್ದನೆಯ ಆಕಾರದ ಕಲ್ಲನ್ನು ಸುತ್ತಿಗೆಯಂತೆ ಬಳಸುವಂಥ ತಾಂತ್ರಿಕ ವಿಧಾನಗಳನ್ನು ಉಪಯೋಗಿಸಲಾಯಿತು. ಬಹಳಷ್ಟು ಚಕ್ಕೆಗಳನ್ನು ಕ್ಲಾಕ್ಟೋನಿಯನ್ ಎಂಬ ತಾಂತ್ರಿಕ ವಿಧಾನದಿಂದ ತೆಗೆಯಲಾಯಿತೆಂಬುದು ಇಲ್ಲಿನ ಅವಶೇಷಗಳಿಂದ ಹೇಳಬಹುದಾಗಿದೆ. ಅಲ್ಲದೆ ಇಲ್ಲಿಯೇ ತಾತ್ಕಾಲಿಕವಾಗಿ ಅಡ್ಡ ಮರೆ ಮಾಡಿಕೊಂಡಿದ್ದ ಗುರುತು ಮತ್ತು ತನ್ನ ದೈನಂದಿನ ಜೀವನಕ್ಕೆ ಬೇಕಾದ ಕಲ್ಲಿನ ಉಪಕರಣಗಳನ್ನು ಮಾಡಲು ಉಪಯೋಗಿಸಿದ ಅಡಿಗಲ್ಲು ಉತ್ಖನನದಲ್ಲಿ ಶೋಧವಾಗಿದೆ. ಅಲ್ಲದೆ ಬಲುದೂರದಿಂದ ಬುದ್ಧಿಪೂರ್ವಕವಾಗಿ ತಂದ ಕೆಮ್ಮಣ್ಣು ಗಟ್ಟಿಗಳು ಇಲ್ಲಿ ದೊರೆತಿವೆ. ಇದನ್ನು ಬಣ್ಣ ಹಾಕುವುದಕ್ಕೆ ಅಥವಾ ಬರೆಯುವುದಕ್ಕೆ ಬಳಸಿಕೊಂಡಿರಬಹುದು.[7]

ಭೀಮ ಕೃಷ್ಣ ಸಂಗಮ ಪ್ರದೇಶದಲ್ಲಿಯ ಗುಲಬಾಳು (ಸುರಪುರ ತಾಲೂಕು) ಎರಡು ನೆಲೆಗಳಲ್ಲಿ ಫ್ರಾನ್ಸ್ ದೇಶದ ಅಶ್ಯೂಲ್ ಎಂಬ ಹಳ್ಳಿಯಲ್ಲಿ ಶಿಲಾಯುಧಗಳನ್ನು ತಯಾರಿಸಲು ಬಳಸಿಕೊಂಡ ವಿಧಾನಗಳನ್ನೇ ಇಲ್ಲಿ ಬಳಸಿಕೊಳ್ಳಲಾಗಿದೆ. ಈ ಸಂಸ್ಕೃತಿಯ

ಮಾದರಿಯಲ್ಲಿ ತಯಾರಿಸಿದ ಮೇಲೆ ಹೇಳಿದ ಎಲ್ಲ ಉಪಕರಣಗಳು ಇಲ್ಲಿ ದೊರೆತ್ತಿದ್ದು ಅವುಗಳನ್ನು ಸಣ್ಣಕಲ್ಲುಗಳಿಂದ ತಯಾರಿಸುವುದು ಗಮನಾರ್ಹ. ಕಲಾದಗಿ ಸಮೀಪವಿರುವ ಖ್ಯಾಡ್ ಮತ್ತು ಡಾಣಕಶಿರೂರುಗಳಲ್ಲಿ ಇದೇ ಮಾದರಿಯ ಉಪಕರಣಗಳು ದೊರೆತಿವೆ. ಅದೇ ರೀತಿ ತುಮಕೂರು ಜಿಲ್ಲೆಯ ಕಿಬ್ಬನಹಳ್ಳಿಯು ಈ ಸಂಸ್ಕೃತಿಗೆ ಸೇರಿದ ಮತ್ತೊಂದು ಮುಖ್ಯ ಆದಿಮಾನವನ ನೆಲೆಯಾಗಿದೆ. ಇಲ್ಲಿ ಮುಖ್ಯವಾಗಿ ಬೆಣಚು ಕಲ್ಲಿನಿಂದ ಮತ್ತು ತಿರುಳುಗಲ್ಲಿನಿಂದ ತಯಾರಿಸಿದ ಕೈಕೊಡಲಿ, ಸೀಳುಗತ್ತಿ, ಚಕ್ರದಂತಹ ಆಯುಧಗಳು ಮುಖ್ಯವಾಗಿದ್ದು ಕೊಕ್ಕಿನ ಆಕೃತಿಯ ಆಯುಧವೊಂದು ಮಾತ್ರ ಇಲ್ಲಿ ದೊರೆತಿದ್ದು ಮುಖ್ಯವಾಗಿದೆ.

ಹಂಪಿ ಪರಿಸರದ ಬಾದನಹಟ್ಟಿಗುಡ್ಡ, ಬಳ್ಳಾರಿ, ಬೆಳಗಲ್ಲು (ಬಳ್ಳಾರಿ ತಾ.) ದರೋಜಿ, ಕಮಲಾಪುರ, ಗಾದಿಗನೂರು (ಹೊಸಪೇಟೆ ತಾ.)**[8]**, ನಿಟ್ಟೂರು (ಸಿರುಗುಪ್ಪ ತಾ.)**[9],** ಕುರೆಕುಪ್ಪ, ಜೋಗ, ಮಲ್ಲಾಪುರ (ಸಂಡೂರು ತಾ.)**[10]**, ಕುರುವತ್ತಿ (ಹಡಗಲಿ ತಾ.)**[11]** ಮೊದಲಾದ ಸ್ಥಳಗಳಲ್ಲಿ ಈ ಕಾಲಘಟ್ಟದಲ್ಲಿ ಮಾನವನು ಬಳಸಿ ಬಿಟ್ಟುಹೋದ ಶಿಲಾ ಉಪಕರಣ ಮತ್ತು ಇತರೆ ಅವಶೇಷಗಳು ಕಂಡುಬಂದಿದೆ.

ಕಮಲಾಪುರದಲ್ಲಿ ಡಾಲರೈಟ್ ಶಿಲೆಯಲ್ಲಿ ತಯಾರಿಸಿದ ಹೆರೆಗತ್ತಿ ಮಚ್ಚುಗತ್ತಿಗಳನ್ನು ಶೋಧಿಸಲಾಗಿದೆ.**[12]** ತುಂಗಭದ್ರಾ ನದಿ ದಡದ ನಿಟ್ಟೂರು ಇನ್ನೊಂದು ಪ್ರಮುಖ ನೆಲೆ. ಇಲ್ಲಿ ಕಪ್ಪು, ಹಸಿರು ಶಿಲೆಯಿಂದ ತಯಾರಿಸಿದ ಏಕಮುಖ ಹಾಗೂ ದ್ವಿಮುಖ ಮಚ್ಚು ಗತ್ತಿ ದುಂಡುಕಲ್ಲನ್ನು ಬಳಸಿ ಅದರಲ್ಲಿ ಬುಡದಿಂದ ಮೇಲ್ಮುಖವಾಗಿ ಚಕ್ಕೆಗಳನ್ನು ಎಬ್ಬಿಸುವ ಉಪಕರಣಗಳು ಕೈಕೊಡಲಿ, ಸೀಳುಗತ್ತಿಗಳು ಮೊದಲಾದ ವಿಶೇಷ ಆಯುಧಗಳು ಇಲ್ಲಿ ದೊರೆತಿವೆ. ಅಲ್ಲದೇ ಸಸ್ತನೀ ಪ್ರಾಣಿಗಳಾದ ಆಕಳು ಎತ್ತುಗಳ ಆನೆಗಳ ಪಡಿಯಚ್ಚುಗಳು ಇಲ್ಲಿ ದೊರೆತಿರುವುದು ವಿಶೇಷ. ಇಲ್ಲಿ ದೊರೆತ ಎರಡು ಪ್ರಕಾರದ ಆಯುಧಗಳು ದಕ್ಷಿಣ ಭಾರತದ ಕೈಕೊಡಲಿ ಮತ್ತು ಹೆರೆಯುವ ಉಪಕರಣಗಳ ವರ್ಗಕ್ಕೆ ಸೇರಿದ್ದು, ಈ ಉಪಕರಣಗಳೊಂದಿಗೆ ಅಪರೂಪಕ್ಕೆ ಬಾಸ್‌ನೊಮಡಿಸ್ ಎಂಬ ಪ್ರಾಣಿಯ ಪಳೆಯುಳಿಕೆ ಕೂಡ ದೊರೆತಿದೆ.**[13]**

ಈ ಮೇಲಿನ ನೆಲೆಗಳಲ್ಲಿ ದೊರೆತ ಆಯುಧೋಪಕರಣಗಳು ಫ್ರಾನ್ಸ್, ದಕ್ಷಿಣ ಆಫ್ರಿಕಾದ ವಿವಿಧ ನೆಲೆಗಳಲ್ಲಿ ಮತ್ತು ಮಹಾರಾಷ್ಟ್ರ(ಚರ್ಕಿ) ಮತ್ತು ಪಂಜಾಬಿನ (ಸೋನಾರಗಾಂ) ವಿವಿಧ ನೆಲೆಗಳಲ್ಲಿ ದೊರೆತ ಆಯುಧಗಳಿಗೆ ಹೋಲಿಕೆಯಾಗುತ್ತವೆ.

ಇಲ್ಲಿ ದೊರೆತ ಉಪಕರಣಗಳನ್ನು ವಿವಿಧ ಕೆಲಸ ಕಾರ್ಯಗಳಿಗಾಗಿ ಆದಿಮಾನವ ಉಪಯೋಗಿಸಿಕೊಂಡಿದ್ದಾನೆ. ಒಂದು ಉದ್ದನೆಯ ಕೋಲಿಗೆ ಕೈಕೊಡಲಿಯನ್ನು ಗಟ್ಟಿಯಾಗಿ ಕಟ್ಟಿ ಅದನ್ನು ಗಡ್ಡೆ ಗೆಣಸು ಅಗೆಯುವುದಕ್ಕೆ, ಇಲ್ಲವೇ ಪ್ರಾಣಿಗಳನ್ನು ಬೇಟೆಯಾಡುವುದಕ್ಕೆ ಉಪಯೋಗಿಸಿರಬಹುದು. ಅಲ್ಲದೇ ಚಕ್ಕೆ ಕಲ್ಲಿನ ದುಂಡು ಕಲ್ಲನ್ನು ಚಕ್ರ ಎಸೆತದ ಹಾಗೆ ಪ್ರಾಣಿಗಳಿಗೆ ಗುರಿ ಇಟ್ಟು ಹೊಡೆಯಲು ಉಪಯೋಗಿಸಿ ಕೊಂಡಿದ್ದಾನೆ. ಮಚ್ಚು ಮತ್ತು ಸೀಳುಗತ್ತಿಗಳು ಬೇಟೆಯಾಡಿದ ಪ್ರಾಣಿಗಳ ಮಾಂಸವನ್ನು ತುಂಡು ತುಂಡು ಮಾಡಲು, ಎಲುಬುಗಳನ್ನು ಸೀಳಿ ಅವುಗಳಲ್ಲಿಯ ಮಜ್ಜೆಯನ್ನು ಸಂಗ್ರಹಿಸಲು ಉಪಯೋಗಿಸರಬಹುದು.

ಈ ಕಾಲದ ಆದಿಮಾನವ ನಿಸರ್ಗದಲ್ಲಿ ದೊರೆಯುವ ಆಹಾರ ಸಂಪಾದನೆಯ ಹಂತದಲ್ಲಿದ್ದರೂ ನೈಸರ್ಗಿಕ ಗವಿ ಮುಂತಾದ ರಕ್ಷಣೆಯ ಸ್ಥಳಗಳಲ್ಲಿ ಇರುತ್ತಿದ್ದನೆಂಬುದು ಮಾತ್ರ ತಿಳಿದುಬಂದಿದೆ. ಅವರ ನಡುವಿನ ಜೀವನಕ್ರಮದ ಬಗ್ಗೆ ಇದುವರೆಗೂ ಸ್ಪಷ್ಟವಾಗಿ ತಿಳಿದುಬಂದಿಲ್ಲ. ಈ ಕಾಲದ ಆದಿಮಾನವನ ಅಸ್ತಿ, ಅವಶೇಷಗಳು ಇದುವರೆಗೂ ಭಾರತದ ಯಾವ ಭಾಗದಲ್ಲೂ ದೊರೆಯದೇ ಇರುವುದರಿಂದ ಆ ಜನರ ವಿಶಿಷ್ಟ ದೈಹಿಕ ಲಕ್ಷಣಗಳಾಗಲೀ ವಿಕಾಸಗಳಾಗಲೀ ಇಲ್ಲಿಯವರೆಗೆ ಸ್ಪಷ್ಟವಾಗಿ ತಿಳಿದು ಬಂದಿಲ್ಲ. ಈ ಹಂತದ ಮಾನವನ ದೈನಂದಿನ ಕಾರ್ಯಚಟುವಟಿಕೆಯನ್ನು ಆಹಾರ ಸಂಗ್ರಹಣೆ ಮತ್ತು ಬೇಟೆಗಾರಿಕೆ ಸಂಸ್ಕೃತಿಯೆಂದು ಕರೆಯಲಾಗಿದೆ. ಈ ಕುರಿತಂತೆ ಹೆಚ್ಚಿನ ಶೋಧನೆಯಾದಲ್ಲಿ ಮಾತ್ರ ಹೆಚ್ಚು ಸ್ಪಷ್ಟ ಆಧಾರಗಳು ದೊರಕಬಹುದು.

**೨. ಮಧ್ಯ ಹಳೇಶಿಲಾಯುಗ (Middle paleolattic)**

ಕರ್ನಾಟಕದ ಕೃಷ್ಣ, ತುಂಗಭದ್ರಾ ಪ್ರದೇಶಗಳಲ್ಲಿ ಈ ಸಂಸ್ಕೃತಿಗೆ ಸೇರಿದ ನಿವೇಶನಗಳು ದೊರೆತಿವೆ. ಅವುಗಳಲ್ಲಿ ಸಂಗನಕಲ್ಲು, ಬ್ರಹ್ಮಗಿರಿ, ನಿಟ್ಟೂರು, ಸಾಲ್ವಡಗಿ, ಮಟಕದೇವನ ಹಳ್ಳಿ (ಬುಡಪನಹಳ್ಳಿ), ಮತ್ತು ಕೂಚುಬಾಳು, ಕೋವಳ್ಳಿ (ಮುದ್ದೇಬಿಹಾಳು

ತಾಲೂಕು ಈಗ ಬಾಗಲಕೋಟೆ ಜಿಲ್ಲೆ), ಮೊದಲಾದೆಡೆ ದೊರೆತಿವೆ. ಈ ಕಾಲದಲ್ಲಿ ಆದಿ ಹಳೇ ಶಿಲಾಯುಗ ಕಾಲಕ್ಕಿಂತಲೂ ಭಿನ್ನವಾಗಿ ಉತ್ತಮ ಜಾತಿಯ ಜಾಸ್ಪರ್, ಚರ್ಟ್ ಮೊದಲಾದ ಶಿಲೆಗಳನ್ನು ಬಳಸಿ ವಿವಿಧ ಆಯುಧೋಪಕರಣಗಳನ್ನು ತಯಾರಿಸಲಾಗಿದೆ. ಸ್ವಲ್ಪ ದಪ್ಪನಾದ ಸಣ್ಣ ಚಕ್ಕೆಗಳನ್ನು ಉಪಕರಣಗಳನ್ನಾಗಿ ರೂಪಿಸಲಾಗಿದೆ. ಅವುಗಳಲ್ಲಿ ಅಂಚುಗಳಿಂದ ಹೆರೆಯಬಹುದಾದ ಬಹೋಪಯೋಗಿ ಚಕ್ಕೆಗಳು ಮುಖ್ಯವಾಗಿವೆ. ಆದಿ ಹಳೇಶಿಲಾಯುಗದ ಹಾಗೂ ಈ ಕಾಲದಲ್ಲಿಯ ಈ ಉಪಕರಣಗಳನ್ನು ಯಾವ ರೀತಿ ಉಪಯೋಗಿಸುತ್ತಿದ್ದರೆಂಬುದು ಸ್ವಲ್ಪವಾದರೂ ತಿಳಿದಿಲ್ಲ. ಆದರೂ ಅನೇಕ ಬದಲಾವಣೆಗಳನ್ನು ಈ ಹಂತದಲ್ಲಿ ಆದಿಮಾನವ ಮಾಡಿಕೊಂಡಿದ್ದನ್ನು ವಿದ್ವಾಂಸರು ಗುರುತಿಸಿದ್ದಾರೆ.

೧. ಈ ಕಾಲದ ಆದಿಮಾನವ ನದಿಯಂಚಿನಲ್ಲಿ ಅಷ್ಟೇಯಲ್ಲದೇ ಬಯಲುಗಳಲ್ಲಿ ವಾಸ ಮಾಡಲು ರೂಢಿಸಿಕೊಂಡನು.

೨. ವೇಗವಾಗಿ ಓಡಬಲ್ಲ ಪ್ರಾಣಿಗಳನ್ನು ಬೇಟೆಯಾಡಲು ಬಿಲ್ಲು ಬಾಣಗಳ ಪ್ರಯೋಗ.

೩. ಮೈಮುಚ್ಚಿಕೊಳ್ಳಲು ಮರದ ತೊಗಟೆ ಇಲ್ಲವೆ ಪ್ರಾಣಿಗಳ ಚರ್ಮವನ್ನು ಬಳಸಿಕೊಳ್ಳುತ್ತಿದ್ದ.

೪. ನದಿ, ಹಳ್ಳಗಳನ್ನು ದಾಟಲು ಬುಟ್ಟಿಯಾಕಾರದ ಕಿರು ದೋಣಿಗಳನ್ನು ಈ ಕಾಲದಲ್ಲೂ ಮಾಡಿಕೊಂಡಿರಬಹುದೆಂದು ಊಹಿಸಲಾಗಿದ್ದು, ಇವೆಲ್ಲವನ್ನೂ ಆದಿಮಾನವನು ತನ್ನ ಜೀವನಕ್ರಮದಲ್ಲಿ ಮಾಡಿಕೊಂಡ ಕೆಲವು ಸುಧಾರಣೆ / ಬದಲಾವಣೆಗಳನ್ನು ಸೂಚಿಸುತ್ತದೆ.

**೩. ಅಂತ್ಯ ಹಳೇಶಿಲಾಯುಗ ಸಂಸ್ಕೃತಿ (Lower Paleolittic)**

ಹಳೇಶಿಲಾಯುಗ ಸಂಸ್ಕೃತಿಯ ಕೊನೆಯ ಹಂತವೇ ಅಂತ್ಯ ಹಳೆಯ ಶಿಲಾಯುಗ. ತುಲನಾತ್ಮಕ ಪರಿಶೋಧನೆಯಂತೆ ಈ ಹಂತದ ನೆಲೆಗಳು ಸಂಖ್ಯೆಯಲ್ಲಿ ಕಡಿಮೆಯಾಗಿದೆ. ಮೊಟ್ಟ ಮೊದಲಿಗೆ ೧೯೫೯ರಲ್ಲಿ ಸಾಳವಾಡಗಿಯಲ್ಲಿ ಉಪಕರಣ ಉತ್ಪಾದನಾ ನೆಲೆಯನ್ನು ಅ. ಸುಂದರ ಅವರು ಗುರುತಿಸಿದರು. ಇದೇ ನಿವೇಶನದಲ್ಲಿ ಸಂಗ್ರಹಿಸಿದ ಉಪಕರಣಗಳ ವಿಷಯವಾಗಿ ಎಂ.ಶೇಷಾದ್ರಿ ಅವರು ವಿವರಣಾತ್ಮಕ ಅಧ್ಯಯನವನ್ನು ಮಾಡಿದ್ದಾರೆ. ಮಾಂಜ್ರಾ, ದೋಣ, ಕೃಷ್ಣ, ತುಂಗಾ, ಶಿಂಷಾ ಹಾಗೂ ಪೆನ್ನಾರ್ ನದಿ ಕೊಳ್ಳಗಳಲ್ಲಿ ಈ ನೆಲೆಗಳು ಹೆಚ್ಚಾಗಿ ಕಂಡುಬಂದಿವೆ.

ನೀಳ ಅಲಗುಗಳು ಹೆರೆಯುವ ವಿವಿಧ ಮಾದರಿಗಳು, ಮೊನೆ ಹೊಂದಿರುವ ಮಾದರಿಗಳು, ಚೂರಿ ತರಹದ ಚಕ್ಕೆ, ಪೊರೆಯುಳಿ, ಕೊರಗ ಮೊದಲಾದ ಮಾದರಿಯ ಆಯುಧಗಳು ಈ ಹಂತದ ವೈಶಿಷ್ಟ್ಯ ಉಪಕರಣಗಳಾಗಿವೆ. ಇವುಗಳಲ್ಲಿ ಅಲಗು, ಮೊನೆ, ಹೆರೆಯುವ ಮಾದರಿ ಉಪಕರಣಗಳು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಕೇವಲ ಶಿಲಾಯುಧಗಳೇ ಅಷ್ಟೆ ಅಲ್ಲದೇ ಎಲುಬು, ದಂತ ಮತ್ತು ಜಿಂಕೆಯ ಕವಲು ಕೊಂಬು ಮೊದಲಾದವುಗಳಿಂದ ಉಪಕರಣಗಳನ್ನು ತಯಾರಿಸಿ ಬಳಸಿದ ಉದಾಹರಣೆಗಳಿವೆ. ಈ ಹಂತದಲ್ಲಿ ಮೂರು ತಂತ್ರಗಳನ್ನು ಅಳವಡಿಸಿಕೊಂಡು ಉಪಕರಣಗಳನ್ನು ತಯಾರಿಸುತ್ತಿದ್ದರು. ಅವುಗಳೆಂದರೆ ೧) ಪರೋಕ್ಷ ಒತ್ತಡ ತಂತ್ರ ೨) ವೃಕ್ಷ ಸ್ಥಳ ಒತ್ತಡ ೩) ನೇರ ಒತ್ತಡ ತಂತ್ರ ಈ ಹಂತದ ಉಪಕರಣಗಳ ಗಾತ್ರ ಚಿಕ್ಕದು. ಈ ಉಪಕರಣಗಳನ್ನು ಹಲವು ಕಾರ್ಯಗಳಿಗಾಗಿ ಬಳಸುವಂತೆ ರೂಪಿಸಿಕೊಳ್ಳಲಾಗುತ್ತಿತ್ತು. ಈ ಹಂತದ ತಂತ್ರ ಜ್ಞಾನವು ಹೆಚ್ಚು ಸುಧಾರಿಸಿತ್ತು.

ಈ ಕಾಲಕ್ಕೆ ಸೇರಿದ ಅವಶೇಷಗಳನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಇಂಗಾಲ ೧೪ ಪರೀಕ್ಷೆಯಂತೆ ಈ ಹಂತದ ಕಾಲಮಾನವು ಇಂದಿಗೆ ಸುಮಾರು ೧೦,೦೦೦ ವರ್ಷಗಳಿಂದ ೨೫,೦೦೦ ವರ್ಷಗಳಷ್ಟು ಪೂರ್ವದಲ್ಲಿ ಇದ್ದಿತೆಂದು ತಿಳಿಯುತ್ತದೆ.

**೪. ಸೂಕ್ಷ್ಮ ಶಿಲಾಯುಗ ಸಂಸ್ಕೃತಿ (Mesolittic Culture) (ಕ್ರಿ.ಪೂ. ೭,೦೦೦-೩,೦೦೦)**

ಹಳೆಯ ಶಿಲಾಯುಗ ಮತ್ತು ನೂತನ ಶಿಲಾಯುಗದ ನಡುವಿನ ಸಾಂಸ್ಕೃತಿಕ ಹಂತವನ್ನು ಮಧ್ಯ ಇಲ್ಲವೇ ಸೂಕ್ಷ್ಮ ಶಿಲಾಯುಗವೆಂದು ಕರೆಯಲಾಗಿದೆ. ಗ್ರೀಕ್ ಭಾಷೆಯಲ್ಲಿ ಮೆಸೋ ಎಂದರೆ ಸೂಕ್ಷ್ಮ ಎಂದು, ಲಿತಿಕ್ ಎಂದರೆ ಶಿಲೆ ಎಂಬ ಅರ್ಥಗಳಿವೆ. ಈ ಕಾಲದಲ್ಲಿ ಮಾನವ ಶಿಲೆಯಿಂದ ಬಹಳ ಸೂಕ್ಷ್ಮ ಉಪಕರಣಗಳನ್ನು ತಯಾರಿಸಿಕೊಂಡು ಅವುಗಳನ್ನು ತನ್ನ ಬಳಕೆಗೆ ಬಳಸಿಕೊಂಡಿದ್ದರಿಂದ ಈ ಕಾಲಘಟ್ಟವನ್ನು ಸೂಕ್ಷ್ಮ ಶಿಲಾಯುಗ ಸಂಸ್ಕೃತಿ (ಮೆಸೋಲಿತಿಕ್ ಕಲ್ಚರ್) ಎಂದು ಕರೆಯಲಾಗುತ್ತದೆ. ಮಾನವ ಜೀವನದ ಸಾಂಸ್ಕೃತಿಕ ಮುನ್ನಡೆಯಲ್ಲಿ ಈ ಹಂತದ ಪಾತ್ರ ಗಮನಾರ್ಹವಾದುದು. ಈ ಅವಧಿಯಲ್ಲಿ ಬೇಟೆಯಾಡುವುದು, ಮೀನು ಹಿಡಿಯುವುದು. ಆಹಾರ ಸಂಗ್ರಹಣೆ ಜೀವನದ ಅಂದಿನ ವ್ಯವಸ್ಥೆಯಾಗಿತ್ತು. ಇದರಲ್ಲಿ ಮುಖ್ಯ ಬೆಳವಣಿಗೆಯೆಂದರೆ ಬೇಸಾಯ ಮಾಡುವುದು, ಇದು ನಂತರದ ನೂತನ ಶಿಲಾಯುಗದಲ್ಲಿ ಅಭಿವೃದ್ಧಿಯಾಯಿತು. ಈ ಕಾಲದ ಆಹಾರೋತ್ಪಾದನೆಯ ಬೆಳವಣಿಗೆಯಿಂದಾಗಿ ಈ ಕಾಲವನ್ನು ಸ್ಥಿತ್ಯಂತರ (**Mesolithic**) ಹಂತವೆಂದು ಗುರುತಿಸಲಾಗಿದೆ.

ಭಾರತದ ಹಲವಾರು ಸ್ಥಳಗಳಲ್ಲಿ ಇದರ ಕುರುಹುಗಳು ಶೋಧಿತವಾಗಿವೆ. ಕರ್ನಾಟಕದಲ್ಲಿ ಈ ಕಾಲದ ನಿವೇಶನಗಳು ೧೮೮೯ರ ವೇಳೆಗೆ ಬೆಳಕಿಗೆ ಬಂದಿದ್ದರೂ ಅಲ್ಲಿ ದೊರೆತ ಉಪಕರಣಗಳ ವೈಜ್ಞಾನಿಕ ಅಧ್ಯಯನ ಆರಂಭವಾದುದು ೧೯೫೦ರ ನಂತರವೇ. ಬ್ರಹ್ಮಗಿರಿ ಉತ್ಖನನದಲ್ಲಿ**[14]** ಈ ಹಂತದ ಉಪಕರಣಗಳು ಗಮನಾರ್ಹ ಪ್ರಮಾಣದಲ್ಲಿ ದೊರಕಿದ್ದರೂ ಅವುಗಳನ್ನು ನಿರ್ದಿಷ್ಟ ಹಾಗೂ ಪ್ರತ್ಯೇಕ ಸ್ಥಳದಲ್ಲಿದ್ದುದನ್ನು ಗುರುತಿಸದೆ ನೂತನ ಶಿಲಾಯುಗಕ್ಕೆ ಸೇರಿದವೆಂದು ಆರಂಭದಲ್ಲಿ ಭಾವಿಸಲಾಗಿತ್ತು.

ಈ ಸಂಸ್ಕೃತಿಯ ಶಿಲೋಪಕರಣಗಳು ಸುರಪುರ ದೋಆಬ್,**[15]**ಬೆಂಗಳೂರು ಮತ್ತು ಚಿತ್ರದುರ್ಗ ಜಿಲ್ಲೆ,**[16]**ಕೃಷ್ಣಾ ನದಿ ಪಾತ್ರ**[17]**ದಕ್ಷಿಣ ಕನ್ನಡ ಜಿಲ್ಲೆಯ ಮಾಣಿ ಮತ್ತು ಉಪ್ಪಿನಂಗಡಿ,**[18]**ಬೀದರ್ ಜಿಲ್ಲೆಯ ಮಾಂಜ್ರ ಮತ್ತು ಕಾರಂಜಾಕಣಿವೆ ಪ್ರದೇಶ,**[19]**ಮಲೆನಾಡು ಮತ್ತು ಅರೆಮಲೆನಾಡು ಪ್ರದೇಶದ ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆ**[20]**ಹಾಗೂ ತುಮಕೂರು ಜಿಲ್ಲೆಯ ಶಿಂಷಾ ಮತ್ತು ಪೆನ್ನಾರ್ ನದಿಪ್ರಾಂತ**[21]**ಗಳಲ್ಲಿ ದೊರೆತಿರುವ ನೆಲೆಗಳು ಈ ಸಂಸ್ಕೃತಿಯ ವಿಸ್ತೃತ ಬೆಳವಣಿಗೆಗೆ ಹಾಗೂ ಪ್ರಸರಣದ ಬಗೆಗೆ ತಿಳಿಯಲು ಸಹಾಯಕವಾಗಿವೆ.

ಈ ಸಂಸ್ಕೃತಿಯ ನೆಲೆಗಳ ಅಧ್ಯಯನವು ಆಗಿನ ಜನರ ಆಹಾರ ಪದ್ಧತಿ, ವಸತಿ ಕ್ರಮ, ಶವಸಂಸ್ಕಾರ ಪದ್ಧತಿ ಮುಂತಾದ ಪ್ರಮುಖ ಅಂಶಗಳ ಬಗೆಗೆ ಕುತೂಹಲವಾದ ಮಾಹಿತಿಗಳನ್ನೊದಗಿಸುವುದರ ಜೊತೆಗೆ ಕೆಲವೇ ನಿರ್ಧಿಷ್ಟ ನೆಲೆಗಳಲ್ಲಿ ಬೆಳಕಿಗೆ ಬಂದಿರುವ ಆ ಕಾಲದ ಬಂಡೆಯ ಮೇಲಿನ ವರ್ಣಚಿತ್ರಗಳು ಇವರ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಪದ್ಧತಿ ಹಾಗೂ ನಂಬಿಕೆಗಳ ಬಗೆಗೆ ತಿಳಿಸುವುದರ ಜೊತೆಗೆ ಅವರ ಕಲೆಗಾರಿಕೆಯ ವಿಶಿಷ್ಟತೆಯನ್ನು ತಿಳಿಯಪಡಿಸುತ್ತದೆ ಎಂದು ಅ. ಸುಂದರ ಅವರು ಅಭಿಪ್ರಾಯಪಟ್ಟಿದ್ದಾರೆ.**[22]**ಈ ಸಂಸ್ಕೃತಿಯ ಹಂತದಲ್ಲಿ ಮಾನವನು ತನ್ನ ಅಲೆಮಾರಿ ಜೀವನ ಕೈಬಿಟ್ಟು, ಆತ ಒಂದೆಡೆ ನೆಲೆ ನಿಂತಿದ್ದೂ ಅಲ್ಲದೆ ಬೇಟೆ, ಮೀನುಗಾರಿಕೆ ಆಹಾರ ಸಂಗ್ರಹಣೆಯ ಜೊತೆಗೆ ಆಹಾರ ಉತ್ಪಾದನೆಯನ್ನೂ ಆರಂಭಿಸಿದನು. ಆದ್ದರಿಂದ ಈ ಕಾಲಮಾನವು ಮಾನವನ ಸ್ಥಿತ್ಯಂತರದ ಹಂತವಾಗಿದೆ. ಈ ಅಲ್ಪಸಮಯದ ಮುನ್ನಡೆಯು ಮಾನವ ಇತಿಹಾಸದಲ್ಲಿ ಗಮನಾರ್ಹವಾಗಿದೆ.

ಈ ಹಂತದ ಶಿಲೋಪಕರಣಗಳು ಅತಿ ಕಿರುಗಾತ್ರದವುಗಳಾಗಿವೆ. ಇದು ಈ ಸಂಸ್ಕೃತಿಯ ವಿಶಿಷ್ಟ ಲಕ್ಷಣವಾಗಿದ್ದು ವೈವಿಧ್ಯಮಯ ಉಪಕರಣಗಳು ಕಂಡುಬಂದಿವೆ. ನೀಳ ಚಕ್ಕೆ ಮಾದರಿ, ಹೆರಚಕ್ಕೆ ಮಾದರಿ, ಮೊನೆ ಮಾದರಿ, ಬಾಣದ ಮೊನೆ, ಕೊರಗ ಕೊರೆಯುಳಿ, ಅರ್ಧಚಂದ್ರಾಕೃತಿ, ದಬ್ಬಳ ಮೊದಲಾದ ಉಪಕರಣಗಳು ಕಂಡುಬಂದಿವೆ. ಈ ಉಪಕರಣಗಳ ಮಾದರಿಯನ್ನು ಅವುಗಳ ಆಕಾರ ಗಾತ್ರ ಹಾಗು ಕಾರ್ಯನಿರ್ವಹಿಸುವ ಅಂಚು ಹಾಗೂ ಮೊನೆ ಇವುಗಳನ್ನಾಧರಿಸಿ ವಿವಿಧ ಗುಂಪು ಹಾಗೂ ಉಪ ಗುಂಪುಗಳನ್ನಾಗಿ ವಿಭಾಗಿಸಲಾಗಿದ್ದು ವಿವಿಧ ಕಾರ್ಯಗಳಿಗೆ ನಿರ್ದಿಷ್ಟ ಮಾದರಿಯ ಉಪಕರಣಗಳ ಬಳಕೆಯಾಗುತ್ತಿತ್ತೆಂದು ತಿಳಿಯುತ್ತದೆ. ಈ ಕಾಲದ ವರ್ಣಚಿತ್ರಗಳನ್ನು ಹಲವು ನೆಲೆಗಳಲ್ಲಿ ಗುರುತಿಸಲಾಗಿದೆ. ಒಟ್ಟಿನಲ್ಲಿ ಈ ವಿವಿಧ ಹಂತಗಳ ಅಧ್ಯಯನದ ಇಣುಕುನೋಟವು ತಿಳಿಯಪಡಿಸುವಂತೆ ಅಲೆಮಾರಿ ಹಂತದ ಮಾನವನ ಜೀವನಕ್ರಮವು ಕಾಲ ಕ್ರಮೇಣ ಸಹಬಾಳ್ವೆಗೆ ಎಡೆಮಾಡಿಕೊಟ್ಟಿತು. ಸೂಕ್ಷ್ಮ

ಶಿಲಾಯುಗ ಸಂಸ್ಕೃತಿಯ ಹಂತದಲ್ಲಿ ಜನರು ಪರಸ್ಪರ ತಿಳುವಳಿಕೆಯಿಂದ ವ್ಯವಸ್ಥಿತ ಸಮಾಜವನ್ನು ರೂಪಿಸತೊಡಗಿದರು. ಈ ಸಂಸ್ಕೃತಿಯು ಇಂದಿಗೆ ಸುಮಾರು ೨೫೦೦ ವರ್ಷದಿಂದ ೧೦೦೦೦ ವರ್ಷಗಳಷ್ಟು ಪೂರ್ವದಲ್ಲಿದ್ದಿತ್ತೆಂದು ತಿಳಿಯುತ್ತದೆ.

ಹಂಪಿ ಪರಿಸರದ ಕುಡಿತಿನಿ, ಸಂಗನಕಲ್ಲು (ಬಳ್ಳಾರಿ ತಾ.)**[23]** ಕಾರಿಗನೂರು, ಗಾದಿಗನೂರು, ತಿಮ್ಮಲಾಪುರ, ಡಣಾಪುರ, ಭುವನಹಳ್ಳಿ, ಹಂಪಿ (ಹೊಸಪೇಟೆ ತಾ.)**[24]**ಅಪ್ಪಲಾಪುರ, ಅಯ್ಯನಹಳ್ಳಿ, ಕುರೆಕುಪ್ಪ, ಕೋದಾಳು, ತೋರಣಗಲ್ಲು, ಮಲ್ಲಾಪುರ, ಮಾದರಹಳ್ಳಿ, ಯಶವಂತಪುರ, ರಾಜಾಪುರ, ರಾಂಪುರ (ಸಂಡೂರು ತಾ.),**[25]**ಮಾಡಲಗೇರಿ (ಹರಪನಹಳ್ಳಿ ತಾ.)**[26]**ಮುಂತಾದ ಸ್ಥಳಗಳಲ್ಲಿ ಈ ಹಂತದ ನೆಲೆಗಳಿವೆ. ೧೯೬೫ರಲ್ಲಿ ಪುಣೆ ಡೆಕ್ಕನ್ ಕಾಲೇಜಿನ ತಂಡದವರು ಸಂಗನಕಲ್ಲು ನೆಲೆಯಲ್ಲಿ ಉತ್ಖನನ ಕೈಗೊಂಡರು.**[27]** ಇದರಿಂದ ಉಪಕರಣಗಳನ್ನು ತಯಾರಿಸುತ್ತಿದ್ದ ಕಾರ್ಯಗಾರವು ಬೆಳಕಿಗೆ ಬಂತು. ಅಲ್ಲದೆ ಇದೇ ತಂಡ ಬಳ್ಳಾರಿಯ ಮೋಕ ರಸ್ತೆಯಲ್ಲಿರುವ ಬಂಗಲೆ ತೋಟದ ಹತ್ತಿರ ನಡೆಸಿದ ಉತ್ಖನನದಲ್ಲಿ ಚರ್ಟ್, ಕ್ವಾರ್ಜ್, ವೈಟ್‌ಕ್ವಾರ್ಜ್ ಶಿಲೆಯಲ್ಲಿ ತಯಾರಿಸಿದ ಉಪಕರಣ ಮತ್ತು ಇವುಗಳ ತಯಾರಿಕೆಗಾಗಿ ಬಳಸಿದ ಶಿಲಾಗಟ್ಟಿಗಳು ಕಂಡುಬಂದವು. ಭುವನಹಳ್ಳಿಯಲ್ಲಿ ವಿವಿಧ ಮಾದರಿಯ ಉಪಕರಣಗಳನ್ನು ಚರ್ಟ್ ಶಿಲೆಯಲ್ಲಿ ತಯಾರಿಸಲಾಗಿದೆ. ಅವುಗಳಲ್ಲಿ ಸಮಾನಾಂತರ ಅಂಚುಗಳುಳ್ಳ ಅಲಗುಗಳು, ಚಿಕ್ಕ ಅಲಗುಗಳು, ಬಾಗಿದ ಆಲಗುಗಳು, ಮೊನೆಗಳು, ಸಣ್ಣ ಬೈರಿಗೆಗಳು, ಆಹಾರ ಕತ್ತರಿಸುವ ಚಿಕ್ಕ ಮಚ್ಚುಗಳು ಮೊದಲಾದವು ಪ್ರಮುಖವಾಗಿವೆ. ಈ ಸಂಸ್ಕೃತಿಯ ಕುರಿತು ಹೆಚ್ಚಿನ ಅಧ್ಯಯನಗಳಾದಲ್ಲಿ ಹೆಚ್ಚಿನ ಮಾಹಿತಿ ದೊರಕುತ್ತದೆ.

[1] ಡಾ. ಲೀಲಾ ೨೦೦೩, ಜೀವವಿಕಾಸ

[2] ಅದೇ

[3] ಚಿತ್ರದುರ್ಗದ ಪ್ರೊ. ಲಕ್ಷ್ಮಣ್ ತೆಲಗಾವಿಯವರ ಸಂಶೋಧನಾ ತಂಡ ಮತ್ತು ಡಾ.ತಿಪ್ಪೇಸ್ವಾಮಿಯವರ ಕೂಡ್ಲಿಗಿಯ ಡಿಸ್ಕವರಿ ಟ್ರೂಪ್ ಈ ನಿಟ್ಟಿನಲ್ಲಿ ಪ್ರಶಂಸನೀಯ ಕೆಲಸ ಮಾಡಿವೆ.

[4] ಪ್ರೀ-ಹಿಸ್ಟಾರಿಕ್ ಪೀರಿಯಡ್ ಎಂದು ಕರೆಯಲಾಗುತ್ತದೆ.

[5] ಸ್ಟೋನ್ & ಮೆಟಲ್ ಏಜ್ ಎಂಬ ಭಾಗಗಳು.

[6] Sundar A., `Hampi Ancient Kishkindha', `Visvambhara' (V.S. Patak Festscrift),

[7] ಬಾಗಳಿ : I.A.R., ೧೯೮೩-೮೪,

[8] ಅ. ಬಾದನಹಟ್ಟಿ : Foot R.B., Ind, Pre-Proto Ant. And I.A.R., ೧೯೯೩-೯೪,

[9] ಅ. ಕಮಲಾಪುರ : I.A.R., ೧೯೭೬-೭೭,

[10] ನಿಟ್ಟೂರು : Ansari Z.D. Indian Antiquary 3rd Series and Sankalia, H.D. Prehistory and Prothistory of India and Pakistan.

[11] ಅ. ಕುರೆಕುಪ್ಪೆ : Foot R.B., Indi, Pre-Proto Ant. And I.A.R., ೧೯೮೭-೮೮,

ಅ. ಜೋಗ : Foot R.B., Indi, Pre-Proto Ant.

ಇ. ಮಲ್ಲಾಪುರ : Taylor M, Journal of Bombay Branch, Royal Asiatic Society 4 and I.A.R, ೧೯೮೭-೮೮

ಈ. ದರೋಜಿ : Foot R.B., Indi, Pre-Proto Ant.

[12] ಕುರುವತ್ತಿ : Foot R.B., Indi, Pre-Proto Ant.

[13] I.A.R., ೧೯೭೬-೭೭,

[14] Ansari Z.D., Indian Antiquary 3rd Series ೧೪. ವೀಲರ್ ೧೯೮೪;೧೮೦-

[15] ಪದ್ದಯ್ಯ ಕೆ ೧೯೭೦,

[16] ಇಂ.ಆ.ರಿ. ೧೯೭೫-೭೬

[17] ಪಪ್ಪು ಆರ್.ಎಸ್. ೧೯೭೪

[18] ರಾಜೇಂದ್ರನ್ ವಿ. ೧೯೮೩;

[19] ಷಡಕ್ಷರಯ್ಯ ಆರ್. ಎಂ. ೧೯೯೫
[20] ಪೂಣಚ್ಚ, ಕೆ.ವಿ. ೧೯೯೦
[21] ಶಿವತಾರಕ್ ಕೆ.ಬಿ. ೧೯೯೯
[22] ಸುಂದರ ಅ. ೧೯೯೪
[23] ಕುಡತಿನಿ : Allchin F.R., Neolithic Cattle-Keepers of South India, ಸಂಗನಕಲ್ಲು : Subba Rao B., Stone age Culture of Bellary and Sankalia H.D. Mesolithic and premesolithic Industries from Excavations at Sanganakalu, Bellary
[24] ಅ. ಕಾರಿಗನೂರು : I.A.R., ೧೯೯೩-೯೪,
ಆ. ತಿಮ್ಮಲಾಪುರ : ಪತ್ರಿಕಾ ವರದಿ ಕನ್ನಡ ಪ್ರಭ, ೧೪.೦೮.೯೮,
ಇ. ದಣಾಪುರ : I.A.R., ೧೯೯೩-೯೪,
ಈ. ಭುವನಹಳ್ಳಿ : I.A.R., ೧೯೯೩-೯೪,
[25] ಅ. ಅಪ್ಪಲಾಪುರ : I.A.R., ೧೯೮೭-೮೮
[26] ಅ. ಮಾಡಲಗೇರಿ : ೧೯೯೮,
[27] Sankalia H.D., Mesolithic and Pre Mosolithic Industries

(೨)

**೩. ನೂತನ ಶಿಲಾಯುಗ ಸಂಸ್ಕೃತಿ (Neolittic Culture) (ಕ್ರಿ.ಪೂ. ೩೦೦೦-೧೫೦೦)**

ಗ್ರೀಕ್ ಭಾಷೆಯಲ್ಲಿ ನಿಯೋ ಎಂದರೆ ನವೀನ/ಹೊಸದು ಎಂದು, ಲಿತಿಕ್ ಎಂದರೆ ಸ್ಟೋನ್ ಎಂಬ ಅರ್ಥವಿದೆ. ಈ ಹಂತದಲ್ಲಿ ಮನುಷ್ಯ ಜೀವನದ ರೀತಿ ನೀತಿಗಳು ಸಾಕಷ್ಟು ಬದಲಾವಣೆಗೊಂಡವು. ಅಲ್ಲದೆ ಈ ಕಾಲಘಟ್ಟದಲ್ಲಿ ಶಿಲಾಯುಧಗಳನ್ನು ಉಜ್ಜಿ ನಯಗೊಳಿಸಿ ತಯಾರಿಸುತ್ತಿದ್ದರಿಂದಾಗಿ ಈ ಯುಗವನ್ನು ನೂತನ ಶಿಲಾಯುಗ ಸಂಸ್ಕೃತಿ (ನಿಯೋಲಿತಿಕ್ ಕಲ್ಚರ್) ಎಂದು ಕರೆಯಲಾಗುತ್ತದೆ. ಈ ಸಂಸ್ಕೃತಿಯ ಹಂತವನ್ನು ಗುರುತಿಸುವಾಗ ಉಜ್ಜಿ ನಯಗೊಳಿಸಿದ ಮೇಲ್ಮೈಯುಳ್ಳ ಕೊಡಲಿಗಳು ಹಾಗೂ ಬೂದುವರ್ಣದ ಮಡಿಕೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಈ ಉಪಕರಣಗಳು ಪ್ರಾಚೀನ ಶಿಲಾಯುಧಗಳಂತೆ ಒರಟಾಗಿರದೆ, ಉಜ್ಜಿ ನಯಗೊಳಿಸಿದ ಶಿಲಾಯುಧಗಳಾಗಿವೆ. ಅಲ್ಲದೆ ಈ ಹಿಂದಿನ ಕಾಲದಲ್ಲಿ (ಸೂಕ್ಷ್ಮ ಶಿಲಾಯುಗ) ಆರಂಭವಾಗಿದ್ದ ಪಶುಪಾಲನೆ ಮತ್ತು ಕೃಷಿ ಪದ್ಧತಿಗಳು ಈ ಕಾಲದಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದಿದವು. ಬೂದುವರ್ಣದ ಪಾತ್ರೆಗಳ ತಯಾರಿಕೆ, ವ್ಯವಸ್ಥಿತವಾದ ವಾಸದ ಮನೆಗಳ ನಿರ್ಮಾಣ ಈ ಕಾಲದ ನವೀನತೆಗಳಾಗಿವೆ. ಒಂದು ರೀತಿಯ ಪರಸ್ಪರ ಅವಲಂಬನೆಯ ಆಧಾರದ ಮೇಲೆ ಒಟ್ಟಾಗಿ ವಾಸಿಸುವ ಜನರು, ತಮ್ಮ ವೈಶಿಷ್ಟಗಳಾಗಿವೆ. ಇದನ್ನು ಆರಂಭಿಕ ಸಂಘಟಿತ ಸಮಾಜವೆಂದು ಕರೆಯಬಹುದಾಗಿದೆ. ಈ ಕಾರಣಕ್ಕಾಗಿಯೇ ಈ ಎಲ್ಲ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡ ಬ್ರೈನ್ ಎಂ.ಪ್ರಾಗನ್ ಅವರು ಈ ಕಾಲಘಟ್ಟವನ್ನು "ಕ್ರಾಂತಿಕಾರಕ ಕಾಲಘಟ" (ಎ ರೆವಲ್ಯೂಶನರಿ ಪೀರಿಯಡ್) ಎಂದು ಕರೆದಿದ್ದಾರೆ.

ಕರ್ನಾಟಕದಲ್ಲಿ ನೂತನ ಶಿಲಾಯುಗದ ಸಂಸ್ಕೃತಿಗೆ ಸಂಬಂಧಿಸಿದ ಶೋಧನೆಗಳು ಪ್ರಥಮವಾಗಿ ೧೮೭೨ರಲ್ಲಿ ಶೋಧಿತವಾದವು. ಫ್ರೇಸರ್ ಅವರು ಬಳ್ಳಾರಿ ಜಿಲ್ಲೆ ಕಪ್ಪಗಲ್ಲು ಬೆಟ್ಟದಲ್ಲಿ ನೂತನ ಶಿಲೋಪಕರಣ ಹಾಗೂ ವಾಸ್ತವ್ಯದ ನೆಲೆಯೊಂದನ್ನು ಗುರುತಿಸಿದರು. ರಾಬರ್ಟ್ ಬ್ರೂಸ್‌ಫೂಟ್ ಅವರು ಕೋಲಾರ ಜಿಲ್ಲೆ ಶ್ರೀನಿವಾಸಪುರ ಮತ್ತು ಬೇತಮಂಗಲ ನೆಲೆಗಳನ್ನು ಶೋಧಿಸಿದರು. ಮೈಸೂರು ಜಿಲ್ಲೆ ಲಕ್ಷ್ಮೀಪುರ ಮತ್ತು ಟಿ.ನರಸೀಪುರ, ಮಂಡ್ಯ ಜಿಲ್ಲೆಯ ಫ್ರೆಂಚ್ ಹಿಲ್ಸ್ ಮುಂತಾದೆಡೆಗಳಲ್ಲಿಯೂ ನೂತನ ಶಿಲಾಯುಗದ ಸಂಸ್ಕೃತಿಯ ನೆಲೆಗಳು ಶೋಧಿತವಾದವು.

ಕರ್ನಾಟಕದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಕುರಿತು ಇಲ್ಲಿ ನಡೆದ ಹಲವು ಉತ್ಖನನಗಳು ಮಹತ್ವದ ವಿವರಗಳನ್ನು ಒದಗಿಸಿವೆ. ಅವುಗಳೆಂದರೆ ಬ್ರಹ್ಮಗಿರಿ[1]ಮಸ್ಕಿ[2] ಪಿಕ್ಲೆಹಾಳ್[3]. ತೆಕ್ಕಲಕೋಟೆ[4] ಹಳ್ಳೂರು[5] ಕಪ್ಪಗಲ್[6]ತಿ. ನರಸೀಪುರ[7]ಕೊಡೆಕಲ್[8]ಹೆಮ್ಮಿಗೆ[9]. ಇತ್ತೀಚೆಗೆ ನಡೆದ ಕೋಲಾರ ಜಿಲ್ಲೆಯ ಬನಹಳ್ಳಿ[10], ಮಂಜ್ರಾ, ಕಾರಂಜಾ ನದಿ ಕಣಿವೆಗಳ ಕ್ಷೇತ್ರ ಕಾರ್ಯದಿಂದ ನೂತನ ಶಿಲಾಯುಗದ ನೆಲೆಗಳನ್ನು ಗುರುತಿಸಲಾಗಿದೆ.[11]ಮಲೆನಾಡು ಅರೆಮಲೆನಾಡಿನ ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿಯೂ ಕೆಲವು ನೆಲೆಗಳು ಕಂಡುಬಂದಿವೆ.[12]ಪನ್ನಾರ್ ನದಿ ಪಾತ್ರವು ನೂತನ ಶಿಲಾಯುಗ ಸಂಸ್ಕೃತಿಯ ನೆಲೆಯಾಗಿತ್ತೆಂದು ತಿಳಿಯುತ್ತದೆ.[13] ಈ ನಿವೇಶನಗಳ ಅಧ್ಯಯನದಿಂದಾಗಿ ಕರ್ನಾಟಕದಲ್ಲಿ ಈ ಸಾಂಸ್ಕೃತಿಕ ಹಂತವು ಉಚ್ಛ್ರಾಯ ಸ್ಥಿತಿಯಲ್ಲಿದ್ದುದು ತಿಳಿಯುತ್ತದೆ. ಮುಖ್ಯ ಅವಶೇಷವಾದ ವೈವಿಧ್ಯ ಶಿಲೋಪಕರಣಗಳು, ಮಣ್ಣಿನ ಪಾತ್ರೆಗಳು, ಶವಸಂಸ್ಕಾರ ಪದ್ಧತಿ, ಕಲೆಗಾರಿಕೆ ಮುಂತಾದ ಅನೇಕ ವಿಷಯಗಳ ಕುರಿತು ಮಹತ್ವದ ಮಾಹಿತಿಗಳು ತಿಳಿದು ಬಂದಿವೆ.

ನೂತನ ಶಿಲಾಯುಗ ಸಂಸ್ಕೃತಿಯ ಶಿಲೋಪಕರಣಗಳಲ್ಲಿ ವೈವಿಧ್ಯತೆಯಿದ್ದು ಕೊಡಲಿ, ಬಾಚಿಕ, ಉಳಿ, ಸುತ್ತಿಗೆ, ಕೆತ್ತುಳಿ, ಉಜ್ಜುಗ ಅಥವಾ ಅರೆಯುವ ಕಲ್ಲು, ಕವಣೆ ಕಲ್ಲು ಮತ್ತು ಉಂಗುರ ಕಲ್ಲು ಮೊದಲಾದವು ಪ್ರಮುಖವಾಗಿವೆ. ಇವುಗಳನ್ನು ವಿಶೇಷ ತಂತ್ರಗಾರಿಕೆ ಬಳಸಿ ನಾಲ್ಕು ಹಂತಗಳಲ್ಲಿ ಸಿದ್ಧಗೊಳಿಸಲಾಗುತ್ತಿತ್ತು. ಮೊದಲು ಚಕ್ಕೆ ಎಬ್ಬಿಸುವುದು, ನಂತರ ಉಬ್ಬುಗಳನ್ನು ಕುಟ್ಟಿ ತೆಗೆಯುವುದು, ಅನಂತರ ಉಜ್ಜಿ ನಯಗೊಳಿಸುವುದು ಹಾಗೂ ಕೊನೆಯದಾಗಿ ಹೊಳಪು ನೀಡಲಾಗುತ್ತಿತ್ತು. ಇಂತಹ ಉಪಕರಣಗಳನ್ನು ಹೊಳಪು ನೀಡಲು ಪ್ರಾಣಿಗಳ ಕೊಬ್ಬಿನಂತಹ ಜಿಡ್ಡುಳ ವಸ್ತುಗಳನ್ನು ಜೊತೆಗೆ ರಂಗೋಲಿಯಂತಹ ಕಲ್ಲಿನ ನುಣುಪು ಪುಡಿಯನ್ನು ಉಪಯೋಗಿಸಲಾಗುತ್ತಿತ್ತೆಂದು ತಿಳಿಯುತ್ತದೆ. ಇಂತಹ ಉಪಕರಣಗಳು ಸಾಮಾನ್ಯವಾಗಿ ತ್ರಿಭುಜಾಕಾರದಲ್ಲಿರುತ್ತವೆ. ಉಪಕರಣಗಳು ಸಂಯುಕ್ತ ಉಪಕರಣಗಳಾಗಿದ್ದು ಮೂಳೆ, ಮರದ ಮಾಧ್ಯಮಗಳಿಗೆ ಸಿಕ್ಕಿಸಿ ಉಪಯೋಗಿಸಲಾಗುತ್ತಿತ್ತು. ಡೈಕ್, ಡಾಲರೈಟ್, ಕಣಶಿಲೆ ಮತ್ತು ಬಳಪದ ಕಲ್ಲುಗಳನ್ನು ಬಳಸಿ ಉಪಕರಣಗಳನ್ನು ರೂಪಿಸಿರುವುದು ಕಂಡುಬಂದಿದೆ.

ನೂತನ ಶಿಲೋಪಕರಣಗಳ ಜೊತೆಗೆ ಅತಿ ಸೂಕ್ಷ್ಮ ಚಕ್ಕೆ ಕಲ್ಲಿನ ಉಪಕರಣಗಳ ಬಳಕೆಯಾಗಿರುವುದು ತಿಳಿಯುತ್ತದೆ. ದ್ವಿಮುಖ ಅಲಗುಳ್ಳ, ತೆಳು ನೀಳ ಚಕ್ಕೆ, ಮೊನೆ, ಒಬ್ಬದಿ ಮತ್ತು ಇಬ್ಬದಿ ಹೆರೆಚಕ್ಕೆ, ಒಳಬಾಗಿದಂಚಿನ ಹೆರೆಚಕ್ಕೆ, ಮೂಲಗಟ್ಟಿ ಹೆರೆಚಕ್ಕೆ, ಕೊರೆಗ, ಅರ್ಧಚಂದ್ರಾಕೃತಿ, ಮೊದಲಾದ ಉಪಕರಣಗಳು ಬಳಕೆ ಇದ್ದದು ತಿಳಿಯುತ್ತದೆ. ಇವುಗಳನ್ನು ರೂಪಿಸಲು ಉತ್ತಮ ಜಾತಿಯ ಚಾಲ್ಸಿಡೋನಿ, ಕಾರ್ನಿಲಿಯನ್, ಆಗೇಟಾ, ಚರ್ಟ್, ಜಾಸ್ಪರ್ ಮೊದಲಾದ ಕಲ್ಲನ್ನು ಉಪಯೋಗಿಸಲಾಗುತ್ತಿತ್ತು.

ಈ ಸಂಸ್ಕೃತಿಯ ಮತ್ತೊಂದು ಪ್ರಾತಿನಿಧಿಕ ಅವಶೇಷ ಮಣ್ಣಿನ ಮಡಿಕೆಗಳು. ಆರಂಭ ಹಂತದಲ್ಲಿ ಇವನ್ನು ಕೈಯಲ್ಲಿ ರೂಪಿಸಲಾಗುತ್ತಿತ್ತು. ಇದಕ್ಕೆ ಬದಲಾಗಿ ನಂತರದಲ್ಲಿ ತಿರುಗಿಸಲ್ಪಡುವ ಮೇಜು, ಮಂದಗತಿಯಲ್ಲಿ ತಿರುಗಿಸಲ್ಪಡುವ ಚಕ್ರ, ಪರಿಷ್ಕೃತ ಚಕ್ರಗಳಲ್ಲಿ ತಯಾರಿಸಲಾದ ಹೆಚ್ಚು ತೆಳ್ಳನೆಯ ಮೃತ್ ಪಾತ್ರೆಗಳು ಕಂಡುಬಂದಿವೆ. ಕಂದು ಮತ್ತು ಬೂದು ಬಣ್ಣದ ಮಡಿಕೆಗಳೂ ಪ್ರಾತಿನಿಧಿಕವಾಗಿದ್ದು ಕೆಲವು ಪ್ರಾದೇಶಿಕ ವಿಭಿನ್ನತೆಯೂ ಕಂಡುಬರುತ್ತದೆ. ಇಂತಹ ಮಡಿಕೆಗಳು ವಿವಿಧ ಆಕಾರ ಮತ್ತು ಗಾತ್ರದಲ್ಲಿದ್ದು ಬಟ್ಟಲುಗಳು ಮತ್ತು ಒಳಲೆಯಾಕಾರದ ಬೋಗುಣಿ ಅಗಲತಳದ ಕಡಿಮೆ ಎತ್ತರದ ಬೋಗುಣಿ, ಹಿಡಿಕೆಯುಳ್ಳ ಮುಚ್ಚಳ ಸಣ್ಣ ಹಾಗೂ, ಮಧ್ಯಮ ಗಾತ್ರದ ಕೊಡಗಳು, ಕಮಂಡಲಾಕಾರದ ಹೂಜಿಗಳು, ತಳದಲ್ಲಿ ರಂಧ್ರವುಳ್ಳ ಪಾತ್ರೆಗಳು ಮತ್ತು ಬೋಗುಣಿಗಳು ಸಾಧಾರಣವಾಗಿ ಕಂಡುಬರುವ ಆಕೃತಿಗಳಾಗಿವೆ. ಕೆಲವೊಮ್ಮೆ ಅಲಂಕಾರಗಳನ್ನು ರೂಪಿಸಿರುತ್ತಾರೆ. ಮಣ್ಣಿನ ತಿಳಿಯ ಲೇಪನವನ್ನು ಮಾಡಿರುವುದು ಕಂಡುಬಂದಿದೆ. ಇವುಗಳ ಜೊತೆಗೆ ಈ ಸಂಸ್ಕೃತಿಯ ಜನರ ವಾಸ್ತವ್ಯದ ನೆಲೆಗಳನ್ನು ನಿರ್ಮಿಸಿಕೊಂಡಿದ್ದು ಪ್ರಾಣಿ ಸಾಕಣೆ, ಅಲಂಕಾರ ಸಾಧನಗಳನ್ನು ಬಳಸಿದ್ದು, ಕಲೆಯ ಪ್ರದರ್ಶನ, ಧಾರ್ಮಿಕ ನಂಬಿಕೆ, ಶವಸಂಸ್ಕಾರ ಪದ್ಧತಿಗಳು ಮೊದಲಾದ ವಿವಿಧ ಪದ್ಧತಿಗಳನ್ನೇ ರೂಢಿಸಿಕೊಂಡು ಸುಸಂಸ್ಕೃತ ಜೀವನ ಕ್ರಮವನ್ನು ನಡೆಸಿದ್ದು. ಈ ಜನರ ವೈಶಿಷ್ಟ್ಯಗಳಾಗಿವೆ.

ಈ ಸಾಂಸ್ಕೃತಿಕ ಹಂತದ ವಿವಿಧ ಉತ್ಖನನದ ಫಲಿತಾಂಶ ಹಾಗು ದೊರೆತ ವಿವಿಧ ವೈಜ್ಞಾನಿಕ ಕಾಲಮಾನದನ್ವಯದಂತೆ ಮೂರು ಹಂತಗಳೆಂದು ತಿಳಿಯಲಾಗಿದ್ದು, ಮೊದಲನೆಯ ಹಂತ ಕ್ರಿ.ಪೂ. ೨೦೦೦-೧೮೦೦, ಎರಡನೆಯ ಹಂತ ಕ್ರಿ.ಪೂ. ೧೮೦೦-೧೪೦೦ ಮತ್ತು ಮೂರನೆಯ ಹಂತ ಕ್ರಿ.ಪೂ. ೧೪೦೦-೧೦೦೦೦ದವರೆಗೆ ಇದ್ದಿತ್ತೆಂದು ತಿಳಿಯಲಾಗಿದೆ.

ಹಂಪಿ ಪರಿಸರದ ಕಕ್ಕಬೇವಿನಹಳ್ಳಿ, ಕುಡತಿನಿ, ಕಪಗಲ್ಲು, ಬೆಳಗಲ್ಲು, ಸಂಗನಕಲ್ಲು, ಹಳಕುಂದಿ, ಹಳೆನೆಲ್ಲುಡಿ (ಬಳ್ಳಾರಿ ತಾ.)**[14]**ಇಂಗಳಗಿ, ಕಾಕುಬಾಳ, ಗಾದಿಗನೂರು, ತಿಮ್ಮಲಾಪುರ, ಡಣಾಪುರ, ಬೆಳಗೋಡುಹಾಳ, ಬುಕ್ಕಸಾಗರ, ವೆಂಕಟಾಪುರ (ಹೊಸಪೇಟೆ ತಾ.)**[15]**ಕೊಂಚಗೇರಿ, ಕೋಟೆಕಲ್ಲು ದುರ್ಗ, ತೆಕ್ಕಲಕೋಟೆ, ನಿಟ್ಟೂರು, ಸನವಾಸಪುರ, ಹಚ್ಚೋಳ್ಳಿ (ಸಿರಗುಪ್ಪ ತಾ.)**[16]** ಇಂಗಳ್ಗಿ, ಕುರೆಕುಪ್ಪಗುಡ್ಡ, ತೋರಣಗಲ್ಲು, ದರೋಜಿ, ರಾಜಾಪುರ, ಲಿಂಗದಹಳ್ಳಿ (ಸಂಡೂರು ತಾ.),**[17]**ಬೆಳಗಟ್ಟ, ರಾಮದುರ್ಗ, ಜರಿಮಲೆ (ಕೂಡ್ಲಿಗಿ ತಾ.)**[18].** ಅಲ್ಲೀಪುರ, ಮಾಗಳ, ಮೈಲಾರ, ರಾಜವಾಳ (ಹೂವಿನ ಹಡಗಲಿ ತಾ.)**[19]**ಮಾಡಲಗೇರಿ (ಹರಪನಹಳ್ಳಿ ತಾ.)**[20]**ಆನೆಗುಂದಿ, ಚಿಕ್ಕರಾಂಪುರ, ಕಮ್ಮಟ ದುರ್ಗ, ಹಿರೇಬೆನಕಲ್, ಮಲ್ಲಾಪುರ, ಕಡೆಬಾಗಿಲು (ಗಂಗಾವತಿ ತಾ.) ಮೊದಲಾದೆಡೆ ಈ ಸಂಸ್ಕೃತಿಯ ಕುರುಹುಗಳು ಪತ್ತೆಯಾಗಿವೆ. ಇಲ್ಲಿಯ ಕುಡತಿನಿ, ಕಪ್ಪಗಲ್ಲು, ಸಂಗನಕಲ್ಲು, ಕತ್ತಳಿ, ತೆಕ್ಕಲಕೋಟೆ, ನಿಟ್ಟೂರು, ದರೋಜಿ, ಕುರುಗೋಡು, ಕಾಕುಬಾಳು, ತಿಮ್ಮಾಪುರ, ಬೆಳಗಟ್ಟಿ ಮೊದಲಾದ ನೆಲೆಗಳಲ್ಲಿ ಉಜ್ಜಿ ನಯಗೊಳಿಸಿದ ಶಿಲೋಪಕರಣಗಳು ಕಂಡು ಬಂದಿವೆ. ಸಂಗನಕಲ್ಲು, ಕಾಕುಬಾಳುಗಳಲ್ಲಿ ಇವುಗಳೊಂದಿಗೆ ಬೂದುವರ್ಣದ ಮಡಿಕೆಗಳು, ಬೆಳಗಟ್ಟದಲ್ಲಿ ಅರೆಯುವ ಕಲ್ಲು, ಹೆರೆಚಕ್ಕೆ ಶಂಖದ ಅಭರಣಗಳು ದೊರೆತಿವೆ.

ಬ್ರಹ್ಮಗಿರಿಯಲ್ಲಿ ಉತ್ಖನನ ಮಾಡಿದ ಮಾರ್ಟಿಮರ್ ವ್ಹೀಲರ್ ಅವರು ನವಶಿಲಾಯುಗದಿಂದ ಮೊದಲ್ಗೊಂಡು ಒಟ್ಟು ನಾಲ್ಕು ಹಂತಗಳನ್ನು ಗುರುತಿಸಿದ್ದಾರೆ.**[21]**ಬ್ರಹ್ಮಗಿರಿ, ಮಸ್ಕಿ, ಸಂಗನಕಲ್ಲು, ತೆಕ್ಕಲಕೋಟೆ ವಾಸ್ತವ್ಯದ ನೆಲೆಗಳಾಗಿದ್ದವು. ಉತ್ತರ-ಮಧ್ಯ ಭಾರತದಲ್ಲಿ ಸಾವಳದಾ ಸಂಸ್ಕೃತಿಯನ್ನು ಗುರುತಿಸಿದಂತೆ ದಕ್ಷಿಣ ಭಾರತದಲ್ಲಿ ಕಂಡು ಬಂದಿರುವ ಉಪಕರಣಗಳನ್ನು ಮಸ್ಕಿ ಸಂಸ್ಕೃತಿಗೆ ಹೋಲಿಸುವುದುಂಟು. ಸಂಗನಕಲ್ಲಿನ ವಸತಿ ನೆಲೆ, ಕಪ್ಪಗಲ್ಲು ಬೂದಿದಿಬ್ಬ ಮತ್ತು ತೆಕ್ಕಲಕೋಟೆಗಳಲ್ಲಿ ನಡೆದ ಉತ್ಖನನಗಳಿಂದ ಅನೇಕ ಉಪಕರಣಗಳೊಂದಿಗೆ ವಾಸಕ್ಕಾಗಿ ನಿರ್ಮಿಸಿದ್ದ ಮನೆಗಳ (ಗುಡಿಸಲುಗಳ)ಚಿತ್ರಣ ಕಂಡುಬಂತು. ಇಂಥ ಮನೆಗಳನ್ನು ಸಂಗನಕಲ್ಲು ತೆಕ್ಕಲಕೋಟೆಗಳಂತೆ, ಮಹಾರಾಷ್ಟ್ರದ ಇನಾಮಗಾಂವ, ಮಧ್ಯ ಭಾರತದ ಜೋರ್ವೆಗಳಲ್ಲೂ ಗುರುತಿಸಲಾಗಿದೆ.**[22]** ಇವುಗಳ ಆಕಾರ ಮತ್ತು ಪ್ರಮಾಣವನ್ನು ಗಮನಿಸಲಾಗಿ ಸುಮಾರು ೨ ರಿಂದ ೫-೬ ಹೆಕ್ಟೇರಿನವರೆಗೆ ವಾಸ್ತವ್ಯದ ನೆಲೆಗಳು ಇರುತ್ತಿದ್ದವು. ಇವರು ನಿರ್ಮಿಸುತ್ತಿದ್ದ ಗುಡಿಸಲುಗಳ ವಿನ್ಯಾಸ ವರ್ತುಳ ಇಲ್ಲವೇ ಅಪರೂಪವಾಗಿ ಆಯತಾಕಾರದಲ್ಲಿದ್ದು ಅದರ ಒಂದು ಭಾಗ ಹಿಗ್ಗಿದ ಅರ್ಧದಷ್ಟು ವಿನ್ಯಾಸದಲ್ಲಿರುತ್ತವೆ. ನೆಲದ ಅಂಚಿನಲ್ಲಿ ಕಂಬಗಳು, ಅವುಗಳಿಗೆ ಬಿದಿರಿನ ಇಲ್ಲವೇ ಬಳ್ಳಿಗಳಿಂದ ಹೆಣೆದ ತಡಿಕೆಗಳನ್ನು ಕಟ್ಟಲಾಗುತ್ತಿತ್ತು. ತಟ್ಟಿ ಗೋಡೆಯ ಎರಡೂ ಬದಿಗೆ ಕಲಸಿದ ಮಣ್ಣು ಮೆತ್ತಿ ಬುಡದಲ್ಲಿ ಕಲ್ಲುಗಳನ್ನು ಇಡಲಾಗುತ್ತಿತ್ತು. ನೆಲಕ್ಕೆ ಚಿಕ್ಕ ಕಲ್ಲುಗಳನ್ನು ಹಾಕಿ ಮೇಲೆ ಕೆಂಪುಮಣ್ಣಿನಿಂದ ಗಟ್ಟಿಗೊಳಿಸಲಾಗುತ್ತಿತ್ತು. ಇತ್ತೀಚೆಗೆ ಸಂಗನಕಲ್ಲು, ಕುರುಗೋಡು, ಕಾಕುಬಾಳು ನೆಲೆಗಳಲ್ಲಿ ಡಾ. ತಿಪ್ಪೇಸ್ವಾಮಿ ಎಚ್., ಡಾ. ವಾಸುದೇವ ಬಡಿಗೇರ, ಡಾ. ಸೋಮಶೇಖರ ಮೊದಲಾದ ವಿದ್ವಾಂಸರು ಕ್ಷೇತ್ರಕಾರ್ಯ ಕೈಗೊಂಡು ಅನೇಕ ಉಪಕರಣಗಳನ್ನು ಸಂಗ್ರಹಿಸಿದ್ದಾರೆ. ಸಂಗ್ರಹಿತ ಅವಶೇಷಗಳಲ್ಲಿ ಒಂದು ಅಪರೂಪದ ಕೈಕೊಡಲಿಯನ್ನು ಸಂಗನಕಲ್ಲು ನೆಲೆಯಲ್ಲಿ ಬಡಿಗೇರ ಅವರು ಗುರುತಿಸಿದ್ದಾರೆ. ಇದನ್ನು ಕಪ್ಪು ಬಿಳಿ ಮಿಶ್ರಿತ ಶಿಲೆಯಲ್ಲಿ ತಯಾರಿಸಲಾಗಿದ್ದು, ಅದರ ಮೂತಿ ೧೨.೫ ಸೆಂ.ಮೀ. ಇದೆ. ಇಂಥ ದೊಡ್ಡ ಆಯುಧವನ್ನು ಮಾನವನು ಮರಗಳನ್ನು ಕಡಿಯಲು ಇಲ್ಲವೇ ಬಲಿಷ್ಠ ಪ್ರಾಣಿಗಳನ್ನು ಬೇಟೆಯಾಡಲು ಬಳಸಿಕೊಂಡಿರಬೇಕು. ಸಂಗನಕಲ್ಲು-ಕಪ್ಪಗಲ್ಲು ಬೆಟ್ಟಗಳು ಹತ್ತಿರದಲ್ಲಿಯೇ ಇವೆ. ಕಪ್ಪಗಲ್ಲು ಬೆಟ್ಟದಲ್ಲಿ ಚಕ್ಕೆ ಎಬ್ಬಿಸಿ ನಿರ್ಮಾಣ ಹಂತದಲ್ಲಿರುವ ಒರಟಾದ ಆಯುಧಗಳು ಹೇರಳವಾಗಿವೆ. ಸಂಗನಕಲ್ಲು ಬೆಟ್ಟದಲ್ಲಿ ಉಜ್ಜಿ ನಯಗೊಳಿಸದ ಶಿಲಾಯುಧಗಳು ಹರಡಿವೆ. ಇದರಿಂದ ಕಪ್ಪಗಲ್ಲು ಬೆಟ್ಟದಲ್ಲಿ ಪ್ರಾಕೃತಿಕವಾಗಿ ಹರಡಿರುವ ಕಪ್ಪುಶಿಲೆಯಿಂದ ಆಯುಧಗಳನ್ನು ತಯಾರಿಸುವ ಬೃಹತ್ ಪ್ರಮಾಣದ ಕಾರ್ಯಾಗಾರ ಇತ್ತೆಂದು ತಿಳಿಯುತ್ತದೆ. ದೊಡ್ಡ ದೊಡ್ಡ ಬಂಡೆಗಳು ಮತ್ತು ಗುಹೆಗಳಿಂದ ಕುಡಿದ ಸಂಗನಕಲ್ಲು ಬೆಟ್ಟವನ್ನು ವಾಸ್ತವ್ಯ ಮಾಡಿಕೊಂಡಂತೆ ಕಾಣುತ್ತದೆ.

**ಶಿಲಾ ತಾಮ್ರಯುಗ ಸಂಸ್ಕೃತಿ (ಕ್ರಿ.ಪೂ. ೨,೨೦೦-೮೦೦)**

ನೂತನ ಶಿಲಾಯುಗದ ಒಂದು ಘಟ್ಟದಿಂದ ತಾಮ್ರದ ಬಳಕೆ ಆರಂಭವಾಯಿತು. ತಾಮ್ರದ ಅದಿರಿನಿಂದ ಲೋಹವನ್ನು ತಯಾರಿಸಿ ಅದರಿಂದ ಆಭರಣ, ಗೊಂಬೆ, ಆಯುಧ, ಮೊದಲಾದವುಗಳನ್ನು ಮಾಡಲಾಗುತ್ತಿತ್ತು. ಈ ಹಂತಹ ಜನಜೀವನದಲ್ಲಿ ಕಾಣುವ ಖಚಿತ

ಬೆಳವಣಿಗೆಯೆಂದರೆ ಶಿಲಾಯುಧಗಳ ಜೊತೆಗೆ ತಾಮ್ರ ಅಥವಾ ಕಂಚಿನ ಉಪಕರಣಗಳ ನಿರ್ಮಾಣ. ಆದ್ದರಿಂದ ಈ ಸಂಸ್ಕೃತಿಯನ್ನು ಶಿಲಾ ತಾಮ್ರಯುಗ (ಚಾಲ್ಕೋಲಿತಿಕ್ ಪಿರಿಯಡ್) ವೆಂದು ಕರೆಯಲಾಗುತ್ತದೆ.

ಭಾರತದಾದ್ಯಂತ ಇಂಥ ಅನೇಕ ನೆಲೆಗಳು ಕಂಡುಬಂದಿವೆ. ಹರಪ್ಪ ಸಂಸ್ಕೃತಿಯಲ್ಲಿ ತಾಮ್ರದಿಂದ ತಯಾರಿಸಿದ ವಿವಿಧ ನಮೂನೆಯ ಆಯುಧೋಪಕರಣಗಳು ದೊರೆತಿವೆ. ಕರ್ನಾಟಕದಲ್ಲಿ ಕೆಲವು ಕಡೆ ಈ ಸಂಸ್ಕೃತಿಯ ಕುರುಹುಗಳು ದೊರೆತಿದ್ದು, ಅಧ್ಯಯನಕ್ಕೆ ಯೋಗ್ಯವಾಗಿವೆ. ತಾಮ್ರದ ಅದಿರಿನಿಂದ ಲೋಹವನ್ನು ತೆಗೆದು ಅದರಿಂದ ವಿವಿಧ ಉಪಕರಣಗಳನ್ನು ಮಾಡುತ್ತಿದ್ದರು. ಸಂಶೋಧನೆಗೊಂಡ ಈ ಹಂತದ ಎಲ್ಲಾ ನೆಲೆಗಳಲ್ಲಿ ಇಂಥ ಪ್ರಯೋಗ ನಡೆದಿರುವುದು ವಿರಳ. ಅತಿ ಕಡಿಮೆ ಪ್ರಮಾಣದಲ್ಲಿ ಕಂಡುಬಂದಿರುವ ಈ ಆಯುಧಗಳಲ್ಲಿ ತಾಮ್ರ ಇಲ್ಲವೇ ಕಂಚಿನ ಚಪ್ಪಟೆ ಕೊಡಲಿ, ತಂತಿ ನೀರಿನ ಗಾಳ ಮತ್ತು ತೆಲ್ಲನೆ ಬಾಯುಳ್ಳ ಅಲಗಿನ ಉಪಕರಣಗಳು ಕೃಷ್ಣಾನದಿ ಪ್ರದೇಶದ ಕೆಲವು ನೆಲೆಗಳಲ್ಲಿ ದೊರೆತಿವೆ. ದಕ್ಷಿಣ ಭಾರತದ ಅತ್ಯಂತ ಗಮನಾರ್ಹವಾದ ಉಪಕರಣವೆಂದರೆ ರಾಯಚೂರು ಹತ್ತಿರ ಕಲ್ಲೂರು ಗ್ರಾಮದಲ್ಲಿ ಶಿಲಾತಾಮ್ರಯುಗದ ನೆಲೆಯಲ್ಲಿ ದೊರೆತ ಉದ್ದನೆಯ ಖಡ್ಗಗಳು ಪ್ರಮುಖವಾದವು. ಇದೇ ರೀತಿ ಸಣ್ಣ ಮದರಿಯ ಕಠಾರಿಯಂಥ ಉಪಕರಣ ಭೀಮಾನದಿ ಉಗಮ ಪ್ರದೇಶದ ಚಂದೋಳಿ ಗ್ರಾಮದಲ್ಲಿ ಮತ್ತು ಬ್ರಹ್ಮಗಿರಿಯಲ್ಲಿ ಒಂದು ಚಿಕ್ಕ ಚಾಕು ದೊರೆತಿವೆ.**[23]**

ನೂತನ ಶಿಲಾಯುಗದ ಸಂಸ್ಕೃತಿಯ ನಂತರ ವಿಕಸನಗೊಂಡ ಈ ಹಂತದಲ್ಲಿ ತಾಮ್ರದ ಆಯುಧಗಳ ಬಳಕೆ, ಸುಟ್ಟ ಮಣ್ಣಿನ ಪತ್ರೆಗಳ ಬಳಕೆ, ಸುಧಾರಿಸಿದ ಬೇಸಾಯ ಪದ್ಧತಿಯ ಅಳವಡಿಕೆ ಈ ಸಾಂಸ್ಕೃತಿಕ ಹಂತದ ಮುಖ್ಯ ಲಕ್ಷಣಗಳು. ಕರ್ನಾಟಕಕ್ಕೆ ಸಂಬಂಧಿಸಿದಂತೆ ಸುಧಾರಿತ ಮಣ್ಣಿನ ಪಾತ್ರೆಗಳ ಬಳಕೆ, ಅದರೊಂದಿಗೆ ಅಲ್ಪಪ್ರಮಾಣದ ಲೋಹದ ಬಳಕೆ ಜೊತೆಗೆ ಶಿಲೋಪಕರಣಗಳನ್ನು ಗಳಸಿಕೊಂಡಿರುವುದನ್ನು ವಿಶೇಷವಾಗಿ ಗಮನಿಸಬಹುದಾಗಿದೆ. ಭೀಮಾ ಮತ್ತು ಕೃಷ್ಣಾನದಿ ಪಾತ್ರವು ಉತ್ತಮ ಕರಿಮಣ್ಣಿನ ಪ್ರದೇಶವಾದುದರಿಂದ ಉತ್ತರ ಕರ್ನಾಟಕದ ಪ್ರದೇಶವನ್ನು ತಮ್ಮ ವಾಸ್ತವ್ಯಕ್ಕೆ ಆರಿಸಿಕೊಂಡು ಸುತ್ತಮುತ್ತಲಿನ ಪ್ರದೇಶಕ್ಕೆ ಪ್ರಸರಣವಾಗಿರುವುದನ್ನು ಕಾಣಬಹುದಾಗಿದೆ. ಅಲ್ಲದೆ ಅಲ್ಪಪ್ರಮಾಣದಲ್ಲಿ ಪಾತ್ರಿನಿಧಿಕ ನೆಲೆಗಳನ್ನು ದಕ್ಷಿಣ ಕರ್ನಾಟಕದ ಭಾಗದಲ್ಲಿಯೂ ಗುರುತಿಸಬಹುದಾಗಿದೆ.

ನೂತನ ಶಿಲಾಯುಗ ಸಂಸ್ಕೃತಿಯ ಶಿಲೋಪಕರಣಗಳ ಬಳಕೆಯೂ ಈ ಹಂತದಲ್ಲಿಯೂ ಇದ್ದಿತ್ತೆಂದು ತಿಳಿಯುತ್ತದೆ. ಮಡಿಕೆಯ ಮದರಿಯು ವಿಶಿಷ್ಟವಾಗಿದ್ದು ಕಂಡುಬರುತ್ತದೆ. ಇವುಗಳಲ್ಲಿ ವರ್ಣರೇಖಾ ಚಿತ್ರಮಯವಾದ ಪಾತ್ರೆಗಳು ಕಂಡುಬಂದಿವೆ. ಕೆಲವೊಮ್ಮೆ ಪ್ರಾಣಿಗಳ ಚಿತ್ರಗಳನ್ನು ಬಿಡಿಸಲಾಗಿದೆ. ಇಂತಹ ಮಣ್ಣಿನ ಪಾತ್ರೆಗಳನ್ನು ಜೋರ್ವೆ ಮತ್ತು ಸಾವಳದ ಮಡಿಕೆ ಮಾದರಿಗಳೆಂದು ಕರೆಯಲಾಗುತ್ತದೆ.

ಶಿಲಾ ತಾಮ್ರಯುಗದ ಜನರು ಸೌಂದರ್ಯ ಪ್ರಜ್ಞೆಯುಳ್ಳವರಾಗಿದ್ದರೆಂದು, ಅವರು ಮಣ್ಣಿನ ಗೊಂಬೆ ಹಾಗೂ ದೊರೆತ ವರ್ಣಚಿತ್ರಗಳಿಂದ ತಿಳಿಯಬಹುದಾಗಿದೆ. ರಾಯಚೂರು, ಬಳ್ಳಾರಿ, ಚಿತ್ರದುರ್ಗ ಪ್ರದೇಶದಲ್ಲಿಯ ಬೆಟ್ಟಗಳಲ್ಲಿ ಹಾಗೂ ಬಯಲು ಬಂಡೆಗಳ ಮೇಲೆ ಚಿತ್ರಗಳು ದೊರೆತಿವೆ. ನೂತನ ಶಿಲಾಯುಗ, ಶಿಲಾತಾಮ್ರಯುಗ ಅಥವಾ ಬೃಹತ್ ಶಿಲಾಯುಗ ಸಂಸ್ಕೃತಿಯ ಹಂತಕ್ಕೆ ಸೇರಿದವುಗಳೆಂದು ತಿಳಿಯುವ ಬೂದಿದಿಬ್ಬಗಳು ಕರ್ನಾಟಕದ ಉತ್ತರ ಭಾಗಗಳಲ್ಲಿ ಹೆಚ್ಚಾಗಿಯೂ ನಂತರದ ಭಾಗದಲ್ಲಿ ಪ್ರತಿನಿಧಿಕವಾಗಿಯೂ ಇರುವುದು ಕಂಡುಬರುತ್ತವೆ. ಈ ಸಂಸ್ಕೃತಿಯ ಕಾಲಮಾನವನ್ನು ಕರ್ನಾಟಕದ ವಿವಿಧ ಭಾಗಗಳಲ್ಲಿ ವಿವಿಧ ಕಾಲಮಾನವೆಂದು ನಿರ್ಧರಿಸಲಾಗಿದೆ. ಅದರಂತೆ ಕೃಷ್ಣಾ ಮೇಲ್ಕಂಡೆಯ ಶಿಲಾ ತಾಮ್ರಯುಗ ಸಂಸ್ಕತಿಯು ಸುಮಾರು ಕ್ರಿ.ಪೂ. ೨೩೦೦-೧೦೦೦ ಎಂದು ತಿಳಿಯಲಾಗಿದೆ. ಭೀಮಾ ಮತ್ತು ಕೃಷ್ಣಾ, ತುಂಗಭದ್ರಾ ಪ್ರದೇಶಕ್ಕೆ ಪ್ರಸರಿದಿ ಜೋರ್ವೆ ಮದರಿಯ ಕಪ್ಪು ವರ್ಣಚಿತ್ರದ ಮೃತ್ ಪಾತ್ರೆಗಳ್ಳುಳ್ಳ ಶಿಲಾತಾಮ್ರಯುಗ ಸಂಸ್ಕೃತಿಯ ಕಾಲಮಾನವು ಸುಮಾರು ಕ್ರಿ.ಪೂ. ೧೩೦೦-೮೦೦ ಎಂದು ನಿರ್ಧರಿಸಲಾಗಿದೆ.

ಹಂಪಿ ಪರಿಸರದಲ್ಲಿ ಕುಡಿತಿನಿ, ಸಂಗನಕಲ್ಲು, ಕಪ್ಪಗಲ್ಲು, ಕುರುಗೋಡು, ಬಳ್ಳಾರಿ, (ಬಳ್ಳಾರಿ ತಾ.)**[24]**, ಗಾದಿಗನೂರು, ಗುಡಿ ಓಬಳಾಪುರ, ಹಂಪಿ (ಚಕ್ರ ತೀರ್ಥ), ನಿಂಬಾಪುರ, ಬೆಳಗಲ್ಲು, ಬೆಳಗೋಡಹಾಳು, ವೆಂಕಟಾಪುರ, ಹಳಕುಂಡಿ (ಹೊಸಪೇಟೆ ತಾ.)**[25]**,

ತೆಕ್ಕಲಕೋಟೆ (ಸಿರುಗುಪ್ಪ ತಾ.)**[26]**, ದರೋಜಿ ಭೈರನಾಯಕನಹಳ್ಳಿ, ರಾಜಾಪುರ (ಸಂಡೂರು ತಾ.)**[27]**, ಅಪ್ಪೇನಹಳ್ಳಿ (ಕೂಡ್ಲಿಗಿ ತಾ.)**[28]**, ಹಂಪಸಾಗರ (ಹಗರಿಬೊಮ್ಮನಹಳ್ಳಿ ತಾ.)**[29]**, ಅಲ್ಲೀಪುರ (ಹೂವಿನಹಡಗಲಿ),**[30]** ಚಿಕ್ಕರಾಂಪುರ, ಆನೆಗೊಂದಿ, ಹಿರೇಬೆನಕಲ್ (ಗಂಗಾವತಿ ತಾ.) ಮೊದಲಾದಡೆ ಈ ಸಂಸ್ಕೃತಿಯ ಕೆಲ ಕುರುಹುಗಳು ದೊರೆತಿದ್ದು, ಅವುಗಳ ಆಧಾರದ ಮೇಲೆ ಅಂದಿನ ಜನಜೀವನ ಅರಿಯಬಹುದಾಗಿದೆ. ಕುಡಿತಿನಿ, ಕಪ್ಪಗಲ್ಲು ನೆಲೆಗಳಲ್ಲಿ ಸೂಕ್ಷ್ಮ ಶಿಲೋಪಕರಣಗಳು, ಚಕ್ಕೆ ಕಲ್ಲಿನ ಮೂಲ ಶಿಲಾಗಟ್ಟಿಗಳು ಮತ್ತು ಇವುಗಳೊಂದಿಗೆ ಮಸುಕಾದ ಕೆಂಪುವರ್ಣದ ಮಡಕೆ ಅವಶೇಷಗಳು, ಅಲ್ಲೀಪುರದಲ್ಲಿ ಕಂಡುಬಂದಿವೆ. ಇದಕ್ಕೆ ಆನೆಗುಂದಿ ಸಮೀಪದ ಚಿಕ್ಕರಾಂಪುರದಲ್ಲಿ ಕೆಂಪುವರ್ಣದ ಮಡಿಕೆಗಳು ಆಭ್ರಕ ಮಿಶ್ರಣಗೊಂಡಿವೆ. ಹೊಸಕೇರಿಯಲ್ಲಿ ಕಂದುವರ್ಣದ ಮಡಿಕೆಗಳೊಂದಿಗೆ ನೀಳಚಕ್ಕೆ ಹಾಗೂ ಹಿರೇಬೆನಕಲ್ಲಿನಲ್ಲಿ ಕಂದು ಚಿತ್ರಿತ ಕೆಂಪು ಮಡಕೆ ಭಾಗ ಮತ್ತು ನೀಳಚಕ್ಕೆ, ಗೆರೆಗಳುಳ್ಳ ಮೂಲ ಶಿಲಾಗಟ್ಟಿಗಳು ದೊರೆತಿದ್ದು, ಅಧ್ಯಯನಕ್ಕೆ ಯೋಗ್ಯವಾಗಿದೆ.

**ಕಬ್ಬಿಣಯುಗ ಅಥವಾ ಬೃಹತ್ ಶಿಲಾಯುಗ ಸಂಸ್ಕೃತಿ (Megalittic or Iron Age Culture) (ಕ್ರಿ.ಪೂ. ೧೨೦೦-೨೦೦)**

ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ಕುತೂಹಲಕರವಾದ ವಿವಿಧ ಮಾದರಿಯ ಬೃಹತ್ ಕಲ್ಗೋರಿ (ಶಿಲಾ ಗೋರಿ) ಗಳನ್ನು ನಿರ್ಮಿಸುತ್ತಿದ್ದರಿಂದ ಈ ಸಂಸ್ಕೃತಿಯನ್ನು ಬೃಹತ್ ಶಿಲಾಯುಗ ಸಂಸ್ಕೃತಿ (ಮೆಗಾಲಿತಿಕ್ ಕಲ್ಚರ್) ಎಂದು ಕರೆಯಲಾಗುತ್ತಿದೆ. ಜೊತೆಗೆ ಈ ಹಂತದಲ್ಲಿ ಕಬ್ಬಿಣದ ಬಳಕೆ ಆರಂಭಗೊಂಡಿದ್ದರಿಂದ ಈ ಕಾಲವನ್ನು ಕಬ್ಬಿಣಯುಗವೆಂತಲೂ (ಐರನ್ ಏಜ್) ಕರೆಯಲಾಗುತ್ತದೆ. ಈ ಕಾಲದ ಕಲ್ಲು ಗೋರಿಗಳು ಈ ಜನರ ಪಾರಂಪರಿಕ ನಂಬಿಕೆಗಳ ತಳಹದಿಯ ಮೇಲೆ ರೂಪಿತವಾಗಿದ್ದು, ಅತ್ಯಂತ ಮಹತ್ವ ಪಡೆದಿವೆ. ಸಂಸ್ಕೃತಿಯ ಜನರು ಜೀವಿಸುತ್ತಿದ್ದ ಪ್ರದೇಶಗಳನ್ನು ವಾಸ್ತವ್ಯದ ನೆಲೆಗಳೆಂದೂ ಹಾಗೂ ಶವಸಂಸ್ಕಾರದ ಕೇಂದ್ರಗಳನ್ನು ಗೋರಿ ನೆಲೆಗಳೆಂದು ಪ್ರತ್ಯೇಕವಾಗಿ ಅಧ್ಯಯನ ನಡೆಸಲಾಗಿದೆ. ದೇಶಿಯ, ವಿದೇಶಿಯ ಪುರಾತತ್ವಜ್ಞರಿಂದ ಇವುಗಳ ಮೇಲೆ ಸಾಕಷ್ಟು ಅಧ್ಯಯನ ನಡೆದು, ಹಲವು ಹೊಸ ವಿವರಗಳು ಬೆಳಕಿಗೆ ಬಂದಿವೆ. ಕಲ್ಗೋರಿಗಳ ನಿರ್ಮಾತೃಗಳು ಅವುಗಳ ಕಾಲಮಾನ, ಅವುಗಳ ನಿರ್ಮಾತೃಗಳ ವಸತಿಗಳ ಅವರ ಸಾಮಾಜಿಕ, ಆರ್ಥಿಕ ಹಾಗೂ ಧಾಮಿಕ ಪದ್ಧತಿಗಳು ಆ ಕಾಲದ ಪ್ರಾಚ್ಯವಸ್ತುಗಳು ಹಾಗೂ ವೈವಿಧ್ಯ ಸಮಾಧಿ ನಿರ್ಮಿತಿಗಳು ಅಲ್ಲದೆ ಅನೇಕ ವಿವರಗಳು ಪ್ರಕಟವಾಗುತ್ತಲೇ ಇದೆ. ಹಾಗಿದ್ದರೂ ಈ ಸಂಸ್ಕೃತಿಯ ಉಗಮ ಪ್ರಸಾರ ಹಾಗೂ ವೈವಿಧ್ಯತೆಗಳ ಬಗೆಗೆ ವಿದ್ವಾಂಸರಲ್ಲಿ ಇಂದಿಗೂ ಒಮ್ಮತದ ಅಭಿಪ್ರಾಯಗಳಿಲ್ಲ.

ಭಾರತದಲ್ಲಿ ಇತರ ಸಂಸ್ಕೃತಿಗಳಂತೆ ಬೃಹತ್ ಶಿಲಾಯುಗ ಸಂಸ್ಕೃತಿಯು ಸವಿಸ್ತಾರವಾಗಿ ಹರಡಿದ್ದು ವಿವಿಧ ಕಾಲಘಟ್ಟಗಳಲ್ಲಿ ಅನೇಕ ಪ್ರಾದೇಶಿಕ ಲಕ್ಷಣಗಳನ್ನೊಳಗೊಂಡು ಪ್ರಸಾರವಾಗಿದೆ.

ಕರ್ನಾಟಕದಲ್ಲಿ ಈ ಸಂಸ್ಕೃತಿಯು ವಿಶಿಷ್ಟವಾಗಿರುವುದನ್ನು ಕಾಣಬಹುದು. ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಕಲ್ಗೋರಿಗಳು ಮತ್ತು ವಸತಿನೆಲೆಗಳು ಕಂಡುಬಂದಿವೆ. ಹಲವು ನೆಲೆಗಳ ಉತ್ಖನನವೂ ನಡೆದಿದೆ. ಬ್ರಹ್ಮಗಿರಿ, ನುಂಕೆಮಲೆ, ಜಟ್ಟಿಂಗರಾಮೇಶ್ವರ, ಕಪ್ಪಗಲ್ಲು, ಸಂಗನಕಲ್ಲು, ಹಿರೇಬೆನಕಲ್, ಕುಮತಿ, ಹುಲಿಕುಂಟೆ, ವಟಗಲ್, ಮೊದಲಾದವು ಈ ಕಾಲದ ಪ್ರಮುಖ ನೆಲೆಗಳಾಗಿವೆ. ದಕ್ಷಿಣ ಕರ್ನಾಟಕದ ನೆಲೆಗಳಿಗೆ ಹೋಲಿಸಿದರೆ ಉತ್ತರ ಕರ್ನಾಟಕದ ನೆಲೆಗಳು ಅಧ್ಯಯನಕ್ಕೆ ಆಶಾದಾಯಕವಾಗಿವೆ. ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಅ. ಸುಂದರ ಮೊದಲಾದ ವಿದ್ವಾಂಸರು ಸ್ಥಳ ಪರಿಶೋಧನೆ ನಡೆಸಿ, ಕೆಲವು ನೆಲೆಗಳಲ್ಲಿ ಉತ್ಖನನ ಕೈಗೊಂಡು ಈ ಸಂಸ್ಕೃತಿಯ ಮೇಲೆ ಹೆಚ್ಚಿನ ಬೆಳಕನ್ನು ಬೀರಿದ್ದಾರೆ. ಇಡೀ ಭಾರತದಲ್ಲಿಯೇ ವಿಶಿಷ್ಟಪೂರ್ಣವೆನಿಸಿರುವ ಶಿಲುಬೆಯಾಕಾರದ ಕಲ್ಗೋರಿಯನ್ನು ಅ. ಸುಂದರ ಅವರು ಬೆಳಕಿಗೆ ತಂದು, ಈ ಸಂಸ್ಕೃತಿಯನ್ನು, ಅದರಲ್ಲಿಯೂ ಮುಖ್ಯವಾಗಿ ಕಲ್ಗೋರಿಗಳ ವಿನ್ಯಾಸವನ್ನು ಗುರುತಿಸುವಲ್ಲಿ ಪ್ರಾದೇಶಿಕ ಭೌಗೋಳಿಕ ಸನ್ನಿವೇಶ, ಅಲ್ಲಿ ದೊರೆಯುವ ಶಿಲಾಮಾದರಿಗಳು, ಲೋಹ ನಿಕ್ಷೇಪಕಗಳು ಹೇಗೆ ಪಾತ್ರವಹಿಸುತ್ತವೆ ಎಂಬುದನ್ನು ಅವರು ನಿರೂಪಿಸಿದ್ದಾರೆ.

ಶವಸಂಸ್ಕಾರದ ಈ ಕಲ್ಗೋರಿಗಳು ಈ ಸಂಸ್ಕೃತಿಯ ವೈಶಿಷ್ಟ್ಯವನ್ನು ತಿಳಿಸುತ್ತವೆ. ಅನ್ವೇಷಣೆ, ಉತ್ಖನನಗಳಿಂದ ವಿವಿಧ ಪ್ರಕಾರದ ಗೋರಿಗಳನ್ನು ಕರ್ನಾಟಕದಲ್ಲಿ ವಿದ್ವಾಂಸರು ಗುರುತಿಸಿದ್ದಾರೆ. ಇವುಗಳಲ್ಲಿ ದಾರಿಕೋಣೆ, ಕಂಡಿಕೋಣೆ, ಆಯಾತಾಕಾರದ ಕೊರೆದು

ತಯಾರಿಸಿದ ಶವಕುಣಿಗಳು, ಮಡಕೆಯ ಶವಪೆಟ್ಟಿಗೆಗಳುಳ್ಳ ದುಂಡುವೃತ್ತಗಳು, ನಿಲಿಸುಗಲ್ಲುಗಳು, ಶಿಲಾವೃತ್ತ, ಶವಕುಳಿ, ಅಸ್ಥಿ ಪಾತ್ರೆ, ಕಲ್ಲುಗುಂಪೆಗಳು ಮೊದಲಾದ ಪ್ರಕಾರಗಳನ್ನು ವಿದ್ವಾಂಸರು ಗುರುತಿಸಿ ಬೆಳಕಿಗೆ ತಂದಿದ್ದಾರೆ.

ಕರ್ನಾಟಕದ ಅತಿ ಹೆಚ್ಚು ಸಂಖ್ಯೆಯ ನೆಲೆಗಳು ಇದೇ ಸಾಂಸ್ಕೃತಿಕ ಹಂತಕ್ಕೆ ಸೇರಿದವುಗಳಾಗಿದ್ದು, ಈ ಹಂತದಲ್ಲಿ ಕಬ್ಬಿಣದ ಜೊತೆಗೆ ಅತಿ ಹೆಚ್ಚು ಪ್ರಮಾಣದಲ್ಲಿ ಕಪ್ಪು ವರ್ಣದ, ಪೂರ್ಣ ಕಪ್ಪು ಮತ್ತು ಪೂರ್ಣ ಕೆಂಪು ವರ್ಣದ ಮಡಕೆಗಳ ಉಪಯೋಗವಿದ್ದುದನ್ನು ಗುರುತಿಸಲಾಗಿದೆ. ಹಂಪಿ ಪರಿಸರದಲ್ಲಿ ಕಪ್ಪಗಲ್ಲು, ಕುರುಗೋಡು, ಸಂಗನಕಲ್ಲು, (ಬಳ್ಳಾರಿ ತಾ.)**[31]**, ಹಳಕುಂಡಿ, ಹಂಪಿ (ಹೊಸಪೇಟೆ ತಾ.)**[32],** ನಿಟ್ಟೂರು, (ಸಿರುಗುಪ್ಪ ತಾ.)**[33],** ಮಲ್ಲಾಪುರ (ಸಂಡೂರು ತಾ.)**[34]**, ಅಯ್ಯಪ್ಪನಹಳ್ಳಿ, ಕುಮತಿ, ಹಳಸಗ್ರಾಮ, ಹುಲಿಕುಂಟೆ (ಕೂಡ್ಲಗಿ ತಾ.)**[35]**, ಕೋಗಳಿ (ಹಗರಿಬೊಮ್ಮನಹಳ್ಳಿ ತಾ.)**[36]**, ಅಲ್ಲೀಪುರ, ಕೊಟ್ನಕಲ್ಲು, ನವಲಿ, ಮೈಲಾರ, ರಾಜವಾಳ, ಹುಲಿಗುಡ್ಡ (ಹೂವಿನಹಡಗಲಿ ತಾ.)**[37]**, ತೆಲಗಿ, ನೀಲಗುಂದ, ಮಾಡಲಗೇರಿ (ಹರಪನಹಳ್ಳಿ ತಾ.)**[38]**, ಗಂಗಾವತಿ ತಾಲೂಕಿನ ಹಿರೇಬೆನಕಲ್, ಚಿಕ್ಕಬೆನಕಲ್, ಕಡೆಬಾಗಿಲು, ರಾಮದುರ್ಗ ಮೊದಲಾದಡೆ ಈ ಸಂಸ್ಕೃತಿಯ ಕುರುಹುಗಳು ದೊರೆತಿದ್ದು, ಈ ಸಂಸ್ಕೃತಿಯ ಮೇಲೆ ಹೆಚ್ಚಿನ ಬೆಳಕು ಬೀರಿವೆ.

ಸಂಗನಕಲ್ಲು, ಮೈಲಾರ, ಮಾರ್ಗಗಳಲ್ಲಿ ಈ ಹಂತದ ವಾಸ್ತವ್ಯದ ನೆಲೆಗಳನ್ನು ಗುರುತಿಸಲಾಗಿದೆ. ಹೂವಿನಹಡಗಲಿಯಲ್ಲಿ ಕಂಡುಬಂದ ಕಲ್ಗೋರಿಗೆ ವೃತ್ತ ಆಕಾರದ ಕಿಂಡಿ ಇದೆ.**[39]** ನವಲಿಯಲ್ಲಿ ಕಲ್ಮನೆ ಮಾದರಿಯ ಗೋರಿಗಳು, ಹಂಪಸಾಗರದಲ್ಲಿ ಸುಟ್ಟ ಮಣ್ಣಿನ ಶವಪೆಟ್ಟಿಗೆಗೆ ನಾಲ್ಕು ಕಾಲುಗಳಿವೆ.**[40]** ಮಲ್ಲಾಪುರ ಕಳಸ ಗ್ರಾಮಗಳಲ್ಲಿ ಕಿಂಡಿಕೋಣೆ ಮಾದರಿ, ನಿಟ್ಟೂರಿನಲ್ಲಿ ಶವಕುಣಿಗಳು, ಕಪ್ಪಗಲ್ಲಿನಲ್ಲಿ ಶಿಲಾವೃತ್ತಗಳು ಕಂಡುಬಂದಿವೆ. ಹಿರೇಬೆನಕಲ್ಲು ಬೆಟ್ಟದ ಮೇಲಿರುವ ವಿವಿಧ ಆಕಾರದ ಗೋರಿಗಳಿಂದಾಗಿ ಅದು ಒಂದು ಹಾಳು ಗ್ರಾಮದಂತೆ ಗೋಚರಿಸುತ್ತದೆ. ಈ ಕಲ್ಗೋರಿಗಳಲ್ಲಿ ಅಲ್ಲೊಂದು ಇಲ್ಲೊಂದು ಅಪರೂಪವಾಗಿ ಬೃಹದಾಕಾರದ ಕಲ್ಲಿನ ಗೊಂಬೆಗಳಿವೆ. ಚಪ್ಪಟೆ ಕಲ್ಲಿನಲ್ಲಿ ಮನುಷ್ಯಾಕೃತಿಯನ್ನು ಹೋಲುವ ಗೊಂಬೆಗಳನ್ನು ಬಿಡಿಸಲಾಗಿದೆ. ಇಂಥ ಗೊಂಬೆಗಳು ಕರ್ನಾಟಕ, ತಮಿಳುನಾಡು, ಆಂಧ್ರ ಪ್ರದೇಶಗಳಲ್ಲಿ ಸುಮಾರು ೧೬ಕ್ಕಿಂತಲೂ ಹೆಚ್ಚಿನ ಸ್ಥಳಗಳಲ್ಲಿವೆ.**[41]**

ಹಿರೇಬೆನಕಲ್ಲು, ಕುಮತಿ, ಹುಲಿಕುಂಟೆಗಳಲ್ಲಿರುವ ಇಂಥ ಗೊಂಬೆಗಳಿಗೆ ಸಾಮಾನ್ಯವಾಗಿ ಅರ್ಧಗೋಲಾಕೃತಿಯ ತಲೆ, ಕಿರಿದಾದ ಕಂಠ, ಮುಂಚಾಚಿದ ಮೊಂಡು ಭುಜಗಳು, ನೀಳವಾದ ಮುಂಡವಿದೆ. ಬುಡವು ಚೂಪಾಗಿರುತ್ತದೆ. ಹಿರೇಬೆನಕಲ್ಲಿನ ಗೊಂಬೆಯ ತಲೆ ದೊಡ್ಡದು. ಅದರ ಮೂರನೆಯ ಎರಡು ಭಾಗ ಭೂಮಿಯಲ್ಲಿ ಹುದುಗಿದೆ. ಒಬ್ಬ ಮನುಷ್ಯ ರಟ್ಟೆಗಳನ್ನು ಅಡ್ಡಚಾಚಿ ಕೈಗಳನ್ನು ಮೇಲೆತ್ತಿ ನಿಂತಂತಿದೆ.

ಕುಮತಿಯ ಎರಡು ಗೊಂಬೆಗಳು ಒಂದರ ಪಕ್ಕದಲ್ಲೊಂದು ನಿಂತಿವೆ. ಇವುಗಳ ಬದಿಯಲ್ಲಿ ಮತ್ತೆ ಮೂರು ಗೊಂಬೆಗಳಿದ್ದ ಗುರುತುಗಳಿವೆ. ಅಲ್ಲಿಯ ಎಡಭಾಗದ ಶಿಲ್ಪ ೩.೦೨ ಮೀ. ಎತ್ತರ ೨.೪೨ ಮೀ. ಅಗಲ (ಎದೆಭಾಗ), ತಳಭಾಗ ೧.೪೬ ಮೀ.ಅಳತೆಯನ್ನು ಹೊಂದಿದೆ. ಬಲಭಾಗದ ಶಿಲ್ಪ ೩೦೭ ಮೀ. ಉದ್ದ, ೨.೩೯ ಅಗಲ (ಎದೆಭಾಗ), ತಳಭಾಗ ೦.೭೫ ಮೀ. ಅಳತೆಯಲ್ಲಿದೆ. ಅಲ್ಲದೆ ಇವೆರಡರ ನಡುವಿನ ಅಂತರ ೫.೭೫ ಮೀ. ಇದೆ. ಹುಲಿಕುಂಟೆಯಲ್ಲಿ ಕಂಡುಬಂದ ಮೂರು ಮಾನವಾ ಕೃತಿಯ ಗೊಂಬೆಗಳಲ್ಲಿ ಒಂದು ಸುಸ್ಥಿತಿಯಲ್ಲಿದ್ದು, ಇನ್ನೊಂದರ ಅರ್ಧಭಾಗ ಭೂಮಿಯಲ್ಲಿ ಅಡಗಿದೆ. ಸುಸ್ಥಿತಿಯಲ್ಲಿರುವ ಗೊಂಬೆ ೧.೮೨ ಮೀ. ಎತ್ತರ, ೧.೧೯ ಮೀ. ಅಗಲ ಹಾಗೂ ೧೫ ಸೆ.ಮೀ. ದಪ್ಪವಾಗಿದೆ. ಹಡಗಲಿ ಹತ್ತಿರದ ಕೊಟ್ನಕಲ್ಲಿನಲ್ಲಿ ಕಲ್ಗೋರಿಯ ಜೊತೆ ಸುಮಾರು ಎರಡೂವರೆ ಅಡಿ ಎತ್ತರದ ಮಾನವಾಕೃತಿ ಶಿಲೆ ಕಂಡುಬಂದಿದೆ.

ಈ ಸಂಸ್ಕೃತಿಯ ಕಾಲಮಾನವು ಉತ್ತರ ಕರ್ನಾಟಕದಲ್ಲಿ ಕ್ರಿ.ಪೂ. ೧೨೦೦-೧೦೦೦ ಸುಮಾರಿಗೆ ಆರಂಭವಾಗಿ ಕ್ರಿ.ಪೂ. ೨ನೇ ಶತಮಾನದವರೆಗೆ ಪ್ರವರ್ಧಮಾನದಲ್ಲಿ ಇದ್ದಿತ್ತೆಂದು ತಿಳಿಯುತ್ತದೆ. ದಕ್ಷಿಣ ಕರ್ನಾಟಕದಲ್ಲಿ ಈ ಸಂಸ್ಕೃತಿಯು ಕಿ.ಪೂ. ೧೨೦೦-೨೫೦ರ ವರೆಗೆ ಪ್ರವರ್ಧಮಾನ ಹೊಂದಿದ್ದಿತೆಂದು ಗುರುತಿಸಲಾಗಿದೆ.

ಬೃಹತ್ ಶಿಲಾಯುಗ ಹಂತದಿಂದ ಮಾನವನ ಪ್ರಮುಖ ಬೆಳವಣಿಗೆಯಲ್ಲಿ ಕಬ್ಬಿಣ ತಯಾರಿಕೆಯೂ ಒಂದು. ಅಂದಿನಿಂದ ಕಬ್ಬಿಣ ಉತ್ಪಾದನೆ ಕಂಡುಕೊಂಡ ನಂತರ ಸಾಮಾಜಿಕವಾಗಿ ಕ್ರಾಂತಿಕಾರಿ ಬದಲಾವಣೆಯಾಗುತ್ತ ನಡೆಯಿತು. ಜಗತ್ತಿನಾದ್ಯಂತ ಆರಂಭವಾದ ಈ ಕಬ್ಬಿಣ ಉತ್ಪಾದನೆಯ ಕಾಲನಿರ್ಣಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಸಾಮಾನ್ಯವಾಗಿ ದಕ್ಷಿಣ ಭಾರತದಲ್ಲಿ ಬೃಹತ್ ಶಿಲಾಯುಗದ ಅವಧಿಯನ್ನು ಇದಕ್ಕೆ ಕೊಡಲಾಗಿದೆ. ಇದು ಉತ್ತರ ಭಾರತದಿಂದ ದಕ್ಷಿಣಕ್ಕೆ ಹರಡಿತ್ತೆಂದು ನಂಬಲಾಗಿದೆ. ಆದರೆ ಬ್ರಹ್ಮಗಿರಿಯಲ್ಲಿ ಉತ್ಖನನ ಕೈಗೊಂಡ ಮಾರ್ಟಿಮರ್ ವ್ಹೀಲರ್ ಅವರು ಉತ್ತರ ಭಾರತದಲ್ಲಿ ಬಳಕೆಯಲ್ಲಿರುವ ಮೊದಲೇ ಇಲ್ಲಿ ಕಬ್ಬಿಣದ ಉತ್ಪಾದನೆ ನಡೆಯುತ್ತಿತ್ತೆಂದು ಹೇಳಿದ್ದಾರೆ.

ಈ ಪ್ರದೇಶದ ಹೊಸಪೇಟೆ, ಬಳ್ಳಾರಿ, ಸಂಡೂರು ಬೆಟ್ಟಗಳು ಹೇರಳವಾಗಿ ಕಬ್ಬಿಣದ ಅದಿರನ್ನು ಹೊಂದಿವೆ. ಬೃಹತ್ ಶಿಲಾಯುಗದ ಹಂತದಿಂದಲೇ ಇಲ್ಲಿ ಕಬ್ಬಿಣದ ಬಳಕೆ ಆರಂಭವಾದಂತೆ ತೋರುತ್ತದೆ. ಹಿರೇಬೆನಕಲ್ಲಿನ ಕಲ್ಗೋರಿಗಳಲ್ಲಿ ಕಂಡುಬಂದ ಕಬ್ಬಿಣದ ಉಪಕರಣ ಮತ್ತು ಆನೆಗುಂದಿಯಲ್ಲಿ ದೊರೆತ ಕಬ್ಬಿಣದ ಕಿಟ್ಟ ಇದಕ್ಕೆ ಪುಷ್ಟಿ ನೀಡುತ್ತವೆ. ಹಿರೇಬೆನಕಲ್ಲಿನ ಉಪಕರಣವನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಿದಾಗ ಅದು ಸಂಡೂರು ಅದಿರಿನಿಂದ ಕ್ರಿ.ಪೂ. ೧೧೦೦ರಲ್ಲಿ ತಯಾರಾದುದೆಂದು ನಿರ್ಧರಿಸಲಾಗಿದೆ.

ರಾಮಾಯಣ ಮಹಾಕಾವ್ಯದಲ್ಲಿ ಉಲ್ಲೇಖಿತ ಕಾರ್ತಿಕೇಯ ವನ ಶಸ್ತ್ರಾಸ್ತ್ರ ನಿರ್ಮಾಣ ಕಾರ್ಯದಲ್ಲಿ ಪ್ರಮುಖವಾಗಿದ್ದಂತೆ ತೋರುತ್ತದೆ. ಅಲ್ಲದೆ ನಂತರದ ಕುಡಿತಿನಿ ಶಾಸನಗಳೂ ಇದಕ್ಕೆ ಪುರಾವೆ ನೀಡುತ್ತವೆ. ಈ ಪ್ರದೇಶದ ಗೊಲ್ಲರಹಳ್ಳಿ, ನಂದಿಬಂಡಿಗಳಲ್ಲಿ ದೊರೆತ ಅವಶೇಷಗಳು ನಿರಂತರವಾಗಿ ಕಬ್ಬಿಣದ ಉತ್ಪಾದನೆ ನಡೆದ ಬಂದಿರುವುದನ್ನು ಸೂಚಿಸುತ್ತವೆ. ಗೊಲ್ಲರಹಳ್ಳಿಯಲ್ಲಿ ಕ್ರಿ.ಶ. ೧೪-೧೭ನೆಯ ಶತಮಾನ ಇಲ್ಲವೇ ಅದಕ್ಕೂ ಪೂರ್ವದಲ್ಲಿ ನಡೆದ ಕಬ್ಬಿಣ ಉತ್ಪಾದನೆಯಿಂದ ದೊಡ್ಡ ದಿಬ್ಬವೇ ಉಂಟಾಗಿದೆ. ನಂದಿಬಂಡಿಯಲ್ಲಿ ಕಬ್ಬಿಣದ ಅದಿರು ಕರಗಿಸಿ ಲೋಹದ ರಸವನ್ನು ಸಂಗ್ರಹಿಸುತ್ತಿದ್ದ ಬಟ್ಟಲುಗಳು ಮತ್ತು ಕುಲುಮೆ ಅವಶೇಷಗಳು ಕಂಡುಬಂದಿವೆ. ಇದರಿಂದ ಬೆಟ್ಟದ ಆಶ್ರಯದಲ್ಲಿ ಅಲ್ಲಲ್ಲಿ ಕಬ್ಬಿಣದ ಉತ್ಪಾದನೆ ಆಗುತ್ತಿರುವುದು ಇಲ್ಲಿಯ ಅನೇಕ ನೆಲೆಗಳಿಂದ ಕಂಡುಕೊಳ್ಳಬಹುದು.

ಆದಿಮ ಸಂಸ್ಕೃತಿಯು ಕಾಲದಿಂದ ಕಾಲಕ್ಕೆ ಈ ಮೇಲಿನ ರೀತಿ ವಿಕಾಸ ಹೊಂದಿತ್ತೆಂಬುದನ್ನು ಮೇಲಿನ ವಿವರಗಳಿಂದ ತಿಳಿಯಬಹುದಾಗಿದೆ.

—

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

[1] ವೀಲರ್ ಆರ್.ಇ.ಎಂ. ೧೯೪೮

[2] ದಾಪುರ ೧೯೬೫

[3] ಆಲ್ಚಿನ್ ೧೯೬೦

[4] ನಾಗರಾಜರಾವ್ ಮತ್ತು ಮಲ್ಹೋತ್ರ, ೧೯೬೫

[5] ಮಂಜುಂದಾರ್ ಮತ್ತು ರಾಜಗುರು, ೧೯೬೫

[6] ನಾಗರಾಜರಾವ್, ೧೯೭೧

[7] ಶೇಷಾದ್ರಿ ಎಂ, ೧೯೭೧

[8] ಪದ್ದಯ್ಯ, ೧೯೭೩

[9] ಹನುಮಂತರಾವ್ ಮತ್ತು ನಾಗರಾಜು.ಎಸ್೧೯೭೪

[10] ಇಂ.ಆ.ರಿ. ೧೯೮೩-೮೪:೮೨-೪೬,೧೯೮೫-೮೬ : ಮತ್ತು ೧೯೮೬-೮೭

[11] ಪೂಣಚ್ಚ ಕೆ.ವಿ. ೧೯೯೦:೪೪೭

[12] ಶಿವತಾರಕ್ ಕೆ.ಬಿ. ೧೯೯೯:೩೪೨

[13] ಅ. ಕಕ್ಕಬೇವಿನಹಳ್ಳಿ : Paddayya K., Investigation in to the Neolithic Culture of Shorapur Doab, South India,

ಆ. ಕುಡತಿನಿ : Allchin F.R., Neolithic Cattle-Keepers of South India,

ಇ. ಕಪ್ಪಗಲ್ಲು : Mujumdar G.G. & Rajguru, S.N., Ash Mound Excavations at Kappgal P. 67-69 A.I-೪, ೧೯೪೭-೭೮.

ಈ. ಬೆಳಗಲ್ಲು : Foot R.B., Indi, Pre-Proto Ant.

ಉ. ಸಂಗನಕಲ್ಲು : Subba Rao B., Stone Age Culture of Bellary

ಊ. ಹಳಕುಂದಿ : Foot R.B., Indi, Pre-Proto Ant. And I.A.R., ೧೯೫೯-೬೦,

ಎ. ಹಳೆನೆಲ್ಲುಡಿ : ಇ.ದ. ೧೧, ೧೯೯೬

[14] ಅ. ಇಂಗಳಗಿ : I.A.R., ೧೯೯೩-೯೪

ಆ. ಕಾಕುಬಾಳು

ಇ. ಗಾದಿಗನೂರು

ಈ. ತಿಮ್ಮಲಾಪುರ : ಪತ್ರಿಕೆ ವರದಿ, ಕನ್ನಡ ಪ್ರಭ, ೧೪.೦೮.೧೯೯೮

ಉ. ಡಣಾಪುರ : I.A.R., ೧೯೯೩-೯೪

ಊ. ಬೆಳಗೋಡಹಾಳ : Foot R.B., Indi, Pre-Proto Ant. I.A.R., ೧೯೬೨-೬೩,

ಎ. ವೆಂಕಟಾಪುರ : ಅದೇ ೧೯೬೫-೬೬, ಮತ್ತು ೧೯೮೪-೮೫,

[15] ಅ. ಕೊಂಚಗೇರಿ : Foot R.B., Indi, Pre-Proto Ant.

ಆ. ತೆಕ್ಕಲಕೋಟೆ : Nagatraj Rao M.S., & Malhotra K.C., The Stone Age Hill Dwellers of Tekkalakota

ಇ. ನಿಟ್ಟೂರು : Ansari Z.D., Indian Antiquary 3rd Series, and Sankalia, H.D., Pre-Proto. India & Pakistan

ಈ. ಸನವಾಸಪುರ : Foot R.B., Ind Pre-Prot. Ant.

[16] ಅ. ಇಂಗಳ್ಗಿ : I.A.R., ೧೯೮೭-೮೮,

ಆ. ಲಿಂಗದಹಳ್ಳಿ : Foot R.B., Ind Pre-Prot. Ant.

[17] ರಾಮದುರ್ಗ : ಅದೇ ಮತ್ತು A.S.I., S.R., ೧೯೩೦-೩೪

[18] ಅಲ್ಲೀಪುರ : ಇ.ದ. ೧೪, ೧೯೯೯,

[19] ಅ. ಮಾಡಲಗೇರಿ : ೧೯೯೮,

[20] A.I. Vol. ೪

[21] ಸುಂದರ ಅ. (ಸಂ), ಕರ್ನಾಟಕ ಚರಿತ್ರೆ, ಸಂ.೧ ಪು. ೧೫೪

[22] ಅ. ಕುಡತಿನಿ : Foot R.B., Ind Pre-Prot. Ant.And Allchin F.R., Neolithic Cattle-Keepers of South India,

ಆ. ಕಪ್ಪಗಲ್ಲು : Foot R.B., Ind Pre-Prot. Ant.A.I.-೪, ೧೯೪೭-೪೮,

ಇ. ಕುಡತಿನಿ : Foot R.B., Ind Pre-Prot. Ant.

ಈ. ಬಳ್ಳಾರಿ : Foot R.B., Ind Pre-Prot. Ant.

[23] ಅ. ಗಾದಿಗನೂರು ಮತ್ತು A.I.A. ೧೯೯೩-೯೪

ಆ. ಗುಡಿಓಬಳಾಪುರ : I.A.R., ೧೯೯೩-೯೪,

ಇ. ಹಂಪಿ : ಅದೇ, ೧೯೭೬-೭೭,

ಈ. ನಿಂಬಾಪುರ : Foot R.B., Ind. Pre-Proto. Ant., Allchin F.R., Neolithic Cattle-Keepers of South India,

ಉ. ಬೆಳಗಲ್ಲು : ಸುಂದರ ಅ., ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ,

ಊ. ಬೆಳಗೋಡಹಾಳು : Foot R.B., Ind Pre-Prot. Ant.

ಎ. ವೆಂಕಟಾಪುರ : I.A.R. ೧೯೬೫-೬೬

ಏ. ಹಳಕುಂಡಿ : ಸುಂದರ ಅ., ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ,

[24] ಅ. ತೆಕ್ಕಲಕೋಟೆ : ಇ.ದ., ೧೧, ೧೯೯೬,

[25] ಅ. ದರೋಜಿ : I.A.R., ೧೯೮೭-೮೮,

ಆ. ಭೈರನಾಯಕನಹಳ್ಳಿ : ಸುಂದರ ಅ., ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ,

ಇ. ರಾಜಾಪುರ

[26] ಅಯ್ಯಪ್ಪನಹಳ್ಳಿ

[27] ಹಂಪಸಾಗರ : Foot R.B., Ind Pre-Prot. Ant.

[28] ಅಲ್ಲೀಪುರ : ಇದ., 14, 1999,

[29] ಅ. ಕಪ್ಪಗಲ್ಲು ಸುಂದರ ಅ., ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ

ಆ. ಕುರುಗೋಡು

ಇ. ಸಂಗನಕಲ್ಲು : Subba Rao B., Stone Age Culture of Bellary

[30] ಹಳಕುಂಡಿ : ಸುಂದರ ಅ., ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ,

[31] ನಿಟ್ಟೂರು : Ansari Z.D., India Antiquary 3rd Series

[32] ಮಲ್ಲಾಪುರ : I.A.R., ೧೯೮೭-೮೮,

[33] ಅಯ್ಯಪ್ಪನಹಳ್ಳಿ : ಸುಂದರ ಅ., ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ, ಕುಮತಿ : ಅದೇ, ಇ.ದ., ೧೪, ೧೯೯೯,

ಇ. ಹಳಸಗ್ರಾಮ : Tylor M., Megalithic Tombs and other remains in Decan

ಈ. ಹುಲಿಕುಂಟೆ : ಪತ್ರಿಕಾ ವರದಿ ಪ್ರಜಾವಾಣಿ ೫.೦೩.೧೯೯೮

[34] ಅ. ಕೋಗಳಿ : ಇ.ದ., ೧೩, ೧೯೯೮.

[35] ಅಲ್ಲೀಪುರ : ಇ.ದ., ೧೪, ೧೯೯೯,

ಆ. ಕೊಟ್ನಕಲ್ಲು : ಅದೇ ೧೩, ೧೯೯೯,

ಇ. ನವಲಿ

ಈ. ಮೈಲಾರ

ಉ. ರಾಜವಾಳ ೧೯೯೯,

ಊ. ಹುಲಿಗುಡ್ಡ ೧೯೯೮,

ಎ. ಹೂ.ಹಡಗಲಿ

[36] ಅ. ತೆಲಗಿ Subba Rao B., Protohistoric and Early Histortic Ballary

ಆ. ನೀಲಗುಂದ : Sundara S., Early Chember Tomb

ಇ. ಭುವನಹಳ್ಳಿ : I.A.R., ೧೯೯೩-೯೪,

[37] ಇ.ದ., ೧೩, ೧೯೯೯,

[38] Foote R.B., Ind. Pre-Proto. Ant.,

[39] ಸುಂದರ ಅ.(ಸಂ), ಕರ್ನಾಟಕ ಚರಿತ್ರೆ, ಸಂ.೧ ೧೯೯೯,

[40] A.I. Vol. ೪

[41] Mudhol M.S., A Technical Study of Matal Objects from South Indian Megalithics (ph.D. Thesis)

## ೪. ಹಂಪಿ ಪರಿಸರದ ಆದಿಮಾನವನ ನೆಲೆಗಳು

(೧)

ಭಾಸ್ಕರ ಕ್ಷೇತ್ರ, ಕಿಷ್ಕಿಂದ, ಪಂಪಾತೀರ್ಥ, ವಿಜಯನಗರ ಎಂದೆಲ್ಲ ಕರೆಯಿಸಿಕೊಳ್ಳುವ ಹಂಪಿ ಬಹುಪ್ರಾಚೀನ ಕಾಲದಿಂದಲೂ ತನ್ನ ಪ್ರಾಮುಖ್ಯತೆಯನ್ನು ಉಳಿಸಿಕೊಂಡಿದೆ. ದೇಶದ ಇತರೆಡೆಯಂತೆ ಹಂಪಿ ಪರಿಸರದಲ್ಲೂ ಬಹುಪ್ರಾಚೀನ ಕಾಲದಿಂದಲೂ ಮನುಷ್ಯ ವಾಸಿಸಿದ್ದಕ್ಕೆ ಸಾಕಷ್ಟು ಪುರಾವೆಗಳಿವೆ. ಇಲ್ಲಿನ ಮೊಸಳಯ್ಯನಗುಡ್ಡ, ಕಿಷ್ಕಿಂದ, ವಾಲಿಕಾಷ್ಠ, ವಾಲಿಭಂಡಾರ ಎನ್ನುವ ಹೆಸರುಗಳೇ ಹಂಪಿಯ ಪ್ರಾಚೀನತೆಯನ್ನು ಸೂಚಿಸುತ್ತವೆ. ಕೇವಲ ಹಂಪಿಯಲ್ಲಿ ಅಲ್ಲದೆ ಅದರ ಸುತ್ತಲಿನ ಹಲವಾರು ಪ್ರದೇಶಗಳಲ್ಲಿ ನಡೆಸಿದ ಹಲವಾರು ಅನ್ವೇಷಣೆ ಮತ್ತು ಕೆಲ ಉತ್ಖನನದ ಫಲವಾಗಿ ಆದಿಮಾನವನ ಹಲವಾರು ತಾಣಗಳು ಬೆಳಕಿಗೆ ಬಂದಿವೆ.

ಶಿಲಾಯುಗದ ಮಾನವನು ಹಂಪಿ ಪರಿಸರವನ್ನು ತನ್ನ ನಿವಾಸಕ್ಕಾಗಿ ಆರಿಸಿಕೊಳ್ಳಲು ಇಲ್ಲಿಯ ನಿಸರ್ಗದತ್ತ ಪರಿಸರವೇ ಮುಖ್ಯ ಕಾರಣ. ಈ ಭಾಗವನ್ನು ದೊಡ್ಡ, ಚಿಕ್ಕ ಬಂಡೆಗಳು, ಗುಂಡುಗಳು, ಬೆಟ್ಟಗಳು ಆವರಿಸಿವೆ. ಇಲ್ಲಿನ ವಿಸ್ತಾರವಾದ ಹಾಸು ಬಂಡೆಗಳ ನಡುವೆ ಗುಹೆಗಳಿದ್ದು, ಆ ಕಾಲದ ಮಾನವನಿಗೆ ಅನುಕೂಲಕರವಾದ ನೆರಳಾಶ್ರಯವನ್ನು ಒದಗಿಸಿದ್ದವು. ಅಲ್ಲದೇ ಎಂದೂ ಬತ್ತದೇ ಸತತವಾಗಿ ಹರಿಯುವ, ನೀರಿನಿಂದ ಇರುವ ತುಂಗಭದ್ರಾ ನದಿ ಮತ್ತು ಅದನ್ನು ಕೂಡಿಕೊಳ್ಳುವ ಚಿಕ್ಕ ಚಿಕ್ಕ ಹಳ್ಳ, ತೊರೆಗಳಿಂದ ಅವನಿಗೆ ಜೀವನಾವಶ್ಯದಲ್ಲೊಂದಾದ ನೀರು ಸಾಕಷ್ಟು ದೊರೆಯುತ್ತಿತ್ತು. ಹಳ್ಳ, ಕೊಳ್ಳ, ಕಣಿವೆ, ಗುಡ್ಡ, ಗುಹೆ ಮುಂತಾದವುಗಳಲ್ಲಿ ಶಿಲಾಯುಗದ ಮಾನವನು ಬದುಕಲು ಅವಶ್ಯವಾಗಿ ಬೇಕಾದ ಮರ, ಬಳ್ಳಿ ಎಲೆ, ಗಡ್ಡೆ, ಗೆಣಸು, ಹಣ್ಣು, ನೀರು ಮುಂತಾದವು ವಿಪುಲವಾಗಿ ಹಾಗೂ ಸುಲಭವಾಗಿ ದೊರೆಯುತ್ತಿದ್ದವು. ಮತ್ತು ತನ್ನ ಉಪಯೋಗಕ್ಕೆ ಬೇಕಾದ ಕಲ್ಲಿನ ಆಯುಧಗಳನ್ನು ನಿರ್ಮಿಸಲು ಬೇಕಾದ ಗಟ್ಟಿಯಾದ ಕಲ್ಲುಗಳು, ಬೆಣಚುಕಲ್ಲುಗಳು, ಡೈಕ್ ಹಾಗು ಆಯುಧಗಳ ತಯಾರಿಕೆಗೆ ಬೇಕಾದ ವಿವಿಧ ಲೋಹ, ಅದಿರು (ಕಬ್ಬಿಣ, ತಾಮ್ರ ಇತರೆ) ಮುಂತಾದವುಗಳು ಹೇರಳವಾಗಿ ಇದೇ ಸ್ಥಳದಲ್ಲಿ ಸಮೀಪದಲ್ಲಿಯೇ ಲಭಿಸುತ್ತಿದ್ದವು. ಅಲ್ಲಲ್ಲಿ ಕಂಡುಬರುವ ಚಾವಣಿಯ ರೂಪದ ಬಂಡೆಗಳು ಅವನನ್ನು ಮಳೆ, ಗಾಳಿ, ಬಿಸಿಲುಗಳಿಂದ ರಕ್ಷಿಸುತ್ತಿದ್ದವು. ಮತ್ತು ವಿಶ್ರಾಂತಿ ಸಮಯದ ಚಟುವಟಿಕೆಗಳಿಗೆ ಅನುಕೂಲ ತಾಣಗಳಾಗಿದ್ದವು. ಈ ಎಲ್ಲ ಕಾರಣಗಳಿಂದಾಗಿ ಹಂಪಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳು ಆದಿ ಮಾನವನ ಚಟುವಟಿಕೆಯ ಕೇಂದ್ರವಾಗಲು / ಮುಖ್ಯ ಕಾರಣವಾದವು. ಆದರೆ ಈ ಸಂಸ್ಕೃತಿಯ ಕುರುಹುಗಳು ನಿರೀಕ್ಷಿಸಿದಷ್ಟು ಹೇರಳವಾಗಿ ಈ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣಬರುತ್ತಿಲ್ಲ. ಶಿಲಾಯುಗದ ನಂತರ ಆದಿ ಮತ್ತು ಪ್ರಾಚೀನ ಹಾಗೂ ಮಧ್ಯಮ ಯುಗಗಳಲ್ಲಿ ಹಂಪಿಯನ್ನೊಳಗೊಂಡಂತೆ ಇತರೆ ನೆಲೆಗಳು ಧಾರ್ಮಿಕ ಮತ್ತು ರಾಜಕೀಯ ಕೇಂದ್ರವಾಗಿ ಪ್ರಗತಿ ಹೊಂದಿದವು. ಪರಿಣಾಮವಾಗಿ ಮಾನವನ ಚಟುವಟಿಕೆಗಳು ಅಧಿಕವಾದವು. ಇದರಿಂದಾಗಿ ಶಿಲಾಯುಗದ ಸಂಸ್ಕೃತಿಯ ಅವಶೇಷಗಳು ಅನೇಕ ವೇಳೆ ಸ್ಥಳ ಪಲ್ಲಟವಾಗಿ ಹಾಳಾಗಿರಬೇಕು ಅಥವಾ ಮಣ್ಣಿನ ಪದರುಗಳಲ್ಲಿ ಹೂತು ಹೋಗಿರಬೇಕು. ಇಲ್ಲವೇ ಮಾನವನ ನಿಧಿ ಶೋಧದ ದಾಹದಿಂದಾಗಿ, ಆದಿಮಾನವನಿಗೆ ಸಂಬಂಧಿಸಿದ ಹಲವಾರು ಅವಶೇಷಗಳು ಕಣ್ಮರೆಯಾದವು. ಕೆಲವು ನೆಲೆಗಳು ಅವಸಾನಗೊಂಡವು. ಆದರೂ ಪುರಾತತ್ವವಿದರ ನಿರಂತರ ಅನ್ವೇಷಣೆ ಮತ್ತು ಉತ್ಖನನ ಕಾರ್ಯಕೈಗೊಂಡು ಅಳಿದುಳಿದ

ಅವಶೇಷಗಳನ್ನು ಆಧಾರವಾಗಿಟ್ಟುಕೊಂಡು ಹಲವು ನಿವೇಶನಗಳನ್ನು ಬೆಳಕಿಗೆ ತಂದಿದ್ದಾರೆ. ಇನ್ನೂ ಹೆಚ್ಚಿನ ಸಂಶೋಧನೆಯನ್ನು ಈ ಪರಿಸರದಲ್ಲಿ ನಡೆಸಿದರೆ ಮತ್ತಷ್ಟು ನೆಲೆಗಳು ದೊರೆಯುವ ಸಾಧ್ಯತೆ ಇದೆ.

ಹಂಪಿ ಪರಿಸರ ಎನ್ನುವುದು ಕೇವಲ ಹಂಪಿಗಷ್ಟೇ ಸೀಮಿತವಾಗಿರದೆ, ಅದರ ಸುತ್ತಲಿನ ಸು.೧೦೦ ಕಿ.ಮೀ.ವರೆಗಿನ ಪ್ರದೇಶವನ್ನು ಅಧ್ಯಯನಕ್ಕಾಗಿ ಗುರುತಿಸಿಕೊಳ್ಳಲಾಗಿದೆ. ಅಧ್ಯಯನದ ಅನುಕೂಲಕ್ಕಾಗಿ ಈ ಒಟ್ಟು ಪ್ರದೇಶ ಮತ್ತು ಅದರಲ್ಲಿನ ಎಲ್ಲ ನೆಲೆಗಳನ್ನು ಒಟ್ಟುಗೂಡಿಸಿ ಕೋರ್, ಬಪ್ಪರ್ ಎಂಬ ಎರಡು ಜೋನ್(ವಲಯ)ಗಳನ್ನಾಗಿ ವಿಭಾಗಿಸಿ ಅಧ್ಯಯನ ಮಾಡಲಾಗಿದೆ. ಈ ವ್ಯಾಪ್ತಿಯಲ್ಲಿ ಬಳ್ಳಾರಿ, ಕೊಪ್ಪಳ ಹಾಗೂ ಚಿತ್ರದುರ್ಗ ಜಿಲ್ಲೆಯ ಕೆಲ ನೆಲೆಗಳು ಬರುತ್ತವೆ. ಈ ಪರಿಸರದಲ್ಲಿ ಸು. ೧೨೦ಕ್ಕಿಂತಲೂ ಅಧಿಕ ನೆಲೆಗಳಲ್ಲಿ ಆದಿಮಾನವ ಬಿಟ್ಟು ಹೋದ ಅವಶೇಷಗಳು ಪ್ರಾಪ್ತವಾಗಿದ್ದು, ಇವು ಆದಿಮಾನವನ ಈ ಅನ್ವೇಷಿತ ಮತ್ತು ಉತ್ಖನನ ಹಾಗು ಕಲಾತ್ಮಕ ನೆಲೆಗಳು ಸೇರಿದ್ದು ಅವು ಕೋರ್ ಮತ್ತು ಬಪ್ಪರ್ ವಲಯಗಳ ಮಿತಿಯಲ್ಲಿ ಬರುತ್ತವೆ. ಆ ಎಲ್ಲ ನೆಲೆಗಳನ್ನು ಈ ಮುಂದಿನಂತೆ ವಿಭಾಗಿಸಿಕೊಂಡು ಅಧ್ಯಯನ ಮಾಡಬಹುದಾಗಿದೆ.

೧. ಅನ್ವೇಷಣಾ ನೆಲೆಗಳು, ೨. ಉತ್ಖನನ ನೆಲೆಗಳು, ೩. ಕಲಾತ್ಮಕ ನೆಲೆಗಳು.

**೪.೧ ಅನ್ವೇಷಣಾ ನೆಲೆಗಳು**

ರಾಜ್ಯದ ವಿಶ್ವವಿದ್ಯಾಲಯಗಳ ಸಂಶೋಧಕರು, ವಿದ್ವಾಂಸರು ಹವ್ಯಾಸಿ ಸಂಶೋಧಕರು ಹಂಪಿ ಪರಿಸರದಲ್ಲಿ ಸು. ೯೮ಕ್ಕಿಂತಲೂ ಹೆಚ್ಚು ನೆಲೆಗಳನ್ನು ಗುರುತಿಸಿ ಬೆಳಕಿಗೆ ತಂದಿದ್ದಾರೆ. ಅವರೆಲ್ಲರ ಕಾರ್ಯ ಇಲ್ಲಿ ಶ್ಲಾಘನೀಯ. ಸುಮಾರು ೧೦೦ ಕಿ.ಮೀ. ವ್ಯಾಪ್ತಿಯಲ್ಲಿ ಆದಿಮಾನವ ಹಿಂದೆ ವಾಸಿಸಿ ಬಿಟ್ಟು ಹೋಗಿದ್ದ ಹಲವು ಅವಶೇಷಗಳನ್ನು ಗುರುತಿಸಿದ್ದಾರೆ. ಅಲ್ಲದೆ ಈ ಯೋಜನಾವಧಿಯಲ್ಲಿ ೧೦ ಹೊಸ ಪ್ರದೇಶಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡು, ಅಲ್ಲಿ ಆದಿಮಾನವನ ಅವಶೇಷಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಬಳ್ಳಾರಿ ಜಿಲ್ಲೆಗೆ ಸೇರಿದ ಹಂಪಿ, ಕಮಲಾಪುರ, ಕುಮತಿ, ಹುಲಿಕುಂಟೆ, ಕುರುಗೋಡು, ಮೈಲಾರ, ಹಳೆನಲ್ಲುಡಿ, ಕುಡತಿನಿ, ವೆಂಕಟಾಪುರ, ಬುಕ್ಕಸಾಗರಗಳು ಮತ್ತು ಅದೇ ರೀತಿ ಇಂದಿನ ಕೊಪ್ಪಳ ಜಿಲ್ಲೆಯ ಆನೆಗುಂದಿ, ಕಡೆಬಾಗಿಲು, ಹಿರೇಬೆನಕಲ್, ಮಲ್ಲಾಪುರ, ಲಕ್ಷ್ಮೀಪುರ, ಅಂಜನಹಳ್ಳಿ, ರಾಂಪುರ ಮೊದಲಾದವು ಪ್ರಮುಖವಾಗಿವೆ. ಈ ಪ್ರತಿ ನೆಲೆಗಳಲ್ಲಿ ದೊರೆತ ಅವಶೇಷಗಳನ್ನು ಹಾಗು ಅವುಗಳ ಮಹತ್ವವನ್ನು ಬಳ್ಳಾರಿ ಜಿಲ್ಲೆಯ ಮತ್ತು ಕೊಪ್ಪಳ ಜಿಲ್ಲೆಯ ನೆಲೆಗಳೆಂದು ಪ್ರತ್ಯೇಕವಾಗಿ ವಿಭಾಗಿಸಿಕೊಂಡು ಮುಂದಿನಂತೆ ಅಧ್ಯಯನ ಮಾಡಲಾಗಿದೆ.

**ಎ. ಬಳ್ಳಾರಿ ಜಿಲ್ಲೆಯ ನೆಲೆಗಳು :** ಜಿಲ್ಲೆಯ ವಿವಿಧೆಡೆ ಆದಿಮಾನವನ ಹಲವು ನೆಲೆಗಳಿದ್ದು, ಅವುಗಳನ್ನು ಸಂಕ್ಷಿಪ್ತವಾಗಿ ಅಧ್ಯಯನ ಮಾಡಲಾಗಿದ್ದು, ಆ ವಿವರ ಮುಂದಿದೆ.

**೧. ಹಂಪಿ :** ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಹಂಪಿಯು ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಇದನ್ನು ಭಾಸ್ಕರ ಕ್ಷೇತ್ರ, ಪಂಪಾತೀರ್ಥ, ದಕ್ಷಿಣಕಾಶಿ ಮುಂತಾಗಿ ಕರೆಯುತ್ತಾರೆ. ಇಲ್ಲಿ ಶಿಲಾಯುಗದ ಮಾನವನ ಕೆಲವು ಅವಶೇಷಗಳು ದೊರೆತಿದ್ದು, ಅವನು ಇಲ್ಲಿ ವಾಸಿಸಿದ್ದ ಎಂಬುದಕ್ಕೆ ಸ್ಪಷ್ಟ ಪುರಾವೆಗಳಾಗಿವೆ. ಕ್ರಿ.ಶ. ೧೮೮೨ರಲ್ಲಿ ರಾಬರ್ಟ್‌ಬ್ರೂಸ್‌ಫೂಟ್ ಎಂಬ ಆಂಗ್ಲ ಅಧಿಕಾರಿಯು ಹಂಪಿಯು ನವಶಿಲಾಯುಗದ ಮನುಷ್ಯನ ನಿವಾಸಗಳಲ್ಲೊಂದಾಗಿತ್ತೆಂದು ಬರೆದಿದ್ದಾನೆ. ಹಂಪಿಯ ವಿವಿಧ ನೆಲೆಗಳಲ್ಲಿ ಆದಿಮಾನವನಿಗೆ ಸಂಬಂಧಿಸಿದ ಅವಶೇಷಗಳು ದೊರೆತಿದ್ದು, ಅವುಗಳನ್ನು ಮುಂದಿನಂತೆ ಅಧ್ಯಯನ ಮಾಡಬಹುದು.

**ಅ. ಮೊಸಳಯ್ಯನಗುಡ್ಡ :** ಇದು ತುಂಗಭದ್ರಾ ನದಿಯ ಬಲದಂಡೆಯ ಮೇಲಿರುವ ಹಂಪಿಯ ವಿಠ್ಠಲ ದೇವಸ್ಥಾನದ ಸಮೀಪದಲ್ಲಿದೆ. ಇಲ್ಲಿ ಕೈಯಿಂದ ಮಾಡಿದ ಮಡಕೆಗಳ ಚೂರುಗಳು ಸಹ ದೊರೆತಿವೆ. ಅವು ಒಂದು ವಿಧವಾದ ಕಂದು ಬಣ್ಣದಲ್ಲಿದ್ದು ವಿವಿಧ ಆಕಾರಗಳಲ್ಲಿವೆ. ಬಾಚಿಗಳು, ಕೊಡಲಿಗಳು ಮತ್ತು ಕುಟ್ಟುವ ಸಾಧಾನಗಳು ವಿವಿಧ ನಿರ್ಮಾಣದ ಹಂತಗಳಲ್ಲಿರುವ ಆಯುಧಗಳು ಸಹ ದೊರೆತಿವೆ. ಇದೇ ನೆಲೆಯ ಸಮೀಪ ತುಂಗಭದ್ರಾ ನದಿಯ ಆಚೆ ದಂಡೆಯಲ್ಲಿಯ ಆನೆಗುಂದಿಯಲ್ಲಿಯೂ ಸಹ ನವಶಿಲಾಯುಗದ ಅವಶೇಷಗಳು ದೊರೆತಿದ್ದು, ಈ ಸಂಸ್ಕೃತಿಯನ್ನು ಅರಿಯಲು ಪೂರಕವಾಗಿವೆ. ಇಲ್ಲಿಯೇ ವರ್ಣಚಿತ್ರಗಳನ್ನು ಗುರುತಿಸಲಾಗಿದೆ. ಈ ಚಿತ್ರಗಳನ್ನು

ಕಂದು, ಕೆಂಪು ಬಣ್ಣಗಳಲ್ಲಿ ಬರೆಯಲಾಗಿದೆ. ಇಲ್ಲಿ ಮಾನವನ ಹಾಗೂ ವನ್ಯಮೃಗಗಳ ಚಿತ್ರಗಳಿವೆ. ವನ್ಯಮೃಗಗಳೆಂದರೆ ಕಾಡುಕೋಣ, ಹುಲಿ, ಚಿಗರೆ, ಚಿರತೆ ಮುಂತಾದವುಗಳಿವೆ. ಪಕ್ಕದಲ್ಲಿಯೇ ಕೆಲವು ಮಾನವರು ಒಂದು ವಿಧವಾದ ಸಮೂಹ ನೃತ್ಯದಲ್ಲಿ ಭಾಗಿಗಳಾಗಿರುವುದನ್ನು ನೋಡಬಹುದು. ಇತರೆ ಚಿತ್ರಗಳ ವಿನ್ಯಾಸಗಳೆಂದರೆ ಬೇಟೆಯಾಡುವ ದೃಶ್ಯ. ಒಂದು ರೀತಿಯ ಆರಾಧನಾ ನೃತ್ಯ, ಮತ್ತಿತರ ವನ್ಯಮೃಗಗಳ ಚಿತ್ರಗಳಿದ್ದು, ಅತ್ಯಂತ ಮಹತ್ವವಾಗಿವೆ. ಈ ವರ್ಣಚಿತ್ರಗಳು ಆಕೃತಿ, ವಿನ್ಯಾಸ, ಬಳಸಲಾದ ಬಣ್ಣಗಳು, ಕಥಾವಸ್ತು ಮತ್ತು ರೂಪ ನಿರೂಪಣಾ ದೃಷ್ಟಿಯಿಂದ ಇತರೆಡೆ ದೊರೆತ ಚಿತ್ರಗಳಿಗೆ ಹೋಲಿಕೆಯಾಗುತ್ತವೆ.[1]

**ಆ. ಚಕ್ರತೀರ್ಥ :** ಇಲ್ಲಿನ ಬಂಡೆ ಚಾವಣಿಗಳ ಒಳಭಾಗದ ಮೇಲೆ ಶಿಲಾಯುಗದ ಮಾನವನು ತನ್ನ ವಿರಾಮ ಸಮಯದಲ್ಲಿ ಬಿಡಿಸಿರುವ ವರ್ಣ ಚಿತ್ರಗಳಿವೆ. ಇವುಗಳನ್ನು ನವಶಿಲಾಯುಗದ ಮಾನವನು ತನ್ನ ಮನರಂಜನೆಗಾಗಿಯೋ ಅಥವಾ ತನ್ನ ಭಾವನೆಗಳಿಗೆ ಒಂದು ರೂಪು ಕೊಡಲು ಚಿತ್ರಿಸಿದ್ದಿರಬೇಕು. ಇವುಗಳಲ್ಲಿ ಒಂದು ಕಡೆ ಬೃಹದಾಕಾರದ ಪಕ್ಷಿಯೊಂದು, ಬೃಹಾದಾಕಾರದ ಮಾನವ ದೇಹವನ್ನು ತನ್ನ ಚುಂಚುವಿನಿಂದ ಕುಕ್ಕುತ್ತಿರುವಂತೆ ತೋರಿಸಲಾಗಿದೆ. ಇವುಗಳ ದೇಹದ ಭಾಗವನ್ನು ಅಡ್ಡಡ್ಡಗೆರೆಗಳಿಂದ ಕಂದು, ಕೆಂಪು ಬಣ್ಣಗಳಲ್ಲಿ ತುಂಬಲಾಗಿದೆ. ಇಲ್ಲಿಯೇ ಕಠಾರಿ ರೀತಿಯ ಚಿತ್ರವೊಂದನ್ನು ಬಿಡಿಸಿರುವುದು ವಿಶೇಷವಾಗಿದೆ.

**ಇ. ಗಾಯತ್ರಿಪೀಠ :** ಪ್ರಕಾಶನಗರದಿಂದ ಗಾಯತ್ರಿಪೀಠಕ್ಕೆ ಹೋಗುವ ದಾರಿಯ ಬಲಭಾಗಕ್ಕಿರುವ ಬಂಡೆಯ ಮೇಲೆ ಕಂದು, ಕೆಂಪು ಬಣ್ಣದಿಂದ ಚಿತ್ರಿಸಿದ ವರ್ಣ ಚಿತ್ರಗಳಿವೆ. ಇದರಲ್ಲಿ ಕಡವೆ, ಜಿಂಕೆಯಂತಹ ಪ್ರಾಣಿ, ಮನುಷ್ಯರ ಚಿತ್ರಗಳಿವೆ.

**ಉ. ಭರಮದೇವರ ಬಂಡೆ :** ಪ್ರಕಾಶನಗರದಿಂದ ವಾಟರ್ ಫಾಲ್ಸ್‌ಗೆ ಹೋಗುವ ದಾರಿಯ ಬಲಭಾಗಕ್ಕಿರುವ ಭರಮದೇವರ ಬಂಡೆಯ ಸಮೀಪದ ತುಂಗಭದ್ರಾನದಿ ದಡದ ಮೇಲಿರುವ ಬಂಡೆಯ ಮೇಲೆ ಕಂದು, ಕೆಂಪು ಬಣ್ಣದಿಂದ ಚಿತ್ರಿಸಿದ ವರ್ಣ ಚಿತ್ರಗಳಿವೆ. ಇದರಲ್ಲಿ ಜಿಂಕೆ, ಮೊಸಳೆ ಮತ್ತು ಮನುಷ್ಯರ ಚಿತ್ರಗಳಿವೆ. ಇಲ್ಲಿರುವ ಚಿತ್ರಗಳಲ್ಲಿ ಗುಂಪು ನೃತ್ಯ ಮಾಡುವ ಚಿತ್ರಗಳು ಗಮನ ಸೆಳೆಯುತ್ತವೆ.[2]

ಕೃಷ್ಣ ದೇವಾಲಯದ ಬಳಿಯ ಬೆಟ್ಟದಲ್ಲಿ ಮತ್ತು ಮತಂಗಪರ್ವತದ ಬಳಿ ಇದೇ ರೀತಿಯ ವರ್ಣಚಿತ್ರಗಳಿವೆ. ಮೇಲೆ ವಿವರಿಸಿದ ಶಿಲಾಯುಗದ ಮಾನವ ಸಂಸ್ಕೃತಿಯ ಅವಶೇಷಗಳಲ್ಲದೆ, ಹಂಪಿಯಲ್ಲಿ ಕೆಲವಡೆ ಹಾಸುಬಂಡೆಗಳ ಮೇಲೆ ಚಿಕ್ಕಚಿಕ್ಕ ಕುಳಿಗಳು ಕಂಡುಬರುತ್ತವೆ. ಅವು ಲಂಬಾಕಾರದ ವರ್ತುಳದಂತಿರುವ ಕುಳಿಗಳಾಗಿವೆ. ಇವು ೮ ರಿಂದ ೭ ಅಂಗುಲ ಉದ್ದವಾಗಿದೆ. ಈಗಾಗಲೇ ತಿಳಿಸಿರುವಂತೆ ಈ ಕುಳಿಗಳು ಶಿಲಾಯುಗದ ಮಾನವನಿಂದ ನಿರ್ಮಿತವಾಗಿದ್ದು. ಆ ಮಾನವನು ತಾನು ತಯಾರಿಸಿದ ಕಲ್ಲಿನ ಕೈಕೊಡಲಿ ಮತ್ತು ಕಡಿಗತ್ತಿಗಳನ್ನು ಹರಿತಗೊಳಿಸಲೋಸುಗ ಹಾಸುಬಂಡೆಯ ಮೇಲೆ ಆಗಾಗ್ಗೆ ಮಸೆಯುತ್ತಿದ್ದುದರ ಪರಿಣಾಮವಾಗಿ ಈ ಕುಳಿಗಳು ಏರ್ಪಟ್ಟಿರಬೇಕು ಅನಿಸುತ್ತದೆ. ಅನೇಕಬಾರಿ ಹೊಸ ಹೊಸ ಶಿಲಾಯುಧಗಳನ್ನು ಸಿದ್ಧಪಡಿಸಿದಾಗ ಉಪಯೋಗಿಸಿದ್ದರಿಂದ ಸ್ವಲ್ಪ ಆಳದ ಕುಳಿಗಳಾದವು. ಹರಿತಗೊಳಿಸುವುದರೊಂದಿಗೆ ಈ ಆಯುಧಗಳಿಗೆ ಒಂದು ರೀತಿಯ ಹೊಳಪು ದೊರೆಯುತ್ತಿತ್ತು. ಆ ಮಾನವನು ತನಗೆ ಅವಶ್ಯವಿದ್ದ ಶಿಲಾಯುಧಗಳನ್ನು ಇಂತಹ ನೆಲೆಗಳಲ್ಲಿಯೇ ತಯಾರಿಸಿಕೊಳ್ಳುತ್ತಿದ್ದನು ಮತ್ತು ದೀರ್ಘಕಾಲದವರೆಗೆ ಇಲ್ಲಿಯೇ ವಾಸವಾಗಿದ್ದನು ಎಂಬ ವಿಷಯವನ್ನು ಈ ಕುಳಿಗಳು ಸೂಚಿಸುತ್ತವೆ.

**೧. ಕಮಲಾಪುರ :** ಹೊಸಪೇಟೆ ತಾಲೂಕಿನಲ್ಲಿರುವ ಈ ಗ್ರಾಮ ಹಿಂದೆ ವಿಜಯನಗರ ಸಾಮ್ರಾಜ್ಯದ ಒಂದು ಭಾಗವಾಗಿತ್ತು. ಇದರ ನೈರುತ್ಯ ದಿಕ್ಕಿನಲ್ಲಿ ಸುಮಾರು ೭ ಕಿ.ಮೀ. ದೂರದ ಒಂದು ಚಿಕ್ಕ ಹಳ್ಳದಲ್ಲಿ ಪ್ರಾಚೀನ ಶಿಲಾಯುಗದ ಕಲ್ಲಿನಾಯುಧಗಳು ದೊರೆತಿವೆ. ಈ ಕಾಲದಲ್ಲಿ ಮಾನವನು ತನಗೆ ಬೇಕಾದ ದುಂಡಾದ ಕಲ್ಲುಗಳನ್ನು, ಒಡೆದೋ, ಕೆತ್ತಿಯೋ ಆಯುಧಗಳನ್ನು ತಯಾರಿಸಿಕೊಳ್ಳುತ್ತಿದ್ದನು. ಇಲ್ಲಿ ದೊರೆತ ಶಿಲಾಯುಧಗಳು ಒಂದು ವಿಧವಾದ ಗಟ್ಟಿ ಕಲ್ಲಿನಿಂದ ತಯಾರಿಸಲ್ಪಟ್ಟಿದ್ದು, ಒಮ್ಮೆ ಒಂದು ಕಡೆ ಹರಿತವಾಗಿದ್ದರೆ ಇನ್ನು ಕೆಲವೊಮ್ಮೆ ಎರಡೂ ಕಡೆ ಹರಿತವಾಗಿರುವಂತೆ ಹಿಮ್ಮುಖಗಳೊಂದಿಗೆ ತಯಾರಿಸಲಾಗಿದೆ, ಇವುಗಳಲ್ಲದೆ ಉಳಿಗಳು, ಕೆತ್ತುವ ಸಾಧನಗಳು, ಅವುಗಳ ಜೊತೆಗೆ ಅಪೂರ್ಣವಾಗಿರುವ ಕೆಲ ಶಿಲಾಯುಧಗಳು ಮತ್ತು ಕೆಲವು ಬೇಡವಾದ ಭಾಗಗಳು ಸಹ ದೊರೆತಿವೆ. ಅಲ್ಲದೆ ಇಲ್ಲಿಯೇ ಆದಿ ಹಳೇಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಗುರುತಿಸಿದ್ದು, ಇಲ್ಲಿ ಆ ಕಾಲದ ಕೈಕೊಡಲಿ, ಹೆರೆಗತ್ತಿ, ಮಚ್ಚುಗತ್ತಿ ಮೊದಲಾದ ಉಪಕರಣಗಳು ದೊರೆತಿದ್ದು, ಇವುಗಳನ್ನು ಡಾಲರೈಟ್ ಶಿಲೆಯಲ್ಲಿ ರೂಪಿಸಲಾಗಿದೆ. ಒಮ್ಮುಖ ಹಾಗೂ ಇಮ್ಮುಖದ ನೀಳಚಕ್ಕೆ, ಸೂಕ್ಷ್ಮ ಶಿಲೋಪಕರಣಗಳು ಇಲ್ಲಿ ದೊರೆತಿವೆ. ಅಲ್ಲದೆ ಕನ್ನಡ ವಿಶ್ವವಿದ್ಯಾಲಯ

ಗಿರಿಸೀಮೆಯ ಬಂಡೆ ಮತ್ತು ಇಲ್ಲಿನ ಅತಿಥಿಗೃಹದ ಪೂರ್ವದ ಬಂಡೆಯ ಮೇಲೆ ಹಾಗು ಅಳ್ಳಿಕೆರೆಯ ಉತ್ತರಕ್ಕಿರುವ ಬೆಟ್ಟದ ಬಂಡೆಗಳ ಮೇಲೆ ನವಶಿಲಾಯುಗ ಕಾಲಕ್ಕೆ ಸೇರಿದ ಕುಟ್ಟು ಚಿತ್ರಗಳಿದ್ದು, ಅವುಗಳಲ್ಲಿ ಗೂಳಿ, ಮನುಷ್ಯ, ಜಿಂಕೆ, ಕಡವೆ ರೀತಿಯ ಚಿತ್ರಗಳು ಪ್ರಮುಖವಾಗಿದೆ. ಅವು ಅಂದಿನ ಸಂಸ್ಕೃತಿಯನ್ನು ಅರಿಯಲು ಸಹಾಯಕವಾಗಿವೆ.[3]

**೩. ನಿಂಬಾಪುರ :** ಹೊಸಪೇಟೆ ತಾಲೂಕಿನ ಹಂಪಿಯಿಂದ ಸುಮಾರು ಎರಡು ಕಿಲೋಮೀಟರ್ ದೂರದಲ್ಲಿ ಒಂದು ಚಿಕ್ಕ ಬೂದಿಗುಡ್ಡ ಅಥವಾ ಮರಡಿ ಕಾಣಬರುತ್ತದೆ. ಅದನ್ನು ಸ್ಥಳೀಯರು 'ವಾಲಿಕಾಷ್ಠ' ಎಂದು ಕರೆಯುವ ವಾಡಿಕೆ ಇದೆ. ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಈ ಭಾಗಕ್ಕೆ ನಿಂಬಾಪುರವೆಂದು ಹೆಸರಿತ್ತು. ಆಗ ಕೆಲ ದೇವಸ್ಥಾನಗಳು, ಮಠಮಾನ್ಯಗಳು ಈ ಭಾಗದಲ್ಲಿ ಅಸ್ತಿತ್ವ ಪಡೆದುಕೊಂಡಿದ್ದವು. ಇಲ್ಲಿನ ಬೂದಿಗುಡ್ಡವನ್ನು ಕ್ಯಾಪ್ಟನ್ ನ್ಯೂಬೋಲ್ಡ್ ಎಂಬುವನು ಕ್ರಿ.ಶ. ೧೮೭೨ರಲ್ಲಿಯೇ ಗುರುತಿಸಿದ್ದನು. ಆಗ ಅದು ೪೫ ಅಡಿ ಉದ್ದವಿದ್ದು ೧೦ ರಿಂದ ೧೪ ಅಡಿ ಎತ್ತರವಾಗಿತ್ತು. ಆದರೂ ಶಿಲಾಯುಗದ ಅವಶೇಷಗಳು ಅಷ್ಟಾಗಿ ಕಾಣಬರಲಿಲ್ಲ. ಇದು ಕುಡತಿನಿಯ ಹತ್ತಿರವಿರುವ ಬೂದಿಕಣಿವೆಯನ್ನು ಹೋಲುತ್ತದೆ.[4]ಆದರೆ ಇದು ಅದಕ್ಕಿಂತಲೂ ಚಿಕ್ಕ ಪ್ರಮಾಣದಲ್ಲಿದೆ. ಮತ್ತು ಕುಡತಿನಿಯಲ್ಲಿ ದೊರೆತಂಥ ಶಿಲಾಯುಗದ ಅವಶೇಷಗಳು ಇಲ್ಲಿ ಇನ್ನೂ ದೊರೆತಿಲ್ಲ. ಈ ಕುರಿತು ಇಲ್ಲಿ ಇನ್ನೂ ಸಂಶೋಧನೆ ನಡೆಯಬೇಕಾಗಿದೆ. ಸದ್ಯಕ್ಕೆ ಬಳ್ಳಾರಿ ಮತ್ತು ಪಕ್ಕದ ರಾಯಚೂರು ಜಿಲ್ಲೆಗಳಲ್ಲಿ ಅನೇಕ ಕಡೆ ಕಾಣಬರುವ ಬೂದಿಗುಡ್ಡಗಳಂತೆ ಇದು ಇದ್ದು, ನವಶಿಲಾಯುಗದ ಕೊನೆಯ ಹಂತಕ್ಕೆ ಸೇರಿದೆ.

ಮೇಲೆ ವಿವರಿಸಲಾದ ಆಧಾರಗಳ ಮೇಲೆ ಹಂಪಿಯ ಪ್ರಾಂತವು ಶಿಲಾಯುಗದ ಮಾನವನ ಚಟುವಟಿಕೆಗಳ ಮತ್ತು ಸಂಸ್ಕೃತಿಯ ಕ್ಷೇತ್ರವಾಗಿತ್ತು ಎಂದು ಹೇಳಬಹುದಾಗಿದೆ. ಇವು ನವಶಿಲಾಯುಗದ ಕೊನೆಯ ಹಂತಕ್ಕೆ ಸೇರಿದವುಗಳೆಂದು ಕೆಲವರಿಂದ ತರ್ಕಿಸಲಾಗಿದೆಯಾದರೂ ಇವುಗಳ ಕಾಲವನ್ನು ನಿರ್ದಿಷ್ಟವಾಗಿ ಹೇಳಬೇಕಾದರೆ ಈ ಭಾಗದಲ್ಲಿ ವ್ಯವಸ್ಥಿತ ಹಾಗೂ ಸಮಗ್ರ ರೀತಿಯಲ್ಲಿ ಸರ್ವೇಕ್ಷಣಾ ಮತ್ತು ಉತ್ಖನನ ಕಾರ್ಯಗಳು ಜರುಗಿಸಿದಲ್ಲಿ ಹೆಚ್ಚಿನ ಮಾಹಿತಿಗಳು ಲಭ್ಯವಾಗಬಹುದು.

**೪. ಕುರುಗೋಡು :** ಸಿರಗುಪ್ಪ ತಾಲೂಕು ಕೇಂದ್ರದಿಂದ ೧೯ ಕಿ.ಮೀ. ದೂರದಲ್ಲಿರುವ ಈ ಪ್ರದೇಶದ ಪ್ರಾಚೀನ ಕಾಲದ ಕುರುಹುಗಳು ಹರಡಿಕೊಂಡಿವೆ. ಈ ಕುರುಹುಗಳಲ್ಲಿ ಮಧ್ಯೆ ಹಳೇಶಿಲಾಯುಗದಿಂದ ಇಂದಿನವರೆಗೆ ಬದುಕಿನ ಅನೇಕ ಅಂಶಗಳು ಕಾಣಸಿಗುತ್ತವೆ. ಅವುಗಳಲ್ಲಿ ಮಧ್ಯ ಹಳೇ ಶಿಲಾಯುಗ, ನೂತನ ಶಿಲಾಯುಗ, ಕಬ್ಬಿಣ ಯುಗದ (ಬೃಹತ್ ಶಿಲಾಯುಗ) ಮತ್ತು ಆದಿಚಾರಿತ್ರಿಕ ಮತ್ತು ಚಾರಿತ್ರಿಕ ಯುಗದ ಕುರುಹುಗಳು ಪ್ರಮುಖವಾಗಿ ದೊರೆತಿವೆ. ಒಟ್ಟಾರೆ ಕುರುಗೋಡಿನ ಸುಮಾರು ೨೦ ಚ.ಕಿ.ಮೀ. ಪ್ರದೇಶದಲ್ಲಿ ಸಾಂಸ್ಕೃತಿಕ ಕುರುಹುಗಳು ದೊರಕುತ್ತವೆ. ಅಲ್ಲದೇ ಪ್ರಾಚೀನ ಸಂಸ್ಕೃತಿಯ ಅವಶೇಷಗಳು ಹರಡಿಕೊಂಡಿವೆ. ಇತ್ತೀಚಿನ ದಿನಗಳಲ್ಲಿ ನಗರೀಕರಣದಿಂದ ಅನೇಕ ಕುರುಹುಗಳು ವರ್ಷದಿಂದ ವರ್ಷಕ್ಕೆ ಕಣ್ಮರೆಯಾಗುತ್ತಿವೆ. ಈ ಪ್ರದೇಶದಲ್ಲಿ ದೊರೆತ ಪ್ರಾಗೈತಿಹಾಸಿಕ ಅವಶೇಷಗಳನ್ನು ಮುಂದಿನಂತೆ ಗಮನಿಸಬಹುದು.

**ಆದಿ ಹಳೇಶಿಲಾಯುಗದ ಅವಶೇಷಗಳು**

ಈ ಕಾಲದ ಕೆಲವು ಮುಖ್ಯ ಅವಶೇಷಗಳು ಇಲ್ಲಿ ದೊರೆತಿವೆ. ಅವುಗಳಲ್ಲಿ ಟ್ರಾಪ್ ಶಿಲೆ ಮತ್ತು ಬೆಣಚುಕಲ್ಲಿನಿಂದ ತಯಾರಿಸಿದ ಕೈಕೊಡಲಿ ಮೊದಲಾದ ಆಯುಧಗಳು ಪ್ರಮುಖವಾಗಿವೆ.

**ಸೂಕ್ಷ್ಮ ಶಿಲಾಯುಗದ ಅವಶೇಷಗಳು**

ಶಿಲಾಯುಗದ ಅನೇಕ ಉಪಕರಣಗಳು ಇಲ್ಲಿನ ವಜ್ರದುಂಡಿ ಬಸಪ್ಪನ ದೇಗುಲದ ಎದುರಿನ ಜಾಗದಲ್ಲಿ ದೊರೆತಿವೆ. ಈ ಪ್ರದೇಶದಲ್ಲಿ ದೊಡ್ಡ ಕಲ್ಲಿನ ಉಪಕರಣಗಳಲ್ಲದೆ ದ್ವಿಮುಖ, ಅಲಗಿನ ನೀಳ ಚಕ್ಕೆಗಳು ಮತ್ತು ಚಕ್ಕೆಗಳನ್ನು ತೆಗೆದ ತಿರುಳುಗಲ್ಲುಗಳು ಇಲ್ಲಿ ದೊರಕಿವೆ. ಈ ಆಲಗುಗಳು ಚಾಲ್ಸಿ ಡೆನಿ, ಜಾಸಪರ್, ಚರ್ಟ್, ಅಗೆಟ್ ಮುಂತಾದ ಶಿಲೆಗಳನ್ನು ಉಪಯೋಗಿಸಿ ಆಲಗುಗಳನ್ನು ಸಿದ್ಧಪಡಿಸಿದ್ದಾರೆ. ನೀಳ ಚಕ್ಕೆಗಳನ್ನು ಅದರ ತುದಿ ಹಾಗೂ ಒಂದು ಮಗ್ಗಲಿನಲ್ಲಿ ಮಾತ್ರ ಸಣ್ಣ ಚಕ್ಕೆಗಳನ್ನು ಎಬ್ಬಿಸಿ ಅರ್ಧ ಚಂದ್ರಾಕೃತಿಯ ಚತುಷ್ಕಾರದ ತ್ರಿಕೋಣಾಕೃತಿಯ ಉಪಕರಣಗಳನ್ನು ಸಿದ್ಧಪಡಿಸಿ ಉಪಯೋಗಿಸಿರುವುದು ಇಲ್ಲಿ ಕಂಡುಬರುತ್ತದೆ.

ವಜ್ರದುಂಡಿ ಬಸಪ್ಪ ದೇವಾಲಯದ ಮುಂಭಾಗದ ದಿಣ್ಣೆಯಲ್ಲಿ ವ್ಯಾಪಕವಾಗಿ ಆಲಗಿನ ತುಂಡುಗಳು ನಿಷ್ಪ್ರಯೋಜಕವೆಂದು ನಿರಾಕರಿಸಿದ ತುಂಡುಗಳು ಉಪಕರಣಕ್ಕೆ ಬೇಕಾದ ಮೂಲಶಿಲೆಗಳನ್ನು ಗುರುತಿಸಬಹುದು. ಕೋರ್‍ಗಳು ಹೀಗೆ ಜಿಂಕಲಕೊಂಡ ಗುಡ್ಡದ ಬಳಿಯೂ ಹೆಚ್ಚಿನ ಅಲಗಿನ ತುಂಡುಗಳು ದೊರಕುತ್ತವೆ. ಇಲ್ಲಿ ಕಣ್ಣು ಕೋರೈಸುವಷ್ಟು ಬಿಳಿಕಲ್ಲಿನ ಸಣ್ಣ ತುಣುಕುಗಳನ್ನು ಕಾಣಬಹುದು. ಇವು ತಯಾರಿಕೆಯಲ್ಲಿ ಉಂಟಾದ ಪುಡಿ ಚಕ್ಕೆಗಳು. ಈ ಅನುಪಯುಕ್ತ ಕಲ್ಲು ಚೂರುಗಳು, ಅರೆ ಉಪಕರಣಗಳು, ಸಿದ್ಧ ಉಪಕರಣಗಳು. ಈ ಪ್ರದೇಶವು ಉಪಕರಣಗಳನ್ನು ತಯಾರಿಸುವ ಕಾರ್ಯಾಗಾರದ ಮೊದಲನೆಯ ಹಂತದ್ದೆಂದು ತೋರುತ್ತದೆ. ಜಿಂಕಲಕೊಂಡದ ಹಿಂಭಾಗದಲ್ಲಿ ದೊರೆಯುವ ಆಲಗುಗಳನ್ನು ಜಾಸ್ಪರ್ ಅಗೇಟ್ ಚರ್ಟ್‍ನಿಂದ ಸಿದ್ಧಪಡಿಸಲಾಗಿದೆ.

**ನೂತನ ಶಿಲಾಯುಗದ ಅವಶೇಷಗಳು :** ಇಲ್ಲಿ ಈ ಕಾಲಕ್ಕೆ ಸೇರಿದ ಮಡಕೆಚೂರು, ವರ್ಣಚಿತ್ರ, ಉಜ್ಜಿ ನಯಗೊಳಿಸಿದ ಕೊಡಲಿ, ಕೈಕೊಡಲಿ, ಕೆಲ ಸುಟ್ಟಮಣ್ಣಿನ ಗೊಂಬೆ ಮೊದಲಾದವು ದೊರೆತಿವೆ.

ವಜ್ರದುಂಡಿಯಲ್ಲಿ ಕಲ್ಲುಗಳನ್ನು ಉಪಯೋಗಿಸಿ ಆಯುಧಗಳನ್ನು ತಯಾರಿಸುತ್ತಿದ್ದರು. ಆಯುಧಕಲ್ಲನ್ನು ಒಂದು ಆಕಾರಕ್ಕೆ ತರುವುದು, ನಂತರ ಸಣ್ಣ ಸಣ್ಣ ಚಕ್ಕೆಗಳನ್ನು ತೆಗೆದು ಸಮತಲ ಮಾಡುವುದು. ಇದಾದ ನಂತರ ಉಜ್ಜಿ ನಯ ಮಾಡುವುದು, ನಂತರ ಇಡೀ ಭಾಗವನ್ನು ತಿಕ್ಕಿ ತಿಕ್ಕಿ ಹೊಳೆಯುವಂತೆ ಮಾಡುವುದನ್ನು ಗುರುತಿಸಬಹುದಾಗಿದೆ. ಈ ರೀತಿಯ ಹಂತಗಳು ಸಂಗನ ಕಲ್ಲು, ತೆಕ್ಕಲಕೋಟೆ ಮುಂತಾದ ಕಡೆ ಕಂಡುಬಂದಿವೆ. ಕುರುಗೋಡಿನ ಪಂಚಮುಖಿ ವೀರಭದ್ರ ಹಾಗೂ ಬಾಳೇಕೊಳ್ಳದಲ್ಲಿ ಸಣ್ಣ ಗುಂಡಿಗಳನ್ನು ದೊಡ್ಡ ಬಂಡೆಗಳ ಹರುವಿನ ಮೇಲೆ ಆಯುಧಗಳನ್ನು ಸಿದ್ಧಪಡಿಸಿ ಅಲ್ಲಿ ಕೈಕೊಡಲಿಗಳನ್ನು ಉಜ್ಜಿ ಹೊಳಪಾಗುವಂತೆ ಮಾಡಿರುವುದನ್ನು ಗುರುತಿಸಬಹುದು. ನೂತನ ಶಿಲಾಯುಗದ ಆಯುಧಗಳನ್ನು ಸ್ಥಳೀಯವಾಗಿ ತಯಾರಿಸಲಾಗಿದೆ. ಪಂಚಮುಖಿ ವೀರಭದ್ರನ ಎದುರು ಬೆಟ್ಟದಲ್ಲಿ ನೂತನ ಶಿಲಾಯುಗದ ಕೊಡಲಿಗಳನ್ನು ಹರಿತವಾಗಿ ಮಾಡಲು ಗ್ರಾನೈಟ್ ಕಲ್ಲಿನಲ್ಲಿ ಸಣ್ಣ ತಗ್ಗನ್ನು ಮಾಡಿ ಸತತವಾಗಿ ಉಜ್ಜಿರುವುದನ್ನು ಅಲ್ಲಲ್ಲಿ ಕಾಣಬಹುದು. ಇಂತಹ ತಗ್ಗನ್ನು ಪಂಚಮುಖಿ ವೀರಭದ್ರನ ಗುಡಿಯ ಮುಂದಿನ ಬೆಟ್ಟಗಳಲ್ಲಿಯೂ ಕಾಣಬಹುದು. ತಯಾರಿಕೆಯ ಪ್ರಕ್ರಿಯೆಯಲ್ಲಿ ತೊಡಗಿದ್ದಾಗ ಕೆಲವು ಕೊಡಲಿಗಳು ಮುರಿದು ಹಾಳಾಗಿರುವುದನ್ನು ಹಾಗೂ ತಯಾರಿಕೆಯ ವಿವಿಧ ಹಂತಗಳಲ್ಲಿರುವ ಕೆಲವು ಕೊಡಲಿಗಳು ಇಲ್ಲಿ ಕಂಡುಬಂದಿವೆ. ಕೈಕೊಡಲಿಗಳನ್ನು ತಯಾರಿಸುವ ಬೃಹತ್ ತಯಾರಿಕಾ ಪ್ರದೇಶ ಇದಾಗಿಲ್ಲದಿದ್ದರೂ, ತಮ್ಮ ಅಗತ್ಯಕ್ಕೆ ಅನುಗುಣವಾಗಿ ಬೇಕಾಗುವ ಕೊಡಲಿಗಳನ್ನು ಇಲ್ಲಿ ಸಿದ್ಧಪಡಿಸಿಕೊಂಡಿರುವುದಕ್ಕೆ ಅನೇಕ ನಿದರ್ಶನಗಳನ್ನು ಬಾಳೆಯ ಕೊಳ್ಳದಲ್ಲಿ ಗುರುತಿಸಬಹುದಾಗಿದೆ. ನೆಲದ ಮೇಲ್ಭಾಗದಲ್ಲಿ ಅಲ್ಲಲ್ಲಿ ಅಂದರೆ ಸಂಗಮೇಶ್ವರ ಗುಡಿ, ಉಜಾಳೇಶ್ವರಪೇಟೆಯ ಅಸುಪಾಸಿನಲ್ಲಿ ಅನೇಕ ಅಳತೆಯ ಕೈಕೊಡಲಿಗಳು ದೊರಕಿವೆ. ಈ ಎಲ್ಲ ಉಪಕರಣಗಳು ಉತ್ತಮ ರೀತಿಯಲ್ಲಿವೆ.

ಇದೇ ನೆಲೆಯಲ್ಲಿ ಮೃತ್ಪಾತ್ರೆಗಳನ್ನು ಗುರುತಿಸಲಾಗಿದೆ. ಇವುಗಳನ್ನು ಸಂಗನಕಲ್ಲು ಮತ್ತು ಮಸ್ಕಿ ರೀತಿಯಲ್ಲಿ ಕೈಯಿಂದಲೇ ಸಿದ್ಧಪಡಿಸಲಾಗಿದೆ. ಇವು ನಸುಕಂದು ಬಣ್ಣ ಹಾಗೂ ಕಪ್ಪೊತ್ತಿದ ಪಾತ್ರೆಗಳು. ಇವುಗಳ ಮೇಲೆ ತೆಳ್ಳನೆಯ ಲೇಪನವಿದ್ದು ಕೆಲವು ಒರಟಾದ ಮೇಲ್ಮೈಯನ್ನು ಹೊಂದಿವೆ. ಇಲ್ಲಿ ದೊಡ್ಡ ಗುಡಾಣಗಳು, ಮಧ್ಯದ ಆಕಾರದ ಉಬ್ಬು ಹೊಟ್ಟೆಯ ಗಡಿಗೆಗಳು ಬಟ್ಟಲು ಮುಚ್ಚಳ ಮುಂತಾದ ಆಕಾರಗಳಲ್ಲಿ ಉಪಯೋಗವಾಗುತ್ತಿದ್ದವು. ಗುಡಾಣಗಳನ್ನು ಶವಸಂಸ್ಕಾರಕ್ಕೂ ಉಪಯೋಗಿಸಿರುವುದು ತೆಕ್ಕಲಕೋಟೆಯ ಉತ್ಖನನದಲ್ಲಿ ಕಂಡುಬಂದಿದೆ. ಈ ಮೃತ್ಪಾತ್ರೆಗಳು ನೂತನ ಶಿಲಾಯುಗ, ತಾಮ್ರ ಶಿಲಾಯುಗಕ್ಕೆ ಸೇರಿವೆ. ಇಲ್ಲಿನ ಕೆಲವು ಮೃತ್ಪಾತ್ರೆಗಳ ಮೇಲೆ ರೇಖಾಚಿತ್ರಗಳನ್ನು ಬಿಡಿಸಲಾಗಿದೆ. ಕೆಲ ಮೃತ್ಪಾತ್ರೆಯ ಬಾಯಿಯ ಭಾಗಕ್ಕೆ ಬೆರಳನ್ನು ಒತ್ತಿ ಉದ್ದಕ್ಕೂ ಮಣಿಗಳ ಹಾಗೆ ಸಿಂಗರಿಸಿರುವುದು ಕಂಡುಬರುತ್ತದೆ. ಅದೇ ರೀತಿ ಚಿವುಟುವುದರ ಮೂಲಕವೂ ಸಿಂಗರಿಸಲಾಗಿದೆ. ಇಲ್ಲಿನ ಕೆಲವು ರೇಖಾಚಿತ್ರಗಳು ಗಮನ ಸೆಳೆಯುತ್ತವೆ. ಇವುಗಳಿಗೆ ಕೆಲವು ರೀತಿಯ ಚಿಕ್ಕ ಆಕಾರಗಳನ್ನು ಅಂಟಿಸಿರುವುದು ಕಂಡುಬರುತ್ತದೆ. ಇವು ಮನುಷ್ಯಾಕೃತಿಯನ್ನು ಹೋಲುತ್ತವೆ.

ಈ ಕಾಲಘಟ್ಟದಲ್ಲಿ ಸುಟ್ಟಮಣ್ಣಿನಿಂದ ತಯಾರಿಸಿದ ಗೂಳಿ, ಪಕ್ಷಿಗಳು ದೊರತಿದ್ದು, ಇವುಗಳ ಕಾಲ ಕ್ರಿ.ಪೂ. ೩೫೦೦ ಎಂದು ಗುರುತಿಸಲಾಗಿದೆ. ಇವು ಈ ಹಂತದ ಮಹತ್ವದ ಅಂಶಗಳಾಗಿದ್ದು, ಈ ನೆಲೆಯ ಭೂ-ಮೇಲ್ಮೈಗಳಲ್ಲಿ ದೊರಕಿವೆ. ಅವುಗಳಲ್ಲಿ ಕೆಲವು ಸಾಕಷ್ಟು ಹಾಳಾಗಿರುವುದರಿಂದ ಕಾಲಮಾನವನ್ನು ಸ್ಪಷ್ಟವಾಗಿ ನಿರ್ಧರಿಸುವುದು ಕಷ್ಟಕರವಾಗಿದೆ.

ಕುರುಗೋಡಿನ ಪೂರ್ವಕ್ಕೆ ಬೂದಿದಿನ್ನೆಗಳು ಇದ್ದ ಪ್ರದೇಶ ಕಂಡುಬರುತ್ತದೆ. ಬೂದಿಗುಡ್ಡಗಳು ಬಾಳೆ ಮುಳ್ಳಿನ ಬುಡ ಉಜಾಳೇಶ್ವರ ದೇವಾಲಯದ ಬಳಿ ಕಂಡು ಬಂದಿದೆ. ಹಾಗೆ ಬಾದನಹಳ್ಳಿಯಲ್ಲೂ ಕಂಡುಬಂದಿದೆ.

ಇಲ್ಲಿ ಗವಿ ವರ್ಣಚಿತ್ರಗಳನ್ನು ಸಹಾ ಶೋಧಿಸಲಾಗಿದೆ. ಅವುಗಳಲ್ಲಿ ಗವಿ ರೇಖಾಚಿತ್ರಗಳಲ್ಲಿ ಆಕಳು, ಜಿಂಕೆ, ಹುಲಿ ಮನುಷ್ಯರ ಛಾಯಾಕೃತಿಗಳು ಕೈಹಿಡಿದು ನರ್ತಿಸುವ ನೃತ್ಯ ಸಮೂಹದ ಬೇಟೆ ಚಿತ್ರಣಗಳಿವೆ. ಇಲ್ಲಿಯ ಗೂಳಿಯ ಚಿತ್ರ, ಸಮೂಹ ನೃತ್ಯ ಚಿತ್ರಗಳು ಪಿಕ್ಲಿಹಾಳು. ತೆಕ್ಕಲಕೋಟೆ ಹಾಗೂ ವಟಗಲ್‌ನಲ್ಲಿರುವ ವರ್ಣಚಿತ್ರಗಳಿಗೆ ಹೋಲಿಕೆಯಾಗುತ್ತವೆ.[5]ಇವು ನವಶಿಲಾ, ಶಿಲಾ ತಾಮ್ರಯುಗದ ಕಾಲಘಟಕ್ಕೆ ಸೇರಿದವುಗಳೆಂದು ನಿರ್ಧರಿಸಲಾಗಿದೆ. ಈ ರೀತಿಯ ಚಿತ್ರಗಳು ಇಲ್ಲಿನ ಪಂಚಮುಖಿ ವೀರಭದ್ರ, ಬಾಳೇಕೊಳ್ಳಗಳಲ್ಲಿದ್ದು, ಅವು ಶಿಲಾತಾಮ್ರಯುಗಕ್ಕೆ ಸೇರಿವೆ.

**ಕಬ್ಬಿಣ ಯುಗದ (ಬೃಹತ್ ಶಿಲಾಸಂಸ್ಕೃತಿ) ಅವಶೇಷಗಳು**

ಕಲ್ಲುಬಂಡೆಗಳು, ಚಪ್ಪಡಿಗಳು ದೊರೆಯುವ ಬೆಟ್ಟ ಗುಡ್ಡಗಳ ಬಳಿ ಶಿಲಾ ಗೋರಿಗಳಿರುವುದು ಸಹಜ. ಬೆಟ್ಟಗುಡ್ಡಗಳ ತಪ್ಪಲಲ್ಲಿ ಬೆಟ್ಟಗಳ ಸಮತಟ್ಟಾದ ಪ್ರದೇಶದಲ್ಲಿ ಶಿಲಾಮಯವಾದ ಬರಡು ಭೂಮಿಗಳಲ್ಲಿ ಇಂತಹ ನಿರ್ಮಿತಿಗಳಾಗುತ್ತಿದ್ದವೇ ಹೊರತು ಫಲವತ್ತಾದ ಭೂಮಿಗಳಲ್ಲಿ ಅಲ್ಲ. ಕಬ್ಬಿಣದ ನಿಕ್ಷೇಪದ ಪ್ರದೇಶ ಹಾಗು ಆಲಂಕಾರಿಕ ವಸ್ತುಗಳಾದ ಮಣಿಗಳ ತಯಾರಿಕೆ ಪ್ರದೇಶಗಳಲ್ಲಿ ಕಲ್ಗೋರಿ ನೆಲೆಗಳು ಹೆಚ್ಚಾಗಿವೆ. ಕಲ್ಲುಗಳನ್ನು ವಿವಿಧ ಆಕಾರದಲ್ಲಿ ಕೆತ್ತಿರುವುದು, ಉಪಕರಣಗಳನ್ನು ಬಳಸಿ ವಿಶಿಷ್ಟ ವಾಸ್ತು ರಚನೆಯ ಕಲ್ಗೋರಿಗಳ ನಿರ್ಮಾಣ ಮಾಡುವುದು, ಈ ಕಾಲದ ಜನರಿಗೆ ಚೆನ್ನಾಗಿ ಪರಿಚಯವಿದ್ದಿರಬೇಕು. ಕಬ್ಬಿಣದ ವಿವಿಧ ಗೃಹೋಪಯೋಗಿ ವಸ್ತುಗಳು ಮತ್ತು ದಿನನಿತ್ಯದ ಬಳಕೆಗೆ ಬೇಕಾಗುವ ವಸ್ತುಗಳನ್ನು ತಯಾರಿಸುವುದರಲ್ಲಿ ಇವರು ನಿಪುಣರಾಗಿದ್ದರು.

ಈ ಸಂಸ್ಕೃತಿಯ ಜನ ಲೇಪನವುಳ್ಳ ಪಾತ್ರೆಗಳನ್ನು ಬಳಸುತ್ತಿದ್ದರು. ಈ ನಮೂನೆಯ ಮೃತ್ಪಾತ್ರೆಗಳು ಇಲ್ಲಿಯ ವಿವಿಧ ಭಾಗಗಳಲ್ಲಿ ದೊರತಿವೆ. ಇವುಗಳನ್ನು ತಿರುಗಣಿ ಚಿತ್ರದ ಮೇಲೆ ಮಾಡಿದ್ದರೆ ದೊಡ್ಡ ಪಾತ್ರೆಗಳು, ಕೆಂಪು ಕೆಂಪು ಬಣ್ಣದ ಪಾತ್ರೆಗಳ ಚೂರುಗಳು, ಅದರಲ್ಲೂ ಬೋಗುಣಿಯ ತರದ ದೊಡ್ಡ ಚೂರುಗಳು ಕಾಣಿಸುತ್ತವೆ. ಕೆಲವು ಇಲ್ಲಿ ಕಪ್ಪು, ಕೆಂಪು ಪಾತ್ರೆಗಳ ಬಳಿ ಬಣ್ಣದ ರೇಖಾ ಚಿತ್ರಗಳಿವೆ. ಇವು ಸರಳವಾದವು. ವಿರುದ್ಧ ದಿಕ್ಕಿನಲ್ಲಿ ಬೇರೆಯಾಗಿರುವ ಸಮಾನಾಂತರದ ನಾಲ್ಕೈದು ಸಿಡಿ ರೇಖೆಗಳನ್ನು ಜೋಡಿಸಿ ಇವುಗಳನ್ನು ತಯಾರಿಸಲಾಗಿದೆ. ಒಂದೆರಡು ಪಾತ್ರೆಗಳ ಮೇಲೆ ಗೀಚಿದ ಚಿತ್ರಗಳಿವೆ. ಆದರೆ ಈ ಪ್ರದೇಶದಲ್ಲಿ ಬೃಹತ್ ಶಿಲಾಸಂಸ್ಕೃತಿಯ ಮೃತ್ಪಾತ್ರೆಗಳು ಹೇರಳವಾಗಿ ದೊರಕುತ್ತವೆ. ಕಪ್ಪು ಕೆಂಪು ಬಣ್ಣದ ದ್ವಿವರ್ಣದ ಪಾತ್ರೆಗಳು ಹೇರಳವಾಗಿ ದೊರಕುತ್ತವೆ. ಬೃಹತ್ ಶಿಲಾಯುಗದ ಸಂಸ್ಕೃತಿಯ ಜನರು ಸಾಮಾನ್ಯವಾಗಿ ಬಳಸುತ್ತಿದ್ದ ಈ ಬಗೆಯ ಪಾತ್ರೆಗಳ ಚೂರು ಈ ಪ್ರದೇಶದಲ್ಲಿ ದೊರಕಿವೆ. ಸಾಮಾನ್ಯವಾಗಿ ಕೆಲವು ಕಲ್ಗೋರಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮೃತ್ಪಾತ್ರೆಗಳಿರುತ್ತವೆ. ಬೃಹತ್ ಶಿಲಾ ಗೋರಿಗಳು ಹಾಳಾದರೆ ಹೂತಿಟ್ಟ ಪಾತ್ರೆಗಳನ್ನು ಹೊರತೆಗೆದು ಹಾಕಿದಾಗ ಸಣ್ಣ ಸಣ್ಣ ಚೂರುಗಳಾಗಿರುವುದನ್ನು ಕಾಣಬಹುದು.

ವೃತ್ತಾಕಾರದ ಶವಕುಣಿಗಳು ಸಂಗಮೇಶ ದೇವಾಲಯದಲ್ಲಿ ಹಾಗೂ ಬೆಟ್ಟದ ಮೇಲೆ ಇತ್ತೆಂದು ಗುರುತಿಸಲಾಗಿದೆ. ಈ ಸ್ಥಳದಲ್ಲಿದ್ದ ಮೂಲ ವೃತ್ತಾಕಾರದ ಶವಕುಣಿಯನ್ನು ವ್ಯವಸಾಯ ಭೂಮಿಯನ್ನಾಗಿ ಪರಿವರ್ತಿಸಲಾಗಿದೆ. ಶವಸಂಸ್ಕಾರಕ್ಕಾಗಿ ನಾನಾ ಪ್ರಕಾರದ ಗೋರಿಗಳನ್ನು ಈ ಜನರು ನಿರ್ಮಿಸುತ್ತಿದ್ದರು. ದಾರಿಕೋಣೆ, ಕಂಡಿಕೋಣೆ, ಜಂಬಿಟ್ಟಿಗೆ ಪ್ರಸ್ಥಭೂಮಿಯ ಆಳವಾಗಿ ಕೊರೆದಕೋಣೆ, ಮಣ್ಣಿನ ಶವಪೆಟ್ಟಿಗೆಗಳು, ದುಂಡು ವೃತ್ತಗಳು ನಿಲುವುಗಲ್ಲುಗಳು, ಕಲ್ಲುಕುಪ್ಪಿಗಳು ಪ್ರಮುಖವಾಗಿದೆ. ಕೆಲವು ಗೋರಿಗಳಲ್ಲಿ ಒಂದಕ್ಕಿಂತ ಹೆಚ್ಚು ವ್ಯಕ್ತಿಗಳ ಅಸ್ಥಿಪಂಜರ, ಕಬ್ಬಿಣದ ಮತ್ತು ಕಲ್ಲಿನ ಆಯುಧಗಳು, ಮಣಿಗಳು ದೊರಕಿವೆ. ಇದೇ ರೀತಿಯ ಬೃಹತ್ ಶಿಲಾಗೋರಿಗಳು ಹಾಳುಬಾವಿ ಬಳಿ ದೊರೆತಿದ್ದು, ಅಧ್ಯಯನ ಯೋಗ್ಯವಾಗಿವೆ.

ಇದೇ ನೆಲೆಯಲ್ಲಿ ಆದಿಮಾನವ ಬಳಸಿ ಬಿಟ್ಟುಹೋದ ಆಲಂಕಾರಿಕ ಸಾಧನಗಳು ದೊರೆತಿವೆ. ಇಲ್ಲಿ ಅನೇಕ ಬಗೆಯ ಮಣಿಗಳನ್ನು ಅಗೇಟ್, ಜಾಸ್ಪರ್ ಮುಂತಾದ ಶಿಲೆಗಳಿಂದ ತಯಾರಿಸಿದ್ದಾರೆ. ಕೆಲವೊಮ್ಮೆ ಶಂಖದ ಬಳೆಯನ್ನು ತಯಾರಿಸಿ ತೊಟ್ಟಿರಬೇಕು. ಕುರುಗೋಡಿನ ಬಾಳೇಕೊಳ್ಳದ ಪೂರ್ವಕ್ಕಿರುವ ಇಳಿಜಾರಿನಲ್ಲಿ ಕತ್ತರಿಸಿದ ಶಂಖದ ಬಳೇ ಚೂರುಗಳು ಕಂಡುಬಂದಿವೆ. ಅಂದರೇ ಇತರ ನೆಲೆಗಳಂತೆ ಇವರೂ ಶಂಖವನ್ನು ಉಪಯೋಗಿಸಿದ್ದಾರೆ. ಇಲ್ಲಿಯ ಜನರು ಅನೇಕ ಮಣಿಗಳು ಹಾಗು ಬಳೆಗಳನ್ನು ಉಪಯೋಗಿಸಿರಬೇಕು. ಹರಳುಗಳನ್ನು ಅಗೇಟ್, ಚರ್ಟ್, ಜಾಸ್ಪರ್ ಮುಂತಾದ ಶಿಲೆಗಳನ್ನು ಉಪಯೋಗಿಸಿ ತಯಾರಿಸಿದ್ದಾರೆ. ಇದೇ ಶಿಲೆಗಳಿಂದ ಮಣಿಗಳನ್ನು ವಿವಿಧ ಆಕಾರದಲ್ಲಿ ಮಾಡಿರುವುದು ಪಕ್ಕದ ತೆಕ್ಕಲಕೋಟೆ ಹಾಗೂ ಸಂಗನಕಲ್ಲಿನಲ್ಲಿ ಕೂಡ ಕಾಣಬಹುದು. ಇಲ್ಲಿ ವಿವಿಧ ರೀತಿಯ ಶಿಲೆಗಳನ್ನು ಉಪಯೋಗಿಸಿ ಅಲಗುಗಳನ್ನು ತಯಾರಿಸಿರುವುದು ಕಂಡುಬರುತ್ತದೆ. ಅಲಗುಗಳನ್ನು ಸಿದ್ಧಪಡಿಸಲು ವಿವಿಧ ಶಿಲೆಗಳನ್ನು ಉಪಯೋಗಿಸಿರಬೇಕು.

ಈ ಮೇಲಿನ ವಿವರದಿಂದ ಪ್ರಾಗೈತಿಹಾಸಕಾಲದಿಂದ ಇಂದಿನವರೆಗೂ ಕುರುಗೋಡು ವಿವಿಧ ಸಂಸ್ಕೃತಿಗಳ ಬೀಡಾಗಿತ್ತು ಎನ್ನುವುದನ್ನು ಅರಿಯಬಹುದಾಗಿದೆ.

**೫. ಕುಮತಿ :** ಕುಮತಿ ಗ್ರಾಮವು ತಾಲೂಕು ಕೇಂದ್ರವಾದ ಕೂಡ್ಲಿಗಿಯಿಂದ ಸುಮಾರು ೪೦ ಕಿ.ಮೀ. ದೂರದಲ್ಲಿ ಇದೆ. ಬಯಲು ಪ್ರದೇಶವಾಗಿದ್ದು ಸಣ್ಣ ಪುಟ್ಟ ಮಣ್ಣಿನ ಗುಡ್ಡಗಳನ್ನು ಗ್ರಾಮದ ಸುತ್ತ ಕಾಣಬಹುದಾಗಿದೆ. ಮಳೆಯ ಪ್ರಮಾಣ ಅಷ್ಟೇನೂ ಹೆಚ್ಚಿಲ್ಲ. ಹಾಗೆಯೇ ಚಿನ್ನಹಗರಿ ನದಿಯು ಗ್ರಾಮದ ಸಮೀಪದಲ್ಲಿ ಹರಿದು ಹೋಗುತ್ತದೆ. ೧೯೯೬ರಲ್ಲಿ ಪುರಾತತ್ವ ಇಲಾಖೆಯ ಬೆಂಗಳೂರು ಶಾಖೆಯವರು ಕೆ.ವಿ.ಪೂಣಚ್ಚ ಇವರ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಗ್ರಾಮಾಂತರ ಸಮೀಕ್ಷಾ ಕಾರ್ಯದ ಸಂದರ್ಭದಲ್ಲೂ ಈ ನೆಲೆಯನ್ನು ಅನ್ವೇಷಿಸಿ ವರದಿ ಮಾಡಿತು. ಇಲ್ಲಿ ಬೃಹತ್ ಶಿಲಾಯುಗದ ಒಂದು ಕಂಡಿಕೋಣೆಯ ಕಲ್ಗೋರಿ, ಭಾರತದಲ್ಲೇ ಅಪರೂಪವಾದ ಏಳು ಮಾನವಾಕಾರದ ಏಕಶಿಲಾ ಸಮುಚ್ಚಯಗಳಿವೆ. ಈ ಗ್ರಾಮದ ಕೆರೆದಂಡೆಯ ಉತ್ತರಕ್ಕೆ ಸುಮಾರು ೩೦೦ ಮೀ. ದೂರದಲ್ಲಿನ ಕೆ.ಎಂ.ತಿಪ್ಪೇರುದ್ರಯ್ಯ ಎಂಬುವರ ಜಮೀನಿನಲ್ಲಿ ಈ ಸಮುಚ್ಚಯಗಳಿವೆ. ಈ ಸಮುಚ್ಚಯಗಳಲ್ಲಿ ಏಳು ಸ್ಮಾರಕ ಶಿಲ್ಪಗಳಿದ್ದು, ಇವುಗಳಲ್ಲಿ ಎರಡು ಮಾತ್ರ ಸುಸ್ಥಿತಿಯಲ್ಲಿವೆ. ಸ್ಥಳೀಯವಾಗಿ ದೊರೆಯುವ ಗ್ರಾನೈಟ್ ಶಿಲೆಯ ಅಗಲವಾದ ಶಿಲಾಫಲಕನ್ನು ಉಪಯೋಗಿಸಿ ದಕ್ಷಿಣೋತ್ತರವಾಗಿ ಇವುಗಳನ್ನು ಯೋಜಿಸಲಾಗಿದೆ. ಪೂರ್ವಾರ್ಧಮುಖವಾಗಿರುವಂತೆ ನಿಲ್ಲಿಸಲಾಗಿದ್ದು, ಈ ಶಿಲ್ಪಗಳ ಅಳತೆ ಈ ಕೆಳಗಿನಂತಿವೆ. ಎಡಭಾಗದ ಶಿಲ್ಪವು ೩.೦೨ ಮೀ. ಎತ್ತರವಿದ್ದು ಅದರ ಎದೆಭಾಗದ ಅಗಲ ೨.೪೨ ಮೀ. ಇದೆ. ಅಗಲ ಅಲ್ಲದೆ ಇದರ ತಳಭಾಗ ೧.೪೬ ಮೀ. ಅಳತೆಯನ್ನು ಹೊಂದಿದೆ. ಅದೇ ರೀತಿ ಬಲಭಾಗದ ಶಿಲ್ಪ ೩.೦೭ ಮೀ. ಎತ್ತರ ೩.೩೬ ಮೀ. ಅಗಲವನ್ನು ಹೊಂದಿದೆ. ಹಾಗೇ ಇವೆರಡು ಶಿಲ್ಪಗಳ ನಡುವಿನ ಅಂತರ ೫.೭೪ ಮೀ. ಇದೆ.[6]

**೬. ಹುಲಿಕುಂಟೆ :** ತಾಲೂಕು ಕೇಂದ್ರವಾದ ಕೂಡ್ಲಿಗಿಯಿಂದ ಸುಮಾರು ೩೧ ಕಿ.ಮೀ. ದೂರದಲ್ಲಿರುವ ಈ ಗ್ರಾಮದ ಸುತ್ತಲೂ ಅರಣ್ಯ ಮತ್ತು ಬೆಟ್ಟಗುಡ್ಡಗಳಿವೆ. ಇದರ ಸಮೀಪ ಗುಡೇಕೋಟೆ ಬೆಟ್ಟಸಾಲು ಹಾದುಹೋಗುತ್ತದೆ. ಈ ಬೆಟ್ಟದ ಬಳಿ ಕೆರೆಹಳ್ಳಗಳಿದ್ದು ಇಲ್ಲಿನ ಗವಿಗಳು ಪ್ರಾಚೀನ ಮಾನವ ವಾಸಕ್ಕೆ ಯೋಗ್ಯನೆಲೆ ಎಂಬುದನ್ನು ಸಾಬೀತುಪಡಿಸುತ್ತವೆ.

೧೯೯೯ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಪುರಾತತ್ವ ವಿಭಾಗದ ಸಂಶೋಧನಾ ವಿದ್ಯಾರ್ಥಿಯಾದ ಎಚ್.ತಿಪ್ಪೇಸ್ವಾಮಿ ತನ್ನ ಗೆಳೆಯರಾದ ಭೀಮಸಮುದ್ರದ ರಂಗನಾಥ ಮತ್ತು ಡಿಸ್ಕವರಿಟ್ರೂಪ್ ಇತರೆ ಸದಸ್ಯರ ನೆರವಿನೊಂದಿಗೆ ಹಮ್ಮಿಕೊಂಡಿದ್ದ ಗ್ರಾಮ ಸರ್ವೇಕ್ಷಣಾ ಸಮಯದಲ್ಲಿ ಭಾರತದಲ್ಲೇ ಮೊದಲಬಾರಿಗೆ ಬೃಹತ್ ಶಿಲಾಯುಗಕ್ಕೆ ಸೇರಿದ ಶಿಲಾವೃತ್ತದೊಳಗಿರುವ ಮೂರು ಮಾನವಾಕೃತಿಯ ಏಕಶಿಲಾ ಸಮುಚ್ಚಯಗಳನ್ನು ಶೋಧಿಸಿದರು. ಇಲ್ಲಿಯೇ ಮಡಕೆಚೂರು, ಕಬ್ಬಿಣ ತಯಾರಿಸುವ ಅವಶೇಷಗಳನ್ನು ಸಹ ಗುರುತಿಸಿದರು.

ಹುಲಿಕುಂಟೆ ಗ್ರಾಮದ ವಾಯವ್ಯ ಭಾಗಕ್ಕೆ ಸುಮಾರು ೨ ಕಿ.ಮೀ. ದೂರದಲ್ಲಿರುವ ಹರಿಜನ ಬೋರಕ್ಕ ಎಂಬುವವರ ಜಮೀನಿನಲ್ಲಿ ಈ ಮಾನವಾಕಾರದ ಮೂರು ಏಕಶಿಲಾ ಕೃತಿಗಳಿವೆ. ಇವುಗಳಲ್ಲಿ ಒಂದು ಮಾತ್ರ ಸುಸ್ಥಿತಿಯಲ್ಲಿದ್ದು, ಉಳಿದವು ಭಗ್ನವಾಗಿವೆ. ಇಲ್ಲಿಯ ಸ್ಥಳೀಯರು ಇವುಗಳನ್ನು ರಕ್ಷಸಕಲ್ಲು, ರಾಕ್ಷಸಕಲ್ಲು, ರಕ್ಕಸಗಲ್ಲು, ರಕ್ಷಿಸಿಕಲ್ಲು(ಕಲ್ಲು)ಗಳೆಂದು, ಈ ಪ್ರದೇಶವನ್ನು ರಕ್ಷಸಮಟ್ಟಿ,

ರಕ್ಷಸಿಮಟ್ಟೆಯೆಂದು ಕರೆಯುತ್ತಾರೆ.[7]ಇವುಗಳಿಗೆ ಹುಲಿಕುಂಟೆ ಜನರು ಯಾವುದೇ ಪೂಜೆ ಪುನಸ್ಕಾರಗಳು ಮಾಡಿದಂತೆ ಕಾಣುವುದಿಲ್ಲ. ಆದರೆ ಕುಮತಿ ಪ್ರದೇಶದ ಜನರು ಪ್ರಮುಖ ಹಬ್ಬ ಹರಿದಿನಗಳಂದು ಮೊದಲು ಎಡೆ ಇಟ್ಟು ಪೂಜಿಸುವ ಸಂಪ್ರದಾಯವಿಟ್ಟುಕೊಂಡಿದ್ದಾರೆ. ಜೊತೆಗೆ ಅನಂತನ ಹುಣ್ಣಿಮೆಯಿಂದ ವಿಶೇಷ ಪೂಜೆ ನಡಿಸಿ ಜನರಿಗೆ ಅನ್ನ ಸಂತರ್ಪಣೆ ಮಾಡುತ್ತಾರೆ. ಸಾಮಾನ್ಯವಾಗಿ ಈ ಸಂದರ್ಭದಲ್ಲಿ ಪಾಯಸ, ಅನ್ನದ ಎಡೆ ಹಾಕಿ ಪೂಜಿಸುವ ಪರಿಪಾಠವಿದೆ. ಮೇಲಿನ ಎರಡು ಪ್ರದೇಶಗಳಲ್ಲಿಯೂ ಇವುಗಳ ನಿರ್ಮಾಣದ ಬಗ್ಗೆ ಅನಾದಿಕಾಲದಿಂದಲೂ ಜನಪದರಲ್ಲಿ ನಂಬಿಕೆಯ ಹೇಳಿಕೆಯೊಂದು ಉಳಿದುಕೊಂಡು ಬಂದಿದೆ.

ಅದೇನೆಂದರೆ ಹಿಂದೆ "ಶ್ರೀ ಭೈರವೇಶ್ವರ ಎಂಬ ದೇವತಾ ಪುರುಷನು ಬೇಟೆಗಾಗಿ ಬಂದ ಸಂದರ್ಭದಲ್ಲಿ ರಕ್ಕಸರು ಅಡ್ಡಿ ಮಾಡಿದ್ದರಿಂದ ಅವರನ್ನು ಕಲ್ಲುಗಳಾಗುವಂತೆ ಆ ದೇವತಾಪುರುಷನು ಶಾಪ ಕೊಟ್ಟಿದ್ದರಿಂದಾಗಿ ಅವು ಕಲ್ಲುಗಳಾಗಿವೆ" ರಾಕ್ಷಸರಿಗೆ ಶಾಪ ಕೊಟ್ಟಿದ್ದರಿಂದಾಗಿ ಅವು ಕಲ್ಲುಗಳಾಗಿ, ಜನಮನದಲ್ಲೂ 'ರಾಕ್ಷಸಕಲ್ಲು' ಎಂದು ಹೆಸರು ಪಡೆದುಕೊಂಡು ಅಸ್ತಿತ್ವದಲ್ಲಿವೆ ಎಂಬುದು ಜನರ ನಂಬಿಕೆ. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ತಾಲೂಕು ಯರ್ರೇನಹಳ್ಳಿ ಗ್ರಾಮದ ಶ್ರೀ ಅಜ್ಜನಮುನಿ ವಿರಚಿತ ಶ್ರೀ ಕಾಲಭೈರವೇಶ್ವರ ಅರ್ಥಾತ್ ಶ್ರೀ ನುಂಕೇಮಲೆ ಸಿದ್ಧೇಶ್ವರ ಎಂಬ ಯಕ್ಷಗಾನ ಬಯಲಾಟದಲ್ಲಿ ಇವುಗಳ ನಿರ್ಮಾಣದ ಬಗ್ಗೆ ಉಲ್ಲೇಖ ಬರುತ್ತದೆ. ಅದರಲ್ಲಿ "ಭಲ..ಲಲ..ಅಹೋ ಅಕ್ಕಯ್ಯ ಚೆಂದದಿಂದ ಹಿಂದಕ್ಕೆ ರಕ್ಕಸರೊಡಗೂಡಿ ಬರುವಾಗ ಸಂಧಿಸಿದ ದುರ್ಘಟನೆ ಏನೆಮದರೆ ಭಳಿರೇ..... ಆಕುಲ್ಲ ದಾನವರನ್ನು ಹುಲ್ಲೇಗಳಂ ಕೊಲ್ಲುವ ಸಮಯದಿ ಯಮ್ಮನ್ನು ತಲ್ಲಣಿಸುವಂತೆ ಮಾಡಿದರು. ಆದರಿಂದಲೇ ಭಳಿರೇ..... ಆ ರಕ್ಕಸರನ್ನು ಕುಮ್ತಿ ರೇವಿನಲ್ಲಿಯೇ ಕಲ್ಲಾಗಿ ಬೀಳುವಂತೆ ಬಲ್ಲಿದ ಶಾಪವಂ ಕೊಟ್ಟು ಬಂದೆನು. ಅಲ್ಲಿಂದ ಬರಲು ತಡವುಂಟಾಯಿತಮ್ಮ ಶಿವನ ಪುತ್ರಿ ಸದಮಲಗಾತ್ರಿ" ಎಂದು ತನ್ನ ಅಕ್ಕನಿಗೆ ಶ್ರೀ ಭೈರವೇಶ್ವರನು ತಡವೇಕೆಂದು ಕೇಳಿದ್ದಕ್ಕೆ ಉತ್ತರ ಹೇಳುತ್ತಾನೆ.[8] ಕುಮತಿಯ ಗೊಂಬೆಗಳು ಪಂಚಪಾಂಡವರನ್ನು ನಿರ್ದೇಶಿಸುತ್ತವೆಂದು ಅ. ಸುಂದರ ಅವರು ಅಭಿಪ್ರಾಯಪಟ್ಟಿದ್ದಾರೆ. ಅವರೇ ಮುಂದುವರಿದು ಈ ಗೊಂಬೆಗಳು ಬೃಹತ್ ಶಿಲಾಸಂಸ್ಕೃತಿಯ ಧಾರ್ಮಿಕ ನಂಬಿಕೆ. ಭಾವನೆ ಮತ್ತು ಪರಂಪರೆಯನ್ನು ಸೂಚಿಸುವ ಇದುವರೆಗೂ ಪರಿಶೀಲಿಸಿದ ಬೃಹತ್ ಶಿಲಾ ಗೋರಿಗಳಿಗಿಂತಲೂ, ಅಪರೂಪದ ನಿರ್ಮಿತಿಗಳಾಗಿವೆ. ಮತ್ತು ಈ ಗೊಂಬೆಗಳು ಆ ಜನರ ನಿರ್ಮಾಣ ರೂಪಣ ಕಾರ್ಯಗಳಲ್ಲಿನ ಸರಳ ಹಾಗೂ ಚತುರ ತಾಂತ್ರಿಕ ಕುಶಲತೆಯನ್ನು ಎತ್ತಿ ತೋರಿಸುತ್ತದೆ. ಇವು ತರುವಾಯದ ಶಿಲಾ ನಿರ್ಮಿತಿಗಳಿಗೆ ನಾಂದಿಯಾಗಿವೆ ಎಂದಿದ್ದಾರೆ.

ಶ್ರೀ ನುಂಕೇಶ್ವರ ದೇವರ ಶಾಪದಿಂದಾಗಿಯೇ ರಾಕ್ಷಸರು ಕಲ್ಲುಗಳಾಗಿ ನಿಂತಿರುವುದು ಎಂಬ ಅಭಿಪ್ರಾಯವು ಸಮಂಜಸವಲ್ಲ. ಕಾರಣ ಶ್ರೀ ನುಂಕೇಶ್ವರ (ಶ್ರೀ ನುಂಕೇಮಲ್ಲೇಶ್ವರ)/ಭೈರವೇಶ್ವರ ದೇವಾಲಯ ಇಂದಿಗೂ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ಸಮೀಪದ ನುಂಕೆಮಲೆ ಬೆಟ್ಟದಲ್ಲಿದ್ದು, ಈ ಪ್ರದೇಶದ ಸುತ್ತಲಿನ ಜನ ಈ ದೇವರನ್ನು ಮನೆ ದೇವರನ್ನಾಗಿ ಮಾಡಿಕೊಂಡಿದ್ದಾರೆ. ಶ್ರೀ ನುಂಕೇಮಲೇಶ್ವರ ಮತ್ತು ಮಲ್ಲಿಕಾರ್ಜುನ ಮೊದಲಾದ ದೇವಾಲಯಗಳನ್ನು ಕದಂಬರಾಜರು ನಿರ್ಮಿಸಿ ಆ ದೇವಾಲಯಗಳಿಗೆ ದತ್ತಿ ಬಿಟ್ಟ ಬಗ್ಗೆ ಶಾಸನಗಳು ಮತ್ತು ಕೆಲ ಚರಿತ್ರೆ ಗ್ರಂಥಗಳಿಂದ ತಿಳಿದುಬರುತ್ತದೆ. ಆದ್ದರಿಂದ ಶ್ರೀನುಂಕೇ ಭೈರವೇಶ್ವರ ಕದಂಬರ ಆರಾಧ್ಯ ದೈವವೆಂದು ತಿಳಿದುಬರುತ್ತದೆ. ಪ್ರಸ್ತುತ ದೇವತಾ ಪುರುಷನ ಶಾಪದಿಂದಾಗಿ ಅಥವಾ ಬಾಣ ಪ್ರಯೋಗದಿಂದಾಗಿ ಅವು ನಿರ್ಮಾಣ ಆಗಿಲ್ಲ. ಬದಲಾಗಿ ನುಂಕಪ್ಪ ಬೃಹತ್ ಶಿಲಾಯುಗ ಕಾಲದ ಪ್ರಮುಖನಾಗಿರಬೇಕು. ಕುಮತಿ, ಹುಲಿಕುಂಟೆ ಪ್ರದೇಶಗಳಿಗೆ ಆತ ಬೇಟೆಗಾಗಿ ಬಂದಿರಬೇಕು. ಅಲ್ಲಿರುವ ಜನರು ಹೊಸ ಮನುಷ್ಯನೊಡನೆ ಹೋರಾಟಕ್ಕೆ ಇಳಿದಿರಬೇಕು. ಪ್ರಾಯಶಃ ಶ್ರೀ ನುಂಕೇಶ್ವರ ಬಹಳ ಬಲಿಷ್ಠನಿದ್ದು, ಈ ಎರಡು ಪ್ರದೇಶಗಳಲ್ಲೂ ತನ್ನ ವಿರುದ್ಧ ಯುದ್ಧಕ್ಕೆ ಬಂದವನನ್ನು ಕೊಂದಿರಬೇಕು (ಆದಿಮ ಸಮಾಜಗಳಲ್ಲಿ ತಮ್ಮ ಜನರನ್ನು ಹೊರತುಪಡಿಸಿ ಅಂದರೆ ಹೊಸ ಮನುಷ್ಯರು ತಾವಿದ್ದ ಪ್ರದೇಶಕ್ಕೆ ಬಂದರೆ ಅವರೊಡನೆ ಯುದ್ಧಕ್ಕಿಳಿಯುವುದು ಸಾಮಾನ್ಯವಾಗಿತ್ತು). ಹಾಗಾಗಿ ಅಲ್ಲಿ ಎಷ್ಟು ಜನ ಸತ್ತರೋ ಅವರೆಲ್ಲರ ಸ್ಮರಣೆಗೆ ಮಾನವಾಕಾರದ ಶಿಲ್ಪಗಳನ್ನು ನಿಲ್ಲಿಸಿರಬೇಕು. ಅವು ನೋಡಲು ವಿಚಿತ್ರವಾಗಿ ಕಂಡುಬಂದಿದ್ದರಿಂದ ಆ ರೀತಿ ಐತಿಹ್ಯವನ್ನು ಜನ ಹುಟ್ಟು ಹಾಕಿರಬೇಕು. ಆದರಿಂದ್ದ ಶಾಪ ಕೊಟ್ಟು ಮತ್ತು ಬಾಣ ಪ್ರಯೋಗದಿಂದ ನಿರ್ಮಾಣವಾಗಿದೆ ಎಂಬುದು ಜನರ ಐತಿಹ್ಯವೆಂದು ಹೇಳಬಹುದಾಗಿದೆ.

ಸಂಪೂರ್ಣವಾಗಿ ಮಾನವಾಕೃತಿಯ ಲಕ್ಷಣಗಳನ್ನೊಳಗೊಂಡು ಕುಮತಿ, ಹುಲಿಕುಂಟೆಯ ಶಿಲ್ಪಗಳನ್ನು ಬೇರೆ ಯಾವ ನೆಲೆಗಳ ಮಾನವಾಕೃತಿಗಳು ಸಮಗಟ್ಟಲಾರವು. ಈ ನಮೂನೆಯ ಶಿಲ್ಪಗಳು ಬೇರೆ ಪ್ರದೇಶಗಳಲ್ಲಿ ಉಗಮವಾಗಿರಬೇಕು. ಅವು ಅಂತಿಮವಾಗಿ ಕುಮತಿ, ಹುಲಿಕುಂಟೆಯಂಥ ನೆಲೆಗಳಲ್ಲಿ ಅಂತಿಮ ರೂಪ ಕಂಡಿರಬೇಕು (ಬೆಳವಣಿಗೆ ಆಗಿರಬೇಕು). ಸುಸ್ಥಿತಿಯಲ್ಲಿರುವ ಕುಮತಿಯ ಶಿಲ್ಪಗಳನ್ನು ಬಹುಸೂಕ್ಷ್ಮವಾಗಿ ಗಮನಿಸಿದರೆ ಎಡಭಾಗದಲ್ಲಿರುವ ಮಾನವಾಕೃತಿಯು ಪ್ರಾಯಶಃ ಸ್ತ್ರೀಯದು ಇರಬೇಕೆನ್ನಿಸುತ್ತದೆ. ಈ ಶಿಲ್ಪದ ಸೊಂಟದ ಭಾಗ ಚಿಕ್ಕದಾಗಿದ್ದು, ಅದರ ಕೆಳಗಿನ ಭಾಗ ದಪ್ಪವಾಗಿದೆ. ಬಲಭಾಗದ ಶಿಲ್ಪಕ್ಕಿಂತ ಇದು ಎತ್ತರದಲ್ಲಿ ಕಡಿಮೆ ಇದೆ. ಆದರೆ ಬಲಭಾಗದ ಶಿಲ್ಪವು ಎತ್ತರವಾಗಿದ್ದು, ಸೊಂಟದ ಭಾಗ ದಪ್ಪವಾಗಿದೆ. ಹೀಗಾಗಿ ಇವು ಸ್ತ್ರೀ, ಪುರುಷ ಮಾನವಾಕೃತಿಗಳಿರಬಹುದೆನಿಸುತ್ತದೆ.

ಇವು ದಕ್ಷಿಣ ಭಾರತದ ಇತರೆ ನೆಲೆಗಳಲ್ಲಿ ದೊರೆಯುವ ನಿಲುಸುಗಲ್ಲುಗಳೋಪಾದಿಯಲ್ಲಿದ್ದು, ಇವು ಮಾನವಾಕಾರ ಪಡೆದುಕೊಂಡಿವೆ. ಬೃಹತ್ ಶಿಲಾಯುಗ ಕಾಲದ ಜನರು ಸತ್ತಾಗ ಸಮಾಧಿ ಮಾಡುವ ವಿಧಾನಗಳಲ್ಲಿ ಇದೊಂದಾಗಿದೆ ಎಂದು ಅಂತಿಮವಾಗಿ ಹೇಳಬಹುದು. ಕರ್ನಾಟಕದ ಇತರೆ ನೆಲೆಗಳಲ್ಲಿ ದೊರೆಯುವ ಮಾನವಾಕೃತಿ ಶಿಲ್ಪಗಳಿಗಿಂತ ಕುಮತಿ, ಹುಲಿಕುಂಟೆ ಶಿಲ್ಪಗಳು ಭಿನ್ನವಾಗಿದ್ದು. ಅವು ಬಹುಶಃ ಆ ಕುಲದ ಯಜಮಾನ ಅಥವಾ ಹಿರಿಯ ಸತ್ತಾಗ ಅವನ ನೆನಪಿನ ಸ್ಮಾರಕವಾಗಿ ಅದೇ ಆಕಾರದಲ್ಲಿ ಮಾಡಿ ನಿಲ್ಲಿಸಿರಬೇಕು. ಪ್ರಾಯಶಃ ಅಂದಿನ ಜನತೆಯ (ಕಬ್ಬಿಣ ಯುಗದ) ಧಾರ್ಮಿಕ ಹಾಗೂ ಸಾಮಾಜಿಕ ನಂಬಿಕೆಗಳಲ್ಲಿ ಇದೂ ಒಂದಾಗಿರಬೇಕು. ಪ್ರಸ್ತುತ ಈ ಎರಡು ನೆಲೆಗಳಲ್ಲಿ ಉತ್ಖನನ ನಡೆಸಿದರೆ ಅನೇಕ ಹೊಸ ಅಂಶಗಳು ಬೆಳಕಿಗೆ ಬರುತ್ತವೆ ಎಂಬುದರಲ್ಲಿ ಸಂಶಯವಿಲ್ಲ.

**೭. ಹಳನೆಲ್ಲುಡಿ:** ಹಳನೆಲ್ಲುಡಿ ಬಳ್ಳಾರಿಯಿಂದ ೪೦ ಕಿ.ಮೀ. ಕಂಪ್ಲಿಯಿಂದ ೧೦ ಕಿ.ಮೀ. ದೂರದಲ್ಲಿದೆ. ಗ್ರಾಮದ ಉತ್ತರಕ್ಕೆ ೨ ಕಿ.ಮೀ. ದೂರದಲ್ಲಿನ ನಾರೀಹಳ್ಳದ ದಂಡೆಯ ಮೇಲಿನ ಈ ನೆಲೆಯಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಕೈಕೊಡಲಿ ಮೊದಲದ ಶಿಲಾಯುಧಗಳನ್ನು ಶೋಧಿಸಲಾಗಿದೆ.

ಹಳನೆಲ್ಲುಡಿ ನಿರುಣ್ಣಗಲ್ಲು ಎಂಬ ಶಬ್ದದಿಂದ ನಿಷ್ಪನ್ನವಾಗಿರುವುದಾಗಿಯೂ ನಿರುಣ್ಣಗಲ್ಲು > ನೆಲುಂಡ > ನೆಲ್ಲುಡಿಯಾಗಿರುವುದಾಗಿಯೂ ನೆರುಣ್ಣ ಎಂಬುದಕ್ಕೆ ನೆಟ್ಟಗಿನ ಆಕೃತಿ, ನೇರವಾದ ಎಂಬ ಆಧಾರವಿದ್ದು ನೆಟ್ಟಗಿನ ಕಲ್ಲು ಎಂದು ಹೇಳಬಹುದಾಗಿದೆ. ಗ್ರಾಮದಲ್ಲಿ ಪ್ರಾಗೈತಿಹಾಸ ಕಾಲದ ನಿಲುವುಗಲ್ಲು ಪತ್ತೆಯಾಗಿದ್ದು, ಅದರ ಆಧಾರದ ಮೇಲೆ ಇದು ಆದಿಮಾನವನ ನೆಲೆಯಾಗಿತ್ತೆಂದು ಹೇಳಬಹುದು.

ಇಲ್ಲಿ ದೊರೆತಿರುವ ನಿಲುವುಗಲ್ಲು ಕರಿಯ ಕಲ್ಲಿನದು. ಮೇಲ್ಮುಖವನ್ನು ನಯವಾಗಿ ಮುಚ್ಚಲಾಗಿದೆ. ಈ ಕಲ್ಲು ಆರಾಧನೆಗೆ ಸಂಬಂಧಿಸಿದ್ದಾಗಿದೆ. ಕಲ್ಲಿನ ಎತ್ತರ ೧.೪೨ಮೀ. ಮೊಂಡಾದ ಶಿರೋಭಾಗವಿದ್ದು ೩೬ ಸೆಂ.ಮೀ. ಸರಾಸರಿ ಅಗಲ ೧ ಮೀ. ಅಗಲವಿದೆ. ಇದರ ದಪ್ಪ ತಳ ೪೨ ಸೆಂ.ಮೀ ಶಿರೋಭಾಗದಲ್ಲಿ ೨೧ ಸೆಂ.ಮೀ ವ್ಯಾಸದ ತುದಿ ೧೫ ಸೆಂ.ಮೀ. ಮಾನವ ನಿರ್ಮಿತ ಕುಳಿಗಳಿವೆ. ಇದರ ಬುಡದಿಂದ ತುದಿಯವರೆಗೆ ವಿವಿಧ ವ್ಯಾಸ ಉಳ್ಳ ಸುಮಾರು ೩೦ ಕುಳಿಗಳಿವೆ. ಈ ನಿಲುವುಗಲ್ಲು ನವಶಿಲಾಯುಗದ ಎಲ್ಲ ಪ್ರಮುಖ ಲಕ್ಷಣಗಳನ್ನು ಹೊಂದಿದೆ. ಇಂದಿಗೂ ಈ ಗ್ರಾಮದ ಕುರುಬ ಜನಾಂಗದವರು ಈ ಶಿಲೆಯನ್ನು ಪೂಜಿಸುತ್ತಾ ಬಂದಿದ್ದಾರೆ.[೨]

ಹಳೇ ನೆಲ್ಲುಡಿಯ ಉತ್ತರಕ್ಕೆ ಸುಮಾರು ೨ ಕಿ.ಮೀ. ದೂರದಲ್ಲಿ ನಾರಿಹಳ್ಳದ ಪೂರ್ವ ದಂಡೆಯ ಮೇಲೆ ಶಾಂತಿನಗರದ ಸುಬ್ಬಾರವು ಕ್ಯಾಂಪ್ ಪರಿಸರದಲ್ಲಿ ಒಂದು ಬೂದಿದಿಬ್ಬವಿದೆ. ಈ ಬೂದಿದಿಬ್ಬ ಬಹಳಷ್ಟು ಅಗೆತಕ್ಕೆ ತುತ್ತಾಗಿದ್ದರೂ ಇಂದಿಗೂ ಅದು ೯ x ೬ ಮೀ. ವಿಸ್ತಾರವಿದೆ. ಇಲ್ಲಿ ಬೂದಿಯು ಬಂಡೆ ರೂಪದಲ್ಲಿ ರಾಶಿ ರಾಶಿಯಾಗಿ ಸಿಗುತ್ತದೆ. ಅಲ್ಲದೆ ಮುದ್ದಾಪುರ ಸಮೀಪ ವೆಂಕಟಕೊಂಡಪ್ಪ ಅವರ ಜಮೀನಿನಲ್ಲಿ ಇದೇ ರೀತಿಯ ಮತ್ತೊಂದು ಬೂದಿದಿಬ್ಬವನ್ನು ಗುರುತಿಸಲಾಗಿದೆ.

**೮. ಅಪ್ಪಯ್ಯನಹಳ್ಳಿ:** ಈ ನೆಲೆ ಬಳ್ಳಾರಿ ಜಿಲ್ಲೆಯ ತಾಲೂಕು ಕೇಂದ್ರವಾದ ಕೂಡ್ಲಿಗಿಯಿಂದ ಸು. ೨೯ ಕಿ.ಮೀ. ದೂರದಲ್ಲಿದೆ. ಇಲ್ಲಿ ಶಿಲಾ ತಾಮ್ರಯುಗ ಸಂಸ್ಕೃತಿಗೆ ಸೇರಿದ ವರ್ಣಚಿತ್ರಗಳು ಅಲ್ಲಿನ ಗವಿಗಳಲ್ಲಿ ಕಂಡುಬಂದಿವೆ. ಅಲ್ಲದೆ ಇಲ್ಲಿಯೇ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಗೋರಿ ಮತ್ತು ವರ್ಣಚಿತ್ರಗಳು ಕಂಡುಬಂದಿದ್ದು ಅಂದಿನ ಸಂಸ್ಕೃತಿಯನ್ನು ಅರಿಯಲು ಸಹಕಾರಿಯಾಗಿವೆ.[10]

**೯. ತಿಮ್ಮಲಾಪುರ:** ಈ ನೆಲೆ ಬಳ್ಳಾರಿ ಜಿಲ್ಲೆಯ ತಾಲೂಕು ಕೇಂದ್ರವಾದ ಕೂಡ್ಲಿಗಿಯಿಂದ ಸು. ೧೯ ಕಿ.ಮೀ. ದೂರದಲ್ಲಿದೆ. ಇಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಗೋರಿ ಮತ್ತು ನೆಲೆಯನ್ನು ಸಂಶೋಧಕರು ಗುರುತಿಸಿದ್ದು, ಅಂದಿನ ಸಂಸ್ಕೃತಿಯನ್ನು ಅರಿಯಲು ಸಹಕಾರಿಯಾಗಿದೆ. [11]

**೧೦ ಬೆಳಗಟ್ಟ:** ಈ ನೆಲೆ ಬಳ್ಳಾರಿ ಜಿಲ್ಲೆಯ ತಾಲೂಕು ಕೇಂದ್ರವಾದ ಕೂಡ್ಲಿಗಿಯಿಂದ ಸು. ೩೧ ಕಿ.ಮೀ. ದೂರದಲ್ಲಿದೆ. ನವಶಿಲಾಯುಗ ಸಂಸ್ಕೃತಿಗೆ ಸೇರಿದ ಉಜ್ಜಿ ನಯಗೊಳಿಸಿದ ಕಲ್ಲಿನ ಕೊಡಲಿ ಮತ್ತು ಅವಶೇಷಗಳನ್ನು ವಿದ್ವಾಂಸರು ಗುರುತಿಸಿದ್ದಾರೆ. ಇದರಿಂದ ಅಂದಿನ ಸಂಸ್ಕೃತಿಯನ್ನು ಅರಿಯಲು ಸಹಕಾರಿಯಾಗಿವೆ.[12]

**೧೧. ಹಾಲಸಾಗರ:** ಬಳ್ಳಾರಿ ಜಿಲ್ಲೆಯ ತಾಲೂಕು ಕೇಂದ್ರವಾದ ಕೂಡ್ಲಿಗಿಯಿಂದ ಪೂರ್ವಕ್ಕೆ ಸು. ೧೯ ಕಿ.ಮೀ. ದೂರದಲ್ಲಿದೆ. ಇಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಗೋರಿ ನೆಲೆಯನ್ನು ಸಂಶೋಧಕರು ಗುರುತಿಸಿದ್ದು, ಇಲ್ಲಿ ಹಾದಿಕೋಣೆ ಗೋರಿಗಳು ವಿಶೇಷವಾಗಿ ದೊರೆತಿದ್ದು, ಅಂದಿನ ಸಂಸ್ಕೃತಿಯನ್ನು ತಿಳಿಯಲು ಸಹಕಾರಿಯಾಗಿದೆ.[13]

**೧೨. ಕಾಕುಬಾಳು ಗುಡ್ಡ (ಕುಕ್ಕಿಬೇವಿನ ಹಳ್ಳಿ) :** ತಾಲೂಕು ಕೇಂದ್ರವಾದ ಹೊಸಪೇಟೆಯಿಂದ ಪೂರ್ವಕ್ಕೆ ಸು. ೧೯ ಕಿ.ಮೀ. ದೂರದಲ್ಲಿದೆ. ಇಲ್ಲಿ ನವ ಶಿಲಾಯುಗ ಸಂಸ್ಕೃತಿಗೆ ಸೇರಿದ ಬೂದಿದಿಬ್ಬದ ನೆಲೆಯನ್ನು ಸಂಶೋಧಕರು ಗುರುತಿಸಿದ್ದು, ಅಂದಿನ ಸಂಸ್ಕೃತಿಯನ್ನು ಅರಿಯಲು ಸಹಕಾರಿಯಾಗಿದೆ.[14]

[1] ಡಾ. ಅ.ಸುಂದರ. ೧೯೯೪ ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ. ಬೆಂಗಳೂರು.

[2] ಐ.ಎ.ಆರ್. ೧೯೭೬-೭೭

[3] ಇಂ.ಅ.ರಿ ೧೯೭೬-೭೭

[4] ಡಾ. ಅ.ಸುಂದರ. ಪೂರ್ವೋಕ್ತ.

[5] ಬಾಲಸುಬ್ರಮಣ್ಯ (ಸಂ), ಕುರಗೋಡು.

[6] ಇತಿಹಾಸ ದರ್ಶನ, ಸಂ. ೧೪. ತಿಪ್ಪೇಸ್ವಾಮಿ ಎಚ್. ೧೯೯೮, "ಕೂಡ್ಲಿಗಿ ತಾಲೂಕಿನ ಅಪರೂಪದ ಮಾನವಾಕೃತಿಗಳು",

[7] ಸುಂದರ ಅ., ೧೯೯೪, ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ, ಬೆಂಗಳೂರು.

[8] Subrao B. 1949, Prehistoric and Early historic Bellary (unpublished Ph.D Thisis)

[9] A. Foate R.B 1916 Indian Prehistoric and Protohistoric Antiquities, Madras. & A.S.I.A.R. 1930

[10] Megalithic Tombs & other Ranains in the Deccan Hyderabad 1941

[11] 1. Foovte R.B. 1916 Indian Prehistoric & Protohistoric Antiquties, Madras

2. Paddayya. K. 1973, Investigation into the Neolithic Culture of Surpur Road, South India, Leiden

[12] ೧. Foote R.B. 1916 Indian Prehistoric & Protohistoric Antiquities, Madras.

೨. Allchin F.R. 1963, Neolithic Cattle Keepers of South India, Cambridge

೩. ಪತ್ರಿಕಾ ವರದಿ, ಕನ್ನಡಪ್ರಭ -೧೪-೦೮-೯೮

೪. Exeavations at Kappagal, Pune.

೫. ಅ. ಸುಂದರ, ೧೯೯೪, ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ, ಬೆಂಗಳೂರು.

[13] Foote R.B. 1916, Indian Prehistoric & Protohistoric Antiquities, Madras.

[14] Foote R.B. 1916, Indian Prehistoric & Protohistoric Antiquities, Madras.

(೨)

**೧೩. ಕುಡುತಿನಿ:** ತಾಲೂಕು ಕೇಂದ್ರವಾದ ಬಳ್ಳಾರಿಯಿಂದ ಪಶ್ಚಿಮಕ್ಕೆ ಸು. ೨೭ ಕಿ.ಮೀ. ದೂರದಲ್ಲಿದೆ. ಇಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಗೆ ಸೇರಿದ ವಿವಿಧ ಮಾದರಿ ಉಪಕರಣಗಳು ದೊರೆತಿವೆ. ಅಲ್ಲದೆ ಇಲ್ಲಿಯೇ ನೂತನ ಶಿಲಾಯುಗ ಸಂಸ್ಕೃತಿಯ ಶಿಲೋಪಕರಣಗಳಾದ ಉಜ್ಜಿ ನಯಗೊಳಿಸಿದ ಕೊಡಲಿ, ಉಂಗುರ ಕಲ್ಲು ಮೊದಲಾದವು ದೊರೆತಿವೆ. ನವಶಿಲಾಯುಗ/ಶಿಲಾತಾಮ್ರಯುಗ ಸಂಸ್ಕೃತಿಗೆ ಸೇರಿದ ಬೂದಿದಿಬ್ಬವನ್ನು ವಿದ್ವಾಂಸರು ಶೋಧಿಸಿದ್ದು, ಈ ಸಂಸ್ಕೃತಿಗಳ ಕುರಿತು ಅಧ್ಯಯನ ಮಾಡಲು ಆಕರಗಳಾಗಿವೆ.[1]

**೧೪. ಬಾದನಹಟ್ಟಿ ಗುಡ್ಡ:** ಬಳ್ಳಾರಿ ತಾಲೂಕಿನ ಈ ನೆಲೆ ಆದಿ ಹಳೆಯ ಶಿಲಾಯುಗ ಸಂಸ್ಕೃತಿಯ ನೆಲೆಯಾಗಿದ್ದು, ಇಲ್ಲಿ ಆ ಕಾಲದ ಕೈಕೊಡಲಿಗಳು ದೊರೆತಿದ್ದು, ಅಧ್ಯಯನಕ್ಕೆ ಆಕರಗಳಾಗಿವೆ.[2]

**೧೫. ಬಳ್ಳಾರಿ:** ತಾಲೂಕು ಕೇಂದ್ರ ಮತ್ತು ಬಳ್ಳಾರಿ ಜಿಲ್ಲೆಯ ಜಿಲ್ಲಾ ಕೇಂದ್ರವಾಗಿರುವ ಬಳ್ಳಾರಿಯಲ್ಲಿಯೂ ಆದಿ ಹಳೆ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಶೋಧಿಸಲಾಗಿದೆ. ಅಲ್ಲದೆ ಇಲ್ಲಿ ನೂತನ ಶಿಲಾಯುಗ ಕಾಲದ ಅವಶೇಷಗಳನ್ನು ಮತ್ತು ಶಿಲಾತಾಮ್ರಯುಗ ಸಂಸ್ಕೃತಿಯ ನೆಲೆಯನ್ನು ಪತ್ತೆ ಹಚ್ಚಲಾಗಿದೆ.

ಬಳ್ಳಾರಿ ದೊಡ್ಡ ಬೆಟ್ಟದಲ್ಲಿ ನೂತನ ಶಿಲಾಯುಗದ ಅವಶೇಷಗಳನ್ನು ೧೯೮೨ರಲ್ಲಿ ಫ್ರೇಜರ್ ಅವರು ಮೊದಲು ಗುರುತಿಸಿದರು. ಇದಾದ ನಂತರ ೧೮೯೬ರಲ್ಲಿ ರಾಬರ್ಟ್ ಬ್ರೂಸ್‌ಫೂಟ್ ಅವರು ನೂತನ ಶಿಲಾಯುಗದ ಅವಶೇಷಗಳೊಂದಿಗೆ ಕಬ್ಬಿಣ ಕರಗಿಸುವ ವಸ್ತುಗಳನ್ನು ಹಾಗೂ ಕುಲುಮೆಯನ್ನು ಗುರುತಿಸಿದರು. ಇದೇ ರೀತಿ ಕಪ್ಪಗಲ್ಲಿನಲ್ಲಿ ಆಯುಧಗಳನ್ನು ತಯಾರಿಸುವ ಕಲ್ಲು, ವಿವಿಧ ಹಂತದಲ್ಲಿ ಸಿದ್ಧಪಡಿಸಿದ ಆಯುಧಗಳು, ತ್ಯಾಜ್ಯ ಶಿಲೆ, ಸಂಪೂರ್ಣವಾಗಿ ತಯಾರಾದ ಆಯುಧಗಳು, ನೂತನ ಶಿಲಾಯುಗ ಆಯುಧಗಳು ಹೀಗೆ ನೂತನ ಶಿಲಾಯುಗದ ಆಯುಧದ ಭಂಡಾರ ಎನ್ನುವಷ್ಟು ವಸ್ತುಗಳು ಇಲ್ಲಿ ದೊರತಿವೆ. ಆಯುಧಗಳ ತಯಾರಿಕೆಗೆ ವಿವಿಧ ಭೌತಿಕ ಶಿಲೆಗಳನ್ನು ಉಪಯೋಗಿಸಿದ್ದಾರೆ. ಟ್ರಾಪ್ ಶಿಲೆಗಳಿಂದ ಕುಟ್ಟುವ ಕಲ್ಲು, ಅರೆಯುವ ಕಲ್ಲನ್ನು ತಯಾರಿಸಿದ್ದರು. ಅಲಗುಗಳ ತಯಾರಿಕೆಯಲ್ಲಿ ಚರ್ಟ್, ಆಗೇಟ್, ಚಾಲ್ಸಿಡನಿ ರಾಕ್, ಕ್ರಿಸ್ಟಲ್ಗಳನ್ನು ಉಪಯೋಗಿಸಿ ಹಲವಾರು ರೀತಿಯ ಸೂಕ್ಷ್ಮ ಶಿಲಾಯುಧಗಳನ್ನು ತಯಾರಿಸಿರುವುದು ತಿಳಿದುಬರುತ್ತದೆ. ಈ ಸ್ಥಳದ ಹತ್ತಿರದಲ್ಲಿ ಬಯಲು ಬಂಡೆಯ ಚಿತ್ರಗಳು ಹಾಗು ರೇಖಾಚಿತ್ರಗಳು ಹೇರಳವಾಗಿ ದೊರಕುತ್ತವೆ. ಮನುಷ್ಯ ಜಿಂಕೆ, ಗೂಳಿ ಮುಂತಾದ ಚಿತ್ರಗಳನ್ನು ನಿಖರವಾಗಿ ಬಿಡಿಸಲಾಗಿದೆ.[3]

**೧೬. ಬೆಳಗಲ್ಲು:** ತಾಲೂಕು ಕೇಂದ್ರವಾದ ಬಳ್ಳಾರಿಯಿಂದ ೧೨ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ಆದಿ ಹಳೆಶಿಲಾಯುಗ ಸಂಸ್ಕೃತಿಯ ವಾಸದ ನೆಲೆಯನ್ನು ಮತ್ತು ನೂತನ ಶಿಲಾಯುಗದ ಮಡಕೆ ಚೂರು, ಕೈಕೊಡಲಿ ಮೊದಲಾದ ಸಾಂಸ್ಕೃತಿಕ ಅವಶೇಷಗಳನ್ನು ಪತ್ತೆ ಹಚ್ಚಿ ಈ ನೆಲೆಯ ಮೇಲೆ ಬೆಳಕು ಬೀರಲಾಗಿದೆ.[4]

**೧೭. ಹಳಕುಂದಿ:** ತಾಲೂಕು ಕೇಂದ್ರವಾದ ಬಳ್ಳಾರಿಯಿಂದ ೧೨ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ರಾಬರ್ಟ್‌ಬ್ರೂಸ್‌ಫೂಟ್ ನೂತನ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಶಿಲಾಗುಳಿಗಳನ್ನು ಶೋಧಿಸಿರುವರು.[5] ಇತ್ತೀಚೆಗೆ ಇಲ್ಲಿ ತಯಾರಿಕಾ ಹಂತದ ವಿವಿಧ ಶಿಲೋಪಕರಣಗಳು ದೊರೆತಿವೆ.

**೧೮. ಕಲ್ಲಹಳ್ಳಿ:** ತಾಲೂಕು ಕೇಂದ್ರವಾದ ಕೂಡ್ಲಿಗಿಯಿಂದ ೪೮ ಕಿ.ಮೀ. ದೂರವಿರುವ ಈ ನೆಲೆಯಲ್ಲಿ (ತಿಪ್ಪೇಹಳ್ಳಿಗೆ ಹೋಗುವ ದಾರಿಯ ಹಾಳೂರಿನಲ್ಲಿ) ನೂತನ ಶಿಲಾಯುಗ, ಶಿಲಾತಾಮ್ರಯುಗ, ಬೃಹತ್ ಶಿಲಾ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಉಪಕರಣ ಹಾಗೂ ಮಡಕೆ ಭಾಗಗಳು ಮತ್ತು ವರ್ಣಚಿತ್ರಗಳನ್ನು ಶೋಧಿಸಲಾಗಿದೆ. ಅಲ್ಲದೇ ಇಲ್ಲಿಯೇ ಹಾಳಾಗಿರುವ ಬೂದಿದಿಬ್ಬವೊಂದನ್ನು ಶೋಧಿಸಲಾಗಿದೆ.[6]

**೧೯. ಕೊಂಚಗೇರಿ:** ತಾಲೂಕು ಕೇಂದ್ರವಾದ ಸಿರುಗುಪ್ಪದಿಂದ ೧೫ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಉಂಗುರಕಲ್ಲು ಉಪಕರಣ ಹಾಗೂ ಮಡಕೆ ಭಾಗಗಳು ಮತ್ತು ಶಿಲಾಗುಳಿಗಳನ್ನು ಶೋಧಿಸಲಾಗಿದೆ.[7]

**೨೦. ಕೋಟೆಕಲ್ಲು ದುರ್ಗಹಳ್ಳಿ:** ತಾಲೂಕು ಕೇಂದ್ರವಾದ ಸಿರುಗುಪ್ಪದಿಂದ ೧೧ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಶಿಲಾಯುಧ ಮತ್ತು ವಿವಿಧ ಉಪಕರಣ ಹಾಗೂ ಮಡಕೆ ಭಾಗಗಳನ್ನು ಶೋಧಿಸಲಾಗಿದೆ.[8]

**೨೧. ಸನವಾಸಪುರ:** ತಾಲೂಕು ಕೇಂದ್ರವಾದ ಸಿರುಗುಪ್ಪದಿಂದ ೧೩ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಕೈಕೊಡಲಿ ಮತ್ತು ವಿವಿಧ ಮಡಕೆಗಳನ್ನು ಇಲ್ಲಿ ಶೋಧಿಸಲಾಗಿದೆ.[9]

**೨೨. ಸುಕ್ರದಪ್ಪ ಬೆಟ್ಟ :** ತಾಲೂಕು ಕೇಂದ್ರವಾದ ಸಿರುಗುಪ್ಪದಿಂದ ೧೯ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಉಜ್ಜಿ ನಯಗೊಳಿಸಿದ ಕೊಡಲಿ, ಜಾಸ್ಪರ್ ಶಿಲೆಯ ಮೂಲಶಿಲಾಗಟ್ಟಿ, ನೀಳಗೆರೆಗಳುಳ್ಳ ಮೂಲಶಿಲೆ ದೊರೆತಿದೆ. ಬೃಹತ್ ಶಿಲಾಯುಗ ಸಂಸ್ಕೃತಿಯ ಗೋರಿ ನೆಲೆ ಇದಾಗಿದ್ದು, ಇಲ್ಲಿ ಕಲ್ಕುಪ್ಪೆ ಹಾಗೂ ಶಿಲಾವೃತ್ತಗಳು ದೊರೆತಿವೆ. ಇದೇ ಸ್ಥಳದಲ್ಲಿ ಅಶೋಕನ ಶಾಸನ ದೊರೆತಿರುವುದು ಗಮನಾರ್ಹ.[10]

**೨೩. ಅಪ್ಪಲಾಪುರ :** ತಾಲೂಕು ಕೇಂದ್ರವಾದ ಸಂಡೂರಿನಿಂದ ೧೧ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಸೂಕ್ಷ್ಮ ಶಿಲಾ ಉಪಕರಣಗಳನ್ನು ಇಲ್ಲಿ ಶೋಧಿಸಲಾಗಿದ್ದು, ಅಂದಿನ ಜನಜೀವನ ಅರಿಯಲು ಸಹಾಯಕವಾಗಿದೆ.

**೨೪. ಅಯ್ಯನ ಹಳ್ಳಿ :** ತಾಲೂಕು ಕೇಂದ್ರವಾದ ಸಂಡೂರಿನಿಂದ ೧೧ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ವಿವಿಧ ಮಾದರಿಯ ಸೂಕ್ಷ್ಮ ಶಿಲಾ ಉಪಕರಣಗಳನ್ನು ಇಲ್ಲಿ ಶೋಧಿಸಲಾಗಿದ್ದು, ಅಂದಿನ ಜನಜೀವನ ಅರಿಯಲು ಸಹಾಯಕವಾಗಿವೆ.[11]

**೨೫. ಇಂಗಳಗಿ :** ತಾಲೂಕು ಕೇಂದ್ರವಾದ ಸಂಡೂರಿನಿಂದ ೧೮ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ನವಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಬೂದಿದಿಬ್ಬವನ್ನು ಇಲ್ಲಿ ಶೋಧಿಸಲಾಗಿದ್ದು, ಅಂದಿನ ಸಂಸ್ಕೃತಿ ಅರಿಯಲು ಸಹಾಯಕವಾಗಿದೆ.[12]

**೨೬. ಕುರೇಕುಪ್ಪೆ (ಕುರೇಕುಪ್ಪ ಗುಡ್ಡ) :** ತಾಲೂಕು ಕೇಂದ್ರವಾದ ಸಂಡೂರಿನಿಂದ ೨೨ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ಆದಿ ಹಳೇಶಿಲಾಯುಗ ಮತ್ತು ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ನೆಲೆಗಳನ್ನು ಮತ್ತು ಅದೇ ಕಾಲದ ವಿವಿಧ ಮಾದರಿಯ ಸೂಕ್ಷ್ಮ ಶಿಲಾ ಉಪಕರಣಗಳನ್ನು ಇಲ್ಲಿ ಶೋಧಿಸಲಾಗಿದೆ. ಅಲ್ಲದೆ ನವಶಿಲಾಯುಗ ಸಂಸ್ಕೃತಿಯ ಬೂದಿದಿಬ್ಬವನ್ನು ಸಹಾ ಇಲ್ಲಿ ಪತ್ತೆ ಹಚ್ಚಲಾಗಿದೆ.[13]

**೨೭. ಕೋಡಾಳ :** ತಾಲೂಕು ಕೇಂದ್ರವಾದ ಸಂಡೂರಿನಿಂದ ೧೯ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ವಿವಿಧ ಮಾದರಿಯ ಸೂಕ್ಷ್ಮ ಶಿಲಾ ಉಪಕರಣಗಳನ್ನು ಇಲ್ಲಿ ಶೋಧಿಸಲಾಗಿದ್ದು,[14]ಅವು ಅಂದಿನ ಜೀವನ ಕ್ರಮ ಅರಿಯಲು ಸಹಾಯಕವಾಗಿದೆ.

**೧೮. ಜೋಗ :** ತಾಲೂಕು ಕೇಂದ್ರವಾದ ಸಂಡೂರಿನಿಂದ ೨೩ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ಆದಿ ಹಳೇಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಆಶ್ಯೂಲ್ ಮಾದರಿಯ ಕೈಕೊಡಲಿ, ಹೆರೆಗತ್ತಿ, ಮಡಕೆ ಚೂರುಗಳನ್ನು ಇಲ್ಲಿ ಗುರುತಿಸಲಾಗಿದ್ದು,[15]ಅಂದಿನ ಜೀವನಕ್ರಮ ಅರಿಯಲು ಇವು ಆಧಾರಗಳಾಗಿವೆ.

**೧೯. ತೋರಣಗಲ್ಲು :** ತಾಲೂಕು ಕೇಂದ್ರವಾದ ಸಂಡೂರಿನಿಂದ ೧೮ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ಸೂಕ್ಷ್ಮ ಶಿಲಾಯುಗ ಮತ್ತು ನವಶಿಲಾಯುಗ ಸಂಸ್ಕೃತಿಯ ನೆಲೆಗಳನ್ನು ಮತ್ತು ಅದೇ ಕಾಲದ ವಿವಿಧ ಮಾದರಿಯ ಸೂಕ್ಷ್ಮ ಶಿಲಾ ಉಪಕರಣಗಳನ್ನು ಇಲ್ಲಿ ಶೋಧಿಸಲಾಗಿದೆ. ಅಲ್ಲದೆ ನವಶಿಲಾಯುಗ ಸಂಸ್ಕೃತಿಯ ಭಗ್ನಾವಸ್ಥೆಯಲ್ಲಿರುವ ಬೂದಿದಿಬ್ಬ ಮತ್ತು ಮಡಕೆ ಚೂರುಗಳನ್ನು ಇಲ್ಲಿ ಪತ್ತೆ ಹಚ್ಚಲಾಗಿದ್ದು,[16]ಇವುಗಳ ಆಧಾರದ ಮೇಲೆ ಅಂದಿನ ಜೀವನಕ್ರಮ ಅರಿಯಬಹುದಾಗಿದೆ.

**೨೦. ದರೋಜಿ :** ತಾಲೂಕು ಕೇಂದ್ರವಾದ ಸಂಡೂರಿನಿಂದ ೨೮ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ಅದೇ ಹಳೇಶಿಲಾಯುಗ ಮತ್ತು ನವಶಿಲಾಯುಗ ಸಂಸ್ಕೃತಿಯ ನೆಲೆಗಳನ್ನು ಮತ್ತು ಅದೇ ಕಾಲದ ವಿವಿಧ ಮಾದರಿಯ ಉಜ್ಜಿ ನಯಗೊಳಿಸಿದ ಕೊಡಲಿ, ಶಿಲಾ ಉಪಕರಣಗಳನ್ನು ಇಲ್ಲಿ ಶೋಧಿಸಲಾಗಿದೆ. ಅಲ್ಲದೆ ನವಶಿಲಾಯುಗ ಸಂಸ್ಕೃತಿಗೆ ಸೇರಿದ ಬೂದಿದಿಬ್ಬವನ್ನು ಇಲ್ಲಿ ಪತ್ತೆ ಹಚ್ಚಲಾಗಿದೆ.[17]ಇವುಗಳ ಆಧಾರದ ಮೇಲೆ ಅಂದಿನ ಆದಿಮಾನವ ಜೀವನ-ನಡವಳಿಕೆ ಮತ್ತು ಅವನ ಜೀವನ ವಿಧಾನದಲ್ಲುಂಟಾದ ಬದಲಾವಣೆಯನ್ನು ಅರಿಯಬಹುದು.

**೨೧. ಭೈರನಾಯಕಹಳ್ಳಿ :** ತಾಲೂಕು ಕೇಂದ್ರವಾದ ಸಂಡೂರಿನಿಂದ ೨೮ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ಸೂಕ್ಷ್ಮ ಶಿಲಾಯುಗ ಮತ್ತು ನವಶಿಲಾಯುಗ, ತಾಮ್ರ ಶಿಲಾಯುಗ ಹಾಗು ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳನ್ನು ಮತ್ತು ಅದೇ ಕಾಲದ ವಿವಿಧ ಮಾದರಿಯ ಸೂಕ್ಷ್ಮ ಶಿಲಾ ಉಪಕರಣಗಳನ್ನು ಮತ್ತು ಗೀರು ಚಿತ್ರಗಳನ್ನು ಇಲ್ಲಿ ಶೋಧಿಸಲಾಗಿದೆ. ಅಲ್ಲದೆ ಬೃಹತ್ ಶಿಲಾಯುಗ ಸಂಸ್ಕೃತಿಯ ಕಂಡಿಕೋಣೆ ಗೋರಿಗಳನ್ನು ಇಲ್ಲಿ ಗುರುತಿಸಲಾಗಿದೆ.[18]ಇವುಗಳ ಆಧಾರದ ಮೇಲೆ ಅಂದಿನ ಜೀವನಕ್ರಮ ಅರಿಯಬಹುದಾಗಿದೆ.

**೨೨. ಮೇದರಹಳ್ಳಿ :** ತಾಲೂಕು ಕೇಂದ್ರವಾದ ಸಂಡೂರಿನಿಂದ ೧೯ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಅಲಗು ಮಾದರಿಯ ಸೂಕ್ಷ್ಮ ಶಿಲಾ ಉಪಕರಣ ಹಾಗು ಮೂಲ ಶಿಲಾ ಗಟ್ಟಿಗಳನ್ನು ಇಲ್ಲಿ ಶೋಧಿಸಲಾಗಿದ್ದು, ಅಂದಿನ ಜೀವನಕ್ರಮ ಅರಿಯಲು ಸಹಾಯಕವಾಗಿದೆ.

**೨೩. ರಾಜಾಪುರ :** ಸಂಡೂರು ತಾಲೂಕು ಕೇಂದ್ರದಿಂದ ೩೨ ಕಿ.ಮೀ. ದೂರದಲ್ಲಿರುವ ಇಲ್ಲಿ ಸೂಕ್ಷ್ಮ ಶಿಲಾಯುಗ, ನೂತನ ಶಿಲಾಯುಗ/ಶಿಲಾ ತಾಮ್ರಯುಗ, ನೂತನ ಶಿಲಾಯುಗ ಹಾಗು ಬೃಹತ್ ಶಿಲಾ ಸಂಸ್ಕೃತಿಗೆ ಸೇರಿದ ನೆಲೆಗಳನ್ನು ಪತ್ತೆ ಹಚ್ಚಲಾಗಿದೆ. ಅಲ್ಲದೆ ಇಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಗೀರುಚಿತ್ರಗಳು ದೊರೆತಿವೆ. ಅಲ್ಲದೆ ನೂತನ ಶಿಲಾಯುಗ ಸಂಸ್ಕೃತಿಗೆ ಸೇರಿದ ಉಜ್ಜಿ ನಯಗೊಳಿಸಿರುವ ಕೊಡಲಿಯ ತುಂಡೊಂದು ಹಾಗು ಮಡಕೆ ಭಾಗಗಳು ಮತ್ತು ಬಂಡೆಚಿತ್ರಗಳು ದೊರೆತಿವೆ. ಹಾಗು ಬೃಹತ್ ಶಿಲಾಯುಗ ಸಂಸ್ಕೃತಿಯ ಗೀರುಚಿತ್ರಗಳು ಇದೇ ನೆಲೆಯಲ್ಲಿ ದೊರೆತಿರುವುದು ವಿಶೇಷವಾಗಿದೆ.[19]

**೨೪. ರಾಂಪುರ (ಕೆರೆ) :** ತಾಲೂಕು ಕೇಂದ್ರವಾದ ಸಂಡೂರಿನಿಂದ ೧೦ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಆಲಗು ಮಾದರಿಯ ಸೂಕ್ಷ್ಮ ಶಿಲಾ ಉಪಕರಣ ಹಾಗು ಮೂಲ ಶಿಲಾಗಟ್ಟಿಗಳನ್ನು ಇಲ್ಲಿ ಶೋಧಿಸಲಾಗಿದ್ದು, ಅಂದಿನ ಜೀವನ ಕ್ರಮ ಅರಿಯಲು ಸಹಾಯಕವಾಗಿದೆ.[20]

**೨೫. ಲಕ್ಷ್ಮೀಪುರ :** ತಾಲೂಕು ಕೇಂದ್ರವಾದ ಸಂಡೂರಿನಿಂದ ೧೯ ಕಿ.ಮೀ. ದೂರವಿರುವ ತಾಮ್ರ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕೆಲಚಿತ್ರಗಳನ್ನು ಇಲ್ಲಿ ಶೋಧಿಸಲಾಗಿದ್ದು,[21]ಅಂದಿನ ಜೀವನ ಕ್ರಮ ಅರಿಯಲು ಸಹಾಯಕವಾಗಿದೆ.

**೩೭. ಲಿಂಗದಹಳ್ಳಿ :** ತಾಲೂಕು ಕೇಂದ್ರವಾದ ಸಂಡೂರಿನಿಂದ ೧೩ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಬೂದಿದಿಬ್ಬವೊಂದನ್ನು ಇಲ್ಲಿ ಶೋಧಿಸಲಾಗಿದ್ದು, ಅಂದಿನ ಜೀವನಕ್ರಮ ಅರಿಯಲು ಸಹಾಯಕವಾಗಿದೆ.[22]

**೩೭. ಗದ್ದಿಕೇರಾ :** ತಾಲೂಕು ಕೇಂದ್ರವಾದ ಹಗರಿಬೊಮ್ಮನಹಳ್ಳಿಯಿಂದ ೧೯ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ತಾಮ್ರ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಕೆಲಚಿತ್ರಗಳನ್ನು ಇಲ್ಲಿ ಶೋಧಿಸಲಾಗಿದ್ದು,[23]ಅಂದಿನ ಜೀವನಕ್ರಮ ಅರಿಯಲು ಸಹಾಯಕವಾಗಿದೆ.

**೩೮. ಹಂಪಸಾಗರ :** ತಾಲೂಕು ಕೇಂದ್ರವಾದ ಹಗರಿಬೊಮ್ಮನಹಳ್ಳಿಯಿಂದ ೧೯ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ನವಶಿಲಾಯುಗ, ತಾಮ್ರ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಉಜ್ಜಿ ನಯಗೊಳಿಸಿದ ಕೊಡಲಿ ಮತ್ತು ಮಡಕೆ ಚೂರುಗಳನ್ನು ಇಲ್ಲಿ ಶೋಧಿಸಲಾಗಿದೆ. ಅಲ್ಲದೆ ಬೃಹತ್ ಶಿಲಾಯುಗ ಸಂಸ್ಕೃತಿಯ ಗೋರಿ ನೆಲೆಯನ್ನು ಮತ್ತು ವಿವಿಧ ಶಿಲಾಗೋರಿಗಳನ್ನು ಶೋಧಿಸಲಾಗಿದೆ. ಇಲ್ಲಿ ಸುಟ್ಟಮಣ್ಣಿನ ಶವ ಪೆಟ್ಟಿಗೆಯೊಂದು ದೊರೆತಿದ್ದು, ನಾಲ್ಕು ಕಾಲುಗಳನ್ನು ಹೊಂದಿರುವುದು ವಿಶೇಷವಾಗಿದೆ.[24]

**೩೯. ಅಲ್ಲೀಪುರ :** ಹೂವಿನಹಡಗಲಿ ತಾಲೂಕು ಕೇಂದ್ರದಿಂದ ೨೨ ಕಿ.ಮೀ. ಈ ನೆಲೆಯಲ್ಲಿ ನವಶಿಲಾಯುಗ, ತಾಮ್ರ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಉಜ್ಜಿ ನಯಗೊಳಿಸಿದ ಕೊಡಲಿ ಮತ್ತು ಬೂದುಬಣ್ಣದ, ಮಸಕು ಕೆಂಪು ಬಣ್ಣದ ಮಡಕೆ ಚೂರುಗಳನ್ನು ಇಲ್ಲಿ ಶೋಧಿಸಲಾಗಿದೆ. ಅಲ್ಲದೆ ಬೃಹತ್ ಶಿಲಾಯುಗ ಸಂಸ್ಕೃತಿಯ ಗೋರಿ ನೆಲೆಯನ್ನು ಮತ್ತು ವಿವಿಧ ಶಿಲಾಗೋರಿಗಳನ್ನು ಶೋಧಿಸಲಾಗಿದೆ. ಇಲ್ಲಿ ಕಪ್ಪು ವರ್ಣದ ಮಡಕೆಯ ಭಾಗಗಳು ಮತ್ತು ಎಲುಬಿನ ಅವಶೇಷಗಳು ದೊರೆತಿವೆ.[25]ಇವುಗಳ ಆಧಾರದ ಮೇಲೆ ಆದಿಮಾನವನ ಜೀವನಕ್ರಮ ಅರಿಯಬಹುದು.

**೪೦. ಕೊಟ್ನಕಲ್ಲು :** ಹೂವಿನಹಡಗಲಿ ತಾಲೂಕು ಕೇಂದ್ರದಿಂದ ೨೯ ಕಿ.ಮೀ. ಈ ನೆಲೆಯಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಗೋರಿ ನೆಲೆ ಮತ್ತು ವಿವಿಧ ಶಿಲಾಗೋರಿಗಳನ್ನು ಹಾಗು ಮಾನವಾಕಾರದ ಶಿಲೆಯೊಂದನ್ನು ಹಾಗು ಕಪ್ಪು ವರ್ಣದ ಮಡಕೆಯ ಭಾಗಗಳನ್ನು ಪತ್ತೆ ಮಾಡಲಾಗಿದೆ.[26]ಇವುಗಳ ಆಧಾರದ ಮೇಲೆ ಆದಿಮಾನವನ ಜೀವನಕ್ರಮ ಅರಿಯಬಹುದು.

**೪೧. ನವಲಿ :** ಹೂವಿನಹಡಗಲಿ ತಾಲೂಕು ಕೇಂದ್ರದಿಂದ ೧೮.೫ ಕಿ.ಮೀ. ದೂರದಲ್ಲಿರುವ ಈ ನೆಲೆಯಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಗೋರಿ ನೆಲೆ ಮತ್ತು ವಿವಿಧ ಕಲ್ಮನೆ ಮಾದರಿಯ ಶಿಲಾಗೋರಿಗಳನ್ನು ಹಾಗು ೨.೫ ಅಡಿ ಎತ್ತರವಿರುವ ಮಾನವಾಕಾರದ ಶಿಲೆಯೊಂದನ್ನು ಹಾಗು ಕಪ್ಪು ವರ್ಣದ ಮಡಕೆಯ ಭಾಗಗಳನ್ನು ಪತ್ತೆ ಮಾಡಲಾಗಿದೆ.[27]ಇವುಗಳ ಆಧಾರದ ಮೇಲೆ ಆದಿಮಾನವನ ಜೀವನಕ್ರಮ ಅರಿಯಬಹುದು.

**೪೨. ಮಾಗಳ :** ತಾಲೂಕು ಕೇಂದ್ರವಾದ ಹೂವಿನಹಡಗಲಿಯಿಂದ ೩೨ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ನವಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಉಜ್ಜಿ ನಯಗೊಳಿಸಿದ ಕೊಡಲಿ ಮತ್ತು ಮಡಕೆ ಚೂರುಗಳನ್ನು ಇಲ್ಲಿ ಶೋಧಿಸಲಾಗಿದೆ. ಅಲ್ಲದೆ ಬೃಹತ್ ಶಿಲಾಯುಗ ಸಂಸ್ಕೃತಿಯ ಗೋರಿ ನೆಲೆಯನ್ನು ಮತ್ತು ವಿವಿಧ ಶಿಲಾಗೋರಿಗಳನ್ನು ಪತ್ತೆ ಹಚ್ಚಲಾಗಿದೆ.[28]ಇದರಿಂದ ಇದು ಪ್ರಾಗೈತಿಹಾಸಿಕ ನೆಲೆಯೆಂದು, ಆದಿಮಾನವನ ನಿವಾಸ ಸ್ಥಾನವಾಗಿತ್ತೆಂದು ಹೇಳಬಹುದು.

**೪೩. ಮೈಲಾರ :** ತಾಲೂಕು ಕೇಂದ್ರವಾದ ಹೂವಿನಹಡಗಲಿಯಿಂದ ೨೭ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ನವಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಉಜ್ಜಿ ನಯಗೊಳಿಸಿದ ಕೊಡಲಿ ಮತ್ತು ಮಡಕೆ ಚೂರುಗಳನ್ನು ಇಲ್ಲಿ ಶೋಧಿಸಲಾಗಿದೆ. ಅಲ್ಲದೇ ಇಲ್ಲಿಯೇ ಬೃಹತ್ ಶಿಲಾಯುಗ ಸಂಸ್ಕೃತಿಯ ಗೋರಿ ನೆಲೆಯನ್ನು ಮತ್ತು ವಿವಿಧ ಶಿಲಾಗೋರಿಗಳನ್ನು ಪತ್ತೆ ಹಚ್ಚಲಾಗಿದೆ. ಇದರಿಂದ ಇದು ಪ್ರಾಗೈತಿಹಾಸಿಕ ನೆಲೆಯೆಂದು, ಆದಿಮಾನವನ ನಿವಾಸ ಸ್ಥಾನವಾಗಿತ್ತೆಂದು ಹೇಳಬಹುದು.[29]

**೪೪. ರಾಜವಾಳ :** ತಾಲೂಕು ಕೇಂದ್ರವಾದ ಹೂವಿನಹಡಗಲಿಯಿಂದ ೧೬ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ನವಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಉಜ್ಜಿ ನಯಗೊಳಿಸಿದ ಕೊಡಲಿ ಮತ್ತು ಮಡಕೆ ಚೂರುಗಳನ್ನು ಇಲ್ಲಿ ಶೋಧಿಸಲಾಗಿದೆ. ಅಲ್ಲದೆ ಇಲ್ಲಿಯೇ ಬೃಹತ್ ಶಿಲಾಯುಗ ಸಂಸ್ಕೃತಿಯ ಗೋರಿ ನೆಲೆಯನ್ನು ಮತ್ತು ವಿವಿಧ ನಮೂನೆಯ ಶಿಲಾಗೋರಿಗಳನ್ನು ಪತ್ತೆ ಹಚ್ಚಲಾಗಿದೆ. ಇದರಿಂದ ಇದು ಪ್ರಾಗೈತಿಹಾಸಿಕ ನೆಲೆಯೆಂದು, ಆದಿಮಾನವನ ನಿವಾಸ ಸ್ಥಾನವಾಗಿತ್ತೆಂದು ಹೇಳಬಹುದು.[30]

**೪೫. ಹಿರೇಕುರುವತ್ತಿ :** ತಾಲೂಕು ಕೇಂದ್ರವಾದ ಹೂವಿನಹಡಗಲಿಯಿಂದ ೨೯ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ಆದಿ ಹಳೆಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಕೈಕೊಡಲಿ ಮತ್ತು ಮಡಕೆ ಚೂರುಗಳನ್ನು ಇಲ್ಲಿ ಶೋಧಿಸಲಾಗಿದೆ. ಇದರಿಂದ ಇದು ಪ್ರಾಗೈತಿಹಾಸಿಕ ನೆಲೆಯೆಂದು ಮತ್ತು ಆದಿಮಾನವ ನಿವಾಸ ಸ್ಥಾನವಾಗಿತ್ತೆಂದು ಹೇಳಬಹುದು.[31]

**೪೬. ಹುಲಿಗುಡ್ಡ :** ತಾಲೂಕು ಕೇಂದ್ರವಾದ ಹೂವಿನಹಡಗಲಿಯಿಂದ ೩೦ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಗೋರಿ ನೆಲೆಯನ್ನು ಮತ್ತು ವಿವಿಧ ನಮೂನೆಯ ಶಿಲಾಗೋರಿಗಳನ್ನು ಪತ್ತೆ ಹಚ್ಚಲಾಗಿದೆ. ಅಲ್ಲದೆ ಇಲ್ಲಿಯೇ ಈ ಯುಗದ ಮಡಕೆ ಚೂರುಗಳನ್ನು ದೊರತಿದ್ದು, ಇದರಿಂದ ಇದು ಪ್ರಾಗೈತಿಹಾಸಿಕ ನೆಲೆಯೆಂದು, ಆದಿಮಾನವನ ನಿವಾಸ ಸ್ಥಾನವಾಗಿತ್ತೆಂದು ಹೇಳಬಹುದು.[32]

**೪೭. ಹೂವಿನಹಡಗಲಿ :** ತಾಲೂಕು ಕೇಂದ್ರವಾದ ಹೂವಿನ ಹಡಗಲಿಯಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಗೋರಿ ನೆಲೆಯನ್ನು ಮತ್ತು ವಿವಿಧ ಶಿಲಾಗೋರಿಗಳನ್ನು ಪತ್ತೆ ಹಚ್ಚಲಾಗಿದೆ. ಇಲ್ಲಿರುವ ಕಲ್ಗೋರಿಗಳಲ್ಲಿ "ಯು" ಆಕಾರದ ಕಿಂಡಿಕೋಣೆಯ ಕಲ್ಗೋರಿಯೊಂದು ಗಮನಾರ್ಹವಾಗಿದೆ. ಇದರಿಂದ ಇದು ಪ್ರಾಗೈತಿಹಾಸಿಕ ನೆಲೆಯೆಂದು, ಆದಿಮಾನವನ ನಿವಾಸ ಸ್ಥಾನವಾಗಿತ್ತೆಂದು ಹೇಳಬಹುದು.[33]

**೪೮. ಇಂಗಳಗಿ :** ತಾಲೂಕು ಕೇಂದ್ರವಾದ ಹೊಸಪೇಟೆಯಿಂದ ೧೨ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ನವಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಉಜ್ಜಿ ನಯಗೊಳಿಸಿದ ಕೊಡಲಿ ಮತ್ತು ಮಡಕೆ ಚೂರುಗಳನ್ನು ಇಲ್ಲಿ ಶೋಧಿಸಲಾಗಿದೆ. ಅಲ್ಲದೆ ಇಲ್ಲಿಯೇ ಹಾಳಾಗಿರುವ ಬೂದಿದಿಬ್ಬವೊಂದನ್ನು ಗುರುತಿಸಲಾಗಿದ್ದು, ಇದರಿಂದ ಇದು ಪ್ರಾಗೈತಿಹಾಸಿಕ ನೆಲೆಯೆಂದು, ಆದಿಮಾನವನ ನಿವಾಸ ಸ್ಥಾನವೆಂದು ಹೇಳಬಹುದು.[34]

**೪೯. ವೆಂಕಟಾಪುರ :** ತಾಲೂಕು ಕೇಂದ್ರವಾದ ಹೊಸಪೇಟೆಯಿಂದ ೧೨ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ನವಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಉಜ್ಜಿ ನಯಗೊಳಿಸಿದ ಕೊಡಲಿ ಮತ್ತು ಮಡಕೆ ಚೂರುಗಳನ್ನು ಗುರುತಿಸಲಾಗಿದೆ. ಅಲ್ಲದೆ ಆನೆಗೊಂದಿಗೆ ಹೋಗುವ ರಸ್ತೆಯ ಎಡಬದಿಯ ಬೆಟ್ಟದಲ್ಲಿ ವರ್ಣಚಿತ್ರಗಳನ್ನು ಹಾಗೂ ಗ್ರಾಮದ ಪೂರ್ವಭಾಗದ ಬೆಟ್ಟದಲ್ಲಿ ಮತ್ತೊಂದು ವರ್ಣಚಿತ್ರ ಮತ್ತು ಕುಟ್ಟು ಚಿತ್ರಗಳನ್ನು ಇಲ್ಲಿ ಶೋಧಿಸಲಾಗಿದೆ.[35]ಇಲ್ಲಿ ಬೂದಿದಿಬ್ಬವೊಂದನ್ನು ವಿದ್ವಾಂಸರು ಗುರುತಿಸಿದ್ದು, ಅದನ್ನು 'ವಾಲಿಕಾಷ್ಠ' ಎಂದು ಕರೆಯುತ್ತಿರುವುದು ಗಮನಾರ್ಹವಾಗಿದೆ. ಗ್ರಾಮದ ವಾಯವ್ಯ ಭಾಗದ ಭರಮದೇವರ ಚಿಕ್ಕಗುಡಿಯಲ್ಲಿ ನವಶಿಲಾಯುಗದ ಬೃಹತ್ ನಯಗೊಳಿಸಿದ ಕಪ್ಪುಕಲ್ಲಿನ ಕೊಡಲಿಯೊಂದು ಇದ್ದು, ಮಹತ್ವ ಪಡೆದಿದೆ. ಇದರಿಂದ ಇದು ಪ್ರಾಗೈತಿಹಾಸಿಕ ನೆಲೆಯೆಂದು, ಆದಿಮಾನವನ ನಿವಾಸ ಸ್ಥಾನವೆಂದು ಹೇಳಬಹುದು.[36]

**೫೦. ಬುಕ್ಕಸಾಗರ :** ತಾಲೂಕು ಕೇಂದ್ರವಾದ ಹೊಸಪೇಟೆಯಿಂದ ೨೨ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ನವಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಮತ್ತು ಅದೇ ಕಾಲದ ಉಜ್ಜಿ ನಯಗೊಳಿಸಿದ ಕೊಡಲಿ ಮತ್ತು ಮಡಕೆ ಚೂರುಗಳನ್ನು ಇಲ್ಲಿನ ವಾಯವ್ಯ ಭಾಗದ ಬೆಟ್ಟದಲ್ಲಿ ಹಾಗು ಕರಿಸಿದ್ದೇಶ್ವರ ಮಠದ ಬಲಭಾಗದ ಬೆಟ್ಟದಲ್ಲಿ ಇದೇ ರೀತಿಯ ಅವಶೇಷಗಳನ್ನು ಶೋಧಿಸಲಾಗಿದೆ. ಇದರಿಂದ ಇದು ಪ್ರಾಗೈತಿಹಾಸಿಕ ನೆಲೆಯೆಂದು, ಆದಿಮಾನವನ ನಿವಾಸ ಸ್ಥಾನವೆಂದು ಹೇಳಬಹುದು.[37]

**೫೧. ಜುಮ್ಮೋಬನಹಳ್ಳಿ :** ತಾಲೂಕು ಕೇಂದ್ರವಾದ ಕೂಡ್ಲಿಗಿಯಿಂದ ೩೭ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ಆದಿ ಹಳೆಶಿಲಾಯುಗ ಸಂಸ್ಕೃತಿಗೆ ಸೇರಿದ ಅಬ್ಬೇವಿಲಿಯನ್ ತಂತ್ರಗಾರಿಕೆಯಿಂದ ತಯಾರಿಸಿದ ಶಿಲಾಕೊಡಲಿಯನ್ನು ಇಲ್ಲಿ ಶೋಧಿಸಲಾಗಿದೆ.ಇದರಿಂದ ಇದು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.

**೫೩. ಸುಣ್ಣಮರಡಿ :** ತಾಲೂಕು ಕೇಂದ್ರವಾದ ಕೂಡ್ಲಿಗಿಯಿಂದ ೪೭ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಶಿಲಾಗೋರಿಗಳನ್ನು ಮತ್ತು ಈ ಕಾಲದ ಮಡಕೆ ಚೂರುಗಳನ್ನು ಇಲ್ಲಿ ಶೋಧಿಸಲಾಗಿದೆ. ಇದರಿಂದ ಇದು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.[38]

**೫೪. ಸಿಡೇಗಲ್ಲು :** ತಾಲೂಕು ಕೇಂದ್ರವಾದ ಕೂಡ್ಲಿಗಿಯಿಂದ ೩೯ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ಸೂಕ್ಷ್ಮ ಶಿಲಾಯುಗ ಕಾಲದ ಮಡಕೆ ಚೂರು ಮತ್ತು ವರ್ಣ ಚಿತ್ರಗಳನ್ನು ಇಲ್ಲಿ ಶೋಧಿಸಲಾಗಿದೆ. ಇದರಿಂದ ಆದಿಮಾನವನ ವಾಸಸ್ಥಾನವಿರಬಹುದೆಂದು ಮತ್ತು ಇದು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.[39]

**೫೫. ಗುಡೇಕೋಟೆ :** ತಾಲೂಕು ಕೇಂದ್ರವಾದ ಕೂಡ್ಲಿಗಿಯಿಂದ ೩೦ ಕಿ.ಮೀ. ದೂರವಿರುವ ಈ ನೆಲೆಯಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಗೆ ಸೇರಿದ ವಿವಿಧ ಸೂಕ್ಷ್ಮ ಶಿಲಾ ಉಪಕರಣಗಳನ್ನು ಮತ್ತು ನವಶಿಲಾಯುಗ ಕಾಲದ ಮಡಕೆ ಚೂರು ಮತ್ತು ವರ್ಣಚಿತ್ರಗಳನ್ನು ಇಲ್ಲಿ ಶೋಧಿಸಲಾಗಿದೆ. ಅಲ್ಲದೆ ಇಲ್ಲಿಯೇ ಬೃಹತ್ ಶಿಲಾಯುಗದ ಮಡಕೆಗಳು ಮತ್ತು ವಿವಿಧ ಮಾದರಿಯ ಶಿಲಾಗೋರಿಗಳನ್ನು ಪತ್ತೆ ಹಚ್ಚಲಾಗಿದೆ. ಇದರಿಂದ ಇದು ಆದಿಮಾನವನ ವಾಸಸ್ಥಾನವಿರಬಹುದೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.[40]

**ಬಿ) ಕೊಪ್ಪಳ ಜಿಲ್ಲೆಯ ನೆಲೆಗಳು**

ಜಿಲ್ಲೆಯ ವಿವಿಧೆಡೆ ಆದಿಮಾನವನ ಹಲವು ನೆಲೆಗಳಿದ್ದು, ಅವುಗಳನ್ನು ಸಂಕ್ಷಿಪ್ತವಾಗಿ ಅಧ್ಯಯನ ಮಾಡಲಾಗಿದ್ದು, ಆ ವಿವರ ಈ ಮುಂದಿನಂತಿದೆ.

**೧) ಅಗೋಲಿ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೯ ಕಿ.ಮೀ.ದೂರದಲ್ಲಿದ್ದು, ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಆದ ದಿನ ಮಾನವ ನೆಲೆಯಾಗಿದೆ. ಇಲ್ಲಿ ಈ ಕಾಲದ ಮಡಕೆ ಚೂರು ಮತ್ತು ವರ್ಣಚಿತ್ರಗಳನ್ನು ಮತ್ತು ಕಂಡಿಕೋಣೆಯ ಶಿಲಾಗೋರಿಗಳನ್ನು ಶೋಧಿಸಲಾಗಿದೆ.[41]ಇದರಿಂದ ಇದು ಆದಿ ಮಾನವ ವಾಸಸ್ಥಾನವಿರಬಹುದೆಂದು ಮತ್ತು ಇದು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.

**೨. ಅರಹಾಳ್ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೧೯ ಕಿ.ಮೀ. ದೂರದಲ್ಲಿದ್ದು, ತಾಮ್ರ ಶಿಲಾಯುಗ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ. ಇಲ್ಲಿ ಈ ಕಾಲದ ಮಡಕೆಚೂರು ಮತ್ತು ವರ್ಣಚಿತ್ರಗಳನ್ನು ಶೋಧಿಸಲಾಗಿದೆ.[42]ಇದರಿಂದ ಇದು ಆದಿಮಾನವನ ವಾಸಸ್ಥಾನವೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.

**೩. ಆನರ್ಾಳ್ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೯ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ. ಇಲ್ಲಿ ಈ ಕಾಲದ ಮಡಕೆಚೂರು ಮತ್ತು ವರ್ಣಚಿತ್ರಗಳನ್ನು ಶೋಧಿಸಲಾಗಿದೆ.[43]ಇದರ ಆಧಾರದ ಮೇಲೆ ಇದು ಆದಿಮಾನವನ ವಾಸಸ್ಥಾನ ಮತ್ತು ಇದು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.

**೪. ಅರಳಿಹಳ್ಳಿ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೧೭ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ, ಶಿಲಾ ತಾಮ್ರಯುಗದ ಹಾಗು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ. ಇಲ್ಲಿ ಈ ಕಾಲದ ಮಡಕೆಚೂರು ಮತ್ತು ವರ್ಣಚಿತ್ರಗಳನ್ನು ಮತ್ತು ಬೃಹತ್ ಶಿಲಾಯುಗದ ಶಿಲಾವೃತ್ತಗಳನ್ನು ಹಾಗು ಕಂಡಿ ಕೋಣೆಯ ಶಿಲಾಗೋರಿಗಳನ್ನು

ಶೋಧಿಸಲಾಗಿದೆ.[44]ಇವುಗಳ ಆಧಾರದಿಂದ ಇದು ಆದಿಮಾನವನ ವಾಸಸ್ಥಾನ ಮತ್ತು ಪ್ರಾಗೈತಿಹಾಸಿಕ ನೆಲೆಯಾಗಿತ್ತೆಂದು ಹೇಳಬಹುದಾಗಿದೆ.

**೫. ಅಂಜನಹಳ್ಳಿ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೧೭ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ, ಶಿಲಾ ತಾಮ್ರಯುಗದ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ. ಇಲ್ಲಿ ಈ ಕಾಲದ ಮಡಕೆಚೂರು ಮತ್ತು ಗವಿ ವರ್ಣಚಿತ್ರಗಳನ್ನು ಶೋಧಿಸಲಾಗಿದೆ.[45]ಇದರಿಂದ ಇದು ಆದಿಮಾನವನ ವಾಸಸ್ಥಾನವಿರಬಹುದೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.

**೬. ಆನೆಗುಂದಿ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೧೩ ಕಿ.ಮೀ. ದೂರದಲ್ಲಿದ್ದು, ಸೂಕ್ಷ್ಮ ಶಿಲಾಯುಗ, ನವಶಿಲಾಯುಗ, ಶಿಲಾ ತಾಮ್ರಯುಗ ಹಾಗು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ. ಇಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಕಾಲದ ಗವಿ ವರ್ಣಚಿತ್ರಗಳು ದೊರೆತಿವೆ. ಅವು ಕಂದು ಬಣ್ಣವನ್ನು ಹೊಂದಿದ್ದು, ಜಿಂಕೆ, ಹೋರಿ ಹಾಗೂ ಇತರೆ ಚಿತ್ರಗಳು ಕಂಡುಬಂದಿವೆ. ಇಲ್ಲಿ ಶಿಲೋಪಕರಣಗಳನ್ನು ಕ್ವಾರ್ಟ್ಸ್ ಶಿಲೆಯಲ್ಲಿ ರೂಪಿಸಿದ್ದು, ಅವುಗಳಲ್ಲಿ ಹೆರೆಚಕ್ಕೆ ಉಪಕರಣ ಮುಖ್ಯವಾಗಿ ದೊರತಿದೆ. ಈ ಗ್ರಾಮದ ಪಶ್ಚಿಮಕ್ಕೆ ತುಂಗಭದ್ರಾ ನದಿಯ ಬಲದಂಡೆಯ ಹತ್ತಿರ ನವಶಿಲಾಯುಗ ಕಾಲದ 'ವಾಲೀ ದಿಬ್ಬ ಅಥವಾ ವಾಲಿಕಾಷ್ಠವು' ದೊರೆತಿದ್ದು, ಇಲ್ಲಿಯೇ ಕಪ್ಪು, ಕೆಂಪು ವರ್ಣದ ಗೆರೆಗಳಿರುವ ಹಾಗೂ ಕೆಂಪು ಮಡಕೆ ಭಾಗಗಳು ದೊರೆತಿವೆ. ಅಲ್ಲದೆ ಇದು ಶಿಲಾ ತಾಮ್ರಯುಗ ಸಂಸ್ಕೃತಿಯ ನೆಲೆಯೂ ಇದಾಗಿದ್ದು, ಅದರ ಕೆಲವು ಗುರುತುಗಳು ದೊರೆತಿವೆ. ಇಲ್ಲಿಯೇ ನಾಲ್ಕುಕಡೆ ಬಂಡೆಗಳ ಮೇಲಿನ ಚಿತ್ರಗಳನ್ನು ಗುರುತಿಸಲಾಗಿದೆ. ಇಲ್ಲಿಯೂ ವಿವಿಧ ಮೃಗಗಳು ಹಾಗೂ ಮಾನವರು ಚಿತ್ರಿತರಾಗಿರುವುದನ್ನು ನೋಡಬಹುದು. ಇಲ್ಲಿನ ಒಂದು ಚಿತ್ರದಲ್ಲಿ ಮಾನವನೊಬ್ಬನಿಗೆ ಬಾಲ ಇರುವಂತೆ ವಿಶೇಷವಾಗಿ ಚಿತ್ರಿಸಲಾಗಿದೆ. ಇದೇ ಆನೆಗುಂದಿ ಪ್ರದೇಶದಲ್ಲಿ ಇನ್ನೂ ಕೆಲವೆಡೆ ಮೇಲಿನ ಕಾಲದ ಚಿತ್ರಗಳನ್ನು ಗಮನಿಸಲಾಗಿದೆ. ಅಲ್ಲಿಯೂ ಸಹ ವಿಶೇಷ ಆಕರ್ಷಕ ರೀತಿಯಲ್ಲಿ ಎತ್ತುಗಳು ಮತ್ತು ಇತರ ವನ್ಯಮೃಗಗಳ ಚಿತ್ರಗಳನ್ನು ಬಿಡಿಸಲಾಗಿದೆ. ಇವುಗಳಲ್ಲಿ ಕೆಲವು ಕಂದು ಕೆಂಪು ಬಣ್ಣಗಳಲ್ಲಿ ಚಿತ್ರಿಸಲ್ಪಟ್ಟಿದ್ದರೆ, ಇನ್ನುಳಿದವು ಬಿಳಿಸುಣ್ಣದಿಂದ ಚಿತ್ರಿತವಾಗಿವೆ. ಇನ್ನೊಂದು ಕಡೆ ಇರುವ ದಪ್ಪ ಗೋಡೆಯಾಕಾರದ ಚಿತ್ರವು ಕುತೂಹಲಕಾರಿಯಾಗಿದೆ. ದಪ್ಪನಾದ ಗೋಡೆಯ ಮಧ್ಯದಲ್ಲಿ ದುಂಡಾದ ಕಂಬಗಳನ್ನು ನೆಟ್ಟಿರುವಂತೆ ತೋರಿಸಲಾಗಿದೆ. ವೃತ್ತಾಕಾರದ ಚಿತ್ರದ ಮಧ್ಯದಲ್ಲಿ ಮಾನವಾಕಾರಗಳು ಇವೆ.[46]ಇವೆಲ್ಲವು ಸೇರಿ ನವಶಿಲಾಯುಗದ ಮಾನವನು ನೆಲಸಿದ್ದ ಸ್ಥಳಗಳು ಅವನು ನಡೆಸುತ್ತಿದ್ದ ಜೀವನ ಪ್ರವೃತಿ ಅವನು ರೂಢಿಸಿಕೊಂಡ ಸಂಸ್ಕೃತಿ, ಆ ದಿಶೆಯಲ್ಲಿ ಅವನು ಸಾಧಿಸಿದ ಪ್ರಗತಿ ಮೊದಲಾದ ಅಂಶಗಳನ್ನು ಸೂಚಿಸುತ್ತವೆ.

ಅಲ್ಲದೆ ಇದೇ ನೆಲೆಯಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ವಾಸ್ತವ್ಯದ ನೆಲೆ ಇದ್ದು, ಅದರಲ್ಲಿ ಕಪ್ಪು ಮತ್ತು ಕೆಂಪು ವರ್ಣದ ಮೃತ್ಪಾತ್ರೆಗಳು ಮತ್ತು ಶಿಲಾಗೋರಿ, ಕಬ್ಬಿಣದ ಕಿಟ್ಟಗಳು ದೊರೆತಿವೆ.[47]ಇದರಿಂದ ಈ ಕಾಲಘಟ್ಟದಲ್ಲಿ ಈ ನೆಲೆಯ ವಹಿಸಿಸಬಹುದಾದ ಪಾತ್ರವನ್ನು ಗ್ರಹಿಸಬಹುದಾಗಿದೆ.

**೭. ಇಂದರ್ಗಿ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೭ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ, ಶಿಲಾ ತಾಮ್ರಯುಗದ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ. ಇಲ್ಲಿ ಈ ಕಾಲದ ಮಡಕೆಚೂರು ಮತ್ತು ಗವಿ ವರ್ಣಚಿತ್ರಗಳನ್ನು ಶೋಧಿಸಲಾಗಿದೆ. ಅಲ್ಲದೆ ಇದೇ ಕಾಲಕ್ಕೆ ಸೇರಿದ ಒಂದು ಬೂದಿದಿಬ್ಬವನ್ನು ಇಲ್ಲಿಯೇ ಬೆಳಕಿಗೆ ತರಲಾಗಿದೆ.[48] ಇದರಿಂದ ಇದು ಆದಿಮಾನವನ ವಾಸಸ್ಥಾನ ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.

**೮. ಕನಕಗಿರಿ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೨ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ, ಶಿಲಾ ತಾಮ್ರಯುಗದ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ. ಇಲ್ಲಿ ಈ ಕಾಲದ ಮಡಕೆ ಚೂರು ಮತ್ತು ಗವಿ ವರ್ಣಚಿತ್ರಗಳನ್ನು ಶೋಧಿಸಲಾಗಿದೆ.[49] ಇದರಿಂದ ಇದು ಆದಿಮಾನವನ ಆವಾಸಸ್ಥಾನವೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.

**೯. ಕಕ್ಕರಗೋಳ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೨ ಕಿ.ಮೀ. ದೂರದಲ್ಲಿದ್ದು, ಸೂಕ್ಷ್ಮಶಿಲಾಯುಗ ಮತ್ತು ನವಶಿಲಾಯುಗದ ಸಂಸ್ಕೃತಿಗೆ ಸೇರಿದ ಮಾನವ ನೇಲೆಯಾಗಿದೆ. ಇಲ್ಲಿ ಈ ಕಾಲದ ಮಡಕೆಚೂರು, ವರ್ಣಚಿತ್ರಗಳನ್ನು ಶೋಧಿಸಲಾಗಿದೆ.[50] ಇದರಿಂದ ಇದು ಆದಿಮಾನವನ ಆವಾಸಸ್ಥಾನವೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.

**೧೦. ಕೇಸರಹಟ್ಟಿ :** ಇದು ತಾಲೂಕು ಕೆಂದ್ರವಾದ ಗಂಗಾವತಿಯಿಂದ ೨೭ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ, ಶಿಲಾ ತಾಮ್ರಯುಗದ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ. ಇಲ್ಲಿ ಈ ವರ್ಣಚಿತ್ರಗಳನ್ನು ಶೋಧಿಸಿಲಾಗಿದೆ.[51]ಇದರಿಂದ ಇದು ಆದಿಮಾನವನ ಆವಾಸಸ್ಥಾನವೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.

**೧೧. ಕುಂಟೋಜಿ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೨ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ, ಶಿಲಾ ತಾಮ್ರಯುಗದ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ. ಇಲ್ಲಿ ಈ ಕಾಲದ ಮಡಕೆಚೂರು ಮತ್ತು ಗವಿ ವರ್ಣಚಿತ್ರಗಳನ್ನು ಶೋಧಿಸಲಾಗಿದೆ.[52]ಇದರಿಂದ ಇದು ಆದಿಮಾನವನ ಆವಾಸಸ್ಥಾನವೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.

**೧೨. ಗಡ್ಡಿ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೦ ಕಿ.ಮೀ. ದೂರದಲ್ಲಿದ್ದು, ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ. ಇಲ್ಲಿ ಈ ಕಾಲದ ಮಡಿಕೆಚೂರು ಮತ್ತು ಕಂಡಿ ಹಾಗು ಹಾದಿಕೋಣೆ ಶಿಲಾಗೋರಿಗಳನ್ನು ಶೋಧಿಸಲಾಗಿದೆ.[53] ಇದರಿಂದ ಇದು ಆದಿಮಾನವನ ಆವಾಸಸ್ಥಾನವೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದುದಾಗಿದೆ.

**೧೩. ಗುಡೂರು :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಮದ ೧೬ ಕಿ.ಮೀ. ದೂರದಲ್ಲಿದ್ದು, ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಗಿದೆ. ಇಲ್ಲಿ ಈ ಕಾಲದ ಮಡಕೆಚೂರು ಮತ್ತು ಶಿಥಿಲವಾಗಿರುವ ಶಿಲಾವೃತ್ತ, ಕಂಡಿ ಹಾಗು ಹಾದಿಕೋಣೆ ಶಿಲಾಗೋರಿಗಳನ್ನು ಶೋಧಿಸಲಾಗಿದೆ.[54] ಇದರಿಂದ ಇದು ಆದಿಮಾನವನ ಆವಾಸಸ್ಥಾನವೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳುಬಹುದಾಗಿದೆ.

**೧೪. ಗೋನಾಳ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೧೨ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ, ಶಿಲಾ ತಾಮ್ರಯುಗದ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ. ಇಲ್ಲಿ ಈ ಕಾಲದ ಮಡಕೆಚೂರು ಮತ್ತು ಕುಟ್ಟು, ಗವಿ ವರ್ಣಚಿತ್ರಗಳನ್ನು ಶೋಧಿಸಲಾಗಿದೆ. ಇದರಿಂದ ಇದು ಆದಿಮಾನವನ ಆವಾಸಸ್ಥಾನವೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.[55]

**೧೫. ಚಿಕ್ಕಬೆನಕಲ್ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೮ ಕಿ.ಮೀ. ದೂರದಲ್ಲಿದ್ದು, ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ. ಇಲ್ಲಿ ಈ ಕಾಲದ ಮಡಕೆಚೂರು ಮತ್ತು ಶಿಥಿಲವಾಗಿರುವ ಕಂಡಿ ಹಾಗು ಹಾದಿಕೋಣೆ ಶಿಲಾಗೋರಿಗಳನ್ನು ಶೋಧಿಸಲಾಗಿದೆ.[56]ಇದರಿಂದ ಇದು ಆದಿಮಾನವನ ಆವಾಸಸ್ಥಾನವೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.

[1] Foote R.B. 1916, Indian Prehistoric & Protohistoric Antiquities, Madras.

[2] Foote R.B. 1916, Indian Prehistoric & Protohistoric Antiquities, Madras.

[3] ತಿಪ್ಪೇಸ್ವಾಮಿ ಎಚ್., ಕೂಡ್ಲಿಗಿ ತಾಲೂಕಿನ ಶಿಲಾಯುಗ ಸಂಸ್ಕೃತಿ,

[4] Foote R.B. 1916, Indian Prehistoric & Protohistoric Antiquities, Madras.

[5] Foote R.B. 1916, Indian Prehistoric & Protohistoric Antiquities, Madras.

[6] Foote R.B. 1916, Indian Prehistoric & Protohistoric Antiquities, Madras.

[7] ಇಂ. ಆ. ರಿ. ೧೯೭೭-೭೮

[8] ಇಂ. ಆ. ರಿ. ೧೯೮೭-೮೮

[9] ಇಂ. ಆ. ರಿ. ೧೯೮೭-೮೮

[10] ಇಂ. ಆ. ರಿ. ೧೯೮೭-೮೮

[11] ಇಂ. ಆ. ರಿ. ೧೯೮೭-೮೮

[12] ಇಂ. ಆ. ರಿ. ೧೯೮೭-೮೮

[13] Foote R.B. 1916, Indian Prehistoric & Protohistoric Antiquities, Madras.

[14] Foote R.B. 1916, Indian Prehistoric & Protohistoric Antiquities, Madras, 1987-88

[15] ೧. Foote R.B. 1916, Indian Prehistoric & Protohistoric Antiquities, Madras, 1987-88

1) Padayya K 1973, Investigation into the nealithic culture of the shorapur Doab south India Leiden

2) ಇಂ. ಆ. ರಿ. 1987-88

[16] Taylar M 1853, in Jouy Bombay Branch Royal Asiatic Soc. 2. ಇಂ. ಆ. ರಿ. ೧೯೮೭-೮೮

[17] ಇಂ. ಆ. ರಿ. ೧೯೯೩-೯೪

ಇಂ. ಆ. ರಿ. ೧೯೯೨-೯೩

[18] ಇಂ. ಆ. ರಿ. ೧೯೮೭-೮೮

[19] ಇಂ. ಆ. ರಿ. ೧೯೬೨-೬೩

[20] Foote R.B. 1916, Indian Prehistoric & Protohistoric Antiquities, Madras, 1987-88

[21] Paddayya K., 1973, Investigation into the Neolithc culture of Shorapur Doab South indian, Leiden.

[22] Foote R.B. 1916, Indian Prehistoric & Protohistoric Antiquities, Madras.

[23] ಇ.ದ-೧೩ ೧೯೯೮

[24] ಇ.ದ-೧೪ ೧೯೯೯

[25] Foote R.B. 1916, Indian Prehistoric & Protohistoric Antiquities, Madras.

[26] ಇ.ದ-೧೩ ೧೯೯೮

[27] ಇಂ.ಅ.ರಿ. ೧೯೯೩-೯೪

[28] ಬಳ್ಳಾರಿ ಜಿಲ್ಲಾ ಗೆಜಟಿಯರ್, ಪು.

ಎಚ್. ತಿಪ್ಪೇಸ್ವಾಮಿ, ಹಂಪಿ ಪರಿಸರದ ಸ್ಮಾರಕಗಳು,

[29] ಎಚ್. ತಿಪ್ಪೇಸ್ವಾಮಿ, ೧೯೯೮, ಕೂಡ್ಲಿಗಿ ತಾಲೂಕಿನ ಪ್ರಾಗೈತಿಹಾಸಿಕ ನೆಲಗಳು.

[30] ಕನ್ನಡಪ್ರಭ ದಿನಪತ್ರಿಕೆ, ದಿನಾಂಕ ೧೪-೧೨-೨೦೦೦

[31] A.R. Hyderabad Dept. Arch 1936-37

[32] ಕರ್ನಾಟಕ ಭಾರತಿ ೬-೧

[33] ಇಂ.ಅ.ರಿ. ೧೯೭೦-೧

[34] ಇಂ.ಅ.ರಿ. ೧೯೭೨-೭೩ ಕರ್ನಾಟಕ ಭಾರತಿ ೬-೧

[35] ಸುಂದರ ಅ. ೧೯೯೪ ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ, ಬೆಂಗಳೂರು

[36] ಇಂ.ಅ.ರಿ. ೧೯೬೧-೬೨

ಇಂ.ಅ.ರಿ. ೧೯೬೨-೬೩

[37] ಇಂ.ಅ.ರಿ. ೧೯೭೭-೭೮

ಇಂ.ಅ.ರಿ. ೧೯೭೮-೭೯

ಇ.ದ.ಲ ೧೯೯೩,

[38] ಇಂ.ಅ.ರಿ. ೧೯೭೮

ಸುಂದರ ಅ, ೧೯೪ ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ, ಬೆಂಗಳೂರು

[39] Paddayya. K, 1973, Investigation into the Nolithic culture of shorapur Doub S. India Seiden Fig 29.

[40] ಇಂ.ಅ.ರಿ. ೧೯೬೨

ಇಂ.ಅ.ರಿ. ೧೯೭೭-೭೮

[41] ಕರ್ನಾಟಕ ಭಾರತಿ

[42] ಇಂ.ಅ.ರಿ. ೧೯೭೦

ಕರ್ನಾಟಕ ಭಾರತಿ

[43] ಕರ್ನಾಟಕ ಭಾರತಿ

[44] ಕರ್ನಾಟಕ ಆರತಿ

[45] ಇಂ.ಅ.ರಿ. ೧೯೭೦

ಕರ್ನಾಟಕ ಭಾರತಿ

[46] Allchin F.R. 1963 Neolithic cattle-keepers, India, Cambridge.

[47] ಇಂ.ಅ.ರಿ. ೧೯೭೭-೭೮

[48] ಕರ್ನಾಟಕ ಭಾರತಿ

[49] ಇಂ.ಅ.ರಿ. ೧೯೭೧

[50] Jair Geological survey if Hyderabad

[51] ಇ.ದ. ಲ ೧೯೯೩

[52] ಇಂ.ಅ.ರಿ. ೧೯ ೬೨

[53] ಇಂ.ಅ.ರಿ. ೧೯೭೭-೭೮

ಇ.ದ. ಲ೧ ೧೯೯೩

ಸುಂದರ ಅ. ೧೯೯೪, ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ, ಬೆಂಗಳೂರು

[54] ಇಂ.ಅ.ರಿ. ೧೯೭೭-೭೮

ಇದ. ಲ೧ ೧೯೯೩

ಸುಂದರ ಅ. ೧೯೯೪, ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ, ಬೆಂಗಳೂರು

[55] ಇ.ದ. ಲ ೧೯೯೩

೧. ಇ.ದ. ೧೩ ೧೯೯೮

೨. ಲ೩,A.I-೪. ೧೯೪೭

[56] ಕರ್ನಾಟಕ ಭಾರತಿ

**೧೬. ಚಿಕ್ಕರಾಂಪುರ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೧೭ ಕಿ.ಮೀ. ದೂರದಲ್ಲಿದ್ದು, ನವಶಿಲಾ/ಶಿಲಾ ತಾಮ್ರಯುಗ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ. ಇಲ್ಲಿ ಶಿಲಾ ತಾಮ್ರಯುಗದ ಗವಿ ವರ್ಣ ಚಿತ್ರಗಳು ದೊರೆತಿವೆ. ಗವಿಗಳ ಎದುರು ಭಾಗದಲ್ಲಿ ವಸತಿ ನೆಲೆ ಇದ್ದು, ಗವಿಯಲ್ಲಿ ನೂತನ ಶಿಲೋಪಕರಣಗಳು, ಕಂದು-ಕೆಂಪು ವರ್ಣದ ಚಿತ್ರದ ಮಡಕೆಗಳು ಸಿಕ್ಕಿವೆ. ಇವು ಮಸ್ಕಿ ಮಾದರಿಯಲ್ಲಿವೆ. ಕೆಂಪು ವರ್ಣದ ಮಡಕೆಗಳು ಅಭ್ರಕ ಮಿಶ್ರಣವನ್ನೊಳ ಗೊಂಡಿವೆ. ಇಲ್ಲಿಯ ಗವಿಯಲ್ಲಿ ಮೂರು ವರ್ಣಚಿತ್ರಗಳನ್ನು ಗುರುತಿಸಲಾಗಿದೆ. ಬೃಹತ್ ಶಿಲಾಯುಗ ಕಾಲದ ಮಡಕೆ ಮತ್ತು ಶಿಲಾಗೋರಿಗಳು ಇಲ್ಲಿ ದೊರತಿದ್ದು, ಅವು ಅವಸಾನದ ಅಂಚಿನಲ್ಲಿವೆ.[1] ಇವುಗಳ ಆಧಾರದ ಮೇಲೆ ಇದು ಆದಿಮಾನವನ ನೆಲೆಯೆಂದು ಹೇಳಬಹುದು.

**೧೭. ಜಂಗಮರ ಕಲ್ಗುಡಿ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೯.೫ ಕಿ.ಮೀ. ದೂರದಲ್ಲಿದ್ದು, ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ. ಇಲ್ಲಿ ಈ ಕಾಲದ ಶಿಲಾವೃತ್ತಗಳು ಮತ್ತು ಇತರೆ ಮಾದರಿಯ ಶಿಲಾಗೋರಿ ಹಾಗು ಮಡಕೆ ಚೂರುಗಳು ದೂರೆತಿದ್ದು, ಆದಿಮಾನವನ ಜೀವನಕ್ರಮದ ಮೇಲೆ ಬೆಳಕು ಚೆಲ್ಲುತ್ತವೆ.[2]

**೧೮. ತಿಪ್ಪನಹಾಳು :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೮ ಕಿ.ಮೀ. ದೂರದಲ್ಲಿದ್ದು, ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಆದಿಮಾನವನ ನೆಲೆಯಾಗಿದೆ. ಇಲ್ಲಿ ಕಂದು ವರ್ಣದ ಮಡಕೆ ಭಾಗಗಳು ಹಾಗೂ ನೀಳ ಚಕ್ಕೆ ಮತ್ತು ಹಾಳಾಗಿರುವ ಶಿಲಾಗೋರಿಗಳು ದೊರೆತಿದ್ದು, ಅಧ್ಯಯನ ಯೋಗ್ಯವಾಗಿವೆ.[3]

**೧೯. ತಿಮ್ಮಾಪುರ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೧೯.೫ ಕಿ.ಮೀ. ದೂರದಲ್ಲಿದ್ದು, ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಆದಿಮಾನವನ ನೆಲೆಯಾಗಿದೆ. ಇಲ್ಲಿ ಈ ಕಾಲದ ಶಿಲಾವೃತ್ತಗಳು ಮತ್ತು ಇತರೆ ಮಾದರಿಯ ಶಿಲಾ ಗೋರಿ ಹಾಗು ಕಪ್ಪು, ಕಂದು ಬಣ್ಣದ ಮಡಕೆ ಚೂರುಗಳು ದೊರೆತಿದ್ದು, ಆದಿಮಾನವನ ಜೀವನಕ್ರಮದ ಮೇಲೆ ಬೆಳಕು ಚೆಲ್ಲುತ್ತವೆ.[4]

**೨೦. ತಿಮ್ಮಲಾಪುರ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೧೨ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ, ಶಿಲಾ ತಾಮ್ರಯುಗದ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ. ಇಲ್ಲಿ ಈ ಕಾಲದ ಮಡಕೆಚೂರು ಮತ್ತು ಗವಿ ವರ್ಣಚಿತ್ರಗಳನ್ನು ಶೋಧಿಸಲಾಗಿದೆ.[5] ಇದರಿಂದ ಇದು ಆದಿಮಾನವನ ಆವಾಸಸ್ಥಾನವೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.

**೨೧. ನಂದಿಹಳ್ಳಿ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೧೨ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ, ಶಿಲಾ ತಾಮ್ರಯುಗದ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ. ಇಲ್ಲಿ ಈ ಕಾಲದ ಮಡಕೆಚೂರು ಮತ್ತು ಕುಟ್ಟು, ಗವಿ ವರ್ಣಚಿತ್ರಗಳನ್ನು ಶೋಧಿಸಲಾಗಿದೆ.[6] ಇದರಿಂದ ಇಲ್ಲಿನ ಆದಿಮಾನವನ ಮತ್ತು ಪ್ರಾಗೈತಿಹಾಸಿಕ ಸಂಸ್ಕೃತಿಕ ಕುರಿತು ಅಧ್ಯಯನ ಮಾಡುಲು ಸಹಾಯಕವಾಗಿದೆ.

**೨೨. ನಾರಾಯಣಾಪುರ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೩೪ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ, ಶಿಲಾ ತಾಮ್ರಯುಗದ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ. ಇಲ್ಲಿ ಈ ಕಾಲದ ಮಡಕೆಚೂರು ಮತ್ತು ಗವಿ ವರ್ಣಚಿತ್ರಗಳನ್ನು ಶೋಧಿಸಲಾಗಿದೆ.[7] ಇದರಿಂದ ಇದು ಅಂದಿನ ಆದಿಮಾನವನ ಆವಾಸಸ್ಥಾನವೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ.

**೨೩. ಪನ್ನಪುರ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೭ ಕಿ.ಮೀ. ದೂರದಲ್ಲಿದ್ದು, ನವಶಿಲಯುಗ, ಶಿಲಾ ತಾಮ್ರಯುಗದ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ.[8]ಇಲ್ಲಿ ಈ ಕಾಲದ ಮಡಕೆಚೂರು ಮತ್ತು ಕೊರೆದ ಹಾಗು ಗವಿ ವರ್ಣಚಿತ್ರಗಳನ್ನು ಶೋಧಿಸಲಾಗಿದೆ. ಇದರಿಂದ ಇದು ಆದಿಮಾನವನ ಆವಾಸಸ್ಥಾನವೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.

**೧೪. ಬಿಳೇಭಾವಿ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೧೬ ಕಿ.ಮೀ. ದೂರದಲ್ಲಿದ್ದು, ಬೃಹತ್ ಶಿಲಯುಗ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ. ಇಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಡಮರುವಿನಂತಹ ಕೆಮ್ಮಣ್ಣಿನ ವರ್ಣ ಚಿತ್ರವಿದೆ. ಈ ಚಿತ್ರದ ಸಮೀಪ ವಿವಿಧ ನಮೂನೆಯ ಕಲ್ಗೋರಿಗಳ ಅವಶೇಷಗಳು ದೊರೆತಿವೆ.[9] ಇದರಿಂದ ಇದು ಆದಿಮಾನವನ ಆವಾಸಸ್ಥಾನವೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.

**೧೫. ಬೆನಕಲ್ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೦ ಕಿ.ಮೀ. ದೂರದಲ್ಲಿದ್ದು, ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಆದಿಮಾನವನ ನೆಲೆಯಾಗಿದೆ. ಇಲ್ಲಿ ಬೃಹತ್ ಶಿಲಾಯುಗದ ಕಿಡಿಕೋಣೆ ಮಾದರಿ ಗೋರಿಗಳು ದೊರೆತಿವೆ. ಮತ್ತು ಇಲ್ಲಿಯೇ ಇತಿಹಾಸ ಆರಂಭಯುಗಕ್ಕೆ ಸೇರಿದ ಕೆಂಪು ಲೇಪನದಡ್ಡಿಯಲ್ಲಿ, ಬಿಳಿಯ ವರ್ಣಚಿತ್ರಗಳುಳ್ಳ ಮಡಕೆ ಭಾಗಗಳು ದೊರೆತಿವೆ.[10] ಇದರಿಂದ ಇದು ಆದಿಮಾನವನ ಆವಾಸಸ್ಥಾನವೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.

**೧೬. ಬಸರಿಹಾಳ್ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೯ ಕಿ.ಮೀ. ದೂರದಲ್ಲಿದ್ದು, ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಆದಿಮಾನವನ ನೆಲೆಯಾಗಿದೆ. ಇಲ್ಲಿ ಈ ಕಾಲದ ಶಿಲಾವೃತ್ತಗಳು ಮತ್ತು ಇತರೆ. ಮಾದರಿಯ ಶಿಲಾಗೋರಿ ಹಾಗು ಕಪ್ಪು, ಕಂದು ಬಣ್ಣದ ಮಡಕೆ ಚೂರುಗಳು ದೊರೆತಿದ್ದು, ಆದಿಮಾನವನ ಜೀವನಕ್ರಮದ ಮೇಲೆ ಬೆಳಕು ಚೆಲ್ಲುತ್ತವೆ.[11]

**೧೭ ಬಂಡಿ ಹರಾಪುರ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೩೨ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ, ಶಿಲಾ ತಾಮ್ರಯುಗದ ಸಂಸ್ಕೃತಿಗೆ ಸೇರಿದ ಮಾನವ ನೆಲೆಯಾಗಿದೆ. ಇಲ್ಲಿ ಈ ಕಾಲದ ಮಡಕೆಚೂರು ಮತ್ತು ಕೊರೆದ ಹಾಗೂ ಗವಿ ವರ್ಣಚಿತ್ರಗಳನ್ನು ಶೋಧಿಸಲಾಗಿದೆ.[12] ಇದರಿಂದ ಇದು ಆದಿಮಾನವನ ಆವಾಸಸ್ಥಾನವೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.

**೧೮. ಬಂಡರಹಾಳ್ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೧೯ ಕಿ.ಮೀ. ದೂರದಲ್ಲಿದ್ದು, ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಆದಿಮಾನವನ ನೆಲೆಯಾಗಿದೆ. ಇಲ್ಲಿ ಈ ಕಾಲದ ಶಿಲಾವೃತ್ತಗಳು ಮತ್ತು ಇತರೆ ಮಾದರಿಯ ಶಿಲಾಗೋರಿ ಹಾಗು ಕಪ್ಪು, ಕಂದು ಬಣ್ಣದ ಮಡಕೆ ಚೂರುಗಳು ದೊರೆತಿದ್ದು, ಆದಿ ಮಾನವನ ಜೀವನಕ್ರಮದ ಮೇಲೆ ಬೆಳಕು ಚೆಲ್ಲುತ್ತವೆ.[13]

**೧೯. ಮರಕುಂಬಿ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೯ ಕಿ.ಮೀ. ದೂರದಲ್ಲಿದ್ದು, ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಆದಿಮಾನವನ ನೆಲೆಯಾಗಿದೆ. ಇಲ್ಲಿ ಈ ಕಾಲದ ಮೂರು ಗವಿವರ್ಣಚಿತ್ರಗಳು ಮತ್ತು ವಿವಿಧ ಮಾದರಿಯ ಶಿಲಾಗೋರಿ ಹಾಗು ಕಪ್ಪು, ಕಂದು ಬಣ್ಣದ ಮಡಕೆ ಚೂರುಗಳು ದೊರೆತಿದ್ದು,[14] ಆದಿಮಾನವನ ಜೀವನಕ್ರಮದ ಮೇಲೆ ಬೆಳಕು ಚೆಲ್ಲುತ್ತವೆ.

**೨೦. ಮಲ್ಲಾಪುರ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೨ ಕಿ.ಮೀ. ದೂರದಲ್ಲಿದ್ದು, ಸೂಕ್ಷ್ಮ ಶಿಲಾಯುಗ, ನವಶಿಲಾಯುಗ, ಶಿಲಾ ತಾಮ್ರಯುಗ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಮಹತ್ವದ ಆದಿಮಾನವನ ನೆಲೆಯಾಗಿದೆ. ಇಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಕಾಲದ ಗವಿ ವರ್ಣಚಿತ್ರಗಳು ದೊರೆತಿವೆ. ಅವು ಕಂದು ಬಣ್ಣವನ್ನು ಹೊಂದಿದ್ದು, ಜಿಂಕೆ, ಹೋರಿ ಹಾಗೂ ಇತರೆ ಚಿತ್ರಗಳು ಕಂಡುಬಂದಿವೆ. ಇಲ್ಲಿ ಶಿಲೋಪಕರಣಗಳನ್ನು ಕ್ವಾರ್ ಶಿಲೆಯಲ್ಲಿ ರೂಪಿಸಿದ್ದು, ಅವುಗಳಲ್ಲಿ ಹೆರೆಚಕ್ಕೆ ಮತ್ತು ಅರ್ಧಚಂದ್ರಾಕೃತಿ ಉಪಕರಣಗಳು ಮುಖ್ಯವಾಗಿ ದೊರೆತಿವೆ. ಇಲ್ಲಿ ನೂತನ ಶಿಲಾಯುಗದ ಕೈಕೊಡಲಿ, ಮಡಕೆಚೂರು ಮತ್ತು ಶಿಲಾ ತಾಮ್ರಯುಗ ಸಂಸ್ಕೃತಿಯ ವರ್ಣಚಿತ್ರಗಳನ್ನು ಗುರುತಿಸಲಾಗಿದೆ. ಇಲ್ಲಿಯೂ ವಿವಿಧ ಮೃಗಗಳು ಹಾಗೂ ಮಾನವರು ಚಿತ್ರಿತರಾಗಿರುವುದನ್ನು ನೋಡಬಹುದು. ಇದೇ ಪ್ರದೇಶದಲ್ಲಿ ಇನ್ನೂ ಕೆಲವಡೆ ಮೇಲಿನ ಕಾಲದ ಚಿತ್ರಗಳನ್ನು ಗಮನಿಸಲಾಗಿದೆ. ಅಲ್ಲಿಯೂ ವಿಶೇಷ ಆಕರ್ಷಕ ರೀತಿಯಲ್ಲಿ ಎತ್ತುಗಳು ಮತ್ತು ಇತರ ವನ್ಯಮೃಗಗಳ ಚಿತ್ರಗಳನ್ನು ಬಿಡಿಸಲಾಗಿದೆ. ಇವುಗಳಲ್ಲಿ ಕೆಲವು ಕಂದು ಕೆಂಪು ಬಣ್ಣಗಳಲ್ಲಿ ಚಿತ್ರಿಸಲ್ಪಟ್ಟಿದ್ದರೆ ಇನ್ನುಳಿದವು ಬಿಳಿಸುಣ್ಣದಿಂದ ಚಿತ್ರಿತವಾಗಿದೆ. ಇವು ನವಶಿಲಾಯುಗದ ಮಾನವನು ನೆಲೆಸಿದ್ದ ಸ್ಥಳಗಳು, ಅವನು ನಡೆಸುತ್ತಿದ್ದ ಜೀವನ ಪ್ರವೃತ್ತಿ ಅವನು ರೂಢಿಸಿಕೊಂಡ ಸಂಸ್ಕೃತಿ, ಆ ದಿಶೆಯಲ್ಲಿ ಅವನು ಸಾಧಿಸಿದ ಪ್ರಗತಿ ಮೊದಲಾದ ಅಂಶಗಳನ್ನು ಸೂಚಿಸುತ್ತವೆ.

ಅಲ್ಲದೆ ಇದೇ ನೆಲೆಯಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ವಾಸ್ತವ್ಯದ. ನೆಲೆ ಇದ್ದು, ಅದರಲ್ಲಿ ಕಪ್ಪು ಮತ್ತು ಕೆಂಪು ವರ್ಣದ ಮೃತ್ಪಾತ್ರೆಗಳು ಮತ್ತು ಶಿಲಾಗೋರಿ, ಕಬ್ಬಿಣದ ಕಿಟ್ಟಗಳು ದೊರೆತಿವೆ.[15] ಇದರಿಂದ ಈ ಕಾಲಘಟ್ಟದಲ್ಲಿ ಈ ನೆಲೆಯು ವಹಿಸಿರಬಹುದಾದ ಪಾತ್ರವನ್ನು ಗ್ರಹಿಸಬಹುದಾಗಿದೆ.

**೩೧. ಮುಸಲಾಪುರ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೭ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ ಸಂಸ್ಕೃತಿಗೆ ಸೇರಿದ ಮತ್ತೊಂದು ಪ್ರಮುಖ ಮನವ ನೆಲೆಯಾಗಿದೆ. ಇಲ್ಲಿ ಈ ಕಾಲದ ಬೂದಿದಿಬ್ಬ ಮತ್ತು ಮಡಕೆಚೂರು ಮತ್ತು ಕೊರೆದ ಹಾಗೂ ಗವಿ ವರ್ಣಚಿತ್ರಗಳನ್ನು ಶೋಧಿಸಲಾಗಿದೆ.[16] ಇದರಿಂದ ಇದು ಆದಿಮಾನವನ ಆವಾಸಸ್ಥಾನವೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.

**೩೨. ಎಮ್ಮಿಗುಡ್ಡ (ಹೇಮಗುಡ್ಡ) :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೯ ಕಿ.ಮೀ. ದೂರದಲ್ಲಿದ್ದು, ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಮತ್ತೊಂದು ಆದಿಮಾನವನ ಮುಖ್ಯ ನೆಲೆಯಾಗಿದೆ. ಇಲ್ಲಿ ಈ ಕಾಲದ ಕಿಂಡಿಕೋಣೆ, ಕಲ್ಮನೆ ಮಾದರಿಯ ಶಿಲಾಗೋರಿ ಹಾಗು ಕಪ್ಪು, ಕಂದು ಬಣ್ಣದ ಮಡಕೆ ಚೂರುಗಳು ದೊರೆತಿದ್ದು,[17] ಆದಿಮಾನವನ ಜೀವನಕ್ರಮದ ಮೇಲೆ ಬೆಳಕು ಚೆಲ್ಲುತ್ತವೆ.

**೩೩. ರಾಜನ್ ಕೋಲಾರ್ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೩೦ ಕಿ.ಮೀ. ದೂರದಲ್ಲಿದ್ದು, ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಮತ್ತೊಂದು ಆದಿಮಾನವನ ಮುಖ್ಯ ನೆಲೆಯಾಗಿದೆ. ಇಲ್ಲಿ ಈ ಕಾಲದ ಕಿಂಡಿಕೋಣೆ, ಕಲ್ಮನೆ ಮಾದರಿಯ ಶಿಲಾಗೋರಿ ಹಾಗು ಕಪ್ಪು, ಕಂದು ಬಣ್ಣದ ಮಡಕೆ ಚೂರುಗಳು ದೊರೆತಿದ್ದು, ಆದಿಮಾನವನ ಜೀವನಕ್ರಮದ ಮೇಲೆ ಬೆಳಕು ಚೆಲ್ಲುತ್ತವೆ.[18]

**೩೪. ರಾಮದುರ್ಗ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೧೨ ಕಿ.ಮೀ. ದೂರದಲ್ಲಿದ್ದು, ಸೂಕ್ಷ್ಮ ಶಿಲಾಯುಗ, ನವಶಿಲಾಯುಗ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಮತ್ತೊಂದು ಆದಿಮಾನವನ ಮುಖ್ಯ ನೆಲೆಯಾಗಿದೆ. ಇಲ್ಲಿ ಸೂಕ್ಷ್ಮ ಶಿಲಾ ಉಪಕರಣಗಳು, ಉಜ್ಜಿ ನಯಗೊಳಿಸಿದ ಕೊಡಲಿ ಹಾಗು ಕಿಂಡಿಕೋಣೆ, ಕಲ್ಮನೆ ಮಾದರಿಯ ಶಿಲಾಗೋರಿ ಹಾಗು ಕಪ್ಪು, ಕಂದು ಬಣ್ಣದ ಮಡಕೆ ಚೂರುಗಳು ದೊರೆತಿದ್ದು, ಅಂದಿನ ಆದಿಮಾನವನ ಜೀವನಕ್ರಮ ಅರಿಯಲು ಏಕಮೇವ ಆಧಾರಗಳಾಗಿವೆ.[19]

**೩೫. ವೆಂಕಟಾಪುರ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೯ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಮತ್ತೊಂದು ಆದಿಮಾನವನ ಮುಖ್ಯ ನೆಲೆಯಾಗಿದೆ. ಇಲ್ಲಿ ಉಜ್ಜಿ ನಯಗೊಳಿಸಿದ ಕೈಕೊಡಲಿ ಮತ್ತು ಬೂದಿದಿಬ್ಬ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಗವಿ ವರ್ಣಚಿತ್ರಗಳು, ಕಿಂಡಿಕೋಣೆ, ಕಲ್ಮನೆ ಮಾದರಿಯ ಶಿಲಾಗೋರಿ ಹಾಗು ಕಪ್ಪು, ಕಂದು ಬಣ್ಣದ ಮಡಕೆ ಚೂರುಗಳು ದೊರೆತಿದ್ದು, ಅಂದಿನ ಆದಿಮಾನವನ ಜೀವನಕ್ರಮ ಅರಿಯಲು ಆಧಾರಗಳಾಗಿವೆ.[20]

**೩೬. ಸಾಣಾಪುರ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೨ ಕಿ.ಮೀ. ದೂರದಲ್ಲಿದ್ದು, ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಮತ್ತೊಂದು ಆದಿಮಾನವನ ಪ್ರಮುಖ ನೆಲೆಯಾಗಿದೆ. ಇಲ್ಲಿ ಈ ಕಾಲದ ಕಲ್ಗುಪ್ಪೆ, ಕಿಂಡಿಕೋಣೆ, ಕಲ್ಮನೆ ಮಾದರಿಯ ಶಿಲಾಗೋರಿಗಳು ಹಾಗು ಕಪ್ಪು, ಕಂದು ಬಣ್ಣದ ಮಡಕೆ ಚೂರುಗಳು ದೊರೆತಿದ್ದು, ಆದಿಮಾನವನ ಜೀವನಕ್ರಮವನ್ನು ಗ್ರಹಿಸಲು ಸಹಾಯಕವಾಗಿವೆ.[21]

**೩೭. ಸಿಂಗನಹಾಳ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೭ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ, ಶಿಲಾ ತಾಮ್ರಯುಗ ಸಂಸ್ಕೃತಿಗೆ ಸೇರಿದ ಮತ್ತೊಂದು ಪ್ರಮುಖ ಮಾನವ ನೆಲೆಯಾಗಿದೆ. ಇಲ್ಲಿ ಮಡಕೆಚೂರು ಮತ್ತು ಕೊರೆದ ಹಾಗು ಗವಿ ವರ್ಣಚಿತ್ರಗಳನ್ನು ಶೋಧಿಸಲಾಗಿದೆ. ಇದರಿಂದ ಇದು ಆದಿಮಾನವನ ಆವಾಸಸ್ಥಾನವೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.[22]

**೩೮. ಹರಳಾಪುರ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೧೭ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ ಸಂಸ್ಕೃತಿಗೆ ಸೇರಿದ ಮತ್ತೊಂದು ಪ್ರಮುಖ ಮಾನವ ನೆಲೆಯಾಗಿದೆ. ಇಲ್ಲಿ ಈ ಕಾಲದ ಮಡಕೆಚೂರು ಮತ್ತು ಕೊರೆದ ಹಾಗು ಮೂರು ಗವಿ ವರ್ಣಚಿತ್ರಗಳನ್ನು ಶೋಧಿಸಲಾಗಿದೆ. ಇದರಿಂದ ಇದು ಆದಿಮಾನವನ ಆವಾಸಸ್ಥಾನವೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.[23]

**೩೯. ಹಿರೆಜಂತ್ಕಲ್ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೬ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ ಸಂಸ್ಕೃತಿಗೆ ಸೇರಿದ ಮತ್ತೊಂದು ಪ್ರಮುಖ ಮಾನವ ನೆಲೆಯಗಿದೆ. ಇಲ್ಲಿ ಈ ಕಾಲದ ಮಡಕೆಚೂರು ಮತ್ತು ಗವಿ ವರ್ಣಚಿತ್ರಗಳನ್ನು ಶೋಧಿಸಲಾಗಿದೆ. ಇವುಗಳ ಆಧಾರದ ಮೇಲೆ ಅಂದಿನ ಆದಿಮಾನವನ ಪ್ರಾಗೈತಿಹಾಸಿಕ ಜೀವನಕ್ರಮ ಅರಿಯಬಹುದಾಗಿದೆ.[24]

**೪೦. ಹೊಸಕೆರೆ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೧೭ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ, ಶಿಲಾ ತಾಮ್ರಯುಗ ಸಂಸ್ಕೃತಿಗೆ ಸೇರಿದ ಮತ್ತೊಂದು ಪ್ರಮುಖ ಮಾನವ ನೆಲೆಯಾಗಿದೆ. ಇಲ್ಲಿ ಈ ಕಾಲದ ಕಂದು ಬಣ್ಣದ ಮಡಕೆಚೂರು ಮತ್ತು ನೀಳಚಕ್ಕೆಯ ಉಪಕರಣಗಳನ್ನು ಶೋಧಿಸಲಾಗಿದೆ. ಇದರಿಂದ ಇದು ಆದಿಮಾನವನ ಆವಾಸಸ್ಥಾನವೆಂದು ಮತ್ತು ಪ್ರಾಗೈತಿಹಾಸಿಕ ನೆಲೆಯೆಂದು ಹೇಳಬಹುದಾಗಿದೆ.

**೪೧. ಹಿರೇಬೆನಕಲ್ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೬ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಮತ್ತೊಂದು ಆದಿಮಾನವನ ಮಹತ್ವದ ನೆಲೆಯಾಗಿದೆ. ಇಲ್ಲಿ ಉಜ್ಜಿ ನಯ ಗೊಳಿಸಿದ ಕೈಕೊಡಲಿ ಮತ್ತು ಕಪ್ಪು, ಬೂದು ಬಣ್ಣದ ಮಡಕೆಚೂರುಗಳು ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಗವಿ ವರ್ಣಚಿತ್ರಗಳು, ಕಿಂಡಿಕೋಣ, ಕಲ್ಮನೆ, ಆಯತಾಕಾರದ, ಹಲವು ಕೋಣೆಗಳ ಶಿಲಾಗೋರಿಗಳು ಹಾಗು ಕಪ್ಪು, ಕೆಂಪು ಬಣ್ಣದ ಮಡಕೆ ಚೂರುಗಳು ದೊರೆತಿದ್ದು, ಅಂದಿನ ಆದಿಮಾನವನ ಜೀವನಕ್ರಮ ಅರಿಯಲು ಆಧಾರಗಳಾಗಿವೆ. ಇಲ್ಲಿಯೇ ಇತಿಹಾಸ ಆರಂಭಯುಗ ಹಂತದ ಅವಶೇಷಗಳು ದೊರೆತಿದ್ದು ಕಬ್ಬಿಣವನ್ನು ಕರಗಿಸಿದ ಕುರುಹುಗಳು ಇಲ್ಲಿ ದೊರೆತಿವೆ.

ಇಲ್ಲಿನ ಬೆಟ್ಟದಲ್ಲಿ ಚಿತ್ರಿತ ೧೨ ಗವಿಬಂಡೆಗಳನ್ನು ಗುರುತಿಸಲಾಗಿದೆ. ನೃತ್ಯದಲ್ಲಿ ತೊಡಗಿರುವ ಚಿತ್ರ ೧೨ನೇಯ ಗವಿಬಂಡೆಯಲ್ಲಿದೆ. ದುರ್ಗದ ಗಡಿ ಎಂದು ಸ್ಥಳೀಯವಾಗಿ ಕರೆಯುವ ಇದರ ಸುತ್ತಮುತ್ತಲಿರುವ ಬಂಡೆಗಳ ಮೇಲೆ ಅನೇಕ ಬಗೆಯ ಚಿತ್ರಗಳನ್ನು ಬಿಡಿಸಲಾಗಿದೆ. ಈ ಗವಿಬೆಟ್ಟದ ಸುಮಾರು ಮಧ್ಯ ಅಂತರದಲ್ಲದಿ ಒಂದು ಬಯಲು ಪ್ರದೇಶವಿದೆ. ಇದು ಬೃಹತ್ ಶಿಲಾಸಂಸ್ಕೃತಿಯ ವಾಸ್ತವ್ಯದ ನೆಲೆ. ಬೂದು ಮಿಶ್ರಿತ ಮಣ್ಣಿನಲ್ಲಿ ಕೆಂಪು, ಕೆಂಪು-ಕಪ್ಪು ದ್ವಿವರ್ಣದ ಮತ್ತು ಕಪ್ಪು ಬಣ್ಣದ ಮೃತ್ ಪಾತ್ರೆಗಳು ಹೇರಳವಾಗಿವೆ. ಅಲ್ಲದೆ ಸುಟ್ಟಮಣ್ಣಿನ ಮಣಿ, ಬಳೆಚೂರುಗಳು ಕಂಡುಬರುತ್ತವೆ.

**೪೨. ಹೆಬ್ಬಾಳ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೯ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ/ತಾಮ್ರ ಶಿಲಾಯುಗ ಸಂಸ್ಕೃತಿಗೆ ಸೇರಿದ ಮತ್ತೊಂದು ಆದಿಮಾನವನ ಮುಖ್ಯ ನೆಲೆಯಾಗಿದೆ. ಇಲ್ಲ ಉಜ್ಜಿ ನಯಗೊಳಿಸಿದ ಕೈಕೊಡಲಿ ಮತ್ತು ಬೂದಿದಿಬ್ಬ ಗವಿ ವರ್ಣಚಿತ್ರಗಳು ಕಪ್ಪು, ಕಂದುದ ಬಣ್ಣದ ಮಡಕೆ ಚೂರುಗಳು ದೊರೆತಿದ್ದು, ಅಂದಿನ ಆದಿಮನವನ ಜೀವನಕ್ರಮ ಅರಿಯಲು ಏಕಮೇವ ಆಧಾರಗಳಾಗಿವೆ.

**೪೨. ಹೇರೂರು :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೯ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ, ತಾಮ್ರ ಶಿಲಾಯುಗ ಸಂಸ್ಕೃತಿಗೆ ಸೇರಿದ ಮತ್ತೊಂದು ಆದಿಮಾನವನ ಮುಖ್ಯ ನೆಲೆಯಾಗಿದೆ. ಇಲ್ಲಿ ಉಜ್ಜಿ ನಯಗೊಳಿಸಿದ ಕೈಕೊಡಲಿ ಮತ್ತು ಬೂದಿದಿಬ್ಬ ಗವಿ ವರ್ಣಚಿತ್ರಗಳು ಕಪ್ಪು, ಕಂದು ಬಣ್ಣದ ಮಡಕೆ ಚೂರುಗಳು ದೊರೆತಿದ್ದು, ಅಂದಿನ ಆದಿಮಾನವನ ಜೀವನಕ್ರಮ ಅರಿಯಲು ಏಕಮೇವ ಆಧಾರ ಗಳಾಗಿವೆ.

**೪೩. ಹೇರೂರು :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೯ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ, ತಾಮ್ರ ಶಿಲಾಯುಗ ಸಂಸ್ಕೃತಿಗೆ ಸೇರಿದ ಮತ್ತೊಂದು ಆದಿಮಾನವನ ಮುಖ್ಯ ನೆಲೆಯಾಗಿದೆ. ಇಲ್ಲ ಉಜ್ಜಿ ನಯಗೊಳಿಸಿದ ಕೈಕೊಡಲಿ ಮತ್ತು

ಬೂದಿದಿಬ್ಬ ಗವಿ ವರ್ಣಚಿತ್ರಗಳು ಕಪ್ಪು, ಕಂದು ಬಣ್ಣದ ಮಡಕೆ ಚೂರುಗಳು ದೊರೆತಿದ್ದು, ಅಂದಿನ ಆದಿಮಾನವನ ಜೀವನಕ್ರಮ ಅರಿಯಲು ಏಕಮೇವ ಆಧಾರಗಳಾಗಿವೆ.

**೪೪. ಹೊಸಕೇರಾ :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೨೯ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ ಸಂಸ್ಕೃತಿಗೆ ಸೇರಿದ ಮತ್ತೊಂದು ಆದಿಮಾನವನ ಮುಖ್ಯ ನೆಲೆಯಾಗಿದೆ. ಇಲ್ಲಿ ಉಜ್ಜಿ ನಯಗೊಳಿಸಿದ ಕೈಕೊಡಲಿ ಮತ್ತು ಬೂದಿದಿಬ್ಬ ಗವಿ ವರ್ಣಚಿತ್ರಗಳು ಕಪ್ಪು, ಕಂದು ಬಣ್ಣದ ಮಡಕೆ ಚೂರುಗಳು ದೊರೆತಿದ್ದು, ಅಂದಿನ ಆದಿಮಾನವನ ಜೀವನಕ್ರಮ ಅರಿಯಲು ಆಧಾರಗಳಾಗಿವೆ.

**೪೫. ಕಡೆಬಾಗಿಲು :** ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೧೦ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಮತ್ತೊಂದು ಆದಿಮಾನವನ ಮಹತ್ವದ ನೆಲೆಯಾಗಿದೆ. ಇಲ್ಲಿ ಉಜ್ಜಿ ನಯಗೊಳಿಸಿದ ಕೈಕೊಡಲಿ ಮತ್ತು ಕಪ್ಪು, ಬೂದು ಬಣ್ಣದ ಮಡಕೆಚೂರುಗಳು ಹಾಗು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಗವಿ ವರ್ಣಚಿತ್ರಗಳು, ಕಿಂಡಿಕೋಣೆ, ಕಲ್ಮನೆ, ಆಯಾತಾಕಾರದ, ಹಲವು ಕೋಣೆಗಳ ಶಿಲಾಗೋರಿಗಳು ಹಾಗು ಕಪ್ಪು, ಕೆಂಪು ಬಣ್ಣದ ಮಡಕೆ ಚೂರುಗಳು ದೊರೆತಿದ್ದು, ಅಂದಿನ ಆದಿಮಾನವನ ಜೀವನಕ್ರಮ ಅರಿಯಲು ಆಧಾರಗಳಾಗಿವೆ.

**೪೬. ಸಂಗಾಪುರ :** ಸಂಗಾಪುರ ಇದು ತಾಲೂಕು ಕೇಂದ್ರವಾದ ಗಂಗಾವತಿಯಿಂದ ೯ ಕಿ.ಮೀ. ದೂರದಲ್ಲಿದ್ದು, ನವಶಿಲಾಯುಗ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಮತ್ತೊಂದು ಆದಿಮಾನವನ ಮಹತ್ವದ ನೆಲೆಯಾಗಿದೆ. ಇಲ್ಲಿನ ಕರಡಿಬೆಟ್ಟದಲ್ಲಿ ಅನೇಕ ಚಿಕ್ಕ ದೊಡ್ಡ ಗವಿಗಳಿವೆ. ಅವುಗಳಲ್ಲಿ ಪ್ರಾಗಿತಿಹಾಸ ಕಾಲದ ಮಡಕೆ ಚೂರುಗಳು, ಶಿಲಾಯುಧಗಳು ದೊರೆತಿವೆ. ಇಲ್ಲಿನ ಒಂದೆರಡು ಗವಿಗಳಲ್ಲಿ ಮಾತ್ರ ಚಿತ್ರಗಳಿವೆ. ಚಿತ್ರಿತ ಭಾಗವು ಬಹಿರಂಗವಾಗಿ ಕಾಣುವಂತಿದ್ದರೂ ಮಳೆ, ಗಾಳಿ, ಬಿಸಿಲಿನಿಂದ ಸಂಪೂರ್ಣ ರಕ್ಷಿತಗೊಂಡು ಉತ್ತಮ ಸ್ಥಿತಿಯಲ್ಲಿವೆ. ಈ ಹಿನ್ನೆಲೆಯಲ್ಲಿ ಇದೊಂದು ಆದಿಮಾನವನ ನೆಲೆಯೆಂದು ಹೇಳಬಹುದಾಗಿದೆ.

**೪.೨. ಉತ್ಖನನ ನೆಲೆಗಳು**

ಹಂಪಿ ಪರಿಸರದಲ್ಲಿ ಆದಿಮಾನವನ ಹಲವಾರು ನೆಲೆಗಳಿದ್ದು, ಅವು ತಮ್ಮದೇ ಆದ ವೈಶಿಷ್ಟ್ಯಗಳನ್ನು ಹೊಂದಿವೆ. ಡಾ.ಅ. ಸುಂದರ, ಡಾ. ನಾಗರಾಜರಾವ್, ಡಾ. ಪದ್ದಯ್ಯ, ಡಾ. ಸಂಕಾಲಿಯ, ಡಾ. ಅನ್ಸಾರಿ ಮೊದಲಾದ ವಿದ್ವಾಂಸರು ಇಲ್ಲಿನ ಕೆಲ ಪ್ರದೇಶಗಳಲ್ಲಿ ಉತ್ಖನನ ನಡೆಸಿ ಪ್ರಾಗ್ಐತಿಹಾಸಿಕ ಮಾನವನ ಜನಜೀವನದ ಮೇಲೆ ವಿಶೇಷ ಬೆಳಕನ್ನು ಬೀರಿದ್ದಾರೆ. ತೆಕ್ಕಲಕೋಟೆ, ಸಂಗನಕಲ್ಲು, ಕಪ್ಪಗಲ್ಲು ಮೊದಲಾದಡೆ ಉತ್ಖನನಗಳು ನಡೆದಿವೆ. ಆ ಕುರಿತ ಸಂಕ್ಷಿಪ್ತ ವಿವರ ಈ ಮುಂದೆ ಇದೆ.

**೧. ತೆಕ್ಕಲಕೋಟೆ :** ಇದು ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನಲ್ಲಿದೆ. ಬಳ್ಳಾರಿಯಿಂದ ದಕ್ಷಿಣಕ್ಕೆ ೪೨ ಕಿ.ಮೀ., ಆದೋನಿಯಿಂದ ಆರು ಕಿ.ಮೀ., ದೂರದಲ್ಲಿದೆ. ನವಶಿಲಾಯುಗ, ಶಿಲಾ ತಾಮ್ರಯುಗ ಸಂಸ್ಕೃತಿಯ ಕಾಲಘಟ್ಟಕ್ಕೆ ಸೇರಿದ ಈ ನೆಲೆಯಲ್ಲಿ ೧೯೧೬ರಲ್ಲಿ ರಾಬರ್ಟ್ ಬ್ರೂಸ್ ಫೂಟ್ ಆದಿಮಾನವನಿಗೆ ಸಂಬಂಧಿಸಿದ ಕೆಲ ಅವಶೇಷಗಳನ್ನು ಶೋಧಿಸಿದ್ದರು. ನಂತರ ೧೯೬೩ರಲ್ಲಿ ಇಲ್ಲಿ ಕೆ.ಸಿ.ಮಲ್ಹೋತ್ರ, ಎಂ.ಎಸ್. ನಾಗರಾಜರಾವ್ ನಿರ್ದೇಶನದಲ್ಲಿ ಉತ್ಖನನ ನಡೆಸಿ ಮಡಕೆಗಳು, ಬ್ಲೇಡ್ ಮೊದಲಾದ ಶಿಲಾಯುಧಗಳನ್ನು ಮತ್ತು ಆದಿಮಾನವನ ವಾಸಸ್ಥಾನವನ್ನು ಗುರುತಿಸಿದರು. ತರುವಾಯ ೧೯೬೩-೬೪ ರಲ್ಲಿ ಸಂಕಾಲಿಯ ಸ್ನಾತಕೋತ್ತರ ಪರಿಶೋಧನಾ ಸಂಸ್ಥೆ, ಪುಣೆ ಮತ್ತು ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರ ಸಂಯುಕ್ತ ಆಶ್ರಯದಲ್ಲಿ ಉತ್ಖನನ ನಡೆಸಿದರು. ಈ ನೆಲೆಯಲ್ಲಿ ತಾಮ್ರದ ಸುರುಳಿ, ಕಲ್ಲಿನ ಕೊಡಲಿ, ಜಿಂಕೆಯ ಕವಲುಕೊಂಬು, ಮೇಗಿಗಳು, ಬ್ಲೇಡುಗಳು, ಸ್ಪಟಿಕದ ಶಿಲೆ ಹಾಗೂ ಚಿನ್ನದ ಮಗ್ರಿ ಪಟ್ಟಿ, ಕಲ್ಲು ಮುಳ್ಳುಗಳು, ಬೂದು ಬಣ್ಣದ ಮಡಕೆ, ಹಳದಿ ಬಣ್ಣದ ಮಡಕೆಗಳು, ಕಪ್ಪು-ಕೆಂಪು, ಕಂದುಬಣ್ಣದ ಕಪ್ಪು ಮಿಶ್ರಿತ ಮಡಕೆಗಳು ದೊರೆತಿದ್ದು, ಅಂದಿನ ಜೀವನಕ್ರಮ ಅರಿಯಲು ಸಹಾಯಕವಾಗಿವೆ.

ಈ ನೆಲೆ ನೂತನ ಶಿಲಾಯುಗ ಸಂಸ್ಕೃತಿಗೆ ವಾಸದ ನೆಲೆಯಾಗಿತ್ತು. ಈ ಸಂಸ್ಕೃತಿಯ ಜನರ ದೈನಂದಿನ ಜೀವನದ ಸ್ವರೂಪ ಮತ್ತು ಲಕ್ಷಣಗಳನ್ನು ತಿಳಿಯುವ ಉದ್ದೇಶವನ್ನು ಇಟ್ಟುಕೊಂಡು ಈ ಉತ್ಖನನ ಕೈಗೊಳ್ಳಲಾಗಿತ್ತು. ಉತ್ಖನನದ ನಂತರ ಈ ಶಿಲಾಯುಗ ಸಂಸ್ಕೃತಿಯ ಬೆಳವಣಿಗೆಯಲ್ಲಿ ಎರಡು ಹಂತಗಳನ್ನು ಗುರುತಿಸಲಾಯಿತು.

೧. ಶಿಲಾ ತಾಮ್ರ ಹಂತದಲ್ಲಿಯ ನೂತನ ಶಿಲಾಯುಗ ಸಂಸ್ಕೃತಿ

೨. ಈ ಸಂಸ್ಕೃತಿಯ ಅಂತ್ಯದ ಪ್ರಾಚೀನ ಹಂತ

೧. ಶಿಲಾ ತಾಮ್ರ ಹಂತದಲ್ಲಿಯ ನೂತನ ಶಿಲಾಯುಗ ಸಂಸ್ಕೃತಿ

ಆದಿ ಹಂತದಲ್ಲಿ ಬ್ರಹ್ಮಗಿರಿ ಮತ್ತು ಪಿಕ್ಲಿಹಾಳ ಮೊದಲಾದ ನೆಲೆಗಳಲ್ಲಿ ಕಂಡುಬಂದಂತೆ ಇಲ್ಲಿಯೂ ತಾಮ್ರದ ಉಪಕರಣಗಳನ್ನು, ಆಭರಣಗಳನ್ನು ಉಪಯೋಗಿಸುತ್ತಿದ್ದ ಅಂಶ ಸ್ಪಷ್ಟವಾಯಿತು. ಈ ಸಂಸ್ಕೃತಿಯ ಜನರು ಸಾಮಾನ್ಯವಾಗಿ ಇಂದಿನ ಸಿರುಗುಪ್ಪ ಮೊದಲಾದ ಗ್ರಾಮಗಳಲ್ಲಿಯ 'ಬೋಯಾ' ಜನಾಂಗದವರು ತಮ್ಮ ವಾಸಕ್ಕಾಗಿ ವೃತ್ತಾಕಾರದ ಗುಡಿಸಲು ಕಟ್ಟಿಕೊಳ್ಳುವಂತೆ ಇವರೂ ವೃತ್ತಾಕಾರವಾಗಿ ತಮ್ಮ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದರೆಂಬ ಅಂಶವನ್ನು ಉತ್ಖನನದಲ್ಲಿ ಶೋಧಿಸಲಾಯಿತು. ಇಲ್ಲಿನ ವಸತಿಗಳನ್ನು ತಳಹದಿ ಹದಗೊಳಿಸಿ ನಂತರ ಚಿಕ್ಕ ಚಿಕ್ಕ ಕಲ್ಲುಗಳನ್ನು ಹಾಕಿ ಅದರ ಮೇಲೆ ಮಣ್ಣನ್ನು ಉಜ್ಜಿ ಗಟ್ಟಿಗೊಳಿಸಲಾಗುತ್ತಿತ್ತು ಎಂಬುದನ್ನು ಮತ್ತು ಬಿದಿರು ಬೊಂಬು ಹಾಗು ತಡಿಕೆ ಬಳಸಿಕೊಂಡು ಮನೆ ನಿರ್ಮಿಸುತ್ತಿದ್ದರೆಂಬ ಅಂಶವನ್ನು ಇದೇ ಉತ್ಖನನದಲ್ಲಿ ಗುರುತಿಸಲಾಯಿತು. ಒಂದು ಮನೆಯಲ್ಲಿ ಆಯತಾಕಾರದ ಗುಂಡಿಯಲ್ಲಿ ಶವ ಇದ್ದರೂ ಶೋಧವಾಯಿತು. ಸಾಮಾನ್ಯವಾಗಿ ಈ ಜನರು ಶವ ಕುಣಿಗಳಲ್ಲಿ ಶವಗಳನ್ನಿಟ್ಟು ಸಂಸ್ಕಾರ ಮಾಡುವ ಪದ್ಧತಿಯನ್ನು ರೂಢಿಸಿಕೊಂಡಿದ್ದರು. ಆದರೆ ಸಾಮಾನ್ಯವಾಗಿ ಈ ಜನರು ಮನೆಯ ಹೊರಗಡೆ ಶವಸಂಸ್ಕಾರ ಮಾಡುವ ಪದ್ಧತಿ ಇಟ್ಟುಕೊಂಡಿದ್ದರೆಂಬ ಅಂಶವನ್ನು ಇದೇ ವೇಳೆ ಗುರುತಿಸಲಾಯಿತು. ಮನೆಯ ಸಮೀಪದಿಂದಲೇ ನಾರಿಹಳ್ಳಕ್ಕೆ ಹೋಗುವ ದಾರಿ ಮತ್ತು ಮನೆಯ ಸುತ್ತ ಇದ್ದ ಎತ್ತರದ ಗೋಡೆ ಮತ್ತು ಪ್ರವೇಶ ದ್ವಾರವನ್ನು ಇದೇ ವೇಳೆ ಶೋಧಿಸಲಾಯಿತು. ಈ ರೀತಿಯ ವಸತಿ ನೆಲೆ ಕರ್ನಾಟಕದಲ್ಲಿ ದೊರೆತಿರುವುದು ಇಲ್ಲಿನ ವಿಶೇಷವಾಗಿದೆ.

**೨. ಈ ಸಂಸ್ಕೃತಿಯ ಅಂತ್ಯದ ಪ್ರಾಚೀನ ಹಂತ**

ಎರಡನೇ ಹಂತದಲ್ಲಿ ಈ ನೆಲೆಯಲ್ಲಿನ ಜನರು ಹೊರಗಿನಿಂದ ಬಂದ ಜನರೊಡನೆ ಸಂಪರ್ಕವಿಟ್ಟುಕೊಂಡಿದ್ದರೆಂಬ ಅಂಶವನ್ನು ಮತ್ತು ಈ ಹಂತದ ಜನರು ಗೋದಾವರಿ ನದಿ ಪ್ರದೇಶದಲ್ಲಿನ ಶಿಲಾ ತಾಮ್ರ ಹಂತದಲ್ಲಿದ್ದ ಜನರ ವಸತಿ ನೆಲೆಗಳ ಮಾದರಿಯಲ್ಲಿ ತಮ್ಮ ವಸತಿಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಇಲ್ಲಿ ಈ ಹಂತದಲ್ಲಿ ಕಟ್ಟಿಕೊಂಡ ಮನೆಗಳಿಗೂ ನಾಸಿಕ್, ಜೋರ್ವಾ, ದಯಾಲ್ ಬಾಗ್ ಮೊದಲಾದೆಡೆ ದೊರೆತ ಮನೆಗಳಿಗೂ ಸಾಕಷ್ಟು ಹೋಲಿಕೆಗಳಿವೆ.

**ಮೃತ್ಪಾತ್ರೆಗಳು :** ಈ ಉತ್ಖನನದಲ್ಲಿ ಅಲಂಕೃತ ಮೃತ್ಪಾತ್ರೆಗಳು ಪ್ರಮುಖವಾಗಿ ದೊರಕಿದ್ದು, ಅವು ಇಂತಿವೆ.

೧. ಚಿತಾಭಸ್ಮವನ್ನು ಇಟ್ಟಿರುವ ಕುಂಭಗಳು

೨. ಅಸ್ಥಿ, ಮೃತ್ಪಾತ್ರೆಗಳು

೩. ಮಕ್ಕಳ ಮತ್ತು ದೊಡ್ಡವರ ಅಸ್ಥಿಗಳು

**ತೆಕ್ಕಲಕೋಟೆಯ ಸ್ತರಗಳ ಅಧ್ಯಯನ :** ಈ ಉತ್ಖನನದಲ್ಲಿ ಸ್ತರಗಳ ಅಧ್ಯಯನ ಕೈಗೊಳ್ಳಲಾಗಿದೆ. ಇಲ್ಲಿನ ಸ್ತರಗಳಲ್ಲಿ ದೊರೆತ ವಿವಿಧ ಅವಶೇಷಗಳ ವಿವರ ಇಂತಿದೆ.

೧. ಮೊದಲನೇ ಸ್ತರದಲ್ಲಿ ಕಂಚಿನ ಅವಶೇಷಗಳಾದ ತ್ರಾಮದ ಸುರುಳಿ ನವಶಿಲಾಯುಗ ಸಂಸ್ಕೃತಿಯ ಶಿಲಾಯುಧಗಳು ಬೂದು ಬಣ್ಣದ ಮಡಕೆ ಕಪ್ಪು ಮಿಶ್ರಿತ ಮಡಕೆಗಳು ದೊರೆತಿವೆ.

೨. ಎರಡನೇ ಪದರ ಮಧ್ಯ ಶಿಲಾಯುಗ ಸಂಸ್ಕೃತಿಯ ಶಿಲಾಯುಧಗಳು ದೊರತಿವೆ.

೩. ಮೂರನೇ ಪದರಿನಲ್ಲಿ ಕಲ್ಲಿನ ಕೈಕೊಡಲಿ, ಸಜ್ಜೆ, ನೆಲ್ಲು ಮೊದಲಾದ ಧಾನ್ಯಗಳು.

೪. ನಾಲ್ಕನೇ ಪದರಿನಲ್ಲಿ ನವಶಿಲಾಯುಗ ಸಂಸ್ಕೃತಿಯ ಬ್ಲೇಡುಗಳು, ತಾಮ್ರದ ಕೊಡಲಿ, ಮಚ್ಚುಗಳು ದೊರೆತಿವೆ.

೫. ಐದನೇ ಪದರಿನಲ್ಲಿ ಮಡಕೆಗಳು, ಶಿಲಾಯುಧಗಳು, ಕೈಕೊಡಲಿಗಳು ಜಿಂಕೆಯ ಕೋಡು, ಎಲುಬುಗಳು ದೊರೆತಿವೆ.

ಇವರು ವಿಶೇಷವಾಗಿ ತಾಮ್ರದ ಆಯುಧೋಪಕರಣಗಳನ್ನು ಮತ್ತು ರೇಖಾ ಚಿತ್ರಗಳಿಂದ ಅಲಂಕರಿಸಲ್ಪಟ್ಟ ಕೆಂಪು ವರ್ಣದ ಮಣ್ಣಿನ ಪಾತ್ರೆಗಳನ್ನು ಉಪಯೋಗಿಸುತ್ತಿದ್ದರು. ಈ ಸಂಸ್ಕೃತಿಯ ನೆಲೆಗಳಾದ ಇನಾಂಗವಾ ಮೊದಲಾದೆಡೆ ಸಾಮಾನ್ಯವಾಗಿ ಶವಸಂಸ್ಕಾರಕ್ಕೆ ಉಪಯೋಗಿಸುತ್ತಿದ್ದ ಕಪ್ಪು, ಕೆಂಪು, ದ್ವಿವರ್ಣ ಪಾತ್ರೆಗಳನ್ನು ಶವಸಂಸ್ಕಾರಕ್ಕಾಗಿ ಬಳಸುತ್ತಿದ್ದರು. ಈ ರೀತಿಯ ಶವಕುಣಿಗಳು ಅಲ್ಲಲ್ಲಿ ದೊರಕಿವೆ. ಇದೇ ರೀತಿಯ ಪದ್ಧತಿಯನ್ನು ಇಲ್ಲಿ ಅನುಸರಿಸುತ್ತಿದ್ದರು. ಇಲ್ಲಿನ ಮಣ್ಣಿನ ಪಾತ್ರೆಗಳ ಮೇಲೆ ಬಿಳಿಬಣ್ಣದ ರೇಖಾಚಿತ್ರಗಳು ಇರುತ್ತಿದ್ದವು. ಒಂದು ಶವ ಕೋಣೆಯಲ್ಲಿ ಬಿಳಿಬಣ್ಣದ ರೇಖಾಚಿತ್ರಗಳಿಂದ ಕೂಡಿದ ಮಣ್ಣಿನ ಪಾತ್ರೆ ಅವಶೇಷಗಳು ಮತ್ತು ಮನೆಯೊಳಗೆ ಉಪಯೋಗಿಸುತ್ತಿದ್ದ ಪಾತ್ರೆಗಳಲ್ಲಿ ವರ್ಣಚಿತ್ರಗಳಿಂದ ಅಲಂಕೃತವಾದ ಮಣ್ಣಿನ ಪಾತ್ರೆಗಳ ಅವಶೇಷಗಳು ದೊರೆತವು. ಇವಲ್ಲದೇ ಇವರ ಶವಸಂಸ್ಕಾರ ಪದ್ಧತಿಯ ಹಲವಾರು ವಿಧಾನಗಳಿದ್ದವು. ಅವುಗಳಲ್ಲಿ ಒಂದು ರೀತಿ ದೊಡ್ಡ ದೊಡ್ಡ ಗುಡಾಣಗಳಂತ್ತಿದ್ದ ಪ್ರಾತ್ರೆಗಳನ್ನು ಒಡೆದು ಒಂದನ್ನೊಂದು ಜೋಡಿಸಿ, ಅವುಗಳಲ್ಲಿ ಶವದ ಅಸ್ಥಿ ಅವಶೇಷಗಳನ್ನು ಇಟ್ಟು ಶವಸಂಸ್ಕಾರ ಮಾಡುವ ವಿಧಾನ ಉತ್ಖನನದಲ್ಲಿ ಗೋಚರವಾಯಿತು.

ನೆವಾಸದಲ್ಲಿನ ಶವಸಂಸ್ಕಾರ ಪದ್ಧತಿಗೂ ಇಲ್ಲಿಗೂ ಸಾಕಷ್ಟು ಸಾಮ್ಯತೆಗಳಿವೆ. ಇಲ್ಲಿ ದೊರೆತ ನಾಲ್ಕು ಅಸ್ಥಿಪಾತ್ರೆಗಳಲ್ಲಿ ಒಂದು ಶವಕೋಣೆಯಲ್ಲಿ ಇದ್ದಿತು. ಹೀಗೆ ತೆಕ್ಕಲಕೋಟೆಯಲ್ಲಿ ಸುಧಾರಿಸಿದ ನೂತನ ಶಿಲಾಯುಗದ ಸಂಸ್ಕೃತಿಯ ಕೆಲವು ಹೊಸ ಅಂಶಗಳನ್ನು ಗುರುತಿಸಲಾಗಿದೆ. ಗಮನಾರ್ಹವಾದ ವಿಶೇಷವೆಂದರೆ ಇಲ್ಲಿನ ಒಂದು ಮಣ್ಣಿನ ಮುಚ್ಚಳದ ಮೇಲೆ ಚೂಪಾದ ಕಡ್ಡಿಯಿಂದ ಚುಚ್ಚಿ ಚುಚ್ಚಿ ಮಾಡಿದ ಜಿಂಕೆ, ಗೂಳಿ ಮೊದಲಾದ ನಾಲ್ಕು ಪ್ರಾಣಿಗಳ ಚಿತ್ರಗಳಿವೆ. ಚಿತ್ರ ರಚನೆಯಲ್ಲಿ ಇವರು ನಾನಾ ತಂತ್ರಗಳನ್ನು ಬಳಸುತ್ತಿದ್ದರು. ತೆಕ್ಕಲಕೋಟೆಯಲ್ಲಿ ಈ ಒಂದು ಹೊಸ ವಿಧಾನ ಬಳಕೆಯಲ್ಲಿದ್ದುದನ್ನು ದೊರೆತ ಮೇಲಿನ ಅವಶೇಷಗಳಿಂದ ಸ್ಪಷ್ಟವಾಗಿದೆ. ಇಲ್ಲಿ ಉತ್ಖನನದ ಗುಂಡಿ ತೆಗೆದಾಗ ಅದರ ೩ ಅಡಿ ಆಳದಲ್ಲಿ Pharcolul, Vugan's, Dalichos, Biblowrai ಸುಟ್ಟು ಕರಕಲಗಿರುವ ಬೀಜಗಳು ಮತ್ತು ನವಣೆ, ಹುರುಳಿ ಮೊದಲಾದವು ಇಲ್ಲಿ ದೊರೆತಿವೆ. ಇದರಿಂದ ಅಂದಿನ ಆದಿಮಾನವನ ಜೀವನಕ್ರಮ ಅರಿಯಲು ಇವು ಸ್ಪಷ್ಟ ಆಕರಗಳಾಗಿವೆ.

**೨. ಸಂಗನಕಲ್ಲು :** ಹಂಪಿ ಪರಿಸರದಲ್ಲಿ ಆದಿಮಾನವನಿಗೆ ಸಂಬಂಧಿಸಿದ ನೆಲೆಗಳಲ್ಲಿ ಸಂಗನಕಲ್ಲು ಒಂದು ಪ್ರಮುಖ ನೆಲೆಯಗಿದೆ. ಬಳ್ಳಾರಿಯ ಜಿಲ್ಲೆಯ ಬಳ್ಳಾರಿ ತಾಲೂಕಿನಲ್ಲಿರುವ ಈ ನೆಲೆ ಬಳ್ಳಾರಿಯಿಂದ ೧೨ ಕಿ.ಮೀ. ದೂರದಲ್ಲಿದೆ. ಇಲ್ಲಿ ಬಿ. ಸುಬ್ಬಾರಾವ್ ಅವರು ಉತ್ಖನನ ನಡೆಸಿದರು. ಇದು ಬ್ರಹ್ಮಗಿರಿ ಮತ್ತು ಇತರೆ ನೆಲಗಳಿಗಿಂತಲೂ ಮಿಗಿಲಾಗಿ ಕೆಲವು ಕುರುಹುಗಳನ್ನು ನಮಗೆ ನೀಡಿದೆ. ಉತ್ಖನನದಲ್ಲಿ ದೊರೆತ ಇಲ್ಲಿನ ಮೇಲಿಂದ ಕೆಳಗಿನ ಸ್ತರಗಳನ್ನು ಆಧಾರವಾಗಿಟ್ಟುಕೊಂಡು ಅಂದಿನ ಸಾಂಸ್ಕೃತಿಕ ಹಂತಗಳನ್ನು ಅಧ್ಯಯನ ಮಾಡಬಹುದು. ಮೊದಲನೆಯದು ಬೃಹತ್ ಶಿಲಾಯುಗ. ಇದು ಕೈಕೊಡಲಿ ಸಂಸ್ಕೃತಿಯೊಡನೆ ಮಿಲನವಾಗಿರುವುದನ್ನು ಕಾಣಬಹುದು. ಇದರ ಕೆಳಭಾಗದಲ್ಲಿ ನೂತನ ಶಿಲಯುಗದ ಕೈಕೊಡಲಿಗಳನ್ನು ಗುರುತಿಸಲಾಗಿದೆ. ಇದರ ತಳಭಾಗದಲ್ಲಿ ಯಾವುದೇ ಮೃತ್ ಪಾತ್ರೆಗಳು ದೊರಕದೆ, ಹೇರಳವಾಗಿ ದೊರೆತ ಸೂಕ್ಷ್ಮ ಶಿಲಾಯುಗದ ಆಯುಧಗಳನ್ನು ಗಮನಿಸಿ ಇದನ್ನು ನೂತನ ಶಿಲ ಯುಗದ ಉಪಕರಣಗಳನ್ನು ತಯಾರಿಸುವ ತಾಣವಾಗಿತ್ತೆಂದು ಗುರುತಿಸಲಾಗಿದೆ.ಇಲ್ಲಿ ತಯಾರಿಸಲಾದ

ಅಲಗುಗಳ, ವಿವಿಧ ಅಳತೆಯದಾಗಿವೆ. ಅರ್ಧ ಚಂದ್ರಾಕೃತಿ ಮತ್ತು ಕೊಳವೆ ಆಕಾರ, ಸೀಳುಗಳನ್ನು ತೆಗೆದ ಉಂಡೇಕಲ್ಲುಗಳು ಇಲ್ಲಿ ಹೇರಳವಾಗಿ ದೊರಕಿವೆ. ಇವುಗಳ ಆಧಾರದ ಮೇಲೆ ಇದು ಅಂದಿನ ಆದಿಮಾನವನ ತಾಣವಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

**೩. ಕಪ್ಪಗಲ್ಲು :** ಬಳ್ಳಾರಿ ತಾಲೂಕು ಕೇಂದ್ರದಿಂದ ೯ ಕಿ.ಮೀ. ದೂರದಲ್ಲಿರುವ ಈ ನೆಲೆ ಹಂಪಿ ಪರಿಸರದ ಆದಿಮಾನವನ ನೆಲೆಗಳಲ್ಲಿ ಪ್ರಮುಖವಾದ ಒಂದು ನೆಲೆಯಾಗಿದೆ. ಇಲ್ಲಿನ ಬೂದಿದಿಬ್ಬದಿಂದಾಗಿ ಇದು ಸಾಕಷ್ಟು ಪ್ರಸಿದ್ಧಿ ಪಡೆದಿದೆ. ಬೂದಿದಿಬ್ಬದ ಉತ್ಖನನದ ನೆಲೆಯು ಬಳ್ಳಾರಿಯಿಂದ ಮೇಲಕ್ಕೆ ಹೋಗುವ ದಾರಿ ಹಗರಿ ನದಿಯ ಪಶ್ಚಿಮ ನೆವಲಿ ಬೆಟ್ಟದ ಬಳಿ ಇದ್ದು, ಇಲ್ಲಿ ಮೂರು ಬೂದಿ ದಿಬ್ಬಗಳಿವೆ.

ನವಶಿಲಾಯುಗ ಸಂಸ್ಕೃತಿಗೆ ಸೇರಿದ ಈ ನೆಲೆಯಲ್ಲಿ ಕುಲಶಾಸ್ತ್ರಜ್ಞ ಕ್ಯಾಬೇಲ್ಡರ್ ೧೮೪೩ರಲ್ಲಿ ಮೊದಲ ಬಾರಿಗೆ ಉತ್ಖನನ ಮಾಡಿದನು. ನಂತರ ಅಲ್ಲಿಯೇ Majumdar G.G. & Rajguru, S.N., ಅವರು ಹೆಚ್ಚಿನ ಶೋಧನೆಯನ್ನು ಮಾಡಿದರು. ಇದು ಸಂಗನಕಲ್ಲು ಗ್ರಾಮದ ಸಮೀಪದಲ್ಲಿರುವ ಒಂದು ಹಳ್ಳಿ. ಸಂಗನಕಲ್ಲಿನ ಪ್ರಾಚೀನ ನೆಲೆಯಿರುವ ಸಣ್ಣರಸಮ್ಮ ಗುಡ್ಡದ ಒಂದು ಬದಿಯ ಬಯಲು ಭೂಮಿಯಲ್ಲಿ ಎರಡು ಬೂದಿ ಗುಡ್ಡಗಳಿದ್ದವು. ಇವುಗಳನ್ನು ಮತ್ತು ಬಂಡೆಗಳ ಮೇಲಿನ ಕುಟ್ಟಿ ಮಾಡಿಸಿದ್ದ ಹಾಗೂ ಬಳೆಯಂತಿರುವ ಉಪಕರಣಗಳಿಂದ ತೆಗೆದ ರೇಖಾಚಿತ್ರಗಳುಳ್ಳ ಬಂಡೆಗಳನ್ನು ಸುಮಾರು ೧೮೪೦ರ ದಶಕದಲ್ಲಿ ನಾಕ್ಸ್ ಎನ್ನುವವರು ಪತ್ತೆ ಮಾಡಿ, ಛಾಯಾಚಿತ್ರಗಳನ್ನು ತೆಗೆದುಕೊಂಡಿದ್ದರು. ತರುವಾಯ ಬ್ರೂಸ್ಟ್ ಫೂಟ್ ಅವರು ಆ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದಾಗ ತಾವು ತೆಗೆದ ಛಾಯಾಚಿತ್ರಗಳನ್ನು ಅವರಿಗೆ ತೋರಿಸಿದರು. ಬೂದಿಗುಡ್ಡವನ್ನು ಕುತೂಹಲದಿಂದ ಅಗೆಸಿದ್ದ ಪೋಚ್ ಅವರು ೧೯೬೪ರ ನಂತರ ಅಲ್ಲಿಯ ಬೂದಿಗುಡ್ಡೆಗಳನ್ನು ಪರಿಶೀಲಿಸಿ ಅವುಗಳ ಬಗ್ಗೆ ಟಿಪ್ಪಣಿಯನ್ನು ತಮ್ಮ ಪುಸ್ತಕದಲ್ಲಿ ಸೇರಿಸಿದ್ದಾರೆ. ಆ ಚಿತ್ರಗಳಲ್ಲಿ ಕೆಲವನ್ನು ತಮ್ಮ ಪುಸ್ತಕಗಳಲ್ಲಿ ಪ್ರಕಟಿಸಿದರು. ಅವರ ಅಧ್ಯಯನದ ಪ್ರಕಾರ ಬೂದಿಗುಡ್ಡಗಳು ಕಿಟ್ಟದಂತಹ ಬೂದಿಯ ಸಗಣಿಯನ್ನು ಸುಮಾರು ೮೦೦-೧೨೦೦ ಸೆಂಟಿಗ್ರೇಡ್ ಸುಟ್ಟಾಗ ನಿರ್ಮಾಣವಾಗುತ್ತದೆ ಎಂಬ ಅಭಿಪ್ರಾಯಕ್ಕೆ ಬಂದರು.

**೪. ನಿಟ್ಟೂರು :** ಹಂಪಿ ಪರಿಸರದಲ್ಲಿ ಆದಿಮಾನವನಿಗೆ ಸಂಬಂಧಿಸಿದ ನೆಲೆಗಳಲ್ಲಿ ನಿಟ್ಟೂರು ಒಂದು ಪ್ರಮುಖ ನೆಲೆಯಾಗಿದೆ. ಬಳ್ಳಾರಿಯ ಜಿಲ್ಲೆಯ ಬಳ್ಳಾರಿ ತಾಲೂಕಿನಲ್ಲಿರುವ ಈ ನೆಲೆ, ಬಳ್ಳಾರಿಯಿಂದ ೧೮ ಕಿ.ಮೀ. ದೂರದಲ್ಲಿದೆ. ಜೆಡ್.ಡಿ. ಅನ್ಸಾ ಇಲ್ಲಿ ಉತ್ಖನನ ನಡೆಸಿದರು. ಇವರೊಂದಿಗೆ ಸಂಕಾಲಿಯ ಎಚ್.ಡಿ. ಅವರು ಸಹಾ ಇದ್ದರು. ಇದು ಕಪ್ಪಗಲ್ಲು ಮತ್ತು ಇತರೆ ನೆಲೆಗಳಿಗಿಂತ ಆದಿಮಾನವನಿಗೆ ಸಂಬಂಧಿಸಿದ ಕೆಲವು ಮಹತ್ವದ ಕುರುಹುಗಳನ್ನು ನಮಗೆ ನೀಡಿದೆ. ಇಲ್ಲಿನ ಉತ್ಖನನದ ಸ್ತರಗಳನ್ನು ಆಧಾರವಾಗಿಟ್ಟುಕೊಂಡು ಅಂದಿನ ಸಾಂಸ್ಕೃತಿಕ ಹಂತಗಳನ್ನು ಅಧ್ಯಯನ ಮಾಡಬಹುದು. ಮೊದಲನೆಯದು ಬೃಹತ್ ಶಿಲಾಯುಗ. ಇದು ಕೈಕೊಡಲಿ ಸಂಸ್ಕೃತಿಯೊಡನೆ ಮಿಲನವಾಗಿರುವುದನ್ನು ಕಾಣಬಹುದು. ಇದರ ಕೆಳಭಾಗದಲ್ಲಿ ನೂತನ ಶಿಲಾಯುಗದ ಕೈಕೊಡಲಿಗಳನ್ನು ಗುರುತಿಸಲಾಗಿದೆ. ಇದರ ತಳಭಾಗದಲ್ಲಿ ಯಾವುದೇ ಮೃತ್ ಪಾತ್ರೆಗಳು ದೊರಕದೆ, ಹೇರಳವಾಗಿ ದೊರೆತ ಸೂಕ್ಷ್ಮ ಶಿಲಾಯುಗದ ಆಯುಧಗಳನ್ನು ಗಮನಿಸಿ ಇದನ್ನು ಸೂಕ್ಷ್ಮ ಶಿಲಾಯುಗದ ಉಪಕರಣಗಳನ್ನು ತಯಾರಿಸುವ ತಾಣವಾಗಿತ್ತೆಂದು ಗುರುತಿಸಲಾಗಿದೆ. ನಂತರದ ಸ್ತರದಲ್ಲಿ ಆದಿ ಹಳೇಶಿಲಾಯುಗಕ್ಕೆ ಸಂಬಂಧಿಸಿದ ಕೈಕೊಡಲಿ ಮುಂತಾದ ಅವಶೇಷಗಳು ಇಲ್ಲಿ ದೊರೆತಿವೆ. ಇಲ್ಲಿ ತಯಾರಿಸಲಾದ ಅಲಗುಗಳು ವಿವಿಧ ಅಳತೆಯದಾಗಿವೆ. ಅರ್ಧ ಚಂದ್ರಾಕೃತಿ ಮತ್ತು ಕೊಳವೆ ಆಕಾರ, ಸೀಳುಗಳನ್ನು ತೆಗೆದ ಉಂಡೆಕಲ್ಲುಗಳು ಇಲ್ಲಿ ಹೇರಳವಾಗಿ ದೊರಕಿವೆ. ಇವುಗಳ ಆಧಾರದ ಮೇಲೆ ಇದು ಅಂದಿನ ಆದಿಮಾನವನ ತಾಣವಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

[1] ಇ.ದ. ೮ ೧೯೩

ಸುಂದರ ಅ. ೧೯೯೮, ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ, ಬೆಂಗಳೂರು ೬೭-೬೯.

[2] ಕರ್ನಾಟಕ ಭಾರತಿ

ಕರ್ನಾಟಕ ಭಾರತಿ

[3] ಕರ್ನಾಟಕ ಭಾರತಿ

೧. ಇಂ.ಅ.ರಿ. ೧೯೭೭-೭೮

೨. ಇ.ದ.-೮. ೧೯೯೩.

[4] Archalogical Studies

Sundara. A 1975 Early Chamber Tombs of India, Delhi.

ಇಂ.ಅ.ರಿ. ೧೯೭೭-೭೮

ಇಂ.ಅ.ರಿ. ೧೯೮೪-೮೫

[5] A.R. Hyderabad Arch Dept. 1937-78

[6] ಅ.ಇ. ४. ೧೯४೭

[7] ಇಂ.ಅ.ರಿ. ೧೯೬೫

[8] ಇಂ.ಅ.ರಿ. ೧೯೭೭

[9] ಸುಂದರ ಅ. ೧೯೯೮, ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ, ಬೆಂಗಳೂರು.

[10] ಇಂ.ಅ.ರಿ. ೧೯೬೨

[11] ೧. ಇಂ.ಅ.ರಿ. ೧೯೭೦

೨. ಕರ್ನಾಟಕ ಭಾರತಿ

[12] ಇಂ.ಅ.ರಿ. ೧೯೭೭-೭೮

[13] ಇಂ.ಅ.ರಿ. ೧೯೭೦

ಕರ್ನಾಟಕ ಭಾರತಿ

[14] ಇಂ.ಅ.ರಿ. ೧೯೭೦-೭೧

[15] A.R. Hyderabad Arch Dept. 1935

೧. ಇಂ.ಅ.ರಿ. ೧೯೬೫

೨. ಇಂ.ಅ.ರಿ. ೧೯೬೮

೩. Journal Geological Survey of Hyderabed

೪. Journal Indian History 52-1

೫. Man 55

೬. Sundara A. 1975 Early Chamber Tombs of India, Delhi.

[16] ಇಂ.ಅ.ರಿ. ೧೯೬೨

೧. ಇಂ.ಅ.ರಿ. ೧೯೭೦

೨. ಕರ್ನಾಟಕ ಭಾರತಿ

[17] ಇಂ.ಅ.ರಿ. ೧೯೭೦

ಕರ್ನಾಟಕ ಭಾರತಿ

[18] ಇಂ.ಅ.ರಿ. ೧೯೬೭

ಕರ್ನಾಟಕ ಭಾರತಿ

[19] ತಿಪ್ಪೇಸ್ವಾಮಿ ಎಚ್., ಹಂಪಿ ಪರಿಸರದ ಸ್ಮಾರಕಗಳು,

[20] Nagaraj Rao M.S., & Malhotra K.C., The stone Age Hill Dwellers of Tekkalakota

[21] Subba Rao B., Stone age Culture of Bellary and Sankalia H.D. Mesolithic and premesolithic Industries from Excavations at Sanganakalu, Bellary.

[22] Mujumdar G.G. & Rajguru, S.N., Ash Mound Excavations at Kupgal P.67-69 A.I-4, 1947-78

[23] ನಿಟ್ಟೂರು : Ansari Z.D., Indian Antiquary 3rd Series, Sankalia, H.D., Pre-Proto. India & pakistan

[24] ಸುಂದರ ಅ., ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ.

(೪)

**೪.೩. ಕಲಾತ್ಮಕ ನೆಲೆಗಳು**

ಪ್ರಾಗೈತಿಹಾಸಿಕ ಕಾಲದ ಮಾನವ ಇಂದಿನ ಆಧುನಿಕ ಮಾನವನಷ್ಟು ಸುಧಾರಿಸಿದ ಕಲೆಯನ್ನು ಅಳವಡಿಸಿಕೊಳ್ಳದೇ ಇದ್ದರೂ ಸಹಾ ಅದರ ಪೂರ್ವಭಾವಿ ಹಂತವನ್ನು ಸೂಚಿಸುವ ಕಲಾಪರಂಪರೆಯನ್ನು ರೂಢಿಸಿಕೊಂಡಿದ್ದನು ಎಂದರೆ ತಪ್ಪಾಗುವುದಿಲ್ಲ. ತನಗೆ ಬೇಸರವಾದಾಗ, ತನಗೆ ಸಂತೋಷವಾದಾಗ, ತಾನು ಹಿಡಿದ ಕೆಲಸ ನೆರವೇರಿದಾಗ, ಬೇಟೆಯಂತಹ ದಿಟ್ಟ ಕಾರ್ಯಗಳಿಗೆ ಹೋಗುವಾಗ, ಇಲ್ಲವೇ ತಾನು ನಂಬಿದ ದೈವಗಳ ಸಂತೃಪ್ತಿಗಾಗಿ ಈ ರೀತಿಯ ಹಲವು ಉದ್ದೇಶಗಳಿಗಾಗಿ ಇಲ್ಲವೇ ತನ್ನ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸಲು ಆತ ಕಲೆಯನ್ನು ಆಯ್ಕೆ ಮಾಡಕೊಂಡನು. ಮಾನವನು ಆಹಾರ ಸಂಗ್ರಹಣೆ ಹಂತದಲ್ಲಿ ಗವಿ-ಬಂಡೆಗಳ ಆಶ್ರಯದಲ್ಲಿ ವಾಸಮಾಡುವ ಕಾಲಕ್ಕಾಗಲೇ ಕಲಾಭಿರುಚಿ ಬೆಳೆಸಿಕೊಂಡನು. ತನ್ನ ನಿರಂತರ ಜೀವನದಲ್ಲಿ ನಡೆಯುವ ಘಟನೆಗಳನ್ನಾಧರಿಸಿ ಪ್ರಚಲಿತವಿದ್ದ ಪ್ರಾಣಿ, ಪಕ್ಷಿ ಬೇಟೆ, ನೃತ್ಯಭಂಗಿ ಮೊದಲಾದ ಅಂಶಗಳನ್ನು ಬಣ್ಣದಲ್ಲಿ ಇಲ್ಲವೇ ಗೀರುಚಿತ್ರಗಳ ಮೂಲಕ ಅಭಿವ್ಯಕ್ತಪಡಿಸುತ್ತ ಬಂದನು.

ಹಂಪಿ ಪರಿಸರದ ಆದಿಮಾನವನ ಕಲಾತ್ಮಕ ನೆಲೆಗಳ ಶೋಧನೆ ಆಕಸ್ಮಿಕವಾಗಿ ನಡೆಯಿತು. ೧೮೮೦ರ ಸುಮಾರಿಗೆ ಹೂಬರ್ಟ್‌ನೆಕ್ಸ್ ಕಪ್ಪುಗಲ್ಲ್ ನಲ್ಲಿ ದೇಶದಲ್ಲೇ ಮೊದಲ ಬಾರಿಗೆ ಬಂಡೆ ಚಿತ್ರಗಳನ್ನು ಸೋಧಿಸಿದನು. ಆನಂತರ ಈ ಪರಿಸರದಲ್ಲಿ ರಾಬಟ್ ಬ್ರೂಸ್ ಪ್ರೊಟ್ ನ್ಯೂ ಬೋಲ್ಡ್ ಮನ್ ಡಾ. ಎಂ.ಎಸ್. ಕೃಷ್ಣಮೂರ್ತಿ, ಅಸುಂದರ, ಡಬ್ಲೂ, ವಿ.ಎಸ್. ನರಸಿಂಹಮ ಮೂರ್ತಿಹಾಗು ಕನ್ನಡ ವಿಶ್ವವಿದ್ಯಾಲಯಗಳ ವಿದ್ವಾಂಸರು ಹಾಗು ತರುಣ ಸಂಶೋಧಕರ ಮತ್ತು ವಿದೇಶಿ ವಿದ್ವಾಂಸರ ಶೋಧನೆಯ ಫಲವಾಗಿ ಇಂದು ಹಲವಾರು ಕಲಾತ್ಮಕ ನೆಲೆಗಳು ಬೆಳಕಿಗೆ ಬಂದಿವೆ. ಅವುಗಳನಲ್ಲಿ ಆನೆಗುಂದಿ, ಸಂಗಾಪುರ, ಕಡೆಬಾಗಿಲು, ಮಲ್ಲಾಪುರ, ಹಿರೇಬೆನಕಲ್, ಬಂಡಿಹರ್ಲಾಪುರ, ಕುರುಗೋಡು, ತೆಕ್ಕಲಕೋಟೆ, ಕಪ್ಪಗಲ್ಲು, ಭೈರನಾಯಕನಹಳ್ಳಿ, ರಾಜಾಪುರ, ಬೆಳಗಲ್ಲು, ಹಳಕುಮಡಿ, ಅಯ್ಯಪ್ಪನಹಳ್ಳಿ, ಅಂಜನಹಳ್ಳಿ, ಸಂಗನಕಲ್ಲು, ನಾಗೇನಹಳ್ಳಿ, ಕಮಲಾಪುರ, ಜಂತಕಲ್ಲು, ತಿಮ್ಮಲಾಪುರ, ನಂದಿಬಂಡೆ, ಇಂದರ್ಗಿ, ಮಲ್ಲಾಪುರ, ಹರಳಾಪುರ, ಹೊಸಕೆರೆ, ಬಿಳಿಬಾವಿ, ಬುಕ್ಕಸಾಗರ, ಹಂಪಿ, ವೆಂಕಟಾಪುರ ಮೊದಲಾದವು ಪ್ರಮುಖವಾಗಿವೆ. ಇಲ್ಲಿ ಸೂಕ್ಷ್ಮ ಶಿಲಾಯುಗದಿಂದ ಆದಿ ಇತಿಹಾಸ ಕಾಲದವರೆಗಿನ ಕಲಾತ್ಮಕ ನೆಲೆಗಳು ಕಂಡುಬರುತ್ತವೆ.

ಹಂಪಿ ಪರಿಸರದಲ್ಲಿ ಅಂದು ಜೀವಿಸಿದ್ದ ಆದಿಮಾನವ ಕಲೆಯನ್ನು ತನ್ನ ಜೀವನದ ಒಂದು ಭಾಗ ಎಂದು ಪರಿಗಣಿಸಿದ ಪರಿಣಾಮವಾಗಿ ಅಂದು ಬಗೆಬಗೆಯ ಚಿತ್ರಗಳಿರುವ ಕಲಾತ್ಮಕ ನೆಲೆಗಳು ಆಸ್ತಿತ್ವಕ್ಕೆ ಬಂದವು. ಆದಿಮಾನವನ ಈ ರೀತಿಯ ಚಿತ್ರರಚನೆಯ ಉದ್ದೇಶಗಳೇನು? ಈ ರಚನೆಗಳಿಗಾಗಿ ಯಾವ ರೀತಿಯ ನೆಲೆಗಳನ್ನು ಅಂದಿನ ಮಾನವ ಆಯ್ಕೆ ಮಾಡಿಕೊಂಡ ಹಾಗೂ ಅವುಗಳನ್ನು ರಚಿಸಲು ಬೆಳಸಿಕೊಂಡ ಸಾಮಗ್ರಿಗಳೇನು? ಅಂದಿನ ವಿವಿಧ ನೆಲೆಗಳಲ್ಲಿನ ಚಿತ್ರಗಳ ವೈಶಿಷ್ಠತೆ ಮತ್ತು ಮಹತ್ವಗಳ ಕುರಿತ ಈ ಮುಂದೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**೪.೩.೧. ಕಲಾತ್ಮಕ ಚಿತ್ರರಚನೆಯ ಕಾರಣಗಳು**

ಪ್ರಾಗೈತಿಹಾಸ ಕಾಲದ ಮಾನವನ ಚಿತ್ರರಚನೆಗೆ ಹಲವಾರು ಕಾರಣಗಳನ್ನು ನೀಡ ಬಹುದು. ಈ ಕುರಿತಂತೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಇವು ಪ್ರಾಚೀನ ಕಾಲದ ಸಾಮಾನ್ಯ ಜನತೆಯ ಭಾವಾನಾತ್ಮಕ ಅಭಿವ್ಯಕ್ತಿಯ ಫಲವಾಗಿ ಇಲ್ಲವೇ ಸೌಂದರ್ಯ ಪ್ರಜ್ಞೆಯುಳ್ಳ ಕೆಲವು ಜನರು ನಿಸರ್ಗದ ಚೆಲುವಿನಿಂದ ಪ್ರೇರಣೆ ಪಡೆದು ಅಲಂಕರಣೆಯ ಉದ್ದೇಶಕ್ಕಾಗಿ ರಚಿಸಿದವೆಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಹಾಗೇ ಇನ್ನೂ ಕೆಲವರು ಈ ಚಿತ್ರಗಳು ಯಶಸ್ವಿ ಬೇಟೆಯ ಸ್ಮರಣಾರ್ಥ ಉದ್ದೇಶಕ್ಕಾಗಿ ರಚಿಸಿದವೆಂದೂ ಮತ್ತು ನಿರಂತರ ಆಹಾರ ದೊರಕಿಸಿಕೊಳ್ಳುವ ಉದ್ದೇಶದ ಮಾಂತ್ರಿಕ ಸಂಬಂಧಿ ಚಿತ್ರಗಳೆಂದು ಹೇಳಿದ್ದಾರೆ. ಹಂಪಿ ಪರಿಸರಕ್ಕೆ ಸಂಬಂಧಿಸಿದಂತೆ ಇಲ್ಲಿನ ಚಿತ್ರ ರಚನೆಯ ಕಾರಣ, ಉದ್ದೇಶವನ್ನು ಈ ರೀತಿ ಗುರುತಿಸಬಹುದು. ೧. ಭಾವಾನಾತ್ಮಕ ಪ್ರೇರಣೆ ೨. ಅಲಂಕರಣೆ ಮತ್ತು ೩. ಮಾಂತ್ರಿಕ ಕಟ್ಟಳೆ.

**೧. ಭಾವನಾತ್ಮಕ ಪ್ರೇರಣೆ**

ಕೆಲವು ಚಿತ್ರಗಳು ಭಾವನಾತ್ಮಕ ಪ್ರೇರಣೆ ಫಲವಾಗಿ ರಚಿತವಾಗಿವೆ. ಚಿತ್ರದ ನೆಲೆ ವಿಷಯ ಹಾಗೂ ಸ್ವರೂಪವನ್ನು ಗಮನಿಸಿ ಇಂಥ ಚಿತ್ರಗಳನ್ನು ಗುರುತಿಸಬಹುದು. ಮನುಷ್ಯ ಭಾವನಾಜೀವಿ. ಭಾವನೆಗಳ ತೀವ್ರ ಅಭಿವ್ಯಕ್ತಿಯ ಪ್ರೇರಣೆಯಾದಾಗ ಅದನ್ನು ವಿವಿಧ ಮಾಧ್ಯಮದ ಮೂಲಕ ಅಭಿವ್ಯಕ್ತಿಸುತ್ತಾನೆ. ಇದು ಕ್ಷಣಿಕವಾದ ಮತ್ತು ತಕ್ಷಣವಾದ ಪ್ರೇರಣೆ. ಹಾಗಾಗಿ ಅದನ್ನು ಸ್ಥಳದಲ್ಲೇ ಲಭ್ಯವಿದ್ದ ವಸ್ತುಗಳಿಂದಲೇ ಯಾವುದಾದರೂ ಆಕೃತಿಯನ್ನು, ಚಿತ್ರವನ್ನು ಬಿಡಿಸಿ ಆ ಮೂಲಕ ತನ್ನ ಭಾವನೆಯನ್ನು ಪ್ರಕಟಪಡಿಸುತ್ತಾನೆ. ಅದೇ ರೀತಿಯಲ್ಲಿ ಪ್ರಾಗೈತಿಹಾಸ ಕಾಲದ ಚಿತ್ರ ರಚನೆಗೆ ಇಂಥ ತಕ್ಷಣದ ಭಾವನಾತ್ಮಕ ಅಭಿವ್ಯಕ್ತಿಯ ಪ್ರೇರಣೆಯನ್ನು ಗುರುತಿಸಬಹುದು. ಇಂಥ ಪ್ರೇರಣೆ ಸಾರ್ವತ್ರಿಕವಾದುದು. ಯಾವ ಸಾಮಾನ್ಯ ವ್ಯಕ್ತಿಗಾದರೂ ಮೂಡಬಹುದು. ಆ ವ್ಯಕ್ತಿ ಕಲಾಪ್ರಜ್ಞೆಯುಳ್ಳವನಾಗಿದ್ದರೆ ಅಭಿವ್ಯಕ್ತಿಗೊಂಡ ಯಾವುದೇ ಮಾಧ್ಯಮ ಅಥವಾ ಚಿತ್ರ ರಚನೆ ಮತ್ತು ಭಾವ ಪ್ರಕಟಣೆಯ ದೃಷ್ಟಿಯಿಂದ ಉತ್ತಮವಾಗಿರುತ್ತದೆ. ಸಾಮಾನ್ಯ ರಚನೆಗಳಾಗಿದ್ದರೇ ಅವು ರಚನೆಯಲ್ಲಿ ಅಷ್ಟೇನೂ ಉತ್ತಮವಾಗಿರುವುದಿಲ್ಲ. ಆದರೆ ಭಾವ ಪ್ರಕಟನೆಯಲ್ಲಿ ಪ್ರಬಲವಾಗಿರುತ್ತದೆ. ಹಂಪಿ ಪರಿಸರದ ಮಲ್ಲಾಪುರ, ಹಂಪಿ, ಸಂಗಾಪುರ ತಾಂಡ ಕುರುಗೋಡು ಮುಂತಾದೆಡೆಗಳಲ್ಲಿನ ಕೆಲವು ಚಿತ್ರಗಳನ್ನು ಮಾಂತ್ರಿಕ ಉದ್ದೇಶದಿಂದ ರಚಿಸಿದವೆಂದು ಹೇಳಲಾಗದು ಅಶ್ವ ಸವಾರಿ, ಕತ್ತೆಕಿರುಬ, ಬಿಡಿಯಾದ ಗೂಳಿ, ಹುಲಿ ವಿವಿಧ ರೀತಿಯ ಪ್ರಾಣಿಗಳ ಸಮೂಹ, ಆನೆ ಸವಾರಿ, ಆನೆ, ಅಲಂಕೃತ ಎತ್ತುಗಳು, ಎದುರು ಬದುರಾಗಿರುವ ಜೋಡಿ ಎತ್ತುಗಳು, ಅವುಗಳ ಕೊಂಬಿನ ತುದಿಯಲ್ಲಿ ಹೂವಿನ ಅಲಂಕರಣೆ, ಹೂ ಗಿಡಗಳ ಚಿತ್ರಗಳು ಮತ್ತು ವಿಶೇಷವಾಗಿ ಬಯಲು ಬಂಡೆಯಲ್ಲಿ ಕೊರೆದ, ಕೆತ್ತಿದ ಎತ್ತಿನ, ಎತ್ತಿನ ಸವಾರನ, ಅಶ್ವಸವಾರನ ಮತ್ತು ಪಶುಗಳ ಚಿತ್ರಗಳು ಖಂಡಿತವಾಗಿ ತಕ್ಷಣದ ಅಭಿವ್ಯಕ್ತಿಯ ಉದ್ದೇಶದಿಂದ ರಚಿಸಲಾದವುಗಳೆಂದು ಹೇಳಬಹುದು.

**೨. ಅಲಂಕರಣೆ**

ಕೆಲವು ಚಿತ್ರಗಳು ಅಲಂಕರಣೆಯ ಉದ್ದೇಶದಿಂದ ರಚಿತವಾದವೆಂದು ಹೇಳಬಹುದು. ಮನುಷ್ಯ ಮೂಲತಃ ನಿಸರ್ಗಜೀವಿ. ಅವನಲ್ಲಿ ಸೌಂದರ್ಯಪ್ರಜ್ಞೆ ಸುಪ್ತವಾಗಿರುತ್ತದೆ. ಆದರೆ ಎಲ್ಲರಲ್ಲೂ ಜಾಗೃತವಾಗಿರುವುದಿಲ್ಲ. ಆ ರೀತಿಯ ಕಲಾವಂತಿಕೆಯ ಕೆಲವು ಪ್ರಾಗಿತಿಹಾಸ ಕಾಲದ ಜನರು ತಮ್ಮ ವಾಸದ ನೆಲೆಗಳನ್ನು ಅಲಂಕರಿಸುವ ಉದ್ದೇಶದಿಂದ ಚಿತ್ರಗಳನ್ನು ಬಿಡಿಸಿದ್ದಾರೆನ್ನಬಹುದು. ಹಳೆಯ ಶಿಲಾಯುಗದ ಒರಟು ಆಯುಧಗಳನ್ನು ನವಶಿಲಾಯುಗದಲ್ಲಿ ಸುಂದರವಾಗಿ ಮಾಡಿಕೊಂಡಿರುವುದು ನಿತ್ಯ ಬಳಕೆಯ ಮಡಕೆಗಳನ್ನು ಅಲಂಕರಿಸಿಕೊಂಡಿರುವುದು ಅವನ ಕಲಾಪ್ರಜ್ಞೆಗೆ ಸಾಕ್ಷಿ.

ಅದೇ ರೀತಿ ಅಲಂಕರಣೆಯ ಉದ್ದೇಶದಿಂದ ಕೆಲವು ಚಿತ್ರಗಳನ್ನು ಬಿಡಿಸಿದ್ದಾರೆನ್ನ ಬಹುದು. ಸಾಮಾನ್ಯವಾಗಿ ಸ್ವಬಳಕೆಯ ಆಯುಧ, ಮಡಕೆ ಪಾತ್ರೆಗಳನ್ನು ಅಲಂಕರಿಸಿ ಕೊಂಡಂತೆ ಪ್ರಾಗೈತಿಹಾಸ ಕಾಲದ ಮಾನವ ಸ್ವವಾಸದ ಗವಿ ಕಲ್ಲಾಸರೆಗಳಲ್ಲೂ ಚಿತ್ರಗಳನ್ನು ಬರೆದಿದ್ದಾರೆ. ಅಲ್ಲಿಯ ಚಿತ್ರಗಳು ಸಾಮಾನ್ಯವಾಗಿ ಅವನ ಜನ ಪಶು ಪ್ರಾಣಿಗಳಿಗೆ ಸಂಬಂಧಿಸಿರುತ್ತವೆ. ತನ್ನ ಎತ್ತು ಮುಂತಾದ ಸಾಕುಪ್ರಾಣಿಗಳನ್ನು ಕೂಡ ಅವನು ಚಿತ್ರಗಳ ಮೂಲಕ ಅಲಂಕರಿಸಿ ಸಂತಸಪಟ್ಟಿದ್ದಾನೆ. ಇಂಥ ಅನೇಕ ಚಿತ್ರಗಳನ್ನು ಕಾಣಬಹುದು.

ಹಂಪಿ ಪ್ರದೇಶದ ಸಂಗಾಪುರದ ೧ನೇ ಗವಿಯ ಮುಖಭಾಗ ಮತ್ತು ಒಳಭಾಗದಲ್ಲಿ ವಿವಿಧ ರೀತಿಯ ಚಿತ್ರಗಳಿವೆ. ಇಲ್ಲೆಲ್ಲ ಆದಿಮಾನವ ವಾಸಿಸಿದ್ದ. ಇವೆಲ್ಲ ಅಲಂಕರಣೆಯ ಉದ್ದೇಶವೆಂದು ಸ್ಪಷ್ಟವಾಗಿ ಹೇಳಬಹುದು. ಈಗಲೂ ಹಳ್ಳಿಗಳಲ್ಲಿ ಕೆಲವು ಜನ ತಮ್ಮ ಮನೆಗಳುನ್ನು ಸಾರಿಸಿದಾಗ ಮನೆಯ ಗೋಡೆಗಳ ಬಾಗಿಲುಗಳ ಮೇಲೆ ಅಲಂಕಾರಕ್ಕಾಗಿ ಅಲ್ಲಲ್ಲಿ ಕೆಮ್ಮಣ್ಣು ಇಲ್ಲವೇ ಸುಣ್ಣದಿಂದ ಚಿತ್ರಗಳನ್ನು ಬಿಡಿಸುತ್ತಾರೆ. ಆನೆಗುಂದಿಯ ೧, ೨, ೩ನೇ ಕಲ್ಲಾಸರೆ ಗವಿಗಳು ಪ್ರಾಚೀನ ಮಾನವನ ವಾಸಸ್ಥಾನಗಳಾಗಿದ್ದವು. ಅಲ್ಲಿಯ ಚಿತ್ರಗಳಲ್ಲಿ ಒಂದು ಎತ್ತಿನ ಚಿತ್ರವಿದೆ. ಅದರ ಮೈಮೇಲೆ ವಿಶಿಷ್ಟವಾದ ರೇಖೆಗಳಿಂದ ಅಲಂಕರಿಸಲಾಗಿದೆ. ಸ್ಪಷ್ಟವಾಗಿ ಅಲಂಕರಣೆಯ ಉದ್ದೇಶವು ಇಲ್ಲಿ ಪ್ರಧಾನವಾಗಿರುವದನ್ನು ಗುರುತಿಸಬಹುದು.

ಸಂಗಾಪುರದ ೬ನೇ ಕಲ್ಲಾಸರೆಯಲ್ಲಿ ಎದುರುಬದುರಾಗಿ ನಿಂತ ಜೋಡಿ ಎತ್ತಿನ ಚಿತ್ರಗಳಿವೆ. ಕೆಲವು ಎತ್ತಿನ ಕೋಡಿನ ತುದಿಯಲ್ಲಿ ಹೂಗಳನ್ನಿಟ್ಟಿರುವಂತಹ ಅಲಂಕರಣೆಗಳು ಮತ್ತು ಹಿರೇಬೆನಕಲ್ಲಿನ ೧೬ನೇ ಕಲ್ಲಾಸರೆಯ ೫ ಉಡಗಳ ಚಿತ್ರಗಳು ವಿಶೇಷ ರೀತಿಯ ಅಲಂಕರಣೆಗಳನ್ನು ಹೊಂದಿದ್ದು ಗಮನ ಸೇಳೆಯುತ್ತವೆ. ಅದೇ ರೀತಿ ಕುರುಗೋಡಿನ ೭, ೯, ೧೨ ನೇ ಕಲ್ಲಾ ಸರೆಯಲ್ಲಿನ ಚಿತ್ರಗಳು ಅಲಂಕಾರ ದೃಷ್ಟಿಯಿಂದ ಗಮನ ಸೆಳೆಯುತ್ತವೆ. ಇಲ್ಲಿ ಸೌಂದರ್ಯಪ್ರಜ್ಞೆ ಕ್ರಿಯಾಶೀಲರಾಗಿರುವದನ್ನು ಗುರುತಿಸಬಹುದು. ಚಿತ್ರಗಳನ್ನು ಬಿಡಿಸುವುದಷ್ಟೇ ಉದ್ದೇಶವಾಗಿದ್ದಲ್ಲಿ ಈ ರೀತಿಯ ಅಲಂಕರಣೆ ಅಗತ್ಯವಿರಲಿಲ್ಲ. ಹಾಗಾಗಿ ಚಿತ್ರ ರಚನೆಯ ಅಲಂಕರಣೆ (ಸೌಂದರ್ಯ ಪ್ರಜ್ಞೆ) ಉದ್ದೇಶವನ್ನು ಗುರುತಿಸಬಹುದು.

**೩. ಮಾಂತ್ರಿಕ ಕಟ್ಟಳೆ**

ಪ್ರಾಗೈತಿಹಾಸ ಕಾಲದ ಹೆಚ್ಚಿನ ಚಿತ್ರರಚನೆಗೆ ಮತ್ತೊಂದು ಮಹತ್ವದ ಉದ್ದೇಶವೆಂದರೆ ಒಂದು ರೀತಿಯ ಮಾಂತ್ರಿಕ ಕಟ್ಟಳೆ ಅಥವಾ ಆಚರಣೆ ಕಾರಣವೆನ್ನಬಹದು. ಬೇಟೆ, ಪಶುಪಾಲನೆ, ಸಮೂಹ ಕುಣಿತ. ನಗ್ನ ಕುಣಿತ ಮಂಡಲಿ ಇವೆಲ್ಲ ಮಾಂತ್ರಿಕ ಕಟ್ಟಳೆ ಉದ್ದೇಶಿತ ರಚನೆಗಳೆಂದು ಹೇಳಬಹುದು. ಸೂಕ್ಷ್ಮವಾಗಿ ಗಮನಿಸಿದಲ್ಲಿ ಇವೆಲ್ಲ ಪ್ರಾಚೀನ ಮಾನವನ ಆಹಾರ ಸಂಬಂಧಿ ವಿಷಯದ ಸುತ್ತ ಕೇಂದ್ರಿಕೃತವಾಗಿರುವುದನ್ನು ಗುರುತಿಸಬಹುದು. ಅಂದರೆ ಮನುಷ್ಯ ತನಗೆ ಆಹಾರವಾಗುವ ಪ್ರಾಣಿಗಳ ಅಭಿವೃದ್ಧಿ, ಇವುಗಳ ಯಶಸ್ವಿ ಬೇಟೆಯ ಉದ್ದೇಶಿತ ಮಾಂತ್ರಿ ಕಟ್ಟಳೆಗಳನ್ನು ಮಾಡಿ ಅವುಗಳ ವಿಧಿಯನ್ವಯ ಅದಕ್ಕೆ ಸಂಬಂಧಿಸಿದ ಚಿತ್ರಗಳನ್ನು ಬಿಡಿಸಿದ್ದಾನೆನ್ನಬಹುದು. ಒಬ್ಬ ಮನುಷ್ಯ ಅಥವಾ ಪ್ರಾಣಿಯ ಚಿತ್ರಗಳನ್ನು ತೆಗೆದು ಮಂತ್ರಿಸಿದರೆ ಅವನು ಅಥವಾ ಅದು ತನ್ನ ವಶವಾಗುವುದೆಂದು ಅಥವಾ ಆವನು ಶತ್ರುವಾಗಿದ್ದರೆ ನಾಶವಾಗುವನೆಂಬ ನಂಬಿಕೆ ಬಹು ಪುರಾಣಕಾಲದಿಂದ ಉಳಿದು ಬಂದಿರುವಂತಹದು. ತನ್ನ ಶತ್ರುವಿನ ನಾಶಕ್ಕಾಗಿ ಅವನ ಗೊಂಬೆಯನ್ನು ಮಾಡಿ ಅದಕ್ಕೆ ಮಂತ್ರಪೂರಿತ ಸೂಜಿಗಳನ್ನು ಚುಚ್ಚುವುದು ಮೊದಲಾದ ಮಾಟ ಮಂತ್ರಗಳ ಆಚರಣೆ ಇಂದು ವ್ಯವಹಾರದಲ್ಲಿದೆ. ಇದರಿಂದ ಆ ಶತ್ರುವು ಕಷ್ಟ ನಷ್ಟ ಸಂಕಟವನ್ನು ಅನುಭವಿಸುವನು ಎಂಬ ಬಲವಾದ ನಂಬಿಕೆಯಿದೆ. ಹಾಗಾಗಿ ಬಹುಮಟ್ಟಿನ ಚಿತ್ರಗಳು ಈ ಉದ್ದೇಶಕ್ಕೆ ಸಂಬಂಧಿಸಿದವು ಎಂದು ಹೇಳಬಹುದು.

ಮಲ್ಲಾಪುರದ ೧, ೨ ಮತ್ತು ೪ ಚಿಕ್ಕಬೆನಕಲ್ಲಿನ ೩, ಹಿರೇಬೆನಕಲ್ಲಿನ ೨, ೩ ಮತ್ತು ಹಂಪಿಯ ೫ನೇ ಕಲ್ಲಾಸರೆಯಲ್ಲಿ ಮೈಮೇಲೆ ವಿಶಿಷ್ಟ ರೇಖೆಗಳನ್ನು ಹಾಕಿಕೊಂಡ ನಗ್ನ ಗರ್ಭಿಣಿ ಸ್ತ್ರೀ, ಪುರುಷರ ನೃತ್ಯಭಂಗಿಯ ಚಿತ್ರಗಳಿವೆ. ಅವುಗಳ ಮೇಲು ರೇಖೆಗಳಿವೆ. ಇವೆಲ್ಲ ಇಷ್ಟಾರ್ಥ ಸಿದ್ಧಿಗಾಗಿ  ಕೆಲ ಜನ ಮಾಂತ್ರಿಕರೊಡಗೂಡಿ ನಡೆಸಿದ ಮಾಂತ್ರಿಕ ಆಚರಣೆಗೆ ಸಂಬಂಧಿಸಿದ ಚಿತ್ರಗಳೆಂದು ಹೇಳಬಹುದು. ಪ್ರಾಣಿಗಳ ಚಿತ್ರಗಳು ಆಚರಣೆಯಲ್ಲಿ ಬಳಿಕೂಟ್ಟ ಪ್ರಾಣಿಗಳಿವು ಎಂದು ತರ್ಕಿಸಬಹುದು. ಈಗಲೂ ಕೆಲವು ಮಂತ್ರವಾದಿಗಳು ನಗ್ನರಾಗಿ ಪ್ರಾಣಿಬಲಿಗಳೊಂದಿಗೆ ಮಾಂತ್ರಿಕ ಕಟ್ಟಳೆಗಳನ್ನು ಮಾಡುವ ಆಚರಣೆ ರೂಢಿಯಲ್ಲಿದೆ. ಇಂಥ ಆಚರಣೆಗಳಲ್ಲಿ ಗರ್ಭಿಣಿ ಸ್ತ್ರೀಗೆ ವಿಶೇಷ ಮಹತ್ವ ಉಂಟು. ಕೆಲವು ವಿಶೇಷ ಇಷ್ಟಾರ್ಥ ಸಿದ್ಧಿಗೆ ಅಂಥವನ್ನು ಬಲಿ ಕೊಟ್ಟ ಉದಾಹರಣೆಗಳು ಈಗಲೂ ದೊರೆಯುತ್ತವೆ.

ಇವಲ್ಲದೆ ಸಂಭೋಗ ಕ್ರಿಯೆ, ಬಹುಶಃ ಬೇಟೆಗೆ ಹೋಗುವ ಮುನ್ನ ಇಲ್ಲವೇ ಬೇಟೆ ನಂತರದ ಸಾಮೂಹಿಕ ನೃತ್ಯ ಮೊದಲಾದ ಚಿತ್ರಗಳನ್ನು ಬಿಡಿಸುತ್ತಿದ್ದರು. ತನಗೆ ಆಹಾರವನ್ನು ಒದಗಿಸುವ ಜಿಂಕೆ, ಗೂಳಿ, ಕೋಣ ಹಾಗೂ ವಂಶಾಭಿವೃದ್ಧಿಗೋಸ್ಕರ ಇಂತಹ ಪ್ರಾಣಿಗಳ ವೈರಿಯಾದ ಹುಲಿ, ಚಿರತೆ ಮೊದಲಾದ ಪ್ರಾಣಿಗಳ ನಾಶಕ್ಕೋಸ್ಕರ ಮತ್ತು ಬೇಟೆಯಲ್ಲಿ ಈ ಪ್ರಾಣಿಗಳು ವಶವಾಗುವುದಕ್ಕೋಸ್ಕರ ಇಂತಹ ಚಿತ್ರಗಳನ್ನು ಬರೆದು ಮಂತ್ರೋದ್ದೇಶಿತವಾಗಿದ್ದರು. ಇವು ಶೈಲಿ ಮತ್ತು ನಿರೂಪಣೆಯಲ್ಲಿ ಶಕ್ತಿಶಾಲಿ ಯಾಗಿವೆ. ಹಂಪಿ ಪ್ರದೇಶದ ಪ್ರಾಗೈತಿಹಾಸ ಕಾಲದ ಚಿತ್ರಗಳು ಮುಖ್ಯವಾಗಿ ಮನುಷ್ಯ, ಪ್ರಾಣಿ, ಪಕ್ಷಿಗಳಿಗೆ ಸಂಬಂಧಿಸಿವೆ. ಒಂದೆರಡು ಬೇರೆ ವಿಷಯದ ಚಿತ್ರಗಳು ಇವೆ.

**೪.೩.೧. ಚಿತ್ರರಚನೆಯ ತಾಣಗಳು**

ಆದಿಮಾನವ ಕೆಲ ವಿಶೇಷ ತಾಣಗಳಲ್ಲಿ ಮಾತ್ರ ಚಿತ್ರ ರಚಿಸಿದ್ದಾನೆ. ಅದಕ್ಕಾಗಿ ಅವನು ಸಾಮಾನ್ಯವಾಗಿ ತಾನು ವಾಸಿಸುತ್ತಿದ್ದ ತಾಣಗಳನ್ನು ಇಲ್ಲವೆ ಸುರಕ್ಷಿತ ತಾಣಗಳನ್ನು ಆಯ್ಕೆ ಮಾಡಿಕೊಂಡಿದ್ದಾನೆ. ಗವಿ, ಕಲ್ಲಾಸರೆಗಳು ನೈಸರ್ಗಿಕ ರಚನೆಗಳಾಗಿರುತ್ತವೆ. ಮಳೆಗಾಳಿಯಿಂದ ರಕ್ಷಿಸಿಕೊಳ್ಳಲು ಉತ್ತಮ ಆಶ್ರಯ ತಾಣಗಳಾಗಿದ್ದು, ಶಿಲಾಯುಗದ ಜನರು ಗವಿಗಳನ್ನು ಖಾಯಂ ವಾಸಕ್ಕಾಗಿ, ಕಲ್ಲಾಸರೆಗಳನ್ನು ತಾತ್ಕಾಲಿಕವಾಗಿ ಬಳಸಿ ಕೊಳ್ಳುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಅವರು ಇಂಥ ಗವಿ/ಕಲ್ಲಾಸರೆಗಳಲ್ಲಿ ಚಿತ್ರಗಳನ್ನು ಬಿಡಿಸಿದ್ದಾರೆ. ಚಿತ್ರಕ್ಕಾಗಿ ಅವರು ಎಲ್ಲ ರೀತಿಯ ಗವಿ, ಕಲ್ಲಾಸರೆಗಳನ್ನು ಬಳಸಿಕೊಂಡಿಲ್ಲ. ಯಾವ ಗವಿ, ಕಲ್ಲಾಸರೆಗಳ ಒಳಗೋಡೆಗಳೋ ಚಾವಣಿಯೋ ಒರಟಿಲ್ಲದೇ ತಕ್ಕಮಟ್ಟಿಗೆ ನುಣುಪಾಗಿದ್ದು, ಮಳೆ ನೀರಿನಿಂದ ತೋಯಲ್ಪಡುವುದಿಲ್ಲವೋ ಅಂತಹ ಗವಿ, ಕಲ್ಲಾಸರೆಗಳಲ್ಲಿ ಚಿತ್ರಗಳನ್ನು ಬಿಡಿಸಿದ್ದಾರೆ. ತೀರ ಆಳವಲ್ಲದ ಕಲ್ಲಾಸರೆಗಳು ಇದಕ್ಕೆ ಅಪವಾದ ಎನ್ನಬಹುದು. ಎಂಥ ಕಲ್ಲಾಸರೆಯ ಚಿತ್ರಗಳು ಮಳೆ, ಗಾಳಿ, ಬಿಸಿಲಿಗೆ ಸಿಲುಕಿ ತೀರಾ ಮಾಸಿ ಹೋಗಿವೆ. ಪ್ರಾಗೈತಿಹಾಸ ಕಾಲದ ಜನ ತಾವು ವಾಸಿಸಿದ ಎಲ್ಲ ಗವಿಗಳಲ್ಲಿ ಚಿತ್ರಗಳನ್ನು ಬಿಡಿಸಿಲ್ಲ. ಚಿತ್ರಕ್ಕೆ ಸೂಕ್ತವಾದ ಭಾಗವಿದ್ದಲ್ಲಿ ಮಾತ್ರ ಬಿಡಿಸಿದ್ದಾರೆ. ಸಂಗಾಪುರದ ಕರಡಿಬೆಟ್ಟದಲ್ಲಿ ಅನೇಕ ಚಿಕ್ಕ ದೊಡ್ಡ ಗವಿಗಳಿವೆ. ಅವುಗಳ ಒಂದೆರಡು ಗವಿಗಳಲ್ಲಿ ಮಾತ್ರ ಚಿತ್ರಗಳಲ್ಲಿ. ಚಿತ್ರಿತ ಭಾಗವು ಬಹಿರಂಗವಾಗಿ ಕಾಣುವಂತಿದ್ದರೂ ಮಳೆ, ಗಾಳಿ, ಬಿಸಿಲಿನಿಂದ ಸಂಪೂರ್ಣ ರಕ್ಷಿತಗೊಂಡು ಉತ್ತಮ ಸ್ಥಿತಿಯಲ್ಲಿವೆ.

ದೊಡ್ಡ ದೊಡ್ಡ ಗವಿಗಳ ನುಣುಪಾದ ಚಾವಣಿಗಳಲ್ಲಿ ಚಿತ್ರಗಳನ್ನು ಬಿಡಿಸಿದ್ದಾರೆ. ಉದಾಹರಣೆಗೆ ಮಲ್ಲಾಪುರದ ಮೂರನೇ ಗವಿ (ಖಾನಾಸಾಬನ ಗವಿ), ಹಿರೇಬೆನಕಲ್ಲಿನ ಎರಡನೇ ಗವಿ (ರಕ್ಕಸ ಗವಿ) ಮತ್ತು ಅಗೋಲಿಯಾ ಮೂರನೆಯ ಗವಿಗಳ ವಿಶಾಲವಾದ ಚಾವಣಿಗಳಲ್ಲಿ ದೊಡ್ಡ ಮತ್ತು ಚಿಕ್ಕ ಪ್ರಮಾಣದ ಚಿತ್ರಗಳಿವೆ.ಈ ಚಾವಣಿಗಳು ನೆಲದಿಂದ ಸುಮಾರು ೬ ರಿಂದ ೮ ಮೀ. ಎತ್ತರದಲ್ಲಿವೆ. ಕೆಲವು ಗವಿಗಳ ಮುಖಭಾಗ ಒಳಗೋಡೆ ಭಾಗ, ಚಾವಣಿಗಳಲ್ಲಿ ಚಿತ್ರಗಳಿರುತ್ತವೆ. ಚಿಕ್ಕರಾಂಪುರದ ೧ನೇ ಗವಿಯು ಇದಕ್ಕೆ ಉತ್ತಮ ಉದಾಹರಣೆ.

ಕೆಲವು ಕಲ್ಲಾಸರೆಗಳು ಚಿತ್ರಫಲಕದಂತಿದ್ದು, ಬಹಿರಂಗವಾಗಿ ಕಾಣುವಂತಿವೆ. ಕೆಲವು ಚಿತ್ರಗಳನ್ನು ಗುರುತಿಸುವುದೇ ಕಠಿಣ. ಬಂಡೆ ಮೇಲಿನ ಆಸರೆ ಕಲ್ಲಿನ ಚಾವಣಿಯಲ್ಲೋ, ಬೃಹತ್ ಬಂಡೆಯ ಸವೆದ, ಬಡೆದ ಆಸರೆಯಲ್ಲೋ, ಬೆಟ್ಟದ ಬುಡದ ಶಿಲಾ ಪೊಟರೆಗಳಲ್ಲೋ ಇಂಥ ಚಿತ್ರಗಳನ್ನು ಬಿಡಿಸಲಾಗಿರುತ್ತದೆ. ಕೆಲವು ಕಲ್ಲಾಸರೆಗಳು ಕೂಡ ಕೈಗೆ ನಿಲುಕದಷ್ಟು ಎತ್ತರದಲ್ಲಿದ್ದು, ಅದರಲ್ಲಿ ಚಿತ್ರಗಳನ್ನು ಬಿಡಿಸಿರುವುದು ವಿಶೇಷ. ಕೊರೆದ ಮತ್ತು ಕುಟ್ಟು ಚಿತ್ರಗಳಿಗಾಗಿ ಸಾಮಾನ್ಯವಾಗಿ ಕಪ್ಪು ಶಿಲಯ ಬಂಡೆಗಳನ್ನು ಬಳಸಿಕೊಳ್ಳಲಾಗಿದೆ. ಬೆಟ್ಟದ ನಿರ್ದಿಷ್ಟ ಭಾಗದಲ್ಲಿ ಕಲ್ಲುಶಿಲೆಯ ಬಂಡೆಗಳಿರುತ್ತವೆ. ಸುತ್ತಲೂ ಬಯಲು ಪ್ರದೇಶವಿದ್ದು, ಒಂದು ರೀತಿ ಅನುಕೂಲವಿರುವ ಬಂಡೆಗಳಲ್ಲಿ ಮಾತ್ರ ಚಿತ್ರಗಳನ್ನು ಕೊರೆದು, ಕುಟ್ಟಲಾಗಿದೆ. ಬಿಳಿ ಕಣಶಿಲೆಯಲ್ಲೂ ಕುಳಿ, ತಿರುಗುಳಿಗಳನ್ನು ಕಾಣಬಹುದು.

ಈ ಪರಿಸರದಲ್ಲಿ ಅಂದಿನ ಆದಿಮಾನವನು ತನ್ನ ಕಲೆಯನ್ನು ನಾಲ್ಕು ರೀತಿಯಲ್ಲಿ ವ್ಯಕ್ತಪಡಿಸಿರುವುದನ್ನು ಈ ಮುಂದಿನಂತೆ ಗುರುತಿಸಬಹುದು.

೧. ಗವಿಗಳಲ್ಲಿ ರಚಿಸಿದ ಚಿತ್ರಗಳು.

೨. ಕಲ್ಲಾಸರೆಗಳಲ್ಲಿ ರಚಿಸಿದ ಚಿತ್ರಗಳು.

೩. ಬಯಲು ಬಂಡೆಗಳ ಮೇಲೆ ಕೋರೆದ ಚಿತ್ರಗಳು.

೪. ಬಯಲು ಬಂಡೆಗಳ ಮೇಲೆ ಕುಟ್ಟಿದ ಚಿತ್ರಗಳು.

ಹಂಪಿ ಪರಿಸರದಲ್ಲಿ ಕಾಣಬರುವ ಕಲಾತ್ಮಕ ನೆಲೆಗಳ ಮಹತ್ವವನ್ನು ಈ ಮುಂದಿನಂತೆ ಅಧ್ಯಯನ ಮಡಬಹುದಾಗಿದೆ.

**೧. ಗವಿಗಳಲ್ಲಿ ರಚಿಸಿದ ಚಿತ್ರಗಳು**

ಹಂಪಿ ಪರಿಸರ ಪ್ರದೇಶದ ಚಿತ್ರಿತ ಗವಿ, ಕಲ್ಲಾಸರೆಗಳ ರಚನೆ ಮತ್ತು ವಿಧಗಳನ್ನು ಪರಿಶೀಲಿಸುವ ಮೂಲಕ ಈ ಪ್ರದೇಶದ ಶಿಲಾಯುಗದ ಆದಿ ಮಾನವನ ಚಿತ್ರರಚನೆಗಾಗಿ ಎಂಥ ನೆಲೆಗಳನ್ನು ಆಯ್ದುಕೊಂಡ ಎನ್ನುವುದನ್ನು ಇಲ್ಲಿ ಗಮನಿಸಬಹುದು.

ಹಂಪಿ ಪ್ರದೇಶದಲ್ಲಿ ಚಿತ್ರತ ಗವಿಗಳು ಕಲ್ಲಾಸರೆಯಂತೆ ಅಧಿಕ ಪ್ರಮಾಣದಲ್ಲಿಲ್ಲ. ಅಗೋಲಿ (೨), ಆನೆಗುಂದಿ (೭), ಕುರಗೋಡು (೭, ೯, ೧೨), ಮಲ್ಲಾಪುರ (೩, ೬, ೮), ಚಿಕ್ಕರಾಂಪುರ (೧) ಮತ್ತು ಹಿರೇಬೆನಕಲ್ (೯, ೧೨, ೧೭) ಗಳಲ್ಲಿ ಮಾತ್ರ ಕೆಲವು ಗವಿಗಳಿವೆ. ಇವುಗಳಲ್ಲಿ ಅಗೋಲಿ ಮಲ್ಲಾಪುರ (೩) ಮತ್ತು ಹಿರೇಬೆನಕಲ್ಲಿನ ಗವಿಗಳು ದೊಡ್ಡ ಪ್ರಮಾಣದಲ್ಲಿವೆ.

ಮಲ್ಲಾಪುರದ ೩ನೇ ಗವಿ (ಖಾನಾಸಾಬ ಗವಿ) ಬೃಹತ್ ಪ್ರಮಾಣದಲ್ಲಿದೆ. ಇಡೀ ಗವಿಗೆ ಒಂದೇ ವಿಶಾಲವಾದ ಚಾವಣಿ ಬಂಡೆ ಇದ್ದು, ಒಳಭಾಗದಲ್ಲಿ ನುಣುಪಾಗಿದೆ. ಆ ಬಂಡೆಗೆ ಅನುಗುಣವಾಗಿ ಅದರ ಮೇಲೆ ಚಿತ್ರಗಳನ್ನು ಬಿಡಿಸಲಾಗಿದೆ. ೬ನೇ ಮತ್ತು ೮ನೇ ಗವಿಗಳು ಬೃಹತ್ ಬಂಡೆಗಳು ಸೀಳಿ ಮಧ್ಯದಲ್ಲಿ ಉಂಟಾಗಿದ್ದು, ಇವು ಕ್ರಮವಾಗಿ ೭ ಮತ್ತು ೫ ಮೀಟರ್ ಉದ್ದವಾಗಿವೆ. ೬ನೇ ಗವಿಯ ಎಡಗೋಡೆಯ ಹೊರಭಾಗದಲ್ಲಿ ಚಿತ್ರಗಳಿವೆ. ಆ ಭಾಗ ಹೊರಗೆ ಎದ್ದು ಕಾಣುವುದರ ಜೊತೆಗೆ ಸೂಕ್ತ ರಕ್ಷಿತ ಭಾಗವಾಗಿದೆ. ೮ನೆಯದು ಅರ್ಧವೃತ್ತಾಕಾರದಲ್ಲಿ ಪೊಳ್ಳಾದ ಗವಿ ಅದರ ಒಳಗೋಡೆಗಳು ಅತ್ಯಂತ ನುಣುಪಾಗಿದ್ದು, ಅಲ್ಲಿ ಚಿತ್ರಗಳಿವೆ. ಗವಿ ನೆಲದಿಂದ ಸುಮಾರು ೧೦ ಮೀಟರ್ ಎತ್ತರದಲ್ಲಿದ್ದು, ವಾಸಕ್ಕಾಗಿ ಯೋಗ್ಯವಾಗಿಲ್ಲ.

ಚಿಕ್ಕರಾಂಪುರ ಗವಿಯು ಬೃಹತ್ ಬಂಡೆಕಲ್ಲೊಂದರ ಕೆಳಭಾಗದಲ್ಲಿ ಉಂಟಾಗಿದೆ. ಈ ಗವಿಯು ಪ್ರವೇಶದಲ್ಲಿ ಚಾವಣಿ ಬಂಡೆಯ ಕೆಳಭಾಗ ತುಂಡಾಗಿ ಒಂದು ಸೊಗಸಾದ ಆಸರೆ ಉಂಟಾಗಿದೆ. ಆ ಭಾಗದಲ್ಲಿ ಮತ್ತು ಒಳಗೆ ಗೋಡೆಯ ಮೇಲೆ ಚಿತ್ರಗಳನ್ನು ಬಿಡಿಸಲಾಗಿದೆ. ಅಗೋಲಿ ಗವಿ ಕೂಡ ಮಲ್ಲಾಪುರದ ೩ನೇ ಗವಿಗಿಂತ ಸ್ವಲ್ಪ ಚಿಕ್ಕದಾಗಿದ್ದು, ಚಾವಣಿಯ ಒಂದು ಭಾಗದಲ್ಲಿ ಮಾತ್ರ ಚಿತ್ರಗಳಿವೆ.

ಹಿರೇಬೆನಕಲ್ಲಿನ ೯ ಮತ್ತು ೧೦ ನೇ ಗವಿಗಳನ್ನು ಎರಡನೆಯ ಪ್ರಕಾರದವೆಂದು ಗುರುತಿಸಬಹುದು. ಇವುಗಳಿವೆ ಎರಡೂ ಬದಿ ಪ್ರವೇಶಗಳುಂಟು. ಇವುಗಳಲ್ಲಿ ೧೭ನೇ ಗವಿ ಗಮನಾರ್ಹವಾಗಿದೆ. ಅಡ್ಡವಾಗಿರುವ ಭಾರೀ ಬಂಡೆಯ ಕೆಳಭಾಗದಲ್ಲಿ ಈ ಬೃಹತ್ ಗವಿ ಉಂಟಾಗಿದೆ. ಇದಕ್ಕೆ ರಕ್ಕಸ ಗವಿ ಎಂದು ಹೆಸರು. ಚಾವಣಿ ತಕ್ಕಮಟ್ಟಿಗೆ ನುಣುಪಾಗಿದೆ. ಇಲ್ಲಿ ಕೇವಲ ಎರಡೇ ಚಿತ್ರಗಳದ್ದರೂ ಅವು ಒಂದು ೫ ಮೀಟರ್ ಮತ್ತೊಂದು ೭ ಮೀಟರ್ ಉದ್ದವಾಗಿದ್ದು, ಗವಿಗೆ ತಕ್ಕ ಪ್ರಮಾಣದಲ್ಲಿವೆ. ಗವಿ ನೆಲಕ್ಕಿಂತ ಸ್ವಲ್ಪ ಕೆಳಮಟ್ಟದಲ್ಲಿದ್ದು ವಿಶಾಲವಾದ ಸಭಾಂಗಣ(ಹಾಲ್)ದಂತಿದೆ. ಈ ಗವಿಗಳ ಚಿತ್ರಗಳ ಸಂಖ್ಯೆ ಮತ್ತು ವೈವಿಧ್ಯತೆ ದೃಷ್ಟಿಯಿಂದ ಶ್ರೀಮಂತವಾಗಿವೆ.

**೨. ಕಲ್ಲಾಸರೆಗಳಲ್ಲಿ ರಚಿಸಿದ ಚಿತ್ರಗಳು**

ಗವಿಗಳಿಗಿಂತ ಕಲ್ಲಾಸರೆಗಳು ಹೆಚ್ಚಿನ ಪ್ರಮಾಣದಲ್ಲಿವೆ. ಮೇಲೆ ಉಲ್ಲೇಖಿಸಿದ ಕೆಲವು ಗವಿಗಳನ್ನು ಹೊರತುಪಡಿಸಿ ಉಳಿದಂತೆ ಎಲ್ಲ ಚಿತ್ರಿತ ನೆಲೆಗಳು ಕಲ್ಲಾಸರೆಗಳೆನ್ನಬಹುದು. ಕೊಪ್ಪಳ, ಹಂಪಿ ಪರಿಸರದ ಚಿತ್ರಿತ ಕಲ್ಲಾಸರೆಗಳನ್ನು ಅವುಗಳ ನೈಸರ್ಗಿಕ ರಚನೆಯ ದೃಷ್ಟಿಯಿಂದ ಈ ಮುಂದಿನಂತೆ ವರ್ಗೀಕರಿಸಬಹುದು.

**೧. ಮುಂಚಾಚಿದ ತಲೆಬಂಡೆ ಆಸರೆ**

ಕೆಳಗೆ ದೊಡ್ಡ ಬಂಡೆಯನ್ನು ಅದರ ತಲೆಯ ಮೇಲೆ ಕೆಳಗಿನ ಬಂಡೆಯಿಂದ ಮುಂಚಾಚಿದ ಮತ್ತೊಂದು ಬಂಡೆ ಇರುತ್ತದೆ. ಮುಂಚಾಚಿದ ಬಂಡೆಯ ಚಾವಣಿಯಲ್ಲಾಗಲಿ (ಹಿರೇಬೆನಕಲ್ ೧೬, ಚಿಕ್ಕರಾಂಪುರ ೪, ನಾರಾಯಣಪೇಟೆ ೧) ಇಲ್ಲವೇ ಮುಂಚಾಚಿದ ಬಂಡೆಯ ಆಶ್ರಯ ಪಡೆದ ಕೆಳಗಿನ ಕಲ್ಲಿನ ಮುಖಭಾಗದಲ್ಲಿ (ಗಡ್ಡಿ ೪, ಹೊಸಬಂಡಿ ಹರ್ಲಾಪುರ ೧) ಚಿತ್ರಗಳಲ್ಲಿರುತ್ತವೆ. ಹಿರೇಬೆನಕಲ್ಲಿನ ೨ನೇ ಕಲ್ಲಾಸರೆಯು ಈ ಪ್ರಕಾರದಲ್ಲಿ ಒಂದು ಅಪರೂಪವಾದ ಕಲ್ಲಾಸರೆಯಾಗಿದೆ. ಒಂದೆ ಬೃಹತ್ ಬಂಡೆಯೊಂದರಲ್ಲಿ ಮೇಲಿನ ಸುಮಾರು ೨ ಮೀಟರ್ ಭಾಗ ಆಸರೆಯಾಗಿ ಉಳಿದಂತೆ ಸುಮಾರು ೧೦ ಮೀಟರ್ ಭಾಗ ಒಳಸರಿದ ಚಿತ್ರಫಲಕವಾಗಿದೆ. ಇದು ಸುಮಾರು ೧೩ ಮೀಟರ್ ಅಗಲ ಮತ್ತು ೧೦ ಮೀಟರ್ ಎತ್ತರವಾಗಿದೆ. ಇಡೀ ಫಲಕದ ಅಳತೆಗೆ ತಕ್ಕಮತೆ ಅಲ್ಲಿ ದೊಡ್ಡ ಚಿತ್ರವನ್ನು ಬಿಡಿಸಲಾಗಿದೆ. ಕಲ್ಲಾಸರೆ ಆಳ ವಾಗಿಲ್ಲದಿರುವುದರಿಂದ ಚಿತ್ರಗಳು ಬಹಳಷ್ಟು ಮಾಸಿವೆ.

ಚಿಕ್ಕರಾಂಪುರ (೪) ಮತ್ತು ನಾರಾಯಣಪೇಟೆ (೧) ಕಲ್ಲಾಸರೆಗಳಲ್ಲಿ ಚಾವಣಿ ಕಲ್ಲಿನಲ್ಲಿ ಚಿತ್ರಗಳಿದ್ದು, ನೆಲದಿಂದ ಸುಮಾರು ೫ ಮೀಟರ್ ಎತ್ತರದಲ್ಲಿವೆ. ಆಸರೆಯ ಕೆಳಗಿನ ನೆಲ ನಿಲ್ಲುಲ್ಲು ಕೂಡ ಸಾಧ್ಯವಾಗದಷ್ಟು ಇಳಿಜಾರಾಗಿದೆ. ಮಲ್ಲಾಪುರದ ೨ನೇ ಕಲ್ಲಾಸರೆ ಕೂಡ ಇದೇ ರೀತಿಯದು. ಆದರೆ ಇಲ್ಲಿ ಕೈಗೆ ನಿಲುಕುವಷ್ಟು ಹತ್ತಿರದಲ್ಲಿದೆ. ಅಲ್ಲದೆ ಕುರಗೋಡಿನ ೮ ನೇ ಕಲ್ಲಾಸರೆಯೂ ಇಲ್ಲಿ ಪ್ರಮುಖವೆನಿಸುತ್ತದೆ.

**೨. ಸೀಳು ಬಂಡೆ ಆಸರೆ**

ಸಾಮಾನ್ಯವಾಗಿ ಈ ಪ್ರಕಾರದ ಕಲ್ಲಾಸರೆಗಳು ಅಧಿಕವಾಗಿದೆ. ಬೃಹತ್ ಅಥವಾ ಮಧ್ಯಮ ಗಾತ್ರದ ಬಂಡೆಗಳಲ್ಲಿ ಮೂಲೆಭಾಗದಲ್ಲೋ, ಬದಿಯಲ್ಲೋ ಒಂದು ಭಾಗ ಸೀಳಿ ತುಂಡು ಕೆಳಬಿದ್ದು ಆಸರೆ ಉಂಟಾಗಿರುತ್ತದೆ. ಈ ಆಸರೆ ಭಾಗದಲ್ಲಿ ಚಿತ್ರಗಳನ್ನು ಬಿಡಿಸಲಾಗಿರುತ್ತದೆ. ಇಂದರಗಿ (೧), ಚಿಕ್ಕಬೆನಕಲ್ (೧), ಅಗೋಲಿ (೨), ನಾಗೇನಹಳ್ಳಿ (೧), ಕೊಪ್ಪಳ (೪), ಹೊಸಬಂಡಿ ಹರ್ಲಾಪುರ (೧)ಗಳಲ್ಲಿ ಮೂಲೆ ಕಲ್ಲಾಸರೆಗಳು ಎಮ್ಮಿಗುಡ್ಡ (೨), ತೆಂಬಾ (೪), ಗಡ್ಡಿ (೪), ಹಿರೇಬೆನಕಲ್ (೧), ಹಂಪಿ (೫), ಕಮಲಾಪುರ (೧) ಹಾಗೂ ಇತರ ನೆಲಗಳಲ್ಲಿ ಬದಿಯ ಕಲ್ಲಾಸರೆಗಳಿವೆ. ಮೂಲೆ ಅಸರೆಗಳಿಗಿಂತ ಬದಿಯ ಆಸರೆಗಳು ಚಿತ್ರ ರಚನೆಗೆ ಪ್ರಶಸ್ತವಾಗಿವೆ. ಆನೆಗುಂದಿಯ ೬ನೇ ನೆಲೆಯಲ್ಲಿ ೩ ಸ್ವತಂತ್ರ ಗುಡುಗಳಿವೆ. ಅವುಗಳ ಮೂಲೆ ಭಾಗದಲ್ಲಿ ಒಡೆದ ಸಣ್ಣ ಸಲ್ಲಾಸರೆಗಳಿದ್ದು ಅದರಲ್ಲೂ ಚಿಕ್ಕ ಪ್ರಮಾಣದ ಚಿತ್ರಗಳಿವೆ.

**೩. ವಾರೆ ಸವಕಳಿ ಬಂಡೆ ಆಸೆರೆ**

ಸಾಮಾನ್ಯವಾಗಿ ಇವು ಸ್ವತಂತ್ರವಾಗಿರುವ ಬೃಹತ್ ಬಂಡೆಗಳು. ಈ ಬಂಡೆಗಳ ತುದಿಯಲ್ಲಿ ಒಂದೆರಡು ಮೀಟರ್ ಹೊರತುಪಡಿಸಿ ಉಳಿದ ಭಾಗವು ಮೇಲಿನಿಂದ ಕೆಳಕ್ಕೆ ವಾರೆಯಾಗಿ ಸವೆದಂತಿರುತ್ತವೆ. ಈ ವಾರೆ ಸವೆದ ಭಾಗವು ನುಣುಪಾಗಿದ್ದರೂ ಚಿತ್ರಗಳಿಗೆ ಹೆಚ್ಚು ರಕ್ಷಿತವಾಗಿಲ್ಲ. ಈ ರೀತಿಯ ಕಲ್ಲಾಸರೆಗಳು ಹೊಸಬಂಡಿ ಹರ್ಲಾಪುರ (೫) ಕುರಗೋಡು (೮.೯) ತೆಂಬಾ (೬) ಚಿಕ್ಕಬೆನಕಲ್ (೨) ಮತ್ತು ಹಂಪನದುರ್ಗ (೨) ಗಳಲ್ಲಿವೆ. ಈ ನಾಲ್ಕರಲ್ಲಿ ರೇಖಾ ಸಂಕೇತ ಚಿತ್ರಗಳಿರುವುದು ಕುತೂಹಲದಾಯಕ.

**೪. ಹಾಸಲು ಬಂಡೆ ಆಸರೆ**

ಬೃಹತ್ ಬಂಡೆ(ಗುಂಡು)ಗಳು ಚಿಕ್ಕ ಗುಂಡುಗಳ ಮೇಲೆ ಉದ್ದವಾಗಿ ಹಾಸಿದಂತಿರುತ್ತದೆ. ಈ ಹಾಸಲು ಬಂಡೆಯ ಕೆಳಭಾಗದಲ್ಲಿ (ಚಾವಣಿಯಲ್ಲಿ) ಚಿತ್ರಗಳಿರುತ್ತವೆ. ಮಲ್ಲಾಪುರ (೫) ತೆಂಬಾ (೭) ಕುರಗೋಡು (೧೨) ಮತ್ತು ಅಗೋಲಿ (೨) ಗಳಲ್ಲಿ ಈ ರೀತಿಯ ಕಲ್ಲಾಸರೆಗಳವೆ. ಇಲ್ಲಿಯ ಚಿತ್ರಿತ ಭಾಗವು ಅಷ್ಟು ನುಣುಪಾಗಿರುವುದಿಲ್ಲ. ಮತ್ತು ಚಿತ್ರಗಳ ಸಂಖ್ಯೆಯೂ ಕಡಿಮೆ ಇರುತ್ತದೆ.

**೫. ವಾರೆ ಬಂಡೆ ಆಸರೆ**

ಎರಡು ಬಂಡೆಗಳ ಪರಸ್ಪರ ಒಂದಕ್ಕೊಂದು ವಾರೆಯಾಗಿ ನಿಂತು ಜೋಪಡಿ ಆಕಾರದಲ್ಲಿ ಆಸರೆ ಉಂಟಾಗಿರುತ್ತದೆ. ಎರಡೂ ಬಂಡೆಗಳ ಒಳ ಭಾಗದ ಮೂಖದಲ್ಲಿ ಚಿತ್ರಗಳಿರುತ್ತವೆ. ಅಥವಾ ಒಂದು ಎತ್ತರವಾದ ಗುಂಡಿನ ಮೇಲೆ ಬೃಹತ್ ಬಂಡೆಯೊಂದು ವಾರೆಯಾಗಿ ಮಲಗಿದಂತಿರುತ್ತದೆ. ವಾರೆ ಬಂಡೆಯ ಆಸರೆಯಲ್ಲಿ ಚಿತ್ರಗಳಿರುತ್ತವೆ. ಚಿಕ್ಕಬೆನಕಲ್ (೩) ಹಂಪಿ (೪) ಸಂಗಾಪುರ (೭) ಬೃಹತ್ ವಾರೆ ಆಸರೆಗಳು ಇವೆ. ಕಾಲಕ್ರಮೇಣ ತುದಿಯಲ್ಲಿ ಸೀಳುಗಳುಂಟಾಗಿ ಮಳೆಯ ನೀರು ಇಳಿದಿರುವುದರಿಂದ ಇಂಥ ಆಸರೆಗಳ ಚಿತ್ರಗಳು ಸಾಕಷ್ಟು ಮಾಸಿವೆ. ಚಿಕ್ಕ ಬೆನಕಲ್ಲಿನ ಕಲ್ಲಾಸರೆಯಲ್ಲಿ ಕೈಗೆ ನಿಲುಕದಷ್ಟು ಎತ್ತರದಲ್ಲಿ ಚಿತ್ರಗಳಿವೆ.

**೬. ಬೆಟ್ಟದ ಪೊಟರೆ ಆಸರೆ**

ಇವು ಬೆಟ್ಟದ ಬುಡದಲ್ಲಿ ಇರುತ್ತವೆ. ಕೊರಕಲಿನಂತೆ ಸುಮಾರು ೪೦ ಮೀಟರ್‌ವರೆಗೂ ಬೆಟ್ಟದಲ್ಲಿ ಪೊಟರೆಗಳುಂಟಾಗಿರುತ್ತವೆ. ಇದು ಉದ್ದಕ್ಕೂ ಮುಂಬದಿಯಲ್ಲಿ ತೆರೆದಿರುತ್ತದೆ. ಈ ಪೊಟರೆಗಳಲ್ಲಿ ಚಿತ್ರಗಳಿರುತ್ತವೆ. ತಿರುಮಲಾಪುರ (೧) ಆನೆಗುಂದಿ (೫) ಹೊಸಬಂಡಿ ಹರ್ಲಾಪುರ (೩) ಮತ್ತು ನಾರಾಯಣಪೇಟೆಗಳಲ್ಲಿ (೨) ಇಂಥ ಕಲ್ಲಾಸರೆಗಳಿವೆ. ತಿರುಮಲಾಪುರದಲ್ಲಿ ಬೇರೆ ಬೇರೆ ಕಾಲದಲ್ಲಿ ರಚಿತವಾದ ಹೆಚ್ಚು ಚಿತ್ರಗಳಿದ್ದರೆ ಉಳಿದೆರಡು ಕಡೆ ಒಂದೆರಡು ಚಿತ್ರ ಮಾತ್ರ ಇವೆ.

**೭. ಪೊಳ್ಳು ಬಂಡೆ ಆಸರೆ**

ಇವು ಕೂಡ ವಿಶಿಷ್ಟವಾದ ರಚನೆಗಳು. ಬೆಟ್ಟದ ಮೇಲಿರುವ ಬೃಹತ್ ಬಂಡೆಗಳ ಒಳಭಾಗ ಪೊಳ್ಳಾಗಿ ಸೋಗಸಾದ ಆಸರೆ ಉಂಟಾಗಿರುತ್ತವೆ. ಇದಕ್ಕೆ ಒಂದು ಅಥವಾ ಎರಡು ಕಡೆ ಅರೆ ವೃತ್ತಾಕಾರದ ಬಾಗಿಲುಗಳಿರುತ್ತವೆ. ಪೊಳ್ಳಿನ ಒಳ ಗೋಡೆಗಳ ಮೇಲೆ ಚಿತ್ರಗಳಿರುತ್ತವೆ. ರಾಂಪುರ (೨) ಕಳ್ಳರ ಗವಿ ಮತ್ತು ತೆಂಬಾದ (೮) ಚಿತ್ರ ಪಡಿ ಇಂಥ ಕಲ್ಲಾಸರೆಗಳು ಚಿತ್ರಪಡಿಯ ಇಡೀ ಭಾಗದಲ್ಲಿ ಪಕ್ಷಿಗಳು ಮಣ್ಣಿನ ಗೂಡು ಕಟ್ಟಿರುವುದರಿಂದ ಚಿತ್ರಗಳ ಗೋಚರಿಸುವುದಿಲ್ಲ. ನಾರಾಯಣಪೇಟೆಯ ಈ ರೀತಿಯ ಬಂಡೆಯ ಪೊಳ್ಳು ಎತ್ತರದಲ್ಲಿಲ್ಲ. ಮಲಗಿಕೊಂಡೇ ಚಿತ್ರಗಳನ್ನು ನೋಡಬಹುದು.

**೮. ಅರೆ ವೃತ್ತಾಕಾರ (ಕಮಾನಿಕಾರ) ಬಾಗಿದ ಬಂಡೆ ಆಸರೆ**

ಬಂಡೆಯೊಂದರ ಎರಡು ತುದಿಗಳು ನೆಲಕ್ಕೆ ತಾಗಿ ಮಧ್ಯ ಭಾಗದಲ್ಲಿ ಅರೆ ವೃತ್ತಕಾರದ ಮೇಲೆದ್ದಿರುತ್ತದೆ. ಆದರ ಒಳಭಾಗದಲ್ಲಿ ಚಿತ್ರಗಳನ್ನು ಬಿಡಿಸಲಾಗುತ್ತದೆ. ಇಂಥ ಕಲ್ಲಾಸರೆಗಳು ಕೊಪ್ಪಳ (೨) ಬಿಳಿಬಾವಿ (೧) ಹಿರೇಬೆನಕಲ್ (೮ ಮತ್ತು ೧೩)ಗಳಲ್ಲಿವೆ. ಬಿಳಬಾವಿಯಲ್ಲಿ ಹೆಚ್ಚು ಚಿತ್ರಗಳಿದ್ದರೆ, ಹಿರೇಬೆನಕಲ್ಲಿ (೧೩) ನಲ್ಲಿ ಕೇವಲ ಮೂರು ಚಿತ್ರಗಳಿವೆ.

**೩. ಬಯಲು ಬಂಡೆಗಳ ಮೇಲೆ ಕೊರೆದ ಚಿತ್ರಗಳು**

ಬಯಲು ಬಂಡೆ ಚಿತ್ರಗಳು ಮುಖ್ಯವಾಗಿ ಪಶುಪಾಲಕರ ರಚನೆಗಳೆಂದು ಹೇಳಬಹುದು. ಆವು ಪಶುಪಾಲನೆಯ ಸಂದರ್ಭದಲ್ಲಿ ರಚಿತವಾಗಿರುವ ಸಾಧ್ಯತೆಯನ್ನು ಚಿತ್ರನೆಲೆಗಳ ಹೆನ್ನೆಲೆಯಲ್ಲಿ ತರ್ಕಿಸಬಹುದು.

ಹಂಪಿ ಪರಿಸರಕ್ಕೆ ಸಂಬಂಧಿಸಿದಂತೆ ಬಂಡೆ ಚಿತ್ರಗಳು ಎರಡು ರೀತಿಯ ನೆಲೆಗಳಲ್ಲಿ ರಚಿತವಾಗಿರುವುದನ್ನು ಗುರುತಿಸಬಹುದು. ಅವುಗಳೆಂದರೆ ಮೊದಲನೆಯ ನೆಲೆ ನೀರು ಸಂಗ್ರಹಣೆಯ ಕೆರೆಗಳ (ನೈಸರ್ಗಿಕ ಬದಿಯ ಬಂಡೆಗಳಲ್ಲಿ ಇರುವುದು. ಉದಾಹರಣೆಗೆ ಕಮಲಪುರ (ವಿದ್ಯಾರಣ್ಯ) ಮತ್ತು ಬಸಾಪಟ್ಟಣ. ಕುರಗೋಡು ವಿಶೇಷ ವೆಂದರೆ ಈ ಎರಡೂ ನೆಲೆಗಳ ಚಿತ್ರಗಳು ಒಂದೇ ಬಗೆಯಾಗಿರುವುದು (ಎತ್ತರ ಭುಜದ ಎತ್ತುಗಳು ಮತ್ತು ಅಶ್ವ ಸವಾರರ ಚಿತ್ರಗಳು).

ಎರಡನೇ ನೆಲೆಗಳು ಸುತ್ತಲೂ ಹುಲ್ಲುಗಾವಲಿದ್ದು, ಮಧ್ಯದಲ್ಲಿ ಬಂಡೆಗಳ ಮೇಲೆ ರಚಿತವಾಗಿರುವುದು. ಉದಾಹರಣೆಗೆ ಮಲ್ಲಾಪುರ ೧ ಮತ್ತು ೨ನೇ ನೆಲೆಗಳು. ಇಲ್ಲಿ ಕೊರೆದ ಮತ್ತು ಕಟ್ಟು ಚಿತ್ರಗಳು ಎರಡೂ ಇವೆ. ಇವು ಕಪ್ಪು ಬಂಡೆಗಳು. ಕಮಲಾಪುರ ೨ನೇ ನೆಲೆಯಲ್ಲಿ (ಒಂಟಿಕಲ್ಲು ಗುಂಡು) ವರ್ಣಚಿತ್ರದ ಜೊತೆಗೆ ಕೊರೆದ ಚಿತ್ರಗಳಿರುವುದು ವಿಶೇಷ. ಇದು ಕಣಶಿಲೆಯ ಬಂಡೆಯಾಗಿದೆ.

**೪) ಬಯಲು ಬಂಡೆಗಳ ಮೇಲೆ ಕುಟ್ಟಿದ ಚಿತ್ರಗಳು**

ಹಂಪಿ ಪರಿಸರದಲ್ಲಿ ಬಯಲು ಬಂಡೆ ಚಿತ್ರಗಳು ವಿವಿಧ ನೆಲೆಗಳಲ್ಲಿ ರಚಿತವಾಗಿರುವುದನ್ನು ಗುರುತಿಸಬಹುದು. ಉದಾಹರಣಗೆಗೆ ಕಮಲಾಪುರ (ವಿದ್ಯಾರಣ್ಯ) ಮತ್ತು ಬಸಾಪಟ್ಟಣ ಹರ್ಲಾಪು, ಹಂಪಿ, ಅಂಜನಾದ್ರಿ, ಋಷ್ಯ ಮುಖ ಪರ್ವತ, ಕಡೆಬಾಗಿಲು, ಗುಡೇಕೋಟೆ, ಕುರಗೋಡು ಅಪ್ಪೇನಹಳ್ಳಿ, ತೆಕ್ಕಲಕೋಟೆ, ಸಂಗನಕಲ್ಲು ಮೊದಲಾದೆಡೆ ಪ್ರತ್ಯೇಕವಾಗಿ ಬಂಡೆಗಳ ಮೇಲೆ ಎತ್ತು, ಮನುಷ್ಯರ, ಹಲವು ಪ್ರಾಣಿಗಳ ಚಿತ್ರಗಳು ರಚನೆಯಾಗಿವೆ. ಕಪ್ಪು/ ಕಣಶಿಲೆಗಳ ಬಂಡೆಗಳ ಮೇಲೆ ಈ ಚಿತ್ರಗಳನ್ನು ಚಿತ್ರಿಸಿರುವುದು ವಿಶೇಷವಾಗಿದೆ.

**೪.೩.೩. ಕಲಾತ್ಮಕ ನೆಲೆಗಳು ಚಿತ್ರಗಳ ಶೈಲಿ ಮತ್ತು ಪ್ರಮಾಣ**

ಪ್ರಾಗೈತಿಹಾಸ ಕಾಲದ ಚಿತ್ರಗಳು ಮೊದಲು ನೋಟಕ್ಕೆ ಚಿಕ್ಕಮಕ್ಕಳ ರಚನೆಗಳಂತೆ ತೋರಿದ್ದರೂ, ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ಅವು ಶೈಲಿ, ಭಾವ ಮತ್ತು ಭಂಗಿಯ ದೃಷ್ಟಿಯಿಂದ ಸಮರ್ಥವಾದ ರಚನೆಗಳೆಂದು ತಿಳಿಯುತ್ತದೆ. ಚಿತ್ರಗಳಲ್ಲಿ ಕೇವಲ ಆಕೃತಿಯಷ್ಟೇ ಮುಖ್ಯವಾಗಿಲ್ಲ. ಜೀವಂತಿಕೆ ಎದ್ದು ಕಾಣುತ್ತದೆ. ಮನುಷ್ಯ ಮತ್ತು ಪ್ರಾಣಿಯ ಬಿಡಿ ಚಿತ್ರಗಳಾಗಲಿ, ನೃತ್ಯ ಬೇಟೆ ಮುಂತಾದ ದೃಶ್ಯ ಚಿತ್ರಗಳಾಗಲಿ ಅವುಗಳ ರಚನಾ ಉದ್ದೇಶ ಸಶಕ್ತವಾಗಿ ಚಿತ್ರಗಳಲ್ಲಿ ಬಿಂಬಿತವಾಗಿದೆ. ಸಾಮಾನ್ಯವಾಗಿ ಕಣ್ಣು, ಮೂಗು, ಬಾಯಿ, ಕಿವಿ, ಹಸ್ತ ಪಾದಗಳಂತಹ ಸೂಕ್ಷ್ಮ ಅಂಗಗಳ ರಚನೆಯ ಗೋಜಿಗೆ ಪ್ರಾಗೈತಿಹಾಸ ಕಾಲದ ಕಲಾವಿದ ಹೋಗದೇ ಇದ್ದರೂ ಚಿತ್ರಗಳು ಭಾವ ಪ್ರಧಾನವಾಗಿವೆ ಎಂದು ಹೇಳಬಹುದು.೧೨೧ ಕೇವಲ ಬಾಹ್ಯ ರೇಖೆ ಇಲ್ಲವೇ ಛಾಯಾ ರೂಪದಲ್ಲೇ ಅವನು ಚಿತ್ರಗಳಿಗೆ ಜೀವಂತಿಕೆಯನ್ನು ತುಂಬಿದ್ದಾನೆ ಎನ್ನಬಹುದು. ಎಲ್ಲ ಚಿತ್ರಗಳು ಈ ದೃಷ್ಟಿಯಿಂದ ಉತ್ತಮ ರಚನೆಗಳೆಂದು ಹೇಳಲಾಗದು. ಆದರೆ ಕೆಲವಂತೂ ರಚನಾ ಶೈಲಿಯ ದೃಷ್ಟಿಯಿಂದ ಉತ್ತಮ ಮಟ್ಟದ್ದಾಗಿವೆ. ಹಂಪಿ ಪರಿಸರದ ಕೆಲವು ಚಿತ್ರಗಳ ಶೈಲಿಯನ್ನು ಈ ಮುಂದಿನಂತೆ ಗುರುತಿಸಬಹುದು.

**ಮನುಷ್ಯ ಚಿತ್ರಗಳು**

ಅನೇಕ ಬಿಡಿ ಇಲ್ಲವೇ ಸಮೂಹದ ಮನುಷ್ಯ ಚಿತ್ರಗಳಿರುವುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಮನುಷ್ಯ ಚಿತ್ರಗಳಲ್ಲಿ ಕೆಲವು ಶೈಲಿಯ ದೃಷ್ಟಿಯಿಂದ ಕ್ರಿಯಾಶೀಲತೆಯನ್ನು ಬಿಂಬಿಸುವಲ್ಲಿ ಸಮರ್ಥವಾಗಿವೆ. ಎಂದು ಗುರುತಿಸಬಹುದು.

ರಾಂಪುರದ ೧ನೇ ಕಲ್ಲಾಸರೆಯಲ್ಲಿರುವ ನಿಂತ ಮನುಷ್ಯನ ಚಿತ್ರ ಒಂದು ಅಪೂರ್ವ ಸೃಷ್ಟಿ. ದುರದೃಷ್ಟವಶಾತ್ ಅವರ ಕೆಳಭಾಗ ಮಳೆಗೆ ಸಿಲುಕಿ ಬಹಳಷ್ಟು ಮಾಸಿಹೋಗಿದೆ. ಚಿತ್ರ ಛಾಯಾರೂಪದ್ದು. ಕಲಾವಿದನಿಗೆ ದೇಹದ ರಚನೆಯ ಸ್ಪಷ್ಟ ಪರಿಕಲ್ಪನೆ ಇದೆ. ಅಗಲವಾದ ಭುಜ, ತೆಳುವಾದ ಸೊಂಟ, ಅಷ್ಟೇ ಸಹಜವಾದ ಪೃಷ್ಠ ಎಲ್ಲವೂ ಪ್ರಮಾಣಬದ್ಧವೆನಿಸುತ್ತದೆ. ಬಲಗೈ ಭುಜದ ಸಮಾನಾಂತರದಲ್ಲಿ ಮುಂಚಾಚಿದೆ. ಎಡಗೈ ಸ್ವಲ್ಪ ಕೆಳಕ್ಕಿಳಿಸಿ ಮೊಣಕೈಯಿಂದ ಉಳಿದ ಭಾಗವನ್ನು ಪಕ್ಕಕ್ಕೆ ಎತ್ತಿ ಹಿಡಿದಿದೆ. ತೋಳು ದಪ್ಪವಾಗಿದ್ದು, ಮೊಣಕೈವರೆಗೆ ಕಿರಿದಾಗಿ ಉಳಿದ ಮುಂದೆ ಸಹಜವಾಗಿದೆ. ಹಸ್ತ ಮತ್ತು ಬೆರಳುಗಳು ಅತ್ಯಂತ ಸಹಜವಾಗಿವೆ.

ಕೊರಳಲ್ಲಿ ಸರದಂತಹ ಆಭರಣ ವಿರುವುದು ಗಮನಾರ್ಹ ಸರವನ್ನು ತೋರಿಸಿರುವ ರೀತಿ ವಿಶೇಷವಾಗಿದೆ. ಕಂಠ ಮತ್ತು ಎದೆ ಭಾಗವನ್ನು ಜೋಡಿಸದೇ ಖಾಲಿಬಿಟ್ಟು ಅಲ್ಲಿ ಸರವನ್ನು ತೋರಿಲಾಗಿದೆ. ಸರಕ್ಕೆ ಸುತ್ತಲೂ ತ್ರಿಕೋನಾಕಾರದ ಆರು ಎಸಳುಗಳಿವೆ. ಎಲ್ಲವನ್ನು ಕೇವಲ ಬಾಹ್ಯ ರೇಖೆಯಲ್ಲಿ ತೋರಿಸಿ ಆಭರಣ ಧರಿಸುವಿಕೆಯ ಸೌಂದರ್ಯವನ್ನು ಸಹಜವಾಗಿರಿಸಲಾಗಿದೆ. ಇದಕ್ಕೆ ಪಾದಗಳಿದ್ದವೂ ಇಲ್ಲವೋ ತಿಳಿಯುವುದಿಲ್ಲ. ಮುಖ ವಾನರರಂತಿದ್ದು, ಇದೊಂದು ಅಪರೂಪದ ಚಿತ್ರವಾಗಿದೆ. ಇದೇ ರೀತಿಯ ಚಿತ್ರಗಳು ಆನೆಗುಂದಿ (೧) ಮತ್ತು ಗೂಗಿ ಬಂಡೆಯಲ್ಲಿದ್ದು, ಅವು ಕ್ರಮವಾಗಿ ಮಾಸಿ ಪುನರ್ ತಿದ್ದುವಿಕೆಗೆ ಒಳಗಾಗಿವೆ. ಆನೆಗುಂದಿಯನ್ನು ವಾನರ ರಾಜ್ಯ ಕಿಷ್ಕಿಂದೆ ಎಂದು ನಂಬಲಾಗಿದ್ದು, ಅದರ ಹಿನ್ನೆಲೆಯಲ್ಲಿ ಈ ವಾನರ ರೀತಿಯ ಚಿತ್ರಗಳು ಗಮನಾರ್ಹವಾಗಿವೆ.

ಸಂಗಾಪುರದ ಮೂರನೇ ಕಲ್ಲಾಸರೆಯಲ್ಲಿ ಪಶುವಿನ ಹಿಂದೆ (ಪ್ರಾಯಶಃ ಹೊಡೆದು ಕೊಂಡು ಹೊರಟಿರುವ) ಒಬ್ಬ ಮನುಷ್ಯನ ಚಿತ್ರವಿದೆ. ದೇಹ ದ್ವಿತ್ರಿಕೋನಾಕಾರ ಶೈಲಿಯಲ್ಲಿದೆ. ದೇಹದ ಅಂಗಿಕ ರಚನೆಯ ಬಗ್ಗೆ ಮೊದಲಿನ ಚಿತ್ರದ ಕಲಾವಿದನಷ್ಟು ಈ ಚಿತ್ರದ ರಚನಕಾರ ನಿಖರವಾಗಿಲ್ಲ. ಕೈಕಾಲುಗಳು, ಕೇವಲ ಸಾಂಕೇತಿಕ ಮಾತ್ರ. ಆದರೂ ಈ ಚಿತ್ರ ಒಂದು ಕ್ರಿಯೆಯನ್ನು ಸ್ಪಷ್ಟವಾಗಿ ನಿದೇರ್ಶಿಸುತ್ತದೆ. ಇಲ್ಲಿ ವ್ಯಕ್ತಿ ಪಶುವನ್ನು ತೆಗೆದುಕೊಂಡು ಹೊರಟಿದ್ದು ಅವನ ಚಿತ್ರ ಕೇವಲ ಆಕೃತಿಯಾಗದೇ ನಡಿಗೆಯ ಚಲನಶೀಲತೆಯನ್ನು ಅಭಿವ್ಯಕ್ತಿಸುತ್ತದೆ. ನಡೆಯುವಾಗ ಮುಂದಿನ ಕಾಲನ್ನು ಊರಿ ಹಿಂದಿನ ಕಾಲನ್ನು ಮೇಲಕ್ಕೆತ್ತಿರುವ ಭಂಗಿ ತುಂಬ ಸಹಜವಾಗಿದೆ. ದೇಹವು ಕೂಡ ಆ ಭಂಗಿಗೆ ಪೂರಕವಾಗಿದೆ. ಕಟಿಯಿಂದ ಎದೆ, ಭುಜದ ಭಾಗ ಕೆಳ ದೇಹಕ್ಕಿಂತ ಸ್ವಲ್ಪ ಮುಂದಕ್ಕೆ ಬಾಗಿದಂತೆ ರಚಿತವಾಗಿದೆ. ಇಲ್ಲಿ ಚಿತ್ರದ ರಚನಾಕಾರನಿಗೆ ಭಂಗಿಗಳ ಬಗೆಗೆ ಕಲ್ಪನೆ ಇದ್ದು, ಅದನ್ನು ಚಿತ್ರದಲ್ಲಿ ಮೂಡಿಸುವ ಪ್ರಯತ್ನ ಮಾಡಿದ್ದಾನೆ ಎನ್ನುಬಹುದು. ಇದರಂತೆ ತೆಂಬಾದ ೪ನೇ ಕಲ್ಲಾಸರೆ ಮತ್ತು ಚಿಕ್ಕರಾಂಪುರದ ೧ನೇ ಗವಿಯ ಪಶುಪಾಲಕ ಮನುಷ್ಯ ಚಿತ್ರಗಳು ಚಲನಶೀಲ ಅಂಶದಿಂದ ಗಮನ ಸೆಳೆಯುತ್ತವೆ. ಕೈಯಲ್ಲಿ ಉದ್ದವಾದ ಕೋಲು ಅಥವಾ ಭರ್ಜಿಯನ್ನು ಹಿಡಿದುಕೊಂಡು ಪಶುಗಳನ್ನು ತೆಗೆದುಕೊಂಡು ಹೊರಟಿರುವ ಮನುಷ್ಯನ ಚಿತ್ರ (ಚಿಕ್ಕರಾಂಪುರ) ಅತ್ಯಂತ ಸಹಜವಾಗಿದೆ. ಹಿಂದಿನ ಕಾಲು ಎತ್ತಿದ ಭಂಗಿಯಲ್ಲಿದ್ದು, ಓಟದ ಶೈಲಿಯನ್ನು ತುಂಬಾ ಸಮರ್ಥವಾಗಿ ಬಿಂಬಿಸುತ್ತದೆನ್ನಬಹುದು.

ಮನುಷ್ಯ ಚಿತ್ರಗಳಲ್ಲಿ ಪುರುಷ-ಸ್ತ್ರೀ ಚಿತ್ರಗಳನ್ನು ಸ್ಪಷ್ಟವಾಗಿ ಗುರುತಿಸುವಂತೆ ಆ ಕಾಲದ ಚಿತ್ರ ರಚನೆಕಾರ ಯೋಚಿಸಿದ ರೀತಿ ಅಪೂರ್ವವಾಗಿದೆ. ಮಲ್ಲಾಪುರ, ಹಂಪಿ, ಹಿರೇಬೆನಕಲ್, ಚಿಕ್ಕಬೆನಕಲ್‌ಗಳ ಕೆಲವು ಗವಿ, ಕಲ್ಲಾಸರೆಗಳಲ್ಲಿ ಮೈಮೇಲೆ ಗೆರೆಗಳನ್ನು ಹಾಕಿಕೊಂಡು ನಗ್ನರಾಗಿ ಕುಣಿಯುತ್ತಿರುವ ಮನುಷ್ಯ ಚಿತ್ರಗಳಿವೆ. ಇವುಗಳಲ್ಲಿ ಪುರುಷ ಹಾಗೂ ಸ್ತ್ರೀಯರಿದ್ದಾರೆ. ಸ್ತ್ರೀ ಪುರುಷರನ್ನು ಸ್ಪಷ್ಟವಾಗಿ ಗುರುತಿಸಬಹುದಾದ ರೀತಿಯಲ್ಲಿ ದೇಹದ ರಚನೆ ಇದೆ. ಪುರುಷ ನಗ್ನನಾಗಿ ಕುಣಿಯುತ್ತಿದ್ದಾನೆ ಎಂದು ತೋರಿಸುವ ಕ್ರಮ ತುಂಬ ಸರಳ. ಎರಡೂ ಕೈಗಳನ್ನು ಮೇಲಕ್ಕೆತ್ತಿ, ಕಾಲುಗಳನ್ನು ಅಗಲಿಸಿದ ಭಂಗಿಯ ವ್ಯಕ್ತಿ ಚಿತ್ರದಲ್ಲಿ ಕಾಲುಗಳ ನಡುವೆ ಶಿಶ್ನವನ್ನು (ಸಾಂಕೇತಿಕ) ತೋರಿಸಿದರಾಯ್ತು. ಆದರೆ ಈ ವಿಧಾನದ ಮೂಲಕ ನಗ್ನ ಸ್ತ್ರೀಯನ್ನು ಸಂಕೇತಿಸಲು ಸಾಧ್ಯವಿಲ್ಲ. ಅದಕ್ಕಾಗಿ ಸ್ತ್ರೀಯನ್ನು ಪಾರ್ಶ್ವಭಂಗಿಯಲ್ಲಿ ಚಿತ್ರಿಸಲಾಗಿದೆ. ಇದರಿಂದ ಸಹಜವಾಗಿ ಅವಳ ಸ್ತನಗಳನ್ನು ತೋರಿಸಬಹುದು. ಇಂಥ ಚಿತ್ರಗಳು ಮಲ್ಲಾಪುರದ ಖಾನಸಾಬನ ಗವಿ (೩) ಹಿರೇಬೆನಕಲ್ಲಿನ ರಕ್ಕಸಕುಟ್ರಿ (ಕಲ್ಲಾಸರೆ-೧) ಹಂಪಿಯ ಭರಮದೇವರ ಗುಂಡು (೫) ಗಳಲ್ಲಿವೆ. ನಾರಾಯಣಪೇಟೆಯ ಸ್ತ್ರೀ ಚಿತ್ರ ಮತ್ತೊಂದು ರೀತಿಯ ಅಭಿವ್ಯಕ್ತಿ. ಕಾಲುಗಳನ್ನು ಗಲಿಸಿ ನಿಂತಿರುವ ವ್ಯಕ್ತಿ ಸ್ತ್ರೀ ಎಂಬುದಕ್ಕೆ ಅವಳ ಯೋನಿ ಭಾಗವನ್ನು ತ್ರಿಕೋನಾಕಾರದಲ್ಲಿ ಸ್ವಲ್ಪ ಕೆಳಕ್ಕೆ ತೋರಿಸಿ ಸಂಕೇತಿಸಲಾಗಿದೆ. ನಗ್ನ ಪುರುಷ ಗುಂಪಿನಲ್ಲಿ ಇಂತಹ ಸ್ತ್ರೀ ಚಿತ್ರಗಳು ಗೊಂದಲಕ್ಕೆಡೆ ಮಾಡುವ ಸಾಧ್ಯತೆ ಇರುವುದರಿಂದ ಈ ಭಂಗಿಯ ಸ್ತ್ರೀ-ಪುರುಷ ಚಿತ್ರಗಳನ್ನು ಒಂದೇ ಕಡೆ ಚಿತ್ರಿಸಿಲ್ಲ.

ಗುಂಪು ವ್ಯಕ್ತಿಗಳಲ್ಲಿ ತಲೆಯ ಸುತ್ತಲೂ ಕೂದಲುಗಳನ್ನು ಚಿತ್ರಿಸಿ ಸ್ತ್ರೀಯನ್ನು ಸೂಚಿಸಲಾಗಿದೆ. ಈ ರೀತಿಯ ಚಿತ್ರಗಳು ಹಿರೇಬೆನಕಲ್ಲಿನ ೬ನೇ ಗವಿಯಲ್ಲಿವೆ. ೬ನೇ ಗವಿಯಲ್ಲಿ ಪರಸ್ಪರ ಎದುರು ಬದುರಾಗಿ ಕುಣಿಯುತ್ತಿರುವ ೨ನೇ ಸಾಲಿನ ಮನುಷ್ಯ ಚಿತ್ರಗಳಲ್ಲಿ ಒಂದು ಸಾಲಿನ ಎಲ್ಲರ ತಲೆಯಲ್ಲೂ ಕೂದಲನ್ನು ತೋರಿಸಲಾಗಿದೆ. ಹಾಗಾಗಿ ಅದು ಸ್ತ್ರೀಯರ ಸಾಲು ಎನ್ನುವುದು ಸ್ಪಷ್ಟ.

**ಪ್ರಾಣಿ ಚಿತ್ರಗಳು**

ಪಶು, ಪಕ್ಷಿಗಳು ಚಿತ್ರ ರಚನೆಯು ಕೂಡ ಸಹಜವಾಗಿರುವುದನ್ನು ಕಾಣಬಹುದು. ಇವು ಕೂಡ ಛಾಯಾ ಹಾಗೂ ಬಾಹ್ಯ ರೇಖಾ ರೂಪದಲ್ಲಿವೆ. ಕೆಲವು ಸಹಜ ರೂಪದ ಚಿತ್ರಗಳು ಇಂವೆ. ಮಲ್ಲಾಪುರದ ೯ನೇ ಕಲ್ಲಾಸರೆಯಲ್ಲಿನ ಗುಹೆಯಲ್ಲಿರುವ ಗೂಳಿಯ ಚಿತ್ರ ರಚನೆಯ ದೃಷ್ಟಿಯಿಂದ ಒಂದು ಉತ್ತಮ ಕಲಾಕೃತಿ ಎನ್ನಬಹುದು. ಇದು ಛಾಯಾರೂಪದಲ್ಲಿದೆ. ಮುಂಡ, ಕಾಲು, ಮುಖ, ಕತ್ತು, ಕೋಡು, ಕಿವಿ ಎಲ್ಲವೂ ಪ್ರಮಾಣಬದ್ಧವಾಗಿವೆ. ಬಲಿಷ್ಠ ಗೂಲಿಯ ದಷ್ಟಪುಷ್ಟತೆಯನ್ನು ಚಿತ್ರದಲ್ಲಿ ನೈಜವಾಗಿ ಬಿಂಬಿಸಲಾಗಿದೆ. ಕೊಪ್ಪಳ-ಹಂಪಿ ಪ್ರದೇಶದ ಗೂಲಿ ಚಿತ್ರಗಳಲ್ಲಿಯೇ ಇದು ಶ್ರೇಷ್ಠ ಚಿತ್ರವೆನ್ನಬಹುದು. ಮಲ್ಲಾಪುರದ ೨ನೇ ಗವಿ ಅಂಜನಹಳ್ಳಿಯ ಗೂಳಿಯ ಚಿತ್ರಗಳು ದೇಹದಲ್ಲಿ ಪ್ರಮಾಣಬದ್ಧವಾಗಿರದಿದರೂ ಗೂಳಿಯ ಬಲಿಷ್ಠತೆ ಗಾಂಭೀರ್ಯವನ್ನು ಪ್ರಕಟಿಸುವಲ್ಲಿ ಯಶಸ್ವಿಯಾಗಿದೆ. ಅದೇ ರೀತಿ ಕೋಣದ ಚಿತ್ರಗಳು ಗಮನ ಸೆಳೆಯುತ್ತವೆ. ಹೊಸಬಂಡಿ ಹರ್ಲಾಪುರ, ಚಿಕ್ಕಬೆನಕಲ್ ಮತ್ತು ಮಲ್ಲಾಪುರಗಳಲ್ಲಿ ಬೃಹತ್ ಪ್ರಮಾಣದ ಚಿತ್ರಗಳಿವೆ. ಎಲ್ಲವೂ ಬಾಹ್ಯ ರೇಖೆಯವು. ಮಲ್ಲಾಪುರದ ಕೋಣದ ಚಿತ್ರದ ಮೈಮೇಲೆ ರೇಖೆಗಳಿವೆ. ಈ ಚಿತ್ರಗಳು ಪ್ರಬುದ್ಧ ಕಲಾವಿದರ ರಚನೆಗಳಿಂತೆ ಇವೆ. ಕೋಣದ ಬಲಿಷ್ಠತೆ ಚಿತ್ರದಲ್ಲಿ ನೈಜವಾಗಿವೆ. ಹೀಗೆ ಈ ಚಿತ್ರಗಳು ಭಂಗಿ ಮತ್ತ ಭಾವವನ್ನು ಸಮರ್ಪಕವಾಗಿ ಅಭಿವ್ಯಕ್ತಿಸುತ್ತವೆ.

ಹಂಪಿಯ ೨ನೇ ಕಲ್ಲಾಸರೆಯ ಹುಲಿ ಮತ್ತು ಗೂಳಿಯ ಚಿತ್ರಗಳು ಕೂಡ ರಚನೆ ಕಾರನ ಚಿತ್ರ ಪರಿಜ್ಞಾನಕ್ಕೆ ಸಾಕ್ಷಿಯಾಗಿವೆ. ಬಾಲವನ್ನು ಅರೆ ಎತ್ತಿ ಸಂಚಾರಕ್ಕೆ ಹೊರಟಂತಿರುವ ಹುಲಿಯ ಭಾವ ಮತ್ತು ಶೈಲಿ ಚಿತ್ರದಲ್ಲಿ ಸಹಜವಾಗಿ ವ್ಯಕ್ತವಾಗಿದೆ. ಅದೇ ರೀತಿ ಬಾಲವನ್ನು ಮೇಲೆಕ್ಕೆತ್ತಿ ತಲೆ ಬಗ್ಗಿಸಿರುವ ಗೂಳಿಯ ಇರಿವ ಭಂಗಿಯ ಭಾವ ಚಿತ್ರದಲ್ಲಿ ನೈಜವಾಗಿ ಮೂಡಿದೆ.

ಹಿರೇಬೆನಕಲ್ಲಿನ ೧ನೇ ಕಲ್ಲಾಸರೆಯಲ್ಲಿ ಎರಡು ನವಿಲಿನ ಚಿತ್ರಗಳಿವೆ. ಅವು ಛಾಯಾ ರೂಪದಲ್ಲಿದ್ದು ಯಾವುದೇ ದೃಷ್ಟಿಯಿಂದ ಅವುಗಳ ಬಾಹ್ಯ ಆಕಾರ ಸ್ವಲ್ಪವೂ ಬದಲಾಗದಂತೆ ಅಪೂರ್ವವಾಗಿ ಮೂಡಿ ಬಂದಿವೆ. ಅವುಗಳಲ್ಲಿ ಒಂದು ನವಿಲಿನ ಮೇಯುವ ಭಂಗಿ ತುಂಬಾ ಸಹಜವಾಗಿದೆ.

ಹೊಸಬಂಡಿ ಹರ್ಲಾಪುರದ ೩ನೇ ಕಲ್ಲಾಸರೆಯ ಕವಲಿನ ಕೋಡುಗಳ (ಗಂಡು) ಜಿಂಕೆಗಳು ಕೂಡ ಸುಂದರವಾದ ರಚನೆಗಳು. ಅವುಗಳ ದೇಹವಿನ್ಯಾಸ ಭಂಗಿ ಮತ್ತು ರಚನೆ ನೈಜವಾಗಿದೆ. ಎಮ್ಮೆ, ಎತ್ತು, ಮತ್ತು ಹಸು ಒಂದೇ ರೀತಿ ಕಾಣುತ್ತವೆಯಾದರೂ ಸುತ್ತಲಿನ ಚಿತ್ರಗಳ ಅವಲೋಕನದಿಂದ ಅವುಗಳ ಪ್ರತ್ಯೇಕತೆಯನ್ನು ಗುರುತಿಸಬಹುದು. ಕೊಪ್ಪಳದ ೧ನೇ ಗವಿಯಲ್ಲಿ ಜಿಂಕೆ, ಗೂಳಿ, ಹಸು, ಟಗರು, ಮೊಲ, ಮುಂತಾದ ಪ್ರಾಣಿಗಳ ಚಿತ್ರಗಳಿವೆ. ನೋಡಿದ ತಕ್ಷಣ ಆ ಪ್ರಾಣಿಗಳಲ್ಲಿ ಗುರುತಿಸಬಹುದು. ಟಗರಿನ ಕೊಂಬನ್ನು ಹೊರಭಾಗದಲ್ಲಿ ಸುರಳಿಯಾಗಿಸುತ್ತಿರುವ ರೀತಿಯಲ್ಲಿ ತೋರಿಸುವುದು ವಿಶೇಷ. ಹಾಗೆ ಪ್ರಾಗೈತಿಹಾಸ ಕಾಲದ ಚಿತ್ರಗಳು ಶೈಲಿ ಮತ್ತು ಭಂಗಿಯಲ್ಲಿ ಸಮರ್ಥರೂಪಗಳಾಗಿವೆ ಎನ್ನಬಹುದು.

ಹಂಪಿ ಪರಿಸರದ ಚಿತ್ರಗಳು ಪ್ರಮಾಣದಲ್ಲಿ ವೈವಿಧ್ಯಮಯವಾಗಿದ್ದವು. ಚಿಕ್ಕ, ಮಧ್ಯಮ, ದೊಡ್ಡ ಮತ್ತು ಬೃಹತ್ ಪ್ರಮಾಣದಲ್ಲಿವೆ.



**ಚಿಕ್ಕ ಪ್ರಮಾಣದ ಚಿತ್ರಗಳು**

ಸಾಮಾನ್ಯವಾಗಿ ಬಿಡಿ ಚಿತ್ರಗಳಿಗಿಂತ ಗುಂಪಿನ ಚಿತ್ರಗಳು ಚಿಕ್ಕ ಪ್ರಮಾಣದಲ್ಲಿವೆ. ಒಂದೇ ಎಡೆಯಲ್ಲಿ ಅನೇಕ ಚಿತ್ರಗಳನ್ನು ಬಿಡಿಸುವ ಉದ್ದೇಶವಿರುವುದರಿಂದ ಚಿತ್ರಗಳನ್ನು ಸಣ್ಣ ಪ್ರಮಾಣದಲ್ಲಿ ಯೋಜಿಸಿಕೊಳ್ಳಲಾಗಿದೆ. ಬಿಡಿಚಿತ್ರಗಳು ಸ್ವತಂತ್ರವಾಗಿರುವುದರಿಂದ ಅವು ದೊಡ್ಡ ಇಲ್ಲವೇ ಮಧ್ಯಮ ಪ್ರಮಾಣದಲ್ಲಿರುತ್ತವೆ. ಚಿಕ್ಕ ಪ್ರಮಾಣದ ಚಿತ್ರಗಳು ಹಿರೇಬೆನಕಲ್ ನ ೧, ೬. ೧೧ ಮತ್ತು ೧೨ ನೇ ಗವಿಗಳಲ್ಲಿ ಚಿಕ್ಕರಾಂಪುರದ ೧ನೇ ಗವಿಯಲ್ಲಿ ಇವೆ. ಇಲ್ಲಿ ಒಂದೇ ಕಡೆ ಸಾಲು ಕುಣಿತಗಾರರ ನಾಲ್ಕೈದು ತಂಡಗಳು, ಬಿಡಿ ಮನುಷ್ಯರು, ಜಿಂಕೆಗಳ ಸಾಲು, ಗುಂಪುಗಳು ಏಕಪ್ರಕಾರವಾಗಿರದೇ ಚೆಲ್ಲಾಪಿಲ್ಲಿ ಯಾಗಿವೆ. ಪ್ರಾಯಶಃ ಇವು ಬೇರೆ ಬೇರೆ ಅವಧಿಯಲ್ಲಿ

ರಚಿತವಾಗಿರಬಹುದೆಂದು ತೋರುತ್ತದೆ. ಇಲ್ಲಿ ಕೆಲವು ಸಣ್ಣ ಪ್ರಮಾಣದ ಬಿಡಿ ಚಿತ್ರಗಳಿವೆ. ನಂತರ ಕಾಲದ ಬಿಳಿ ವರ್ಣದ ಚಿತ್ರಗಳಲ್ಲಿ ಕಡ್ಡಿಯಾಕಾರದ ಮನುಷ್ಯ ಕೃತಿಗಳು ಮತ್ತು ಇತರ ಚಿತ್ರಗಳು ಕೂಡ ಸಣ್ಣ ಪ್ರಮಾಣದಲ್ಲಿವೆ. ಮಲ್ಲಾಪುರ, ವೆಂಕಟಾಪುರ, ಹಂಪಿಗಳಲ್ಲಿ ಸಣ್ಣ ಪ್ರಮಾಣದ ಚಿತ್ರಗಳಿವೆ. ಬಣ್ಣ ಚಿತ್ರಗಳು ಸಾಮಾನ್ಯವಾಗಿ ೧ ಸೆಂ.ಮಿ. ನಿಂದ ಹಿಡಿದು ೩೦ ಸೆಂ.ಮೀ.ವರೆಗೆ ವಿವಿಧ ಅಳತೆಯಲ್ಲಿವೆ.

**ಮಧ್ಯಮ ಪ್ರಮಾಣದ ಚಿತ್ರಗಳು**

ಮಧ್ಯಮ ಪ್ರಮಾಣದ ಚಿತ್ರಗಳು ಸಾಮಾನ್ಯವಾಗಿ ಅಧಿಕವಾಗಿವೆ. ಎರಡು ಅಥವಾ ನಾಲ್ಕು ಚಿತ್ರಗಳಿದ್ದಲ್ಲಿ ಅವು ಮಧ್ಯಮ ಪ್ರಮಾಣದಲ್ಲಿರುತ್ತವೆ. ಸಂಗಾಪುರ, ಕೊಪ್ಪಳ, ಚಿಕ್ಕರಾಂಪುರ, ರಾಂಪುರ, ಮಲ್ಲಾಪುರಗಳಲ್ಲಿ ಈ ಪ್ರಮಾಣದ ಚಿತ್ರಗಳಿವೆ. ಸಾಮಾನ್ಯವಾಗಿ ೨೦ ಸೆಂ.ಮೀ. ನಿಂದ ೧ ಮೀಟರ್‌ವರೆಗಿನ ಚಿತ್ರಗಳನ್ನು ಈ ಪ್ರಮಾಣದಲ್ಲಿ ಗುರುತಿಸ ಬಹುದು. ರಾಂಪುರ(೧) ಆನೆಗುಂದಿ (೧)ಯ ವಾನರ ರೀತಿಯ ಮನುಷ್ಯ ಚಿತ್ರಗಳು ಕ್ರಮವಾಗಿ ೦.೮೯ ಮೀ. ಮತ್ತು ೦.೫೮ ಮೀ. ಎತ್ತರ ಇವೆ. ಸಂಗಾಪುರದ ಚಿತ್ರಗಳಲ್ಲಿ ಹೆಚ್ಚಿನವು ೨೦ ಸೆಂ.ಮೀ.ನಿಂದ ೪೫ ಸೆಂ.ಮೀ. ವರೆಗೆ ಇವೆ.

**ದೊಡ್ಡ ಪ್ರಮಾಣದ ಚಿತ್ರಗಳು**

೧ ಮೀಟರಿನಿಂದ ೫ ಮೀಟರ್‌ವರೆಗಿನ ಚಿತ್ರಗಳನ್ನು ದೊಡ್ಡ ಪ್ರಮಾಣದ ಚಿತ್ರಗಳೆನ್ನಬಹುದು. ಇವು ವಿರಳವಾಗಿವೆ. ಸಾಮಾನ್ಯವಾಗಿ ಬಿಡಿ ಮನುಷ್ಯ ಅಥವಾ ಪ್ರಾಣಿಗಳವು ಈ ಅಳತೆಯಲ್ಲಿರುತ್ತವೆ. ಮಲ್ಲಾಪುರದ ೩ನೇ ಗವಿಯಲ್ಲಿ (ಖಾನಾಸಾಬನ) ಈ ಅಳತೆಯ ಅನೇಕ ಚಿತ್ರಗಳಿವೆ. ಅವುಗಳ ಪ್ರಮಾಣ ಇಂತಿವೆ. ಮನುಷ್ಯ ಚಿತ್ರಗಳು ೧ ಮೀ., ೧.೩೫ ಮೀ., ೧.೬೬ ಮೀ., ೧.೭೬ ಮೀ.,೨.೪೫ ಮೀ., ಮತ್ತು ೧.೮೦ ಮೀ. ಅಳತೆಯಲ್ಲಿದೆ. ಹಂದಿಯ ಚಿತ್ರ ೧.೩೯ ಮೀ. ಎತ್ತರ ಮತ್ತು ೨.೬ ಮೀ. ಉದ್ದ. ಕಾಡುಕೋಣ ೩.೧೦ ಮೀ. ಉದ್ದ ಮತ್ತು ೨.೧೫ ಮೀ. ಎತ್ತರ ಇದೆ. ನವಿಲು ೨.೫ ಮೀ.ಉದ್ದವಾಗಿದೆ. ಹಾಗೇ ಮರದ ಕಾಂಡವೊಂದರ ಚಿತ್ರ ೪ ಮೀ. ಎತ್ತರವಿದೆ. ನಾರಾಯಣಪೇಟೆಯ ಮನುಷ್ಯ ಚಿತ್ರವು ಸುಮಾರು ೪ ಮೀ. ಎತ್ತರವಿದ್ದು ಹಿರೇಬೆನಕಲ್ಲಿನ ೧೭ನೇ ಗವಿಯ ವಿಚಿತ್ರ ಮನುಷ್ಯ ಕೃತಿಯು ೫ ಮೀ. ಉದ್ದವಿದೆ. ಚಿಕ್ಕಬೆನಕಲ್ಲಿನ ೩ನೇ ಕಲ್ಲಾಸರೆಯ ಕೋಣದ ಚಿತ್ರ ಸುಮಾರು ೩ ಮೀ. ಉದ್ದವಿದೆ. ರಾಮದುರ್ಗ ಮತ್ತು ಬೊಮ್ಮಸಾಗರ ತಾಂಡದ ಎತ್ತುಗಳ ಹಾಗೂ ನವಿಲಿನ ಚಿತ್ರಗಳು ಸುಮಾರು ೩ ಮೀಟರ್ ಉದ್ದ ಇವೆ. ಹೊಸಬಂಡಿ ಹರ್ಲಾಪುರದ ಕೋಣದ ಚಿತ್ರ ೨.೮೦ ಮೀ ಉದ್ದ ಮತ್ತು ೧.೮೯ ಮೀ. ಎತ್ತರವಾಗಿದೆ.

**ಬೃಹತ್ ಪ್ರಮಾಣದ ಚಿತ್ರಗಳು**

೫ ಮೀ.ಗಿಂತ ದೊಡ್ಡ ಪ್ರಮಾಣದ ಚಿತ್ರಗಳು ವಿರಳವಾಗಿವೆ. ಕೊಪ್ಪಳ-ಹಂಪಿ ಪ್ರದೇಶದಕ್ಕೆ ಸಂಬಂಧಿಸಿದಂತೆ ಹಿರೇಬೆನಕಲ್ ಮತ್ತು ಅಂಜನಹಳ್ಳಿಯಲ್ಲಿ ಈ ಪ್ರಮಾಣದ ಚಿತ್ರಗಳಿವೆ. ಹಿರೇಬೆನಕಲ್ಲಿನ ೩ನೇ ಕಲ್ಲಾಸರೆಯ ೧೨.೫೦ ಮೀ. ಅಗಲ ಹಾಗೂ ಸುಮಾರು ೧೦ ಮೀ. ಎತ್ತರದ ವಿಶಾಲ ಅಳತೆಯಲ್ಲಿ ಎರಡು ಹೆಬ್ಬಾವಿನ ಚಿತ್ರಗಳಿವೆ. ಪ್ರತಿಯೊಂದ ಸುಮಾರು ೧೨ ಮೀ. ಉದ್ದವಾಗಿವೆ. ಇಲ್ಲಿಯವರೆಗೆ ತಿಳಿದಂತೆ ಮಧ್ಯಪ್ರದೇಶದ ರೈಸಿನ್ ಜಿಲ್ಲೆಯ ಗೋರಾಗೂಜ್ ತಹಶೀಲ್ ನ ಸನಕುದ್ ಮತ್ತು ಭಾಗವಾನಿ ನದಿಗಳು ಮಧ್ಯದಲ್ಲಿರುವ ಜಾಹೋರಾ ಕಲ್ಲಾಸರೆಗಳಲ್ಲಿಯ ದ್ವಿವರ್ಣದ (ಬಿಳಿ, ಕೆಂಪು) ಕೋಣದ ಚಿತ್ರವನ್ನು (೩.೬೦ ಮೀ. ಉದ್ದ ೧೯೫ ಮೀ. ಎತ್ತರ) ಭಾರತದ ಗವಿ ಪ್ರಾಣಿ ಚಿತ್ರಗಳಲ್ಲಿಯೇ ಅತ್ಯಂತ ದೊಡ್ಡದೆಂದು ಭಾವಿಸಲಾಗಿತ್ತು.

ಆದರೆ ಅದಕ್ಕೂ ದೊಡ್ಡದಾದ ಚಿತ್ರಗಳು ಇವಾಗಿದ್ದು, ಭಾರತದ ಗವಿವರ್ಣ ಚಿತ್ರಗಳಲ್ಲೇ ಅತೀ ದೊಡ್ಡ ಪ್ರಮಾಣದ ಚಿತ್ರಗಳೆಂದು ಹೇಳಬಹುದು. ಈ ಚಿತ್ರಗಳನ್ನು ಒಳಗೊಂಡ ಕಲ್ಲಾಸರೆ ಕೂಡ ಅತೀ ದೊಡ್ಡ ಚಿತ್ರಿತ ಕಲ್ಲಾಸರೆಯಾಗಿದೆ.

ಇಲ್ಲಿಯೇ ೧೭ ನೇ ಗವಿಯಲ್ಲಿ ಒಂದು ವಿಚಿತ್ರ ಆಕೃತಿಯು ೭ ಮೀ. ಉದ್ದವಾಗಿದೆ. ಹಾಗೂ ಅಂಜನಹಳ್ಳಿಯ ಹಡಗಿನ ಚಿತ್ರವು ೬.೯೯ ಮೀ. ಉದ್ದ ಮತ್ತು ೧ ಮೀ. ಎತ್ತರವಿದೆ. ಹಾಗೂ ಪ್ರಾಣಿಗಳ ಚಿತ್ರಗಳನ್ನು ಕೊಪ್ಪಳ-ಹಂಪಿ ಪ್ರದೇಶ ಒಳಗೊಂಡಿದೆ ಎಂದು ಹೇಳಬಹುದು.

ಹಂಪಿ ಪ್ರದೇಶದ ಪ್ರಾಗೈತಿಹಾಸ ಕಾಲದ ಚಿತ್ರಗಳು ಮುಖ್ಯವಾಗಿ ಮನುಷ್ಯ ಪ್ರಾಣಿ ಪಕ್ಷಿಗಳಿವೆ ಸಂಬಂಧಿಸಿವೆ. ಒಂದೆರಡು ಬೇರೆ ವಿಷಯದ ಚಿತ್ರಗಳು ಇವೆ. ಮನುಷ್ಯ ಪ್ರಾಣಿ ಪಕ್ಷಿ ಚಿತ್ರಗಳಲ್ಲಿ ಅವುಗಳ ರಚನೆ ಮತ್ತು ಭಂಗಿಯ ವಿಷಯದಿಂದ ವೈವಿಧ್ಯ ವಿಧಗಳಿವೆ. ಒಟ್ಟಾರೆ ಚಿತ್ರಗಳ ವಿಷಯ, ವಿಧಗಳು ಮತ್ತು ಭಂಗಿಗಳು ಮಂಡಲ ರೇಖಾಚಿತ್ರಗಳ ಚಿತ್ರಣ ವಿವರ ಈ ಮುಂದಿನಂತಿದೆ.

**ಮನುಷ್ಯನ ಚಿತ್ರಗಳು**

ಮನುಷ್ಯ ಚಿತ್ರಗಳಲ್ಲಿ ಅನೇಕ ವಿಧಗಳಿವೆ. ಅವು ನಗ್ನಚಿತ್ರಗಳು, ಉಬ್ಬು ಮೂರ್ತಿಯ ಚಿತ್ರಗಳು, ಸಾಮಾನ್ಯ ಚಿತ್ರಗಳು, ಕಡ್ಡಿ ರೂಪದ ಚಿತ್ರಗಳು, ಬಾಲವುಳ್ಳ ಚಿತ್ರಗಳು ಈ ಪರಿಸರದಲ್ಲಿ ಕಂಡುಬರುತ್ತಿದ್ದು, ಆ ವಿವರ ಇಂತಿದೆ.

**ನಗ್ನ ಮನುಷ್ಯ ಚಿತ್ರಗಳು**

ಮೈ ಮೇಲೆ ವಿವಿಧ ರೀತಿಯ ಗೆರೆಗಳುಳ್ಳ ಬೇರೆ ಬೇರೆ ಭಂಗಿಯ ಕೆಲವು ಬೃಹತ್, ಮಧ್ಯಮ ಮತ್ತು ಚಿಕ್ಕ ಪ್ರಮಾಣದ ಏಕ ವ್ಯಕ್ತಿಯ ಚಿತ್ರಗಳು ಮಲ್ಲಾಪುರ, ಹಿರೇಬೆನಕಲ್, ಚಿಕ್ಕಬೆನಕಲ್, ಹಂಪಿ, ನಾರಾಯಣಪೇಟೆ, ಹೊಸಬಂಡಿ ಹರ್ಲಾಪುರಗಳಲ್ಲಿವೆ. ಎರಡು ಕಾಲುಗಳನ್ನು ಅಗಲಿಸಿ ಕೈಗಳನ್ನು ಮೇಲೆಕ್ಕೆತ್ತಿ ನಿಂತಿರುವ ಮನುಷ್ಯನ ಬೃಹತ್ ಪ್ರಮಾಣದ ಚಿತ್ರ ಮಲ್ಲಾಪುರದ ಎರಡನೇ ಗವಿ (ಖಾನಸಾಬ ಗವಿ) ಯಲ್ಲಿದೆ. ಇದು ೧೬೬ ಮೀ. ಎತ್ತರ, ೧ ಮೀ. ಅಗಲ) ಹಸ್ತಗಳು ವೃತ್ತಾಕಾರದಲ್ಲಿವೆ. ಅದಕ್ಕೆ ಸುತ್ತಲೂ ಐದಾರು ಬೆರಳುಗಳಿವೆ. ಅದವನ್ನು ಚಿಕ್ಕ ರೇಖೆಗಳಲ್ಲಿ ತೋರಿಸಲಾಗಿದೆ  ಮತ್ತು ತಲೆಯ ಸುತ್ತಲೂ ಕಿರಣಗಳಂತೆ ರೇಖೆಗಳಿವೆ. ಮತ್ತೊಂದು ಚಿತ್ರದಲ್ಲಿ (೦.೪೩ ಮೀ. ೧ ಮೀ. ಎತ್ತರ) ವ್ಯಕ್ತಿಯ ಕೈಗಳು ಸೊಂಟದ ಮೇಲೆ ಇರಿಸಿದಂತಿವೆ. ಕಾಲುಗಳು ತೀರ ಸಣ್ಣಗೆ ಕಡ್ಡಿಯಂತಿವೆ. ಇದೇ ರೀತಿಯ ಒಂದು ಚಿತ್ರ ಹಂಪಿಯ ಐದನೇ ಕಲ್ಲಾಸರೆ (ಭರಮದೇವರ ಗುಂಡು)ಯಲ್ಲಿ ಇದೆ. ಇದೇ ಭಂಗಿಯಲ್ಲಿ ಶಿಶ್ನಗಳನ್ನು ಹೊಂದಿರುವ ಚಿತ್ರಗಳು ಮಲ್ಲಾಪುರ, ಹಿರೇಬೆನಕಲ್ ಮತ್ತು ರಾಂಪುರಗಳಲ್ಲಿವೆ. ಇವು ತೊಡೆಗಳನ್ನು ಅಗಲಿಸಿ ಸೊಟ್ಟ ಮಾಡಿ ನಿಂತ ಭಂಗಿಯಲ್ಲಿರುತ್ತವೆ. ಸಣ್ಣ ತಲೆ ತೋಳುಗಳು ಅಡ್ಡವಾಗಿದ್ದು ಕೈಗಳು ಮೇಲಕ್ಕೆತ್ತಲ್ಪಟ್ಟಿರುತ್ತವೆ. ಹಸ್ತ ಪಾದಗಳನ್ನು ಬಿಡಿಸಿರುವುದಿಲ್ಲ. ನಗ್ನ ದೇಹ, ಶಿಶ್ನವನ್ನು ಸ್ಪಷ್ಟವಾಗಿ ಬಿಡಿಸಲಾಗಿದ್ದು ಮುಖ, ಮೈ, ಕಾಲು, ತೊಡೆಗಳ ಮೇಲೆಲ್ಲ ರೇಖೆಗಳಿರುತ್ತವೆ. ದೊಡ್ಡ ಪ್ರಮಾಣದಲ್ಲಿ ಈ ಚಿತ್ರಗಳು ಹಿರೇಬೆಣಕಲ್‌ನ ೩ನೇ ಗವಿ (೨ ಮೀ. ಎತ್ತರ) ಮಲಾಪುರದ ೧ನೇ ಕಲ್ಲಾಸರೆ (೨.೭೦ ಮೀ. ಎತ್ತರ)ಗಳಲ್ಲಿವೆ. ಚಿಕ್ಕ ಪ್ರಮಾಣದಲ್ಲಿ ಮಲ್ಲಾಪುರದ ಅದೇ ಕಲ್ಲಾಸರೆಯ ೨ನೇ ಬದಿಯಲ್ಲಿ ಮತ್ತು ಮೂರನೇ ಗವಿಯಲ್ಲಿ ಇವೆ. ಮೊದಲನೆಯದರಲ್ಲಿ ಶಿಶ್ನ ಭಾಗ ಎರಡೂ ಕಾಲುಗಳ ನಡುವೆ ದೇಹದ ಅಗಲದಷ್ಟೇ ಇದ್ದರೆ ಎರಡನೆಯ ಚಿತ್ರ (೦.೫೫ ಮೀ. ಎತ್ತರ) ದಲ್ಲಿ ಅದು ಸ್ವಲ್ಪ ಉದ್ದವಾಗಿದ್ದು ಬಾಲದಂತೆ ತೋರುತ್ತದೆ. ವ್ಯಕ್ತಿಯ ಮುಖ ತ್ರಿಕೋನಾಕಾರದಲ್ಲಿ ದೇಹ ಚೌಕಾಕಾರದಲ್ಲಿರುವುದು ವಿಶೇಷ. ನಗ್ನ ಪುರುಷನ ಮತ್ತೊಂದು ವಿಶೇಷ ಚಿತ್ರ ರಾಂಪುರದ ೨ನೇ ಗವಿಯಲ್ಲಿದೆ. ನೀಳ ಆಯತಾಕಾರದ ದೇಹ, ಮುಂದಾದ ತಲೆ, ಕಾಲುಗಳನ್ನು ಅಗಲಿಸಿ ಕೈಗಳನ್ನು ಮೇಲಕ್ಕೆತ್ತಿದೆ. ಹಸ್ತ, ಪಾದ, ಮೈಮೇಲೆ ರೇಖೆಗಳಲ್ಲಿ ಎರಡೂ ಕಾಲುಗಳ ಮಧ್ಯ ಉದ್ದವಾದ ಶಿಶ್ನವಿದೆ. ಅದಕ್ಕೆ ಶಿಶ್ನ ಮಣಿಯನ್ನು ತೋರಿಸಲಾಗಿದೆ. ಈ ಚಿತ್ರ ಮೈಮೇಲಿನ ರೇಖೆಗಳಿರುವ ಚಿತ್ರಗಳಿಗಿಂತ ನಂತರ ಕಾಲದ ರಚನೆಯಾಗಿವೆ. ಕೆಲವು ಚಿತ್ರಗಳು ಕೈಗಳನ್ನು ಮೇಲಕ್ಕೆತ್ತಿರುವ ಬದಲು ಕೆಳಗೆ ಇಳಿಸಿದ ಭಂಗಿಯಲ್ಲಿವೆ. ಕೈಗಳನ್ನು ಭುಜದ ಸಮಾನಾಂತರದಲ್ಲಿ ಚಾಚಿ ಮೊಣಕೈ ಭಾಗವನ್ನು ಕೆಳಗೆ ಇಳಿಬಿಟ್ಟ ವ್ಯಕ್ತಿಯ ಚಿತ್ರಗಳು ಚಿಕ್ಕಬೆನಕಲ್ ನ ಮೂರನೇ ಗವಿ ಮತ್ತು ಮಲ್ಲಾಪುರದ ೪ನೇ ಕಲ್ಲಾಸರೆ ಹಾಗು ಕುರುಗೋಡಿನ ೫ ಮತ್ತು ೭ನೇ ಕಲ್ಲಾಸರೆಗಳಲ್ಲಿವೆ.

ಇವುಗಳ ಕಾಲಿನ ಭಂಗಿಯಂತೂ ಭಿನ್ನವಾಗಿರುವುದು ವಿಶೇಷ. ಮೊದಲನೆಯದಕ್ಕೆ ಒಂದು ಕಾಲು ವಕ್ರ ನೇರವಾಗಿ ಮತ್ತೊಂದು ಡೊಂಕಾಗಿದ್ದು ಎರಡನೆಯದಕ್ಕೆ ೨ ಕಾಲುಗಳು ಡೊಂಕಾಗಿರದೆ ವಕ್ರ ನೇರವಾಗಿವೆ.

ಎರಡೂ ಕಾಲುಗಳನ್ನು ಅಗಲಿಸಿ ಸ್ವಲ್ಪ ವಕ್ರವಾಗಿ ನಿಂತ ಭಂಗಿಯ ಚಿತ್ರಗಳು ಇವೆ. ಇವಕ್ಕೆ ಒಂದೇ ಕೈ ಇರುತ್ತವೆ. (ಗೋಚರವಾಗುತ್ತದೆ). ಹಿರೇಬೆನಕಲ್ (೨ನೇ ಗವಿ) ಮತ್ತು ನಾರಾಯಣಪೇಟೆ (೧ನೇ ಗವಿ) ಗಳಲ್ಲಿ ಇವೆ. ಸು. ೪ ಮೀ.ಗಿಂತಲೂ ಎತ್ತರವಿರುವ ನಾರಾಯಣಪೇಟೆ ಮನುಷ್ಯ ಚಿತ್ರದಲ್ಲಿ ಸಣ್ಣ ತಲೆ, ತಲೆಯಲ್ಲಿ ಕೂದಲನ್ನು ಸೂಚಿಸುವ ಸಣ್ಣ ಸಮಾನಾಂತರ ಗೆರೆಗಳಿವೆ. ತಲೆ ಬಲಕ್ಕೆ ಸ್ವಲ್ಪವಾಗಿದೆ. ಎಡಗೈ ಇಲ್ಲ. ಮುಂಡದ ಉದ್ದಗಲಗಳು ಪ್ರಮಾಣಬದ್ಧವಾಗಿವೆ ಪುಷ್ಟವಾದ ತೊಡೆಗಳು ಯಥಾಪ್ರಕಾರ ಮುಖ, ದೇಹ ತೊಡೆಯ ಮೇಲೆ ರೇಖಾಚಿತ್ರಗಳಿವೆ.

ಮೈಮೇಲೆ ರೇಖೆಗಳನ್ನು ಹೊಂದಿರುವ ಪಾರ್ಶ್ವ ಭಂಗಿಯಲ್ಲಿ ನಿಂತಿರುವ ವ್ಯಕ್ತಿ ಚಿತ್ರಗಳು ಮಲ್ಲಾಪುರ (೧ನೇ ಗವಿ) ಹೊಸಬಂಡಿ ಹರ್ಲಾಪುರ (೧ನೇ ಗವಿ) ಹಂಪಿ (೧, ೫, ೭) ಮತ್ತು ಹಿರೇಬೆನಕಲ್ ಗಳಲ್ಲಿವೆ. ಇದಕ್ಕೆ ಒಂದೇ ಕಾಲು ಒಂದೇ ಕೈ ಇರುತ್ತದೆ. (ಪಾರ್ಶ್ವ ಭಂಗಿಯಲ್ಲಿ ಒಂದೇ ಕಾಣುತ್ತದೆ). ಕಾಲನ್ನು ಮುಂದಕ್ಕೆ ಡೊಂಕು ಮಾಡಿ ನಿಂತು ಕೈಗಳನ್ನು ಚಿತ್ರ ಛಾಯಾ ರೂಪದಲ್ಲಿದೆ. ಹಾಗಾಗಿ ಇದರ ಮೈಮೇಲೆ ರೇಖೆಗಳಲ್ಲಿ ಹಂಪಿಯ ೫ನೇ ಕಲ್ಲಾಸರೆಯಲ್ಲಿ ಕೈಗಳನ್ನು ಭುಜದ ಸಮಾನಾಂತರದಲ್ಲಿ ಮುಂದಕ್ಕೆ ಚಾಚಿದ ಚಿತ್ರವಿದೆ. ಹಿರೇಬೆನಕಲ್ ನ ೧೬ ಮತ್ತು ೧೭ನೇ ಗವಿಗಳಲ್ಲಿ ಈ ರೀತಿಯ ಚಿಕ್ಕ ಚಿಕ್ಕ ಆಕೃತಿಗಳಿವೆ. (೩೭ ಸೆಂ.ಮೀ. ಎತ್ತರ ೧೭ ಸೆಂ.ಮೀ. ಅಗಲ) ಇವುಗಳ ದೇಹದ ಮೇಲೆ ಸಮಾನಾಂತಾರದಲ್ಲಿ ಅಡ್ಡ ರೇಖೆಗಳಿವೆ.

ಇವಲ್ಲದೆ ಇತರ ಕೆಲವು ನಗ್ನ ಚಿತ್ರಗಳು ಇವೆ. ಹಿರೇಬೆನಕಲ್ಲಿನ ೫ನೇ ಗವಿಯಲ್ಲಿನ ದ್ವಿರೇಖೆಯ ನಗ್ನ ಪುರುಷನ ಚಿತ್ರವಿದೆ. ಕೈಗಳನ್ನು ಕೆಳಗೆ ಇಳಿಬಿಟ್ಟಿದ್ದಾನೆ. ಒಂದು ಕೈಯಲ್ಲಿ ಹಸ್ತ ಮತ್ತು ಬೆರಳುಗಳಿವೆ. ಶಿಶ್ನವನ್ನು ಸ್ಪಷ್ಟವಾಗಿ ತೋರಿಸಲಾಗಿದೆ. ಇಂದರಗಿಯಲ್ಲಿಯ ಚಿತ್ರ (೦.೯೧ ಮೀ. ಎತ್ತರ ೦.೪೪ ಮೀ.) ವಿಶಿಷ್ಟವಾದ ರಚನೆ. ಇದು ಕಾಲುಗಳನ್ನು ಅಗಲಿಸಿ ಕೈಗಳನ್ನು ಮೇಲಕ್ಕೆತ್ತಿ ನಿಂತ ಭಂಗಿಯ ರೇಖಾಚಿತ್ರವಾಗಿದ್ದು, ತಲೆ ಅರೆತ್ರಿಕೋನ ಆಕಾರದ್ದಲಿದೆ. ಮುಂಡ ಕೂಡ ಸಂಪೂರ್ಣ ತ್ರಿಕೋನ ರೀತಿಯದು. ಭುಜದಿಂದ ಸಮಾನಾಂತರದಲ್ಲಿ ಕೈಗಳನ್ನು ಬದಿಗೆ ಚಾಚಿ ಮೊಣಕೈಯಿಂದ ಮೇಲಕೆತ್ತಿದೆ. ಕೈತುದಿಯಲ್ಲಿ ಎರಡು ಬೆರಳುಗಳನ್ನು ತೋರಿಸಲಾಗಿದೆ. ತ್ರಿಕೋನ ರೀತಿಯ ದೇಹದ ಕೆಳವ್ಯಾಸದಲ್ಲಿ ಎರಡು ಬದಿಗೆ ಚಿಕ್ಕ ಕಾಲುಗಳಿವೆ. ಅವೆರಡರ ನಡುವೆ ವೃಷಣ ಮತ್ತು ಶಿಶ್ನವನ್ನು ತೋರಿಸಲಾಗಿದೆ.

ಹಂಪಿಯ ಆರು ಸ್ಥಳಗಳಲ್ಲಿ ಶೋಧವಾದ ಗವಿವರ್ಣ ಚಿತ್ರಗಳಲ್ಲಿ ಭರಮದೇವರ ಗುಂಡಿನ ಚಿತ್ರ ಅತ್ಯಂತ ವಿಸ್ಮಯಕಾರಿಯಾದದ್ದು. ಸ್ವಲ್ಪ ಹಿಂಜರಿತ ಅರ್ಧ ಗೋಲಾಕೃತಿಯಲ್ಲಿರುವ ಕಲ್ಲಿನ ಮೇಲೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಕುಣಿತದಲ್ಲಿ ತೊಡಗಿರುವ ದೊಡ್ಡ ದೊಡ್ಡ ಮನುಷ್ಯಾಕೃತಿಗಳಿವೆ. ವ್ಯಕ್ತಿಗಳು ಈ ಗೋಲಾಕೃತಿಯ ರಂಗಮಂಟಪದಲ್ಲಿದ್ದಂತೆ ಗೋಚರಿಸುತ್ತದೆ. ಮೊದಲನೆಯ ಎರಡು ಚಿತ್ರಗಳಲ್ಲಿ ಸ್ಪಷ್ಟವಾಗಿ ಉಬ್ಬಿದ ಸ್ತನಗಳು ಕಾಣಿಸುವುದರಿಂದ ಸ್ತ್ರೀ ಆಕೃತಿಗಳೆಂದು ತಿಳಿಯುತ್ತದೆ. ಮೂರನೆಯದು ಸಣ್ಣ ಆಕೃತಿ ಪುರುಷನದು. ಬಹುಶಃ ಹುಡುಗನಿರಬೇಕು. ನೆಟ್ಟಗೆ ಮುಂಚಾಚಿದ ಕೈಗಳು ಮತ್ತು ಬೆರಳುಗಳನ್ನು ಸ್ಪಷ್ಟವಾಗಿ ಬಿಡಿಸಲಾಗಿದೆ. ಇಂಥ ಮನುಷ್ಯರ ಚಿತ್ರಗಳು ಹಿರೇಬೆನಕಲ್ಲು, ಮಲ್ಲಾಪುರ, ತೆಕ್ಕಲಕೋಟೆಗಳಲ್ಲಿವೆ.

**ಸ್ತ್ರೀ ಚಿತ್ರಗಳು**

ಪುರುಷ ಚಿತ್ರಗಳಂತೆ ಮೈಮೇಲೆ ರೇಖೆಯುಳ್ಳ ಸ್ತ್ರೀ ಚಿತ್ರಗಳು ಪುರುಷ ಚಿತ್ರಗಳ ಜೊತೆಯಲ್ಲೇ ಕಂಡುಬರುತ್ತವೆ. ಹಂಪಿಯ ೫ನೇ ಗವಿಯಲ್ಲಿ ಎರಡು, ಮಲ್ಲಾಪುರದ ೩ನೇ ಗವಿಯಲ್ಲಿ ಎರಡು ಮತ್ತು ಹಿರೇಬೆನಕಲ್ಲಿನ ೫ನೇ ಕಲ್ಲಾಸರೆಯಲ್ಲಿ ಎರಡು ಚಿತ್ರಗಳಿವೆ. ಸಾಮಾನ್ಯವಾಗಿ ಪಾರ್ಶ್ವಾಭಂಗಿಯವು ಕಾಲುಗಳನ್ನು ಸ್ವಲ್ಪ ಮುಂದಕ್ಕೆ ಭಾಗಿಸಿ ವಕ್ರವಾಗಿ ನಿಂತಿರುತ್ತವೆ. ಕೈಗಳು ಭುಜದ ಸಮಾನಾಂತರದಲ್ಲಿ ನೇರವಾಗಿ ಇರುತ್ತವೆ. ಮಲ್ಲಾಪುರದ ಒಂದು ಸ್ತ್ರೀ ಚಿತ್ರ ಮಾತ್ರ ಕೈ ಮೇಲಕ್ಕೆತ್ತಿದೆ. ತಲೆ ಚಿಕ್ಕದಾಗಿದೆ. ಸ್ತನಗಳನ್ನು ಸ್ಪಷ್ಟವಾಗಿ ತೋರಿಸಲಾಗಿರುತ್ತದೆ. ಪುಷ್ಟಗಳು ಸ್ವಲ್ಪ ದೊಡ್ಡದಿರುತ್ತವೆ. ಮಲ್ಲಾಪುರದ ಒಂದು ಸ್ತ್ರೀ ಚಿತ್ರ (೧.೭೬ ಮೀ. ಎತ್ತರವಾಗಿದೆ) ನಾರಾಯಣಪೇಟೆ (ಒಂದನೇ ಕಲ್ಲಸರೆ) ಯಲ್ಲಿದ್ದು. ಎರಡು ಕೈಗಳನ್ನು ಚಾಚಿ ಕಾಲುಗಳನ್ನು ಅಗಲಿಸಿ ಕುಳಿತ ಛಾಯಾರೂಪದ ಈ ಚಿತ್ರದಲ್ಲಿ ತಲೆಯ ಮೇಲಿನ ಉದ್ದ ಕೂದಲು ಎರಡು ಕಡೆ ಸೆಟೆದು ನಿಂತಿವೆ. ಹೊಟ್ಟೆ ಸ್ವಲ್ಪ ಉಬ್ಬಿದೆ. ಸೊಂಟದ

ಕೆಳಭಾಗ ತ್ರಿಕೋನ ಕೃತಿಯಂತೆ ಕೆಳಚಾಚಿದೆ. ತಲೆಯು ಸೆಟೆದಿರುವುದು ಗರ್ಭಿಣಿಯಂತೆ ಉಬ್ಬು ಹೊಟ್ಟೆ, ಪ್ರಾಯಶಃ ಯೋನಿಯನ್ನು ಸೂಚಿಸುವ ಸೊಂಟದ ಕೆಳಗಿನ ತ್ರಿಕೋನಕಾರ ಈ ಚಿತ್ರವು ಸ್ತ್ರೀಯದೆಂಬುದನ್ನು ಸೂಚಿಸುತ್ತವೆ.

**ಇತರ ಮನುಷ್ಯ ಚಿತ್ರಗಳು**

ಸಮದೇಹದ ಮನುಷ್ಯ ಚಿತ್ರ ಚಿಕ್ಕರಾಂಪುರದ ಐದನೆಯ ಕಲ್ಲಾಸರೆಯಲ್ಲಿದೆ. ಈ ಕಲ್ಲಾಸರೆ ಸುಮಾರು ೧೦ ಮೀ. ಎತ್ತರದಲ್ಲಿ ಚಾವಣಿಯಂತೆ ಅಡ್ಡ ಚಾಚಿರುವ ಬಂಡೆಯ ಒಳ ಮೈಮೇಲೆ ಇದೆ. ಈ ಮನುಷ್ಯ ಚಿತ್ರ ಸಂಪೂರ್ಣ ಛಾಯಾರೂಪದ್ದು ಸು.೨ ಮೀ. ಎತ್ತರವಿರಬಹುದು. ದುಂಡುತಲೆ, ಪ್ರಮಾಣಬದ್ಧ ದೇಹ, ನಿಂತ ಭಂಗಿಯಲ್ಲಿಯೂ ಒಂದು ವೈಶಿಷ್ಟ್ಯವಿದೆ. ತೊಡೆಗಳು ನೇರವಾಗಿವೆ. ಕೈಗಳು ಮೇಲಕ್ಕೆತ್ತಿ ನೆಟ್ಟಗೆ ನಿಂತ ಭಂಗಿಯಲ್ಲಿವೆ.

**ಉಬ್ಬಿದ ಮೂತಿಯ ಮನುಷ್ಯ ಚಿತ್ರಗಳು**

ಒಂದು ಕೈಯನ್ನು ಭುಜದ ಸಮಾನಾಂತರದಲ್ಲಿ ತೋರು ರೀತಿಯಲ್ಲಿ ಹಿಡಿದು ನಿಂತಿರುವ ಕೆಲವು ವಿಶೇಷ ಮನುಷ್ಯ ಚಿತ್ರಗಳು ಆನೆಗುಂದಿ (೧ನೇ ಕಲ್ಲಾಸರೆ), ರಾಂಪುರ (೧ನೇ ಕಲ್ಲಾಸರೆ) ಮತ್ತು ಗೂಗಿಬಂಡಿಗಳಲ್ಲಿವೆ. ಇವುಗಳ ಮೂತಿ ಮಂಗನ ಮುಖದಂತೆ ಉಬ್ಬಿರುತ್ತದೆ. ಆನೆಗುಂದಿಯ ಚಿತ್ರ ರೇಖಾರೂಪದ್ದು, ಕೆಳಗೆ ಹಿಡಿದಿರುವ ಕೈ ಸಂಪೂರ್ಣ ಛಾಯಾರೂಪದಲ್ಲಿದೆ. ವಿಶಾಲವಾದ ಎದೆ, ಸಣ್ಣ ಕಟ್ಟೆ, ಹಸ್ತ, ಪಾದಗಳನ್ನು ಮುಖ ವಿಶಿಷ್ಟವಾಗಿದೆ. ಕತ್ತಿನ ಮೇಲೆ ಮುಖ ಭಾಗದಲ್ಲಿ ಚೂಪಾದ ಮೂತಿಯಿದೆ. ತಲೆ ವೃತ್ತಾಕಾರವಾಗಿರದೇ ಗರಗಸದ ಹಲ್ಲಿನಂತಿದೆ. ಕಣ್ಣು, ಕಿವಿ, ಮೂಗಿನ ಬದಿಯಲ್ಲಿ ಮನುಷ್ಯ ಮತ್ತು ಪ್ರಾಣಿಯ ಚಿತ್ರಗಳಿವೆ.

೦.೮೯ ಮೀ. ಎತ್ತರವಿರುವ ರಾಂಪುರದ ಮನುಷ್ಯ ಚಿತ್ರವು ಇದೇ ರೀತಿಯಲ್ಲಿದ್ದರೂ ಸ್ವಲ್ಪ ಭಿನ್ನವಾದ ಶೈಲಿಯಲ್ಲಿದೆ. ಇದು ಸಂಪೂರ್ಣ ಛಾಯಾರೂಪದ ಚಿತ್ರ. ಬಹಳ ಸುಂದರವಾಗಿ ಚಿತ್ರಿಸಲಾಗಿದೆ. ನಿಂತ ಭಂಗಿಯಲ್ಲಿದೆ. ಬಲಗೈ ಭುಜದ ಸಮಾನಾಂತರದಲ್ಲಿ ತೋರು ರೀತಿಯಲ್ಲಿವೆ. ಇನ್ನೊಂದು ಕೈಯಲ್ಲಿ ಮೊಣಕೈವರೆಗೆ ಕೆಳಕ್ಕಿಳಿದು ಅಲ್ಲಿಂದ ಮೇಲಕ್ಕೆ ಎತ್ತಲಾಗಿದೆ. ವಿಶಾಲವಾದ ಭೂಜ ಸಣ್ಣ ಕಟ್ಟೆ ಮತ್ತು ಅದಕ್ಕೆ ಪ್ರಮಾಣಬದ್ಧವಾದ ಪುಷ್ಠ ಮತ್ತು ತೊಡೆ ಕಾಲುಗಳಿವೆ. ಪಾದಗಳನ್ನು ತೋರಿಸಿಲ್ಲ. ಹಸ್ತದ ಐದು ಬೆರಳುಗಳನ್ನು ಅತ್ಯಂತ ಸ್ಪಷ್ಟವಾಗಿ ತೋರಿಸಲಾಗಿದೆ. ಮುಖ ಬಲಗಡೆ ವಾಲಿದ್ದು (ತೋರು ಕೈ ನಂತೆ) ಕಿರಿ ತಲೆ, ಕಣ್ಣಿನ ಮೇಲೆ ಉಬ್ಬು ಉಬ್ಬಿನ ಮೂತಿ ಸ್ಪಷ್ಟವಾಗಿದೆ. ಕಣ್ಣು ಕಿವಿಗಳನ್ನು ತೋರಿಸಲು ಕತ್ತು, ಕತ್ತಿನ ಕೆಳಗೆ ಗರಗಸದ ಹಲ್ಲಿನ ರೀತಿಯ ಆಭರಣ (ಸಿರ)ದ ಅಲಂಕರಣ ಇರುವುದು ಗಮನಾರ್ಹ. ಮುಖ, ಕತ್ತು, ಕೊರಳಸರ ಇಡೀ ದೇಹ ಮತ್ತು ಎಡಗೈಯಲ್ಲಿ ಮೊಣಕೈಯಿಂದ ಮುಂದಿನ ಕೈ ಹೀಗೆ ಐದು ಭಾಗಗಳು ಪ್ರತ್ಯೇಕವಿದೆ. ಈ ವ್ಯಕ್ತಿಯ ಬಲಭಾಗದಲ್ಲಿ ಇದೇ ರೀತಿಯ ಇನ್ನೊಂದು ಚಿಕ್ಕ ಪ್ರಮಾಣದ (೦.೫೨ ಮೀ.) ಚಿತ್ರ ಮತ್ತು ಎಡಭಾಗದಲ್ಲಿ ನವಿಲಿನ ಚಿತ್ರಗಳಿವೆ.

ಗೂಗಿ ಬಂಡಿಯಲ್ಲಿ ಇದೇ ರೀತಿಯ ಚಿತ್ರವಿದೆ. ಆದರೆ ಈಚೆಗೆ ಅದನ್ನು ಬೇರೆ ಆಕಾರದಲ್ಲಿ ಪುನಃ ಬರೆಯಲಾಗಿದೆ. ಮಲ್ಲಾಪುರದ ೪ನೇ ಕಲ್ಲಾಸರೆಯಲ್ಲಿ ಎರಡೂ ಕೈಗಳನ್ನು ಅಗಲಿಸಿ ನಿಂತ ವ್ಯಕ್ತಿಯ ಅಪೂರ್ಣ ಚಿತ್ರವಿದೆ. ಆದರೆ ಈ ಮೂತಿಯು ಚೂಪಾಗಿದೆ. ಕೋಡಿನ ಮುಖವಾಡ ಹಾಗೂ ಬಾಲ ಧರಿಸಿದ ಮನುಷ್ಯ ಚಿತ್ರಗಳು. ತಲೆಯಲ್ಲಿ ಕೋಡು ಮತ್ತು ಬಾಲವುಳ್ಳ ಕೆಲವು ಮನುಷ್ಯನ ಚಿತ್ರಗಳು. ಹಿರೇಬೆನಕಲ್ಲಿನ ೫ನೇ ಗವಿ ಮತ್ತು ಮಲ್ಲಾಪುರದ ೬ನೇ ಗವಿಯಲ್ಲಿ ನಾರಾಯಣಪೇಟೆಯ ೩ನೇ ಗವಿಯಲ್ಲಿ ಇವೆ. ಇವು ಸಂಪೂರ್ಣ ಛಾಯಾರೂಪದ ಚಿತ್ರಗಳು. ಪ್ರಾಣಿಗಳ ಸಮೂಹದ ಮಧ್ಯೆ ನಿಂತ ಭಂಗಿಯಲ್ಲಿವೆ. ಹಿರೇಬೆನಕಲ್ಲಿನ ಗವಿಯಲ್ಲಿ ಎರಡು ಚಿತ್ರಗಳಿವೆ. ಅದರಲ್ಲಿ ದೊಡ್ಡ ವ್ಯಕ್ತಿ ಕೈಗಳನ್ನು ಎರಡೂ ಬದಿಗೆ ಅಗಲಿಸಿ ನಿಂತಿದ್ದಾನೆ. ಕೈಯಲ್ಲಿ ಹಸ್ತ, ಬೆರಳುಗಳನ್ನು ತೋರಿಸಲಾಗಿದೆ. ಮುಖಕ್ಕೆ ಕೋಡುಳ್ಳ ಮುಖವಾಡವನ್ನು ಧರಿಸಿದಂತಿವೆ. ಕೋಡುಗಳು ಎರಡೂ ಕಡೆಗೆ ಎತ್ತರದಲ್ಲಿ ಬಾಗಿವೆ. ಸೊಂಟದಲ್ಲಿ ಬಾಲವಿದೆ. ಪಕ್ಕದಲ್ಲಿ ಇನ್ನೊಂದು ಸಣ್ಣ ಚಿತ್ರವಿದ್ದು ಅದರ ಕೋಡುಗಳು ದೊಡ್ಡದಾಗಿವೆ.

ಒಂದು ಕೈಯಲ್ಲಿ ದುಂಡಾದ ವಸ್ತುವನ್ನು ಹಿಡಿದಿದೆ. ಮಲ್ಲಾಪುರದ ಮನುಷ್ಯ ಅನೇಕ ಪ್ರಾಣಿಗಳ ಗುಂಪಿನ ಮಧ್ಯೆ ಇದ್ದು ಎರಡು ಕಾಲುಗಳನ್ನು ಕೈಗಳನ್ನು ಅಗಲಿಸಿ ನಿಂತಿದ್ದಾನೆ. ಮುಖವಾಡ ಧರಿಸಿ ನಿಂತಿದ್ದು ತಲೆಯಲ್ಲಿ ಒಂದರ ಮೇಲೊಂದರಂತೆ ಎರಡು

ಕೋಡುಗಳಿವೆ. ಎರಡು ಕಾಲುಗಳ ಮಧ್ಯೆ ಬಾಲ ಇಳಿ ಬಿದ್ದಿದೆ. ಇಲ್ಲಿಯೇ ೯ನೇ ಗವಿಯಲ್ಲಿ ಮುಖವಾಡ ಧರಿಸಿ ನಿಂತ ಮನುಷ್ಯನ ಚಿತ್ರವಿದೆ. ಆದರೆ ಬಾಲ ವಿಲ್ಲ. ನಾರಾಯಣಪೇಟೆಯ ಚಿತ್ರವು ಮನುಷ್ಯ ಚಿತ್ರವೆನ್ನುವುದರ ಬಗ್ಗೆ ಗೊಂದಲ ಉಂಟುಮಾಡುತ್ತದೆ. ಕಾಲು ಕೈಗಳನ್ನು ಅಗಲಿಸಿ ನಿಂತ ಮುಖಕ್ಕೆ ಕೋಡುಳ್ಳ ಮುಖ ವಾಡವನ್ನು, ಮೈಮೇಲೆ ಉಡುಪನ್ನು ಧರಿಸಿದಂತಿದೆ. ತಲೆಯ ಸುತ್ತಲೂ ಕಿರಣದಂತೆ ರೇಖೆ ಅಥವಾ ಕೂದಲಿರುವ ಮನುಷ್ಯ ಚಿತ್ರಗಳು, ತಲೆಯ ಸುತ್ತಲೂ ಗೆರೆಗಳಿರುವ ಎರಡು ರೀತಿಯ ಮನುಷ್ಯ ಚಿತ್ರಗಳು ಕಂಡುಬರುತ್ತವೆ. ಅವುಗಳಲ್ಲಿ ಎಮ್ಮೆಗುಡ್ಡ (೧ನೇ ಕಲ್ಲಾಸರೆ) ಮತ್ತು ಆನೆಗುಂದಿ (೧ನೇ ಕಲ್ಲಾಸರೆ) ಯ ಚಿತ್ರಗಳು ರೀತಿಯವು. ಇಲ್ಲಿ ವ್ಯಕ್ತಿಯ ಕೈಗಳನ್ನು ದೇಹದಿಂದ ಸ್ವಲ್ಪ ಅಂತರದಲ್ಲಿ ಅಗಲಿಸಿ ಕೆಳಗೆ ಹಿಡಿದಿದ್ದಾನೆ. ವಿಶಾಲ ಎದೆ, ಸಣ್ಣ ಕಟಿ, ಅಗಲವಾದ ಪೃಷ್ಠಗಳಿವೆ. ಹಸ್ತ ಪಾದಗಳಿರುವುದಿಲ್ಲ. ವೃತ್ತಾಕಾರದ ತಲೆಯ ಸುತ್ತಲೂ ಸಮಾನಾಂತರದಲ್ಲಿ ರೇಖೆಗಳಿರುತ್ತವೆ. ಎಮ್ಮೆಗುಡ್ಡದಲ್ಲಿ ವ್ಯಕ್ತಿಯು ಬಂದು ಜಿಂಕೆಯ ಮೇಲೆ ನಿಂತಿದ್ದಾನೆ. ವ್ಯಕ್ತಿಚಿತ್ರ ಛಾಯಾರೂಪದ್ದಾದರೆ, ಜಿಂಕೆಯದು ರೇಖಾಚಿತ್ರ. ಈ ಮನುಷ್ಯರ ತಲೆಯ ಸುತ್ತಲಿನ ರೇಖೆಗಳು ಸಮಾನಾಂತರದಲ್ಲಿರುವುದು. ದೇಹವು ಸಮ ಪ್ರಮಾಣದಲ್ಲಿ ಚಿತ್ರಿಸಲ್ಪಟ್ಟಿರುವುದು ಮತ್ತು ಚಿಗರೆಯ ಮೇಲೆ ನಿಂತ ಸಂದರ್ಭವನ್ನು ಗಮನಿಸಿ ಇದು ವಿಶೇಷ ವ್ಯಕ್ತಿಯ ಚಿತ್ರವೆನ್ನಬಹುದು. ಹಾಗಾಗಿ ತಲೆ ಸುತ್ತಲಿನ ರೇಖೆಗಳು ಕೂದಲುಗಳಲ್ಲವೆಂದು ಹೇಳಬಹುದು. ಎರಡನೇ ರೀತಿಯ ಮನುಷ್ಯ ಚಿತ್ರಗಳಲ್ಲಿ ತಲೆಯ ಸುತ್ತಲಿನ ರೇಖೆಗಳನ್ನು ಖಂಡಿತವಾಗಿ ಕೂದಲುಗಳೆನ್ನಬಹುದು. ಆನೆಗುಂದಿಯ ೬ನೇ ನೆಲೆಯ ೩ನೇ ನೆಲೆಯ ಗುಂಡಿನಲ್ಲಿ ಒಂದು ಮನುಷ್ಯ ಚಿತ್ರವಿದೆ. ಅದರ ತಲೆ ಮತ್ತು ಕತ್ತು ಪೂರ್ಣ ಛಾಯಾರೂಪದ್ದು. ತಲೆಯ ಸುತ್ತಲು ದೊಡ್ಡದಾಗಿ ಹರಡಿದ ರೇಖೆಗಳಿವೆ. ಇವು ಕೂದಲುಗಳಂತೆ ಸ್ಪಷ್ಟವಾಗಿ ತೋರುತ್ತವೆ. ಅದೇ ರೀತಿ ಅಗೋಲಿಯ ೨ನೇ ಕಲ್ಲಾಸರೆಯಲ್ಲಿ ಒಬ್ಬ ಬೇಟೆಗಾರ, ಇನ್ನೊಬ್ಬ ವ್ಯಕ್ತಿಯ ತಲೆಯಲ್ಲಿ ರೇಖೆಗಳಿವೆ. ಅವು ಕೂಡ ಕೂದಲುಗಳೆನ್ನ ಬಹುದು.

ಕೆಲವು ಕಡೆ ಮನುಷ್ಯನನ್ನು ವಿಶಿಷ್ಟವಾದ ರೀತಿಯಲ್ಲಿ ಚಿತ್ರಿಸಲಾಗಿದೆ. ಇವುಗಳ ಮುಖ, ದೇಹ, ಕೈ, ಕಾಲು ವಿಚಿತ್ರವಾದ ಸಂಕೇತ ರೂಪದಲ್ಲಿರುತ್ತವೆ. ಈ ಚಿತ್ರಗಳು ಇಂತಿವೆ.

ನಾರಾಯಣಪೇಟೆಯ ೩ನೇ ಕಲ್ಲಾಸರೆಯಲ್ಲಿ ಎರಡೂ ಚಿತ್ರಗಳಿವೆ. ಒಂದು ವ್ಯಕ್ತಿಯ ಹಿಂಬದಿಯನ್ನು ಒಂದು ಕೈಯನ್ನೆತ್ತಿ ಯಾರನ್ನೋ ಕರೆಯುತ್ತಿರುವಂತಿದೆ. ಹಸ್ತದ ಬೆರಳು ಮತ್ತೊಂದು ಕೈ ಕಾಲು ಇಲ್ಲಿ ಕೇವಲ ಸಂಕೇತಿಕ. ಇನ್ನೊಂದು ಚಿತ್ರ (೦.೩೦ ಮೀ. ೦.೩೭ಮೀ.) ರಾಕೆಟ್ ಮಾದರಿಯ ದೇಹ, ಕೈ ಬೆರಳು, ಕಾಲು ಸಾಂಕೇತಿಕವಾಗಿವೆ. ಅದೇ ರೀತಿ ಗಡ್ಡ (೧ನೇ ಕಲ್ಲಾಸರೆ) ಯಲ್ಲಿ ಮನುಷ್ಯನ ಒಂದು ರೇಖಾಚಿತ್ರವಿದೆ. ಕೈಗಳನ್ನೆತ್ತಿ ನಿಂತಿರುವ ಮನುಷ್ಯ ರಚನೆ ತುಂಬಾ ಸರಳವಾಗಿದೆ. ಸಂಗಾಪುರ ೫ನೇ ಕಲ್ಲಸರೆಯಲ್ಲಿ ಒಂದು ವ್ಯಕ್ತಿ ಚಿತ್ರ ಈಗಿನ ಅಂಗಿ ಮತ್ತು ಧೋತಿಯನ್ನು ಧರಿಸಿದ ರೀತಿಯಲ್ಲಿ ಚಿತ್ರಿಸಿರುವುದು ವಿಶೇಷ. ಇದರ ಹಾಗೆ ನಗ್ನವ್ಯಕ್ತಿಯ ಕೂಡ ಭಿನ್ನವಾಗಿದೆ. ತಲೆ ಮತ್ತು ದೇಹ ತ್ರಿಕೋನಾಕಾರದಲ್ಲಿದೆ. ಕೈ ಮತ್ತು ಕಾಲು ಕೇವಲ ಸಣ್ಣ ಕಟಿಯಂತಹ ರೇಖೆಗಳು ಮಲ್ಲಾಪುರ ಒಂದನೇ ಕಲ್ಲಸರೆಯಲ್ಲಿ ಮತ್ತೊಂದು ರೀತಿಯ ಚಿತ್ರವಿದೆ. ಇದು ರೇಖೆ ಕೃತಿಯಾದರೂ ಅದರ ಕೈ, ಕೋಡು, ಕಾಲುಗಳನ್ನು ದಪ್ಪವಾಗಿ ತೋರಿಸಲಾಗಿದೆ. ರಾಂಪುರದಲ್ಲಿ ತಲೆಯಲ್ಲಿ ಕೋಡಿದ್ದು, ಮೈಮೇಲೆ ಏನೇನೋ ಹೊದ್ದುಕೊಂಡಿರುವ ಎರಡು ಕೈಗಳನ್ನು ಮೇಲೆತ್ತಿ ಬಾಲವನ್ನು ಹೊಂದಿರುವ ವ್ಯಕ್ತಿಚಿತ್ರಗಳಿವೆ. ಈ ಚಿತ್ರಗಳು ರಚನೆಯಲ್ಲಿ ಸರಳವಾಗಿದ್ದರೂ ಮನುಷ್ಯ ಕಲ್ಪನೆಯನ್ನು ಸೂಕ್ತವಾಗಿ ಅಭಿವ್ಯಕ್ತಿಗೊಳಿಸುತ್ತವೆನ್ನಬಹುದು.

**ಸಾಮಾನ್ಯ ಮನುಷ್ಯ ಚಿತ್ರಗಳು**

ಮೇಲೆ ಗಮನಿಸಿದಂತೆ ಕೆಲವು ವಿಶಿಷ್ಟ ರೀತಿಯ ಮನುಷ್ಯ ಚಿತ್ರಗಳು ಒಂದು ರೀತಿಯದಾದರೆ, ಬಹು ಸಂಖ್ಯೆಯಲ್ಲಿ ಕಾಣಬಹುದಾದ ಮನುಷ್ಯನ ಚಿತ್ರಗಳು ಇನ್ನೊಂದು ರೀತಿಯವು, ಈಟಿ, ಬಿಲ್ಲು, ಬಾಣ, ಖಡ್ಗ, ಕೋಲು, ಕೊಡಲಿ ಮತ್ತಿತರ ಶಸ್ತ್ರಾಸ್ತ್ರಗಳನ್ನು ಹಿಡಿದುಕೊಂಡಿರುವ ಯಾವುದೋ ಕ್ರಿಯೆಯಲ್ಲಿ ತೊಡಗಿರುವ, ಸಾಲಾಗಿ ಕುಣಿಯುತ್ತಿರುವ, ಅಶ್ವ ಸವಾರಿ ಮಾಡುತ್ತಿರುವ ಸಣ್ಣ ಅಳತೆಯ ಮನುಷ್ಯ ಚಿತ್ರಗಳು ಸಾಮಾನ್ಯವಾಗಿವೆ. ಇಂಥದೇ ಚಿತ್ರಗಳ ರಚನೆ ಸರಳವಾಗಿರುತ್ತದೆ. ಇದರಲ್ಲಿ ನಾಲ್ಕು ರೀತಿಯನ್ನು ಗುರುತಿಸಬಹುದು. ಕೋನಗಳನ್ನು ಪರಸ್ಪರ ಎದುರಾಗಿ ಒಂದರ ಮೇಲೆ ಒಂದು ಇರಸಿದಂತಹ ಮುಂಡದ (ದೇಹದ) ಮನುಷ್ಯ

ಚಿತ್ರಗಳು ಒಂದು ರೀತಿಯ ಛಾಯಾರೂಪವಾಗಿರಬಹುದು. (ಗಡ್ಡಿ, ಆನೆಗುಂದಿ, ವುಲ್ಲಾಪುರ, ಹಿರೇಬೆನಕಲ್, ವೆಂಕಟಾಪುರ, ಮತ್ತು ಚಿಕ್ಕರಾಂಪುರ) ಇಲ್ಲವೇ ಬಾಹ್ಯ ರೇಖಾತಲವಾಗಿರಬಹುದು. (ಆಗೋಲಿ, ಹಂಪಿ, ಮಲ್ಲಾಪುರ) ಎರಡನೇ ರೀತಿಯ ಚಿತ್ರಗಳು ವಿಶಾಲವಾದ ದ್ವಿರೇಖೆಯ ಕರತಿಗಳು. ಉದ್ದವಾದ ಮುಂಡದಲ್ಲಿ ಸಣ್ಣ ಕಟ್ಟಿ, ದೊಡ್ಡ ಪೃಷ್ಠ ಮತ್ತು ದಪ್ಪ ಕಾಲುಗಳಿರುತ್ತವೆ. ಈ ರೀತಿಯವು ಹೆಚ್ಚು ನೈಜ ಆಕಾರದಲ್ಲಿರುತ್ತವೆ. ಎನ್ನಬಹುದು. ವಿಶೇಷವೆಂದರೆ ಬೃಹತ್ ಶಿಲಾಯುಗದ ಕಾಲದಲ್ಲಿ ನಿಲ್ಲಿಸುತ್ತಿದ್ದ ಬೃಹತ್ ಮಾನವ ಬೊಂಬೆಗಳನ್ನು ಹೋಲುವುವು. ಇವು ಛಾಯಾರೂಪದಲ್ಲಿ ಇರುತ್ತವೆ. ಆನೆಗುಂದಿ ೨, ಮಲ್ಲಾಪುರ, ಹಿರೇಬೆನಕಲ್, ೧, ೭, ೧೧, ೧೨ ಆನೆಗುಂದಿಯಲ್ಲಿಯ ಈ ತರಹದ ಚಿತ್ರಗಳಲ್ಲಿ ತಲೆಯ ಕೂದಲನ್ನು ಹಿಂದೆ ಜುಟ್ಟು ಕಟ್ಟಿಕೊಂಡಂತಿವೆ. ಮೂರನೆಯ ರೀತಿಯ ಚಿತ್ರಗಳೆಂದರೆ ಮುಂಡ ಲಂಬವಾಗಿ ಆಯತಾಕಾರದಲ್ಲಿರುವುದು. ಆದರೆ ಮೇಲೆ ಎರಡು ಮೂಲೆಗೆ ಕೈಗಳನ್ನು ಕೆಳ ಮೂಲೆಗಳಿಂದ ಕಾಲುಗಳನ್ನು ಬಿಡಿಸಲಾಗಿದೆ. ಕೈಕಾಲುಗಳ ಕೇವಲ ರೇಖೆ ಮತ್ತು ತಲೆ ದುಂಡಾಗಿರುತ್ತದೆ. ಇವು ಛಾಯಾ ೬, ಆನೆಗುಂದಿ ೮, ಮಲ್ಲಾಪುರ ೭, ಇಲ್ಲಿಯೇ ರೇಖಾ (ಆನೆಗುಂದಿ) ಅಗೋಲಿ ೮, ರೂಪದಲ್ಲಿರುತ್ತದೆ. ನಲ್ಕನೆಯ ರೀತಿಯ ಚಿತ್ರ ನಾಲ್ಕನೇ ಕಲ್ಲಾಸರೆಯಲ್ಲಿದೆ. ಪಶುಗಳನ್ನು ಕಾಯುತ್ತಿರುವ ಮನುಷ್ಯನ ಚಿತ್ರವಿದು.

**೪.೨.೪. ಕಲಾತ್ಮಕ ನೆಲೆಗಳ ಚಿತ್ರರಚನಾ ಸಾಮಗ್ರಿಗಳು ಮತ್ತು ವಿಧಾನ** ಆದಿಮಾನವ ಚಿತ್ರರಚನೆಗಾಗಿ ಹಲವು ಬಣ್ಣ ಹಾಗು ಕೆಲವಸ್ತುಗಳನ್ನು ಬಳಸಿಕೊಂಡು ವಿಭಿನ್ನ ವಿಧಾನಗಳನ್ನು ಅಳವಡಿಸಿಕೊಂಡಿರುವುದನ್ನು ಗುರುತಿಸಬಹುದು. ಇಲ್ಲಿನ ಗವಿ ಮತ್ತು ಕಲ್ಲಾಸರೆಗಳ ಚಿತ್ರಗಳನ್ನು ಬಣ್ಣಗಳಿಂದ ರಚಿಸಲಾಗಿದೆ. ವಿಶ್ವದಾದ್ಯಂತ ಪ್ರಧಾನವಾಗಿ ಕೆಮ್ಮಣ್ಣು ವರ್ಣ (Red ochre) ವನ್ನು ಬಳಸಲಾಗಿದೆ. ಫ್ರಾನ್ಸ್ ಮತ್ತು ಸ್ಪೇನಿನ ಮೂರ್ ಸಾಲಾಸ್, ಅಲ್ ಮೀರಾ ನ್ಸೌಕ್ಸ್, ಲಾಸ್ಕಾಕ್ಸ್, ಇಟಲಿಯ ಲಾಪಿಲೇಟಾ, ಎಲೆಕ್ಯಾಸ್ಟಿಲೋ ಲಾ ರೋಶೆ ಬೋರ್ತಿಯಾಕ್ಸ್, ಬ್ಲಾಂಚಾರ್ಡ್ ಮುಂತಾದ ಗವಿಗಳ ಚಿತ್ರಗಳನ್ನು ಕೆಂಪು, ಕಪ್ಪು, ಹಳದಿ, ಕಂದು ಮುಂತಾದ ವರ್ಣಗಳಿಂದ ಚಿತ್ರಿಸಲಾಗಿದೆ. ಭಾರತದ ಗವಿ, ಕಲ್ಲಾಸರೆಗಳಲ್ಲಿ ಬೇರೆ ಬೇರೆ ವರ್ಣಗಳ ಬಳಕೆಗಳನ್ನು ಕಾಣಬಹುದು. ಗಿಳಿಕೆಂಪು (ಹೊಸಂಗಾಬಾದ್, ಭೂಪಾಲ್, ರೈಸಿನ್), ಕೆಂಪು (ಸಾಗರ್, ಫನ್ನಾ, ಮಿರ್ಜಾಪುರ, ಆಗ್ರಾ), ಕಡುಗೆಂಪು (ಸಿಂಗನ್ ಪುರ), ಭಿಂಬೇಟ್ಕಾ, IIA.೧. IIA,೨, ಕಾನ್ನಮದಕಲ್ ಬುಗ್ಗ (ಅ.ಪ್ರ.ಪಿಕ್ಲಿಹಾಳ, ಮಸ್ಕಿ), ಕಂದು (ಭೂಪಾಲ-೧೭), ಕರ್ನೂಲ್ ನ ಬಿಲ್ಲಾಸುರಂಗಾಂ, ಆಗ್ರಾ), ಹಳದಿ (ಫನ್ನಾ-ಬೃಹಸ್ಪತೀಕುಂಡ, ಭೂಪಾಲ-೧೭), ಕಿತ್ತಳೆ (ಸಿಂಗನ್ಪುರ, ಭೂಪಾಲ-೨ ರೈಸಿನ್, ಫತಾನಿ ಕಿ ಪಹಾರಿ, ಭಿಂಬೇಟ್ಕಾ IIA, ೫, ಮಿರ್ಜಾಪುರ), ತಿಳಿಗೆಂಪಿನ ಕಿತ್ತಳೆ (ಕಾನ್ನಮದಗಲ್), ಬುಗ್ಗ (ಆ.ಪ್ರ.) ನೇರಳೆ (ರಾಯಘರ್, ಪಾಚಮಾರಿ, ಮಿರ್ಜಾಪುರ), ಹಸಿರು (ಭೂಪಾಲ್ ೨ ಸಾಗರ್, ಫನ್ನಾ, ಭಿಬೇಂಟ್ಕಾ), ಬಣ್ಣಗಳು ಬಳಕೆಯಾಗಿವೆ. ಬಹುಮಟ್ಟಿಗೆ ಎಲ್ಲೆಡೆ ಬಿಳಿ ಬಣ್ಣದ ಚಿತ್ರಗಳನ್ನು ಕಾಣಬಹುದು. ವಿವಿಧ ಕಾಲಘಟ್ಟಗಳಲ್ಲಿ ಬೇರೆ ಬೇರೆ ವರ್ಣಗಳು ಬಳಕೆಯಾಗಿರುವುದು ಕಂಡು ಬರುತ್ತದೆ. ಸೂಕ್ಷ್ಮ ಶಿಲಾಯುಗದಲ್ಲಿ ಕೆಂಪು ಅಥವಾ ಕಂದು, ಕಪ್ಪು ಬಣ್ಣಗಳು, ನವ ಶಿಲಾಯುಗ ಶಿಲಾ ತಾಮ್ರಯುಗದಲ್ಲಿ ಕೆಂಪು ಅಥವಾ ಕಂದು, ಕೆಂಪು, ಬಿಳುಪು, ತಿಳಿಹಳದಿ, ಹಳದಿಮಿಶ್ರತ ಬಿಳುಪು ಬಣ್ಣದ ಚಿತ್ರಗಳು, ಇತಿಹಾಸ ಆರಂಭಕಾಲದಲ್ಲಿ ಕೆಂಪು ಬಿಳುಪು ಅಪರೂಪಕ್ಕೆ ಹಸಿರು ಅಥವಾ ಹಳದಿ ವರ್ಣಗಳು, ಮಧ್ಯಕಾಲೀನ ಯುಗದಲ್ಲಿ ಬುಡಕಟ್ಟು ಚಿತ್ರಗಳು ಕೆಂಪು, ಬಿಳುಪು, ಕಿತ್ತಳೆ ನಂತರದಲ್ಲಿ ಕೆಂಪು, ಕಂದು, ಬಳಪದ ಬಣ್ಣಗಳಲ್ಲಿ ರಚಿತವಾಗಿವೆ.

ಕರ್ನಾಟಕದಲ್ಲಿ ಬಾದಾಮಿ ಹತ್ತಿರದ ಹಿರೇಗುಡ್ಡ ಮತ್ತು ಅರೆಗುಡ್ಡದ ಪ್ರಾಯಶಃ ಸೂಕ್ಷ್ಮ ಶಿಲಾಯುಗದ ಚಿತ್ರಗಳಿಮದ ಹಿಡಿದು ನವಶಿಲಾಯುಗ-ತಾಮ್ರ ಶಿಲಾಯುಗದ ಮಸ್ಕಿ, ಪಿಕ್ಲಿಹಾಳದ ಚಿತ್ರಗಳು ಕಬ್ಬಿಣಯುಗ ಬೃಹತ್ ಶಿಲಾಯುಗದ ಹಿರೇಬೆನಕಲ್ ನ ಚಿತ್ರಗಳು ಹಾಗೂ ಇತಿಹಾಸ ಆರಂಭಕಾಲ ಮತ್ತು ಇತಿಹಾಸ ಕಾಲದಲ್ಲಿ ಪ್ರಧಾನವಾಗಿ ಕೆಮ್ಮಣ್ಣಿನ ಬಣ್ಣವನ್ನು ಬಳಸಲಾಗಿದೆ. ಬಣ್ಣದ ಛಾಯೆಯ ಕಾಲಮಾನದ ವೈಪರೀತ್ಯದಿಂದಾಗಿ ಹಾಗೂ ಇತರೆ ಕಾರಣಗಳಿಂದಾಗಿ ಒಂದೇ ಸಮನಾಗಿರುವುದಿಲ್ಲ. ಅಪರೂಪವಾಗಿ ಕಾಡಿಗೆ ಕಪ್ಪು ಹಾಗೂ ಮಿಶ್ರಿತಹಳದಿ ಮುಸುಕು ಬಿಳಿಯ ದ್ವಿವರ್ಣಗಳನ್ನು ಬಳಸಲಾಗಿದೆ. ಬಾದಾಮಿಯ ೩ನೇ ಗವಿಯ ಚಿತ್ರಗಳು ದ್ವಿವರ್ಣದಲ್ಲಿವೆ. ಮಧ್ಯಯುಗೀನ ಕಾಲದ ಚಿತ್ರಗಳು ಸುಣ್ಣದಂತಹ ಬಿಳಿಯ ವರ್ಣದಲ್ಲಿವೆ. ಬ್ರಹ್ಮಗಿರಿ ಮತ್ತು ಚಿತ್ರದುರ್ಗದ ಹಲವಾರು ಚಿತ್ರಗಳೂ ಬಿಳಿಯ ಬಣ್ಣದಲ್ಲಿವೆ.

ಹಂಪಿ ಪ್ರದೇಶದಲ್ಲಿ ಮುಖ್ಯವಾಗಿ ಕೆಮ್ಮಣ್ಣು ಬಣ್ಣದ ಚಿತ್ರಗಳು ಸಾಮಾನ್ಯವಾಗಿವೆ. ಜೊತೆಗೆ ದಟ್ಟಕೆಂಪು, ನೇರಳೆ ಕೆಂಪು ಮತ್ತು ಕಿತ್ತಳೆಗೆಂಪಿನ ಚಿತ್ರಗಳೂ ಇವೆ. ವಿರಳವಾಗಿ ಬಿಳಿಬಣ್ಣಗಳನ್ನು ಅಲ್ಲಲ್ಲಿ ಬಳಸಲಾಗಿದೆ.

**ಕೆಂಪು ಬಣ್ಣ**

ಕೆಂಪುವರ್ಣ ಸಾಮಾನ್ಯವಾಗಿದ್ದು, ಅದರಲ್ಲಿ ನೇರಳೆಗೆಂಪಿನ ಬಣ್ಣವನ್ನು ಹಿರೇಬೆ ಕಲ್ಲಿನ ೧೭ನೇ ಗವಿ ಚಿಕ್ಕಬೆನಕಲ್ಲಿನ ಮೂರನೇ ಕಲ್ಲಾಸರೆ, ಮಲ್ಲಾಪುರದ ೬ನೇ ಕಲ್ಲಾಸರೆಗಳ (ಮಂಡಲ ಚಿತ್ರ ಮಾತ್ರ) ಚಿತ್ರ ರಚನೆಯಲ್ಲಿ ಬಳಸಲಾಗಿದೆ. ಕುಂಕುಮ ದಂತಹ ದಟ್ಟಕೆಂಪು ವರ್ಣವನ್ನು ಚಿಕ್ಕರಾಂಪುರದ ೫ನೇ ಕಲ್ಲಾಸರೆ ನಾಗೇನಹಳ್ಳಿ ಮತ್ತು  ತಿರುಮಲಾಪುರ ಕಲ್ಲಾಸರೆಗಳಲ್ಲಿ ಕಿತ್ತಳೆ ಕೆಂಪು ವರ್ಣಗಳನ್ನು ಸಂಗಾಪುರದ ೮ನೇ ಕಲ್ಲಾಸಕಿ ಬಿಳೇಬಾವಿಯ ೨ನೇ ಕಲ್ಲಾಸರೆ ಮತ್ತು  ಆನೆಗುಂದಿಯ ೬ನೇ ಗವಿ (ಆನೆ ಚಿತ್ರ)ಗಳಲ್ಲಿ ಚಿತ್ರಕ್ಕಾಗಿ ಬಳಸಲಾಗಿದೆ.

**ಬಿಳಿ ಬಣ್ಣ**

ಸುಣ್ಣದಂತಹ ಬಿಳಿ ಬಣ್ಣವನ್ನು ಚಿತ್ರಗಳಿಗೆ ಬಳಸಲಾಗಿದೆ. ಆದರೆ ಇದು ಕೆಂಪು ಬಣ್ಣದಷ್ಟು ವ್ಯಾಪಕವಾಗಿ ಬಳಕೆಯಗಿಲ್ಲ. ಇತಿಹಾಸ ಕಾಲದಲ್ಲಿ ಇದರ ಬಳಕೆಯಾಗಿದೆ. ಹಂಪಸದುರ್ಗ (೧) ಅಗೋಲಿ (೧) ತೆಂಬಾ (೧,೨) ಕೊಪ್ಪಳ (೮) ಬಂಡಿಹರ್ಲಾಪುರ (೧,ಸಮಕಾಲೀನ)ಗಳಲ್ಲಿ ಬಿಳಿ ಬಣ್ಣದ ಚಿತ್ರಗಳಿವೆ. ತಿರುಮಲಾಪುರ (೧) ಎಮಿಗುಡ್ಡ (೨), ಅನೇಗುಂದಿ (೪,೫) ಮತ್ತು ಚಿಕ್ಕರಾಂಪುರ (೩) ಗಳಲ್ಲಿ ಬಿಳಿ ಮತ್ತು ಕೆಂಪು ಬಣ್ಣದ ಚಿತ್ರಗಳು ಇವೆ.

**ದ್ವಿ ವರ್ಣ**

ತೀರ ವಿರಳವಾಗಿ ದ್ವಿ ವರ್ಣದ ಚಿತ್ರಗಳು ಈ ಪ್ರದೇಶದಲ್ಲಿ ಕಂಡುಬರುತ್ತವೆ. ಕೆಂಪು ಬಿಳಿ ಮಿಶ್ರಿತ ಮನುಷ್ಯ ಚಿತ್ರಗಳು ಆನೆಗುಂದಿಯ ೪ನೇ ಮತ್ತು ೮ನೇ ಕಲ್ಲಾಸರೆ ಮತ್ತು ಕೊಪ್ಪಳದ ೯ನೇ ಕಲ್ಲಾಸರೆ (ಸ್ತ್ರೀಚಿತ್ರ?)ಗಳಲ್ಲಿ ಇವೆ. ಇದೇ ರೀತಿ ಹಳದಿ ಮಿಶ್ರಿತ ತಿಳಿ ಬಣ್ಣದ ಗಂಡು ಹೆಣ್ಣಿನ ಚಿತ್ರ ಕೊಪ್ಪಳದ ೫ನೇ ಕಲ್ಲಾಸರೆಯಲ್ಲಿದೆ.

**ಬೂದಿ ಬಣ್ಣ**

ಮಲ್ಲಾಪುರದ ೧೩ನೇ ಕಲ್ಲಾಸರೆಯಲ್ಲಿ ಬೂದಿಬಣ್ಣದಲ್ಲಿ ಅದ್ದಿ ಮೂಡಿಸಿದ ಹಸ್ತ ಮುದ್ರೆಗಳಿವೆ.

ಬಣ್ಣದ ತಯಾರಿಕೆ. ಪ್ರಾಚೀನ ಜನರು ಬಣ್ಣಗಳನ್ನು ನೈಸರ್ಗಿಕವಾಗಿ ದೊರೆಯುವ ವಸ್ತ್ರಗಳಿಂದ, ಖನಿಜ ಶಿಲೆಗಳಿಂದ ತಯಾರಿಸಕೊಳ್ಳುತ್ತಿದ್ದರು. ನೇರಳೆ ಬಣ್ಣಕ್ಕಾಗಿ ಮ್ಯಾಂಗನೀಸ್ ಆಕ್ಸೈಡನ್ನು, ಕಪ್ಪು ಬಣ್ಣಕ್ಕೆ ಪ್ರಾಣಿಗಳ ಎಲುಬಿನ, ಮರದ ಕಾಂಡದ ಇದ್ದಿಲುಗಳನ್ನು ಹಾಗೂ ಕಲ್ಲಿದ್ದಲುಗಳನ್ನು ಕಂದು, ಕೆಂಪು, ಹಳದಿ, ಕಿತ್ತಳೆ ಬಣ್ಣಗಳಿಗೆ ಕಬ್ಬಿಣದ ಆಕ್ಸೈಡನ್ನು ಬಳಸುತ್ತಿದ್ದರೆಂದು ಹೇಳಲಾಗಿದೆ.

ಈ ಖನಿಜಗಳಿಗೆ ಪ್ರಾಣಿಗಳ ರಕ್ತ, ಕೊಬ್ಬು ಮತ್ತು  ಮೂತ್ರಗಳನ್ನು ಕೆಲವು ಸಸ್ಯರಸಗಳನ್ನು ಕಲಸಿ ಬಣ್ಣಗಳನ್ನು ಸಿದ್ಧಪಡಿಸಿಕೊಂಡಿದ್ದಾರೆ. ಕೊಪ್ಪಳ ಹಂಪಿ ಪ್ರದೇಶದ ಗವಿ ಚಿತ್ರಗಳನ್ನು (ಕೆಂಪು ವರ್ಣದ) ಸ್ಥಳೀಯ ಗ್ರಾಮಾಂತರ ಜನತೆ ಸುರಮದ ಚಿತ್ರಗಳೆಂದು ಹೇಳುತ್ತಾರೆ. ಸುರಮ ಎಂಬುದು ಒಂದು ಖನಿಜ. ಅದಕ್ಕೆ ವೈಜ್ಞಾನಿಕವಾಗಿ ಅಂಟಿಮನಿ ಎಂದು ಕರೆಯುತ್ತಾರೆ. ಸ್ಟಿಬೆನೈಟ್ ಎನ್ನುವುದು ಅಂಟಿಮನಿಯ ಒಂದು ಅದಿರು. ಇದು ಉಕ್ಕಿನ ಅಥವಾ ಬೂದು ಬಣ್ಣದಲ್ಲಿರುವ ಮೆದುವಿನ ಖನಿಜ. ಇದು ತ್ರಿಜ್ಯಾಕಾರದ ಎಸಳುಗಳಂತೆ ದೊರೆಯುತ್ತದೆ. ಇದನ್ನು ಈಗಲೂ ವರ್ಣಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಈ ಸುರಮವನ್ನು ಕೆಂಪು

ವರ್ಣಕ್ಕಾಗಿ ಬಳಸಿರಬಹುದು. ಅಂಟಿಮನಿ ಸಲ್ಫೈಡ್ ಅದಿರಿನ ಕಣಗಳು ಬಳ್ಳಾರಿ ಜಿಲ್ಲೆಯ ರಾಮನದುರ್ಗ ಪ್ರದೇಶದಲ್ಲಿ ಇರುವುದಾಗಿ ವರದಿಯಾಗಿದೆ. ಅಲ್ಲದೇ ಬೆಟ್ಟಗಳನ್ನು ಅಲ್ಲಲ್ಲಿ ಕೆಮ್ಮಣ್ಣಿನ ಹಳದಿ ಬಣ್ಣದ ಮಟ್ಟಿಗಳಿವೆ. ಈಗಲೂ ಹಳ್ಳಿಯ ಜನ ಹಬ್ಬ, ಉತ್ಸವಗಳ ಸಂದರ್ಭದಲ್ಲಿ ಮನೆ ಗುಡಿಸಲುಗಳನ್ನು ಸಹ ಅಲಂಕರಿಸಲು ಇಂಥ ಮಟ್ಟಿಯ ಮಣ್ಣನ್ನು ಬಳಸುತ್ತಾರೆ ಪ್ರಾಚೀನ ಕಾಲದಲ್ಲೂ ಈ ಮಣ್ಣುಗಳನ್ನು ಬಣ್ಣಕ್ಕಾಗಿ ಬಳಸಿದ್ದಾರೆಂದು ತರ್ಕಿಸಬಹುದು. ಕೆಲವು ಹಳ್ಳಿಯ ಜನ ಈ ಚಿತ್ರಗಳನ್ನು ಹೆಣ್ಣಿನ ಹೆರಿಗೆ ಸಮಯದಲ್ಲಿ ರಕ್ತವನ್ನು ಕೆಮ್ಮಣ್ಣಿಗೆ ಬೆರೆಸಿ ತಯಾರಿಸಿ ಕೆಂಬಣ್ಣದಿಂದ ಬರೆಯಲಾಗಿದೆ ಎಂದು ಹೇಳುತ್ತಾರೆ. ಹಂಪಿ ಮಲ್ಲಾಪುರಗಳಲ್ಲಿ ಮೈಮೇಲೆ ಗೆರೆಗಳಿರುವ ವ್ಯಕ್ತಿಗಳ ನಗ್ನ ಚಿತ್ರಗಳಿವೆ. ಇವರಲ್ಲಿ ಗರ್ಭಿಣಿ ಸ್ತ್ರೀಯರು ಇರುವುದುಂಟು. ಇವು ಒಂದು ರೀತಿಯ ಮಾಂತ್ರಿಕ ಕಟ್ಟಳೆಗೆ ಸಂಬಂಧಿಸಿದ ಚಿತ್ರಗಳೆಂದು ತೋರುತ್ತದೆ.ದ ಇಂಥ ಚಿತ್ರಗಳನ್ನು ಮೇಲೆ ಹೇಳಿದ ರಕ್ತ ಬಳಸಿ ಬಿಡಿಸಿರಬಹುದಾದ ಸಾಧ್ಯತೆ ಇದೆ. ಬಿಳಿ ಬಣ್ಣಕ್ಕಾಗಿ ಸುಣ್ಣವನ್ನು (ಸುಣ್ಣದ ಕಲ್ಲು) ಬಳಸಲಾಗಿದೆ. ಸುಣ್ಣದಲ್ಲಿ ಬೂದಿಯನ್ನು ಬೆರೆಸಿ ಕೆಲವು ಚಿತ್ರಗಳನ್ನು ಬಿಡಿಸಲಾಗಿದೆ. ಟಾಲ್ಕ್ ಎಂದು ಕೆರಯುವ ಒಂದು ರೀತಿಯ ಮೆದು ಬಿಳಿ ಸಿಲೆಯು ಈ ಪ್ರದೇಶದಲ್ಲಿ ಅಲ್ಲಲ್ಲಿ ದೊರೆಯುತ್ತದೆ. ಅದನ್ನು ಬಿಳಿ ಬಣ್ಣಕ್ಕಾಗಿ ಬಳಸಿರುವ ಸಾಧ್ಯತೆಯು ಇದೆ.

**ಕುಂಚಗಳು**

ಬಣ್ಣದ ದ್ರವದಲ್ಲಿ ಅದ್ದಿ ಬರೆಯಲು ಪ್ರಾಚೀನ ಜನರ ಒಂದು ರೀತಿಯ ಕುಂಚಗಳನ್ನು ಮಾಡಿಕೊಳ್ಳುತ್ತಿದ್ದರು. ಮರದ ರೆಂಬೆಯ ತುದಿಯನ್ನು ಸರಿಯಾಗಿ ಜಜ್ಜಿ ತೊಗಟೆಯು ಹೋಗುವಂತೆ ಮಾಡಿ ಕೂದಲಿನಂತಹ ನಾರುಗಳನ್ನು ಬಿಡಿಸಿ, ಅದನ್ನು ಕಂಚದಂತೆ ವರ್ಣದ ರೇಖೆಗಳನ್ನು ಎಳೆಯಲು ಉಪಯೋಗಿಸಿದ್ದಿರಬೇಕು. ಚಿತ್ರಗಳ ಪ್ರಮಾಣಕ್ಕನುಗುಣವಾಗಿ ಬೇರೆ ಬೇರೆ ಅಳತೆಯ ಕುಂಚಗಳನ್ನು ಮಾಡಿಕೊಳ್ಳುತ್ತಿದ್ದರು. ಹಿರೇಬೆನಕಲ್ಲಿನ ೧೩ನೇ ಗವಿಯ ಚಿತ್ರಗಳ ರೇಖೆಗಳು ಸುಮಾರು ಮೂರು ಸೆಂ.ಮೀ. ವರೆಗಿನ ದಪ್ಪವಿದ್ದು, ಆ ಅಳತೆಯ ಕುಂಚಗಳಿಂದ ಹಿಡಿದು ಸುಮರು ೧/೨ ಸೆಂ.ಮೀ. ವರೆಗಿನ ದಪ್ಪದ ಕುಂಚಗಳನ್ನು ಮಾಡಿಕೊಂಡಿರಬೇಕು. ಅರ್ಧ ಸೆ.ಮೀ. ಒಳಗಿನ ಚಿತ್ರಗಳಿಗಾಗಿ ಕಡ್ಡಿಗಳ ಇಲ್ಲವೇ ಪಕ್ಷಿಗಳ ಪುಕ್ಕದ ಕಡ್ಡಿಯನ್ನು ತುದಿಯಲ್ಲಿ ಸ್ವಲ್ಪ ಜಜ್ಜಿ ಕುಂಚಗಳನ್ನು ಮಾಡಿಕೊಂಡಿರಬೇಕಿನ್ನಿಸುತ್ತದೆ. ಹಿರೇಬೆನಕಲ್ಲಿನ ೧, ೧೧ ಮತ್ತು ೧೨ನೇ ಗವಿಗಳ, ಚಿಕ್ಕರಾಂಪುರದ ೧ನೇ ಗವಿಯ ಚಿತ್ರಗಳ ಗುಂಪಿನಲ್ಲಿರುವ ಸಣ್ಣ ಸಣ್ಣ ನಾಯಿ, ಮನುಷ್ಯ, ನವಿಲುಗಳ ಚಿತ್ರಗಳನ್ನು ಇಂಥ ಕುಂಚಗಳಿಂದ ಮಾತ್ರ ರಚಿಸಲು ಸಾಧ್ಯ. ಹಾಗೆ ಕೆಲವು ವ್ಯಕ್ತಿಚಿತ್ರಗಳ ತಲೆಯ ಸುತ್ತಲೂ ಹರಡಿದ ಕೂದಲುಗಳನ್ನು ತೋರಿಸಲಾಗಿದೆ. ಇವುಗಳನ್ನು ಬಿಡಿಸಲು ಕಡ್ಡಿಗಳನ್ನು ಬಳಸಿಕೊಂಡಿರಬಹುದು.

ಹಿರೇಬೆನಕಲ್ಲಿನ ೧, ೬, ೧೧, ೧೨ ಚಿಕ್ಕರಾಂಪುರದ ೧ನೇ ಗವಿಯ ಚಿತ್ರ ಫಲಕದಲ್ಲಿ ದೊಡ್ಡ, ಮಧ್ಯಮ, ಚಿಕ್ಕ ಮತ್ತು ಸೂಕ್ಷ್ಮ ಪ್ರಮಾಣದ ಛಾಯಾ ಹಾಗೂ ಬಾಹ್ಯ ರೇಖಾ ಚಿತ್ರಗಳಿವೆ. ಇಂಥ ಚಿತ್ರಫಲಕದ ರಚನೆಗಾಗಿ ಹಲವು ಅಳತೆಯ ಕುಂಚಗಳು ಅವಶ್ಯವಾಗಿರುತ್ತವೆ. ಹಾಗಾಗಿ ಏಕಕಾಲದಲ್ಲಿ ಅವುಗಳನ್ನು ಸಿದ್ಧಮಾಡಿಕೊಂಡು ಚಿತ್ರ ರಚನೆಯಲ್ಲಿ ತೊಡಗುತ್ತಿದ್ದರೆಂದು ತರ್ಕಿಸಬಹುದು. ಸಿದ್ಧವಾದ ವರ್ಣವನ್ನು ಮಡಕೆಯ ಪಾತ್ರೆಯಲ್ಲಿ ಹಾಕಿಕೊಂಡು ಅದರಲ್ಲಿ ಕುಂಚಗಳನ್ನು ಅದ್ದಿಕೊಂಡು ಚಿತ್ರ ಬಿಡಿಸುತ್ತಿದ್ದರು. ಹಿರೇಬೆನಕಲ್ಲಿನ ೧ನೇ ಕಲ್ಲಾಸರೆಯು ಒಂದು ಬೃಹತ್ ಬಂಡೆಯಾಗಿದ್ದು, ಅದರ ಪೂರ್ವಬದಿಯ ಮುಖದಲ್ಲಿ ಚಿತ್ರಗಳಿವೆ. ದೊಡ್ಡ ಬಂಡೆಯ ಮುಂದೆ ಮತ್ತೊಂದು ಚಿಕ್ಕ ಗುಂಡು ಇದೆ. ಅದರ ಮೇಲ್ಭಾಗ ಸಮನಾಗಿದ್ದು, ಆಳವಲ್ಲದ ಸುಮಾರು ೨೦ ಸೆಂ.ಮೀ. ವ್ಯಾಸದ ಒಂದು ಕುಳಿ ಇದೆ. ಇಡೀ ಬಂಡೆಯಲ್ಲಿ ಕುಳಿ ಮಾತ್ರ ಕೆಂಪು ವರ್ಣದಲ್ಲಿದೆ. (ಛಾಯಾಚಿತ್ರ ಸಂಖ್ಯೆ ೭೩) ಅದರ ಬಣ್ಣ ಮತ್ತು ಬೃಹತ್ ಬಂಡೆಯ ಚಿತ್ರಗಳ ಬಣ್ಣ ಒಂದೇ ಆಗಿದೆ. ಇದರಿಂದ ಸ್ಪಷ್ಟವಾಗುವ ಸಂಗತಿಯೇನೆಂದರೆ, ಕೆಲವು ಸಲ ಚಿತ್ರಗಳನ್ನು ಬಿಡಿಸುವಾಗ ನಿಲ್ಲುವ ಗುಂಡಿನ ಮೇಲೆ (ಕುಳಿಯಲ್ಲಿ) ಬಣ್ಣ ಸುರುವಿಕೊಂಡು ಕೂಡ ಚಿತ್ರಗಳನ್ನು ಬಿಡಿಸುತ್ತಿದ್ದರೆಂದು ಸ್ಪಷ್ಟವಾಗುತ್ತದೆ.

**ಹಸ್ತಗಳು**

ತನ್ನ ಹಸ್ತವನ್ನು ಕೂಡ ಚಿತ್ರ ರಚನಾ ಸಾಮಗ್ರಿಯಾಗಿ ಪ್ರಾಚೀನ ಮಾನವ ಉಪಯೋಗಿಸಿದ್ದಾನೆ. ಹಸ್ತದ ಚಿತ್ರಗಳನ್ನು ಬಿಡಿಸಬೇಕಾದ ಸಂದರ್ಭದಲ್ಲಿ ತನ್ನ ಹಸ್ತಗಳನ್ನು ಬಣ್ಣದ ದ್ರಾವಣದಲ್ಲಿ ಅದ್ದಿ ನೇರವಾಗಿ ಗೋಡೆಗೆ ಮುದ್ರೆ ಒತ್ತಿ ಚಿತ್ರಗಳನ್ನು ಮೂಡಿಸುತ್ತಿದ್ದನು. ಇಂಥ ಹಸ್ತಮುದ್ರಿಕೆಗಳು ತಾಮ್ರಯುಗದ ನವಶಿಲಾಸಂಸ್ಕೃತಿ ಮತ್ತು ಕಬ್ಬಿಣ ಯುಗದ ಬೃಹತ್ ಶಿಲಾಸಂಸ್ಕೃತಿಯ ನೆಲೆಯಾದ ಅಗೋಲಿಯಲ್ಲಿ ಕೆಂಪು ವರ್ಣದಲ್ಲಿದೆ. ಈಗಲೂ ಈ ಪ್ರದೇಶದಲ್ಲಿ ಮದುವೆಯ ಸಂದರ್ಭದಲ್ಲಿ ಮನೆಯ ಸುತ್ತ ಹಸ್ತಮುದ್ರಿಕೆಗಳನ್ನು (ಚಟ್ಟು ಬಡಿಯುವುದು) ಇದೇ ಪ್ರಕಾರದಲ್ಲಿ ಹಾಕುತ್ತಾರೆ.

**ಮರದ ಎಲೆ ಅಥವಾ ಚರ್ಮ**

ಹಿರೇಬೆನಕಲ್ಲಿನ ೧೧ ನೇ ಗವಿಯಲ್ಲಿ ಮತ್ತು ಹೊಸಬಂಡಿ ಹರ್ಲಾಪುರದ ೧ನೇ ಕಲ್ಲಾಸರೆಯಲ್ಲಿ ಜಿಂಕೆಗಳು ಸಾಲು ಚಿತ್ರಗಳಿವೆ. ಸಾಲಿನ ಪ್ರತಿಯೊಂದು ಜಿಂಕೆಯು ಒಂದೇ ಪ್ರಮಾಣ ಮತ್ತು ರೀತಿಯಲ್ಲಿವೆ. ಇಂಥ ಚಿತ್ರಗಳನ್ನು ಮರದ ದಪ್ಪ ಎಲೆಯಲ್ಲಿಯೋ, ಚರ್ಮದಲ್ಲಿಯೋ ಚಿತ್ರವನ್ನು ಕತ್ತರಿಸಿಕೊಂಡು ಅದನ್ನು ಬಂಡೆಯ ಮೇಲಿಟ್ಟು, ಕತ್ತಿರಿಸಿದ ಭಾಗದಲ್ಲಿ ಬಣ್ಣವನ್ನು ತುಂಬುತ್ತಿರಬೇಕೆಂದು ಅ.ಸುಂದರ ಅವರು ಅಭಿಪ್ರಾಯಪಟ್ಟಿದ್ದಾರೆ. ಚಿತ್ರಗಳು ಅಷ್ಟು ಸರಿಯಾಗಿ ಒಂದೇ ಪ್ರಕಾರದಲ್ಲಿ ಇರುವುದರಿಂದ ಅವರ ಅಭಿಪ್ರಾಯ ಸಮಂಜಸವೆನ್ನಬಹುದು.

**ಬೆರಳುಗಳು**

ಈಚಿನ ಕಾಲದ ಕೆಲವು ಬಿಳಿ ಬಣ್ಣದ ಚಿತ್ರಗಳಲ್ಲಿ ಬೆರಳಿನ ರೇಖೆಗಳೂ ಮೂಡಿರುವುದರಿಂದ ಬೆರಳುಗಳಿಂದಲೂ ರೇಖೆಗಳನ್ನು ಎಳೆಯಲಾಗುತ್ತಿತ್ತೆಂದು ತಿಳಿಯಬಹುದು. ವಿಶೇಷವಾಗಿ ಕಡ್ಡಿಯಾಕಾರದ ಸಣ್ಣ ಮನುಷ್ಯಾಕೃತಿಗಳನ್ನು ಬೆರಳುಗಳಿಂದ ಮೂಡಿಸಲಾಗಿದೆ. ಇಂಥ ಚಿತ್ರಗಳು ತೆಂಬಾದ ೧, ೨, ಹಂಪಸದುರ್ಗ ೧, ಎಮ್ಮಿಗುಡ್ಡ ೨ ಮತ್ತು ತಿರುಮಲಾಪುರದ ಕಲ್ಲಾಸರೆಗಳಲ್ಲಿವೆ.

ಹೀರೇಬೆನಕಲ್ (೨ನೇ ಕಲ್ಲಾಸರೆ), ಗಡ್ಡಿ (೧) ನಾರಾಯಣಪೇಟೆ (೧) ಮತ್ತು ಚಿಕ್ಕರಾಂಪುರ (೫)ದ ಕಲ್ಲಾಸರೆಗಳ ಚಿತ್ರಿತ ಸ್ಥಳಗಳು ನೆಲದಿಂದ ಸುಮಾರು ೮ರಿಂದ ೧೦ ಮೀಟರ್ ಎತ್ತರದಲ್ಲಿವೆ. ಇಂಥ ಎಡೆಗಳಲ್ಲಿ ಚಿತ್ರಗಳನ್ನು ಬಿಡಿಸುವಾಗ ಪ್ರಾಯಶಃ ಅಟ್ಟಣಿಗೆಗಳನ್ನು ಕಟ್ಟಿಕೊಂಡಿರಬೇಕೆಂದು ತರ್ಕಿಸಬಹುದು.

**ಬಂಡೆ ಚಿತ್ರಗಳ ಉಪಕರಣಗಳು**

ಬಂಡೆ ಚಿತ್ರಗಳಲ್ಲಿ ಕೊರೆದ ಕುಟ್ಟಿದ ಚಿಕ್ಕ ಕುಳಿಯ ಹಾಗೂ ತಿರುಗುಳಿ (Cupmarks) ಗಳು ಕಂಡುಬಂದಿವೆ. ಇಂಥ ಚಿತ್ರಗಳನ್ನು ಕೊರೆಯಲು ಲೋಹದ ಉಳಿ, ಇಲ್ಲವೇ ಗಟ್ಟಿ ಶಿಲೆ, ದಪ್ಪ ಚೂಪಾದ ಆಯುಧಗಳನ್ನು ಬಳಸಿದ್ದಾರೆಂದು ಹೇಳಬಹುದು. ಸಣ್ಣ ಸಣ್ಣ ಕುಳಿಗಳನ್ನು ಒಂದರ ಪಕ್ಕ ಒಂದರಂತೆ ಹಾಕಿ ಕೆಲವು ಚಿತ್ರಗಳನ್ನು ಮೂಡಿಸಲಾಗಿದೆ. ಅಂಥವನ್ನು ಕೂಡ ಲೋಹದ ಆಯುಧದಿಂದ ಮೂಡಿಸಿರಬಹುದು. ತಿರುಗುಳಿಗಳನ್ನು ಚೂಪಾದ ಉಳಿಯಂತಹ ಉಪಕರಣದಿಂದ ಸತತವಾಗಿ ಒಂದೇ ಕಡೆ ತಿರುಗಿಸಿ ಮೂಡಿಸಲಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಇಲ್ಲಿನ ಚಿತ್ರಗಳು ಅಂದಿನ ಜನರ ಜಾಣ್ಮೆಯ ಪ್ರತೀಕವಾಗಿವೆ. ಆನೆಗುಂದಿಯ ಗವಿ ವರ್ಣಚಿತ್ರ ಸೂಕ್ಷ್ಮ ಶಿಲಾಯುಗಕ್ಕೆ ಸೇರಿದ್ದು ಕೆಂಪು-ಕಂದು ಬಣ್ಣಗಳಲ್ಲಿ ಜಿಂಕೆ, ಹೋರಿ, ಮನುಷ್ಯರ ಚಿತ್ರಗಳನ್ನು ಬಿಡಿಸಲಾಗಿದೆ. ಹಿರೇಬೆನಕಲ್ಲಿನ ಬೆಟ್ಟದಲ್ಲಿ ಚಿತ್ರಿತ ೧೨ ಗವಿಬಂಡೆಗಳನ್ನು ಗುರುತಿಸಲಾಗಿದೆ. ನೃತ್ಯದಲ್ಲಿ ತೊಡಗಿರುವ ಚಿತ್ರ ೧೨ನೆಯ ಗವಿಬಂಡೆಯಲ್ಲಿದೆ. ದುರ್ಗದ ಗಡಿ ಎಂದು ಸ್ಥಳೀಯವಾಗಿ ಕರೆಯುವ ಇದರ ಸುತ್ತಮುತ್ತಲಿರುವ ಬಂಡೆಗಳ ಮೇಲೆ ಅನೇಕ ಬಗೆಯ ಚಿತ್ರಗಳನ್ನು ಬಿಡಿಸಲಾಗಿದೆ. ಈ ಗವಿಬೆಟ್ಟದ ಸುಮಾರು ಮಧ್ಯೆ ಅಂತರದಲ್ಲಿ ಒಂದು ಬಯಲು ಪ್ರದೇಶವಿದೆ. ಇದು ಬೃಹತ್ ಶಿಲಾ ಸಂಸ್ಕೃತಿಯ ವಾಸ್ತವ್ಯದ ನೆಲೆ.

ಬೂದಿ ಮಿಶ್ರಿತ ಮಣ್ಣಿನಲ್ಲಿ ಕೆಂಪು, ಕೆಂಪು-ಕಪ್ಪು ದ್ವಿವರ್ಣದ ಮತ್ತು ಕಪ್ಪು ಬಣ್ಣದ ಮೃತ್ ಪಾತ್ರೆಗಳು ಹೇರಳವಾಗಿವೆ. ಅಲ್ಲದೆ ಸುಟ್ಟಮಣ್ಣಿನ ಮಣಿ, ಬಳೆಚೂರುಗಳು ಕಂಡುಬರುತ್ತವೆ.

ಇಲ್ಲಿಯ ಒಂದು ಬಂಡೆಯ ಮೇಲೆ ೨೭ ಜನರು ಕೈ ಹಿಡಿದುಕೊಂಡು ಸಾಲಾಗಿ ನಿಂತಿದ್ದಾರೆ. ಅದರಲ್ಲಿ ಒಬ್ಬ ಹುಡುಗ, ಇನ್ನೊಬ್ಬ ಕೈಯಲ್ಲಿ ಏನನ್ನೋ ಹಿಡಿದು ಕೊಂಡಂತಿದೆ. ಈ ಬಂಡೆಯ ಕೆಳಭಾಗದಲ್ಲಿ ಒಬ್ಬ ನಿಂತ ಮನುಷ್ಯನ ಚಿತ್ರ ಮತ್ತು ಅರ್ಧಚಂದ್ರಾಕೃತಿಯ ಗೆರೆಯ ಮೇಲೆ ೧೨ ಜನರು, ಇನ್ನೊಂದೆಡೆ ಜೋಡಿ ಮನುಷ್ಯರ ಚಿತ್ರಗಳಿವೆ. ಈ ಗವಿಯ ಮೇಲಿನ ದೊಡ್ಡ ಬಂಡೆ ಕೆಳಭಾಗ ಗುಂಡುಕೊಡಲಿ ಹಿಡಿದು ನಿಂತ ಮನುಷ್ಯ ಮತ್ತು ಹತ್ತು ಜಿಂಕೆಯ ಸಾಲು, ಕುದುರೆ ಸವಾರರು, ಎತ್ತು ಮೊದಲಾದ ಚಿತ್ರಗಳಿವೆ. ಅಲ್ಲಿಯ ಇತರೆ ಬಂಡೆಗಳಲ್ಲಿ ನವಿಲು, ಚಿಗರೆ, ದನಗಳ ಚಿತ್ರಗಳಿವೆ. ಕೈ ಕೈ ಹಿಡಿದು ಕುಣಿಯುತ್ತಿರುವ ಚಿತ್ರ ತೆಕ್ಕಲಕೋಟೆ ಗವಿಬಂಡೆಯಲ್ಲೂ ಇದೆ. ನಾರಾಯಣಪುರ, ವೆಂಕಟಾಪುರಗಳಲ್ಲಿ ಸು. ೪ ಮೀ. ಎತ್ತರದ ಮನುಷ್ಯ ಚಿತ್ರಗಳಿದ್ದು ಅವರ ಶರೀರವೆಲ್ಲಾ ಜ್ಯಾಮಿತಿ ಚಿತ್ರಗಳಿಂದ ಬಿಡಿಸಲಾಗಿದೆ. ಈ ರೀತಿಯ ಚಿತ್ರಗಳು ಹರಪ್ಪ ಮುದ್ರೆಗಳ ಮೇಲೆ ಕಂಡುಬರುತ್ತವೆ. ಹಿರೇಬೆನಕಲ್ಲು, ಮಲ್ಲಾಪುರ, ಆನೆಗುಂದಿಯಲ್ಲಿದ್ದ ಕೆಲವು ಮನುಷ್ಯ ಚಿತ್ರಗಳಿಗೆ ಉದ್ದನೆಯ ಬಾಲವಿದೆ.

ಚಿಕ್ಕರಾಂಪುರದಲ್ಲಿ ಪ್ರಾಕೃತಿಕವಾಗಿ ನಿರ್ಮಿತವಾದ ಒಂದು ವೃತ್ತಾಕಾರದ ಸುತ್ತಿನಲ್ಲಿ ಮನುಷ್ಯನ ಚಿತ್ರವಿದೆ. ಇದು ಕಬ್ಬಿಣ-ಬೃಹತ್ ಶಿಲಾಸಂಸ್ಕೃತಿಯ ಗೋರಿಗಳಲ್ಲೊಂದಾದ ಕಲ್ಲು ವೃತ್ತ ಗೋರಿಯಂತಿದೆ. ಆನೆಗುಂದಿಯಲ್ಲಿ ತುಂಗಭದ್ರಾ ನದಿಗೆ ಹೊಂದಿಕೊಂಡಂತಿರುವ ಒಂದು ದೋಣಿಯಾಕಾರದ ಬಂಡೆಯ ಮೇಲೆ ದೋಣಿ ಚಿತ್ರವನ್ನು ಬಿಡಿಸಲಾಗಿದೆ.

ಇನ್ನು ಪ್ರಾಣಿ-ಪಕ್ಷಿಗಳಲ್ಲಿ ಹಿರೇಬೆನಕಲ್ಲಿನ ಸಾಲು ಜಿಂಕೆಗಳು ಆಕಾರ, ಪ್ರಮಾಣದಲ್ಲಿ ಏಕಪ್ರಕಾರವಾಗಿ ಕಂಡುಬರುತ್ತವೆ. ಕುರುಗೋಡು ಗವಿವರ್ಣ ಚಿತ್ರದಲ್ಲಿ ಎರಡು ಜಿಂಕೆಗಳು ಒಂದೆಡೆ ಇದ್ದರೆ, ಇನ್ನೊಂದು ಗಬ್ಬಾದ ಜಿಂಕೆ ಚಿತ್ರವಿದೆ.ಅಲ್ಲಿ ಅಪರೂಪಕ್ಕೆ ಆನೆ, ಹುಲಿ, ಚಿರತೆ ಮತ್ತು ಆಂಜನಹಳ್ಳಿಯಲ್ಲಿ ದೊಡ್ಡ ಪ್ರಮಾಣದ ಗಾಂಭೀರ್ಯದಿಂದ ಕೂಡಿದ ಹೋರಿಯ ಚಿತ್ರಗಳಿವೆ. ತೆಕ್ಕಲಕೋಟೆಯಲ್ಲಿ ಎತ್ತು ಇತರೆ ದನಗಳು, ಹಿರೇಬೆನಕಲ್ಲಿನಲ್ಲಿ ಕೆಚ್ಚಲು ಸಹಿತ ಆಕಳು, ಹಂಪಿಯ ತುಂಗಭದ್ರಾ ನದಿ ಅಂಚಿನಲ್ಲಿ ಮೊಸಳೆ, ಕಪ್ಪಗಲ್ಲಿನಲ್ಲಿ ಎತ್ತು, ನವಿಲು, ಆನೆ, ಹುಲಿ ಮತ್ತು ಪಾನೀಯವನ್ನು ಸೇವಿಸುತ್ತಿರುವ ಮನುಷ್ಯರ ಗೀರು ಚಿತ್ರಗಳಿವೆ. ಪ್ರಾಗೈತಿಹಾಸ ಆದಿಇತಿಹಾಸ ಕಾಲದ ವರ್ಣ ಮತ್ತು ಕುಟ್ಟಿ ರಚಿಸಿದ ಅನೇಕ ಮನುಷ್ಯ, ಪ್ರಾಣಿಗಳ ಚಿತ್ರಗಳಿಂದ ಈ ಪ್ರದೇಶ ಶ್ರೀಮಂತವಾಗಿ ಗೋಚರಿಸುತ್ತದೆ. ಇದರಿಂದ ಪ್ರಾಗೈತಿಹಾಸ ಕಾಲದಲ್ಲಿಯೇ ಜೀವಿತವಿದ್ದ ಅನೇಕ ಪ್ರಾಣಿ ಪಕ್ಷಿಗಳ ಮತ್ತು ಜನಜೀವನದ ಪರಿಚಯವಾಗುತ್ತದೆ.

ಹಂಪಿ ಪರಿಸರದಲ್ಲಿ ಸುಮಾರು ೨೭ ಕಲಾತ್ಮಕ ನೆಲೆಗಳಿವೆ. ಇವುಗಳಲ್ಲಿನ ಚಿತ್ರಗಳು ಅಂದಿನ ಆದಿಮಾನವನ ಭಾವನೆಗಳ ಕಲಾ ಅಭಿವ್ಯಕ್ತಿಯ ಸಾಧನೆಗಳಾಗಿವೆ. ಇಲ್ಲಿನ ಮನುಷ್ಯ, ಪ್ರಾಣಿ, ಮೊದಲಾದ ಚಿತ್ರಗಳಿಂದ ಅಂದಿನ ಕಲಾಸಂಸ್ಕೃತಿಯಲ್ಲಿ ಅರಿಯಬಹುದಾಗಿದೆ. ಅಂದಿನ ಆದಿಮಾನವನ ಜೀವನ ವಿಧಾನ, ಅವನ ನಂಬಿಕೆ, ಆಚರಣೆ, ಅವನ ಪಶುಪಾಲನೆ, ಬೇಟೆಗಾರಿಕೆ, ಮನರಂಜನೆ, ಸಮೂಹ ಕುಣಿತ, ಮಾಂತ್ರಿಕ ಆರಾಧನೆ ಮತ್ತು ಅವನು ಬಳಸುತ್ತಿದ್ದ ಆಯುಧ ಮುಂತಾದ ವಿವರಗಳು ಇಲ್ಲಿನ ಕಲಾತ್ಮಕ ನೆಲೆಗಳಲ್ಲಿನ ಚಿತ್ರಗಳ ಮೂಲಕ ಅನಾವರಣಗೊಳ್ಳುತ್ತವೆ. ಇಲ್ಲಿನ ಚಿತ್ರಗಳಲ್ಲಿನ ಬಳಕೆ ಮಾಡಿಕೊಂಡಿರುವ ಸಂಕೇತಗಳು ಅಂದಿನ ಮಾನವನ ಮನಸ್ಸಿನ ಸುಪ್ತ ಭಾವನೆಗಳ ಪ್ರತೀಕವಾಗಿದ್ದು, ಅವನ ಕಲಾಭಿರುಚಿಯ ಕೈಗನ್ನಗಡಿಗಳಾಗಿವೆ. ಈ ಕಲಾಭಿರುಚಿಯ ಪರಿನಾಮವೇ ಮುಂದೆ ಚಾರಿತ್ರಿಕ ಕಾಲದಲ್ಲಿ ಹಲವಾರು ಕಲಾ ಕೃತಿಗಳ ಸ್ಮಾರಕಗಳ ನಿರ್ಮಾಣಕ್ಕೆ ಕಾರಣವಾಯಿತು.

—

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

# ೫. ಉಪಸಂಹಾರ

ಶಿಲಾಯುಗದ ಆದಿಮಾನವನ ನೆಲೆಗಳು ಹೆಚ್ಚಾಗಿ ನದಿಗಳ ಅಥವಾ ಉಪನದಿಗಳ ದಂಡೆ ಮೇಲೆ ಅಥವಾ ಸಮೀಪದಲ್ಲಿ ಹೆಚ್ಚಾಗಿ ಇರುವುದು ಕಂಡುಬರುತ್ತವೆ. ಇಲ್ಲಿನ ಬೆಟ್ಟಗಳು ಹಾಗು ಅಲ್ಲಿನ ಕಣಿವೆಯಲ್ಲಿ ಹರಿಯುವ ಸಣ್ಣ ಹಳ್ಳಗಳು ಸದಾ ಇಲ್ಲವೇ ಬೇಸಿಗೆಯನ್ನು ಹೊರತುಪಡಿಸಿ ಉಳಿದಂತೆ ನೀರಿಗೆ ಬಹಳವಾಗಿ ಅನುಕೂಲವಾಗಿದ್ದವು. ಇಲ್ಲಿನ ಫಲವತ್ತಾದ ಭೂಪ್ರದೇಶ ವ್ಯವಸಾಯಕ್ಕೆ ಯೋಗ್ಯವಾಗಿತ್ತು. ದನಕರುಗಳಿಗೆ ಬೇಕಾದ ಹುಲ್ಲುಗಾವಲು ಸಾಮಾನ್ಯವಾಗಿ ದೊರೆಯುತ್ತಿತ್ತು. ಹಾಗು ಆಯುಧೋಪಕರಣಗಳನ್ನು ತಯಾರಿಸಲು ಬೇಕಾದ ಕಚ್ಚಾವಸ್ತುಗಳು ಸನಿಹದಲ್ಲಿ ದೊರೆಯುತ್ತಿತ್ತು. ಇದರಿಂದಾಗಿ ಬೆಟ್ಟದ ತಪ್ಪಲು ಇಲ್ಲವೇ ಕಲ್ಲಾಸರೆ, ಗುಹೆಗಳು ಆದಿಮಾನವನ ವಾಸಕ್ಕೆ ಯೋಗ್ಯವಾದ ಪ್ರದೇಶಗಳಾಗಿದ್ದವು. ಬೆಟ್ಟ ಗುಡ್ಡಗಳ ಮಧ್ಯೆ ಬಯಲಿನಲ್ಲಿ ಅನೇಕ ಕಡೆ ನೀರಿನ ಅವಶ್ಯಕತೆಗೆ ಬೇಕಾಗುವ ನೀರಿನ ದೋಣಿಗಳಿದ್ದು, ಸುತ್ತಲಿರುವ ಬೃಹತ್ ಕಲ್ಲುಗಳ ಕೋಟೆಯಂತಹ ಪ್ರದೇಶವು ಅವನ ವಾಸಕ್ಕೆ ಸೂಕ್ತ ರಕ್ಷಣೆ ಒದಗಿದ್ದವು. ಈ ಬೆಟ್ಟ ಗುಡ್ಡದಲ್ಲಿ ಕಾಣಬರುವ ಅನೇಕ ಪ್ರಾಣಿಗಳನ್ನು ಆ ಜನರು ತಮ್ಮ ಆಹಾರಕ್ಕಾಗಿ ಬೇಟೆಯಾಡಿರಬೇಕು. ಬೆಟ್ಟಗಳ ಬುಡದಲ್ಲಿರುವ ಮಣ್ಣಿನ ಫಲವತ್ತಾದ ಭೂಮಿ ವ್ಯವಸಾಯಕ್ಕೆ ಅಗತ್ಯವಾದ ಭೂಮಿಯಾಗಿದೆ. ಈ ಪ್ರದೇಶಗಳ ಹತ್ತಿರದಲ್ಲೇ ವಸತಿಗೆ ಯೋಗ್ಯವಾದ ಸ್ಥಳಗಳನ್ನು ಜನರು ಆಯ್ದುಕೊಂಡು ಸೂಕ್ತ ರಕ್ಷಣಾ ವ್ಯವಸ್ಥೆಯಲ್ಲಿ ಬದುಕು ನಡೆಸುತ್ತಿದ್ದರು ಎಂಬದು ಗಮನಾರ್ಹವಾಗಿದೆ. ಇಲ್ಲಿನ ಕೆಲವು ನೆಲೆಗಳು ಸಣ್ಣ ಪುಟ್ಟ ಗುಂಡಿಗಳ ಬಳಿ ಇವೆ. ಇಲ್ಲಿ ಮಳೆಗಾಲದ ನಂತರ ನೀರು ಕಡಿಮೆಯಾಗುತ್ತಿದ್ದರೆ ಚಳಿಗಾಲದಲ್ಲಿ ಸುತ್ತಲಿನ ಪ್ರದೇಶದಿಂದ ನೀರು ಬಸಿದು ಸಹಸಿರು ಬೆಳೆಯುವುದಕ್ಕೆ ಸಹಕಾರಿಯಾಗಿತ್ತು. ಪ್ರಾಣಿಗಳ ಆಹಾರಕ್ಕೆ ಇದು ಉತ್ತಮ ತಾಣವಾಗಿದ್ದು, ಆದಿಮಾನವನು ಬೇಟೆಯಾಡುವುದಕ್ಕೂ ಸಾಕಷ್ಟು ಸಹಕಾರಿಯಾಗಿತ್ತು. ಈ ಎಲ್ಲ ಸೂಕ್ತ ವ್ಯವಸ್ಥೆಗಳು ಹಂಪಿ ಪರಿಸರದಲ್ಲಿ ಸಹಜವಾಗಿಯೇ ದೊರೆತಿದ್ದರಿಂದ ಆದಿಮಾನವನು ಇಲ್ಲಿನ ವಿವಿಧ ನೆಲೆಗಳಲ್ಲಿ ವಾಸಿಸಿ ಹಲವಾರು ಕುರುಹುಗಳನ್ನು ಬಿಟ್ಟು ಹೋಗಿದ್ದು, ಅವು ಅಂದಿನ ಜನಜೀವನ ಮತ್ತು ಸಂಸ್ಕೃತಿಯನ್ನು ಅರಿಯಲು ಸಹಕಾರಿಯಾಗಿವೆ.

ಹಂಪಿ ಪರಿಸರದಲ್ಲಿ ಆದಿಮಾನವನು ನೆಲಸಿದ್ದ ವಿವಿಧ ಪ್ರದೇಶಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಅವು ಮೂಡಿಬಂದ ಪರಿಸರದ ಹಿನ್ನೆಲೆಯಲ್ಲಿ ವಿವೇಚಿಸುತ್ತಾ, ಕಾಲದಿಂದ ಕಾಲಕ್ಕೆ ಆ ನೆಲೆಗಳನ್ನು ಯಾವ ರೀತಿ ಬದಲಾವಣೆಗಳಾದವು ಮತ್ತು ಆ ಇಡೀ ಸಂಸ್ಕೃತಿ ಯಾವ ರೀತಿ ಬೆಳವಣಿಗೆಯಾಗಿ ವಿವಿಧೆಡೆ ಪಸರಿಸಿತು ಎಂಬುದನ್ನು ಮೊದಲ ಬಾರಿಗೆ ಈ ಪ್ರಬಂಧದಲ್ಲಿ ವಿವೇಚಿಸಲಾಗಿದೆ. ಈ ಅಧ್ಯಯನದ ಮೂಲಕ ಈ ಕೆಳಕಂಡ ಫಲಿತಗಳನ್ನು ಕಂಡುಕೊಳ್ಳಲಾಗಿದೆ.

೧. ಈ ಸಂಶೋಧನಾ ಅಧ್ಯಯನವು ಹಂಪಿ ಪರಿಸರದ ಆದಿಮಾನವನ ಜೀವನದ ಮೇಲೆ ಹೊಸ ಬೆಳಕನ್ನು ಚೆಲ್ಲುವಲ್ಲಿ ಯಶಸ್ವಿಯಾಗಿದೆ.

೨. ಈ ಪರಿಸರದ ಆದಿಮಾನವನ ಪ್ರಕಟಿತ ಮತ್ತು ಅಪ್ರಕಟಿತ ನೆಲೆಗಳನ್ನು ಒಂದೆಡೆ ಪ್ರಾಥಮಿಕವಾಗಿ ದಾಖಲಿಸುವಲ್ಲಿ ಈ ಅಧ್ಯಯನ ಯಶಸ್ವಿಯಾಗಿದೆ. ಇದರಿಂದ ಆ ಕಾಲಾವಧಿಯ ಆದಿಮಾನವನ ನೆಲೆಗಳ ಸಂಖ್ಯೆಯನ್ನು ಗುರುತಿಸಲು ಸಹಾಯಕವಾಗುತ್ತದೆ.
೩. ಹಂಪಿ ಪರಿಸರದಲ್ಲಿ ಆದಿಮಾನವನು ನೆಲೆ ನಿಲ್ಲಲು ಯಾವ ಅಂಸಗಳು ಕಾರಣವಾದವು ಎಂಬುದನ್ನು ಈ ಅಧ್ಯಯನ ಗುರುತಿಸಿದೆ. ಅಲ್ಲದೆ ಆದಿಮಾನವನು ಕಾಲಕ್ರಮೇಣ ತನ್ನ ಕಾರ್ಯ ವಿಸ್ತರಣೆ ಹೇಗೆ ಬೇರೆ ಬೇರೆ ಪ್ರದೇಶಗಳಿಗೆ ವಿಸ್ತರಣೆ ಮಾಡಿದನು ಎಂಬುದನ್ನು ದೊರೆತ ಪ್ರಾಚ್ಯ ಆಧ್ಯಾರಗಳಿಂದ ಹೇಳಬಹುದಾಗಿದೆ.

೪. ಈ ಪರಿಸರದ ಭೌಗೋಳಿಕ ಲಕ್ಷಣಗಳು ಆದಿಮಾನವನ ಜೀವನದ ಮೇಲೆ ಯಾವ ರೀತಿ ಪ್ರಭಾವ ಬೀರಿವೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸುವಲ್ಲಿ ಈ ಅಧ್ಯಯನ ಯಶಸ್ವಿಯಾಗಿದೆ.

೫. ದೊರೆತ ಪ್ರಾಚ್ಯ ಅವಶೇಷಗಳನ್ನು ಆಧಾರವಾಗಿಟ್ಟುಕೊಂಡು ಕರ್ನಾಟಕದ ಆದಿಮಾನವನ ನೆಲೆಗಳ ಮತ್ತು ಆ ಪ್ರಾಗೈತಿಹಾಸಿಕ ಸಂಸ್ಕೃತಿಯ ವೈಶಿಷ್ಟ್ಯ ಮತ್ತು ಆ ಸಂಸ್ಕೃತಿಯ ಮೇರೆ, ಹರಿವು, ವಿಸ್ತಾರಗಳನ್ನು ಪೂರಕವಾಗಿ ಗುರುತಿಸುವಲ್ಲಿ ಈ ಸಂಶೋಧನಾ ಅಧ್ಯಯನ ಯಶಸ್ವಿಯಾಗಿದೆ.

೬. ಈ ಅಧ್ಯಯನವು ಹಂಪಿ ಪರಿಸರದ ಆದಿಮಾನವನ ನೆಲೆಗಳ ಮಹತ್ವ ಮತ್ತು ಆ ಪ್ರಾಗೈತಿಹಾಸಿಕ ಸಂಸ್ಕೃತಿಯ ವೈಶಿಷ್ಟ್ಯ, ಮತ್ತು ಆ ಸಂಸ್ಕೃತಿಯ ಮೇರೆ, ಹರಿವು, ವಿಸ್ತಾರಗಳನ್ನು ಮೊದಲಬಾರಿಗೆ ಗುರುತಿಸುವಲ್ಲಿ ಯಶಸ್ವಿಯಾಗಿದೆ ಎಂದರೆ ತಪ್ಪಾಗಿಲಾರದು.

೭. ಈ ಅಧ್ಯಯನವು ಹಂಪಿ ಪರಿಸರದ ಆದಿಮಾನವನ ನೆಲೆಗಳ ಮಹತ್ವವನ್ನು ಈ ಪ್ರದೇಶದಲ್ಲಿ ದೊರೆತ ಅನ್ವೇಷಣಾ ನೆಲೆಗಳು, ಉತ್ಖನನ ನೆಲೆಗಳು ಮತ್ತು ಕಲಾತ್ಮಕ ನೆಲೆಗಳನ್ನು ಆಧಾರವಾಗಿಟ್ಟುಕೊಂಡಿದೆ. ಆದಿಮಾನವನ ಪ್ರಾಗೈತಿಹಾಸಿಕ ಸಂಸ್ಕೃತಿಯ ವೈಶಿಷ್ಟ್ಯ ಮತ್ತು ಅಂದಿನ ಜನಜೀವನ ಮೊದಲಾದ ವಿವರಗಳನ್ನು ವ್ಯವಸ್ಥಿತವಾಗಿ ಪ್ರಥಮ ಬಾರಿಗೆ ಗುರುತಿಸಿದೆ. ಇದು ಈ ಅಧ್ಯಯನದ ಪ್ರಮುಖ ಉದ್ದೇಶವೂ ಆಗಿದ್ದು, ಅದರಲ್ಲಿ ಈ ಅಧ್ಯಯನ ಯಶಸ್ವಿಯಾಗಿದೆ.

೮. ಹಂಪಿ ಪರಿಸರದ ಆದಿಮಾನವನ ನೆಲೆಗಳಿಗೆ ಸಂಬಂಧಿಸಿದಂತೆ ಜನರಲ್ಲಿ ಇಂದಿಗೂ ಉಳಿದುಕೊಂಡು ಬಂದಿರುವ ದಂತಕಥೆ, ಐತಿಹ್ಯ, ಪೌರಾಣಿಕ ಅಂಶಗಳು ಯಾವ ರೀತಿ ಹೆಣದುಕೊಂಡಿವೆ ಮತ್ತು ಆದಿಮಾನವನ ನೆಲೆಗಳೊಂದಿಗೆ ಯಾವ ರೀತಿ ತಳಕು ಹಾಕಿಕೊಂಡಿವೆ ಎಂಬುದನ್ನು ಈ ಅಧ್ಯಯನ ಗುರುತಿಸಿದೆ. ಇದು ಈ ಅಧ್ಯಯನದ ವಿಶೇಷತೆಯಾಗಿದೆ.

ಇದುವರೆಗೆ ಹಲವಾರು ವಿದ್ವಾಂಸರು ಅಧ್ಯಯನ ನಡೆಸಿರುವ ಹಾದಿಯಲ್ಲಿಯೇ ಮುಂದುವರೆದು, ಹಂಪಿ ಪರಿಸರದ ಆದಿಮಾನವನ ನೆಲೆಗಳು ಮತ್ತು ಅವುಗಳ ವೈಶಿಷ್ಟ್ಯವನ್ನು ಗುರುತಿಸುವಲ್ಲಿ ಪ್ರಸ್ತುತ ಅಧ್ಯಯನ ಯಶಸ್ವಿಯಾಗಿದೆ. ಹಾಗೆಯೇ ಆದಿಮಾನವನ ನೆಲೆಗಳ ಅನಿವಾರ್ ಅಂಗಗಳಾದ ಆ ನೆಲೆಗಳಲ್ಲಿ ದೊರೆತ ವಿವಿಧ ಅವಶೇಷಗಳ ಕುರಿತು ಚರ್ಚಿಸಿರುವುದು ಈ ಪ್ರಬಂಧದ ವಿಶೇಷವಾಗಿದೆ.

ಈ ಕಾಲದ ನೆಲೆಗಳು ದೊರೆಯುವ ಬಹುತೇಕ ಪ್ರದೇಶಗಳಲ್ಲಿ ವಿಭಿನ್ನ ರೀತಿಯ ಐತಿಹ್ಯಗಳಿವೆ. ಅನೇಕ ಸ್ಥಳೀಯರು ಅವುಗಳ ಬಳಿ ನಿಧಿ ಇದೆ, ಇವುಗಳನ್ನು ಸರ್ಪ ಕಾಯುತ್ತಿದೆ ಹಾಗೂ ಇದನ್ನು ಮೋರಿಯರು ಇಲ್ಲವೇ ಅತಿಕುಳ್ಳ (ಸೀಮೆ) ಮನುಷ್ಯರು ನಿರ್ಮಿಸಿದ್ದಾರೆಂಬ ಅನೇಕ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಅಲ್ಲದೆ ಇಲ್ಲಿನ ಪ್ರದೇಶಗಳನ್ನು ಬೂದಿಗುಂಡಿ, ಹಾಳೂರು, ವಾಲಿಕಾಷ್ಠ, ವಾಲಿಕಿಲ, ವಾಲಿದಿಬ್ಬ, ರಕ್ಕಸಮಟ್ಟಿ ಎಂತಲೂ ಕರೆಯುತ್ತಾರೆ. ವಿಶೇಷವಾಗಿ ಬೃಹತ್ ಶಿಲಾಯುಗದ ನೆಲೆಗಳಲ್ಲಿನ ಕಲ್ಗೋರಿಗಳನ್ನು ಮೋರಿಯರ ಮನೆ, ಕುಳ್ಳರಮನೆಗಳೆಂದು ಕರೆಯುವ ಪರಿಪಾಠವಿದೆ. ಈ ರೀತಿಯ ಐತಿಹ್ಯಗಳ ಕುರಿತು ವಿವಿಧ ದೃಷ್ಟಿಕೋನಗಳಿಂದ ಅಧ್ಯಯನ ಮಾಡಬೇಕಾದ ಅಗತ್ಯತೆ ಇದೆ. ಅಲ್ಲದೇ ಇಲ್ಲಿನ ಆದಿಮಾನವನ ನೆಲೆಗಳ ಕುರಿತು ಸುದೀರ್ಘವಾಗಿ ಇನ್ನೂ ಹೆಚ್ಚಿನ ಮಟ್ಟದಲ್ಲಿ ಅಧ್ಯಯನ ಮಾಡಲು ಅವಕಾಶವೂ ಇದೆ.

ಹಂಪಿ ಪರಿಸರದ ಆದಿಮಾನವನ ನೆಲೆಗಳ ಕುರಿತು ಇಲ್ಲಿಯವರೆಗೆ ನಡೆದಿರುವ ಕೆಲ ವಿರಳವಾದ ಅಧ್ಯಯನಗಳ ಕುರಿತು ಈ ಹಿಂದೆಯೇ ಸ್ಪಷ್ಟಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಪರಿಸರದ ಆದಿಮಾನವನ ನೆಲೆಗಳು ಮಹತ್ವದ ಕುರಿತು ಒಂದೆಡೆ ಇಡಿಯಾಗಿ ಮಾಹಿತಿ ಲಭ್ಯವಾಗುವಂತೆ ಮೊದಲಬಾರಿಗೆ ಈ ಅಧ್ಯಯನದಲ್ಲಿ ಮಾಡಲಾಗಿದೆ. ಆದರೂ ಈ ನೆಲೆಗಳ ಕುರಿತು ವಿವಿಧ ದೃಷ್ಟಿಕೋನಗಳಿಂದ ಮತ್ತಷ್ಟು ಅಧ್ಯಯನ ನಡೆಸುವುದಕ್ಕೆ ಹೇರಳವಾದ ಅವಕಾಶಗಳಿವೆ.

# ಅನುಬಂಧಗಳು

## ೧. ಸಂಪ್ರದಾಯ ಮತ್ತು ನಂಬಿಕೆಗಳು

ಹಂಪಿ ಪರಿಸರದ ಪ್ರಾಗೈತಿಹಾಸ ಮತ್ತು ಇತಿಹಾಸ ಕಾಲದ ನೆಲೆಗಳೊಂದಿಗೆ ಕೆಲವು ನಂಬಿಕೆ, ಸಂಪ್ರದಾಯಗಳು ಹೆಣೆದುಕೊಂಡಿವೆ. ವೆಂಕಟಾಪುರ ಮತ್ತು ಕುಡತಿನಿ ಬೂದಿದಿಬ್ಬಗಳಿಗೆ ರಾಮಾಯಣದ ವ್ಯಕ್ತಿಗಳನ್ನು ತಳಕು ಹಾಕುವ ಪದ್ಧತಿ ಇದೆ. ವೆಂಕಟಾಪುರದ ಬೂದಿದಿಬ್ಬ ವಾಲಿಯನ್ನು ಸುಟ್ಟಿದ್ದರಿಂದ ಉಂಟಾಯಿತೆಂದು ಹೇಳುತ್ತಾರೆ. ಕುಡತಿನಿಯ ಬೂದಿದಿಬ್ಬ ರಾಮ ಕಾರ್ತೀಕೆಯ ವನದಿಂದ ಕಿಷ್ಕಿಂಧೆಗೆ ಬರುವಾಗ ತನ್ನನ್ನು ತಡೆದ ರಾಕ್ಷಸನನ್ನು ಬಾಣಗಳಿಂದ ಹತ್ಯೆಗೈದು ಸುಟ್ಟಿದ್ದರಿಂದ ಉಂಟಾಯಿತೆಂಬ ನಂಬಿಕೆ ಬೆಳೆದು

ಬಂದಿದೆ. ಇದೇ ರೀತಿಯ ನಂಬಿಕೆ ಸಂಪ್ರದಾಯಗಳು ಆನೆಗುಂದಿ ಮತ್ತು ವೆಂಕಟಾಪುರದಲ್ಲಿರುವ ಬೂದಿದಿಬ್ಬಗಳ ಕುರಿತು ಹೆಣೆದುಕೊಂಡಿರುವುದು ಗಮನಾರ್ಹವಾಗಿದೆ.

ದೊಡ್ಡ ದೊಡ್ಡ ವ್ಯಕ್ತಿಗಳನ್ನೊ, ರಾಕ್ಷಸರನ್ನೋ ಸುಟ್ಟ ಸ್ಮಾರಕಗಳಾಗಿ ಕಾಣುವ ಈ ಬೂದಿದಿಬ್ಬಗಳು, ವೈಜ್ಞಾನಿಕವಾಗಿ ಅಲ್ಲದಿದ್ದರೂ, ಪ್ರಾಚೀನ ಕಾಲದ ಘಟನೆಗಳು ಈ ಅವಶೇಷಗಳೊಂದಿಗೆ ಬೆರೆತು ನೆನಪಿನಲ್ಲಿ ಉಳಿದು ಬಂದಿರುವುದು ಆಶ್ಚರ್ಯವನ್ನು ಉಂಟುಮಾಡುತ್ತದೆ. ಇಲ್ಲಿಯ ಬೃಹತ್ ಶಿಲಾಯುಗದ ಗೋರಿಗಳಿಗೆ ಮೋರಿಯರ ಮನೆಗಳೆಂದೇ ಕರೆಯುವ ರೂಢಿ ಬೆಳೆದು ಬಂದಿದೆ. ಈ ಪ್ರದೇಶದಲ್ಲಿದ್ದ ಮೌರ್ಯರ ಆಡಳಿತ ಜನಮನದಲ್ಲುಳಿದು ಬಾಯಿಯಿಂದ ಬಾಯಿಗೆ ಹರಿದು ಬಂದಿರುವುದನ್ನು ಸೂಚಿಸುತ್ತದೆ. ಹುಲಿಕುಂಟೆಯ ಮಾನವಾಕೃತಿಯ ಬಂಡೆಗಳಿಗೆ ರಾಕ್ಷಸ ಇಲ್ಲವೆ ರಕ್ಕಸ ಕಲ್ಲುಗಳೆಂದೂ, ಆ ಸ್ಥಳವನ್ನು ರಕ್ಕಸರ ಗೊಂದಿ ಎಂದೂ ಕರೆಯಲಾಗುತ್ತದೆ. ಕುಮತಿಯ ಮಾನವಾಕೃತಿ ನಿಲಿಸುಗಲ್ಲುಗಳನ್ನು ಪಾಂಡವರ ಕಲ್ಲು ಇಲ್ಲವೆ ರಕ್ಕಸರ ಕಲ್ಲುಗಳೆಂದು ಕರೆಯಲಾಗುತ್ತಿದೆ.

ಈ ಪ್ರದೇಶದ ಜನರಿಗೆ ಹಬ್ಬ ಹರಿದಿನಗಳಂದು ಇವುಗಳನ್ನು ಪೂಜಿಸುವ ಸಂಪ್ರದಾಯವಿದೆ. ಅನಂತನ ಹುಣ್ಣಿಮೆಗೆ ವಿಶೇಷ ಪೂಜೆ ಮಾಡಿ ಅನ್ನ ಸಂತರ್ಪಣೆ ಮಾಡಲಾಗುತ್ತದೆ. ಪ್ರಾಚೀನ ಕಾಲದಿಂದಲೂ ಇವುಗಳೊಂದಿಗೆ ಹೆಣೆದುಕೊಂಡು ಬಂದಿರುವ ಕಥೆ ಆಶ್ಚರ್ಯಕರವಾಗಿದೆ. ಹಿಂದೆ ಶ್ರೀ ನುಂಕೆ ಭೈರವೇಶ್ವರ ಎಂಬ ದೇವತಾಪುರುಷನಿದ್ದು ಅವನು ಬೇಟೆಗಾಗಿ ಬಂದಾಗ ರಕ್ಕಸರು ಅಡ್ಡಿಯನ್ನುಂಟು ಮಾಡುತ್ತಾರೆ. ಆಗ ಆ ರಕ್ಕಸರು ಕಲ್ಲುಗಳಾಗುವಂತೆ ಶಾಪವೀಯುತ್ತಾನೆ. ಅಂದಿನಿಂದ ಅವು ರಕ್ಕಸರ ಕಲ್ಲುಗಳೆಂದು ಹೆಸರು ಪಡೆದವೆಂಬ ಹೇಳಿಕೆ ಇದೆ.

ಇದಕ್ಕೆ ಪ್ರಚಲಿತವಿರುವ ಕಥೆಯೊಂದಿದೆ. ಮೊಳಕಾಲ್ಮುರು ತಾಲೂಕಿನ ಯರೇನಹಳ್ಳಿ (ಚಿತ್ರದುರ್ಗ. ಜಿ) ಗ್ರಾಮದ ಶ್ರೀ ಅಜ್ಜಮುನಿ ವಿರಚಿತ ಶ್ರೀ ಕಾಲಭೈರವೇಶ್ವರ ಅರ್ಥಾತ್ ಶ್ರೀ ನುಂಕೇಮಲೆ ಸಿದ್ಧೇಶ್ವರ ಎಂಬ ಯಕ್ಷಗಾನ ಬಯಲಾಟದಲ್ಲಿ ಇವುಗಳ ನಿಮಾಣದ ಬಗ್ಗೆ ಉಲ್ಲೇಖ ಬರುತ್ತದೆ. (ಶ್ರೀ ಅಜ್ಜಮುನಿ, ಶ್ರೀ ನುಂಕೇಮಲೆ ಸಿದ್ಧೇಶ್ವರ ಅರ್ಥಾತ್ ಕಾಲಭೈರವೇಶ್ವರ (ಯಕ್ಷಗಾನ) ನಾಟಕ (ಅಪ್ರಕಟಿತ), ಉಲ್ಲೇಖ ಇ.ದ. ೧೪, ಪು. ೧೯-೨೨)

ಅದರಲ್ಲಿ "ಭಲ..ಲಲ..ಅಹೋ ಅಕ್ಕಯ್ಯ ಬೆಂದದಿಂದ ಹಿಂದಕ್ಕೆ ರಕ್ಕಸರೊಡಗೂಡಿ ಬರುವಾಗ ಸಂಧಿಸಿದ ದುರ್ಗಟನೆ ಏನೆಂದರೆ ಭಳಿರೇ…. ಆಕುಲ್ಲ ದಾನವರನ್ನು ಹುಲ್ಲೇಗಳಂ ಕೊಲ್ಲುವ ಸಮಯದಿ ಯಮ್ಮನ್ನು ತಲ್ಲಣಿಸುವಂತೆ ಮಾಡಿದರು. ಅದರಿಂದಲೆ ಭಳಿರೇ…. ಆ ರಕ್ಕಸರನ್ನು ಕುಮ್ತಿ ರೇವಿನಲ್ಲಿಯೇ ಕಲ್ಲಾಗಿ ಬೀಳುವಂತೆ ಬಲ್ಲಿದ ಶಾಪವಂ ಕೊಟ್ಟು ಬಂದೆನು. ಅಲ್ಲಿಂದ ಬರಲು ತಡವುಂಟಾಯಿತಮ್ಮ ಶಿವನ ಪುತ್ರಿ ಸದಮಲಗಾತ್ರಿ" ಎಂದು ತನ್ನ ಅಕ್ಕನಿಗೆ ಶ್ರೀ ಭೈರವೇಶ್ವರನು ತಡವೇಕೆಂದು ಕೇಳಿದ್ದಕ್ಕೆ ಉತ್ತರ ಹೇಳುತ್ತಾನೆ. ಈ ರೀತಿಯಾಗಿ ಅನೇಕ ಕಥೆಗಳು ಇಂತಹ ಅವಶೇಷಗಳೊಂದಿಗೆ ಹೆಣೆದು ಅವುಗಳ ನೆನಪು ನಿರಂತರವಾಗಿ ಮುಂದುವರಿಯಲೆಂದು ನಾಟಕ, ಬಯಲಾಟಗಳಲ್ಲಿ ಬಳಸಿಕೊಂಡಿದ್ದು ಕಂಡುಬರುತ್ತದೆ. ಇದೇ ರೀತಿಯ ಸಂಪ್ರದಾಯ, ನಂಬಿಕೆ, ಆಚರಣೆಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವುದನ್ನು ಗುರುತಿಸಬಹುದಾಗಿದೆ.

**೨. ಪ್ರಮುಖ ಪೌರಾಣಿಕ ಮತ್ತು ತೀರ್ಥಕ್ಷೇತ್ರಗಳು**

ಹಂಪಿ ಪರಿಸರದ ಆದಿಮಾನವನ ನೆಲೆಗಳಾದ ಪಂಪಾಕ್ಷೇತ್ರ ಅಥವಾ ಕಿಷ್ಕಿಂಧ, ಕಾರ್ತಿಕೇಯ ಕ್ಷೇತ್ರ, ಉಚ್ಚಂಗಿದುರ್ಗ ಮತ್ತು ಬಳ್ಳಾರಿ ಮೊದಲಾದ ಸ್ಥಳಗಳ ಸುತ್ತ ಅನೇಕ ಪೌರಾಣಿಕ ಕಥನಕಗಳು ಹುಟ್ಟಿಕೊಂಡಿವೆ. ಅವುಗಳ ಹೆಸರು ಮತ್ತು ಮಹತ್ವದ ಕುರಿತು ದಂತಕಥೆ, ಮಹಾಕಾವ್ಯ, ಸ್ಥಳಪುರಾಣ, ಶಾಸನಗಳಲ್ಲಿ ಉಲ್ಲೇಖವಾಗಿರುವುದು ಗಮನಾರ್ಹ. ಆ ಕುರಿತ ವಿವರ ಮುಂದಿನಂತಿದೆ.

**ಅ. ಪಂಪಾಕ್ಷೇತ್ರ- ಕಿಷ್ಕಿಂಧ**

ಹಂಪಿ ಪ್ರಾಚೀನ ಕಾಲದಿಂದಲೂ ಪಂಪಾ ವಿರೂಪಾಕ್ಷರ ವಾಸಸ್ಥಾನವೆಂಬ ಹೇಳಿಕೆ ಪ್ರಸಿದ್ಧವಾಗಿದೆ. ಅಲ್ಲಿ ಪಂಪಾದೇವಿ ಶಿವನನ್ನು ಕುರಿತು ತಪಸ್ಸು ಕೈಗೊಂಡು ಲಗ್ನವಾದಳೆಂಬ ನಂಬಿಕೆ ಬೆಳೆದು ಬಂದಿದೆ. ಶಾಸನಗಳು ಇದನ್ನು ಪಂಪಾಕ್ಷೇತ್ರ, ಭಾಸ್ಕರ ಕ್ಷೇತ್ರವೆಂದು ಕರೆದಿವೆ. ಬಾದಮಿ ಚಾಲುಕ್ಯ ಅರಸ ವಿನಯಾದಿತ್ಯನ ಕ್ರಿ.ಶ. ೬೮೯ರ ತಾಮ್ರಪಟ ಶಾಸನದಲ್ಲಿ (I.A.VI, P. ೮೫) "ಪಂಪಾತಟ ಮಧಿವಸಾತಿ ವಿಜಯಸ್ಕಂಧಾವಾರ" ಎಂದಿದೆ. ಇದರಿಂದ ವಿಜಯದ ಬಿಡಾರವನ್ನು ಪಂಪಾನದಿಯ ದಂಡೆಯ ಮೇಲೆ ಬಿಡಲಾಗಿತ್ತೆಂದು ತಿಳಿಯುತ್ತದೆ. ಕ್ರಿ.ಶ. ೧೪೦೬ರ ಮೋರಗೆರೆ ಶಾಸನದಲ್ಲಿ (S.I.I.IX (i), ೧೦೪, ೧೦೪೬, ಮೋರಗೆರೆ (ಹಗರಿಬೊಮ್ಮನಹಳ್ಳಿ ತಾ.) ಈ ಪ್ರದೇಶದ ಪ್ರಮುಖ ದೇವತೆಯಾದ ವಿರೂಪಾಕ್ಷ ದೇವನ ಉಲ್ಲೇಖವಿದೆ. ಹಂಪಿಯ ದುರ್ಗಾ ದೇವಾಲಯದ ಹತ್ತಿರವಿರುವ ಎರಡನೆಯ ರಾಚಮಲ್ಲದ ಶಾಸನದಲ್ಲಿ (ಅದೇ.IV ೨೬೦, ೧೧೯೯, ಹಂಪಿ (ಹೊಸಪೇಟೆ ತಾ.) ಪಂಪಾತೀರ್ಥದ 'ಹಂಪಾದೇವಿ' ವಿರೂಪಾಕ್ಷ ದೇವ 'ಭೈರವ ದೇವರಿಗೆ' ದಾನ ಕೊಟ್ಟ ವಿಷಯವಿದೆ. ಕ್ರಿ.ಶ. ೧೧೬೪ರ ಕಲಚೂರಿ ಬಿಜ್ಜಳನ ಶಾಸನದಲ್ಲಿ (Sundar A. Hampi: Ancient Kishkinda, P. 34-38) ವಿರೂಪಾಕ್ಷನ ಸನ್ನಿಧಿಯಲ್ಲಿ ಕುಕನೂರಿನ ಮಲ್ಲಿಕಾರ್ಜುನ ದೇವರಿಗೆ ಗ್ರಾಮವನ್ನು ದತ್ತಿ ಬಿಡಲಾಗಿದೆ. ಕ್ರಿ.ಶ. ೧೨೩೭ರ ಸೋಮೇಶ್ವರ ದೇವರ ಶಾಸನದಿಂದ (Rajasekhara S., Inscriptions of Vijayanagar, Vijayanagar City and Empire, Vol.I) ವಿರೂಪಾಕ್ಷನ ಆರಾಧನೆಗಾಗಿ ಹಣ ದಾನ ಮಾಡಿದ ವಿಷಯ ತಿಳಿಯುತ್ತದೆ. ಇವುಗಳಿಂದ ಕ್ರಿ.ಶ. ೭ನೆಯ ಶತಮಾನದ ಮುಂಚಿನಿಂದಲೇ ಪಂಪಾಕ್ಷೇತ್ರದ 'ವಿರೂಪಾಕ್ಷ ಹಂಪಾದೇವಿ'ಯರ ಆರಾಧನೆ ನಡೆದು ಬಂದಿತೆಂದು ಸ್ಪಷ್ಟವಾಗುತ್ತದೆ.

ಪಂಪಾಕ್ಷೇತ್ರದೊಂದಿಗೆ ಈ ಸ್ಥಳಕ್ಕೆ ಕಿಷ್ಕಿಂಧ ಎಂಬ ಹೆಸರು ಬಹು ಹಿಂದಿನಿಂದಲೇ ಪ್ರಚಲಿತವಿತ್ತು. ಪ್ರಾಗೈತಿಹಾಸ ಕಾಲದಿಂದ ೧೫ನೆಯ ಶತಮಾನದವರೆಗೆ ನಡೆದು ಬಂದ ಚಟುವಟಿಕೆಗಳಿಂದ ಇದು ಪ್ರಾಚೀನ ಕಾಲದ ಕಿಷ್ಕಿಂಧವಾಗಿತ್ತೆಂದು ತಿಳಿಯುತ್ತದೆ. ಈ ಭಾಗದಲ್ಲಿ ಅನೇಕ ವರ್ಷಗಳವರೆಗೆ ಸಂಸೋಧನೆ ಅಧ್ಯಯನ ಮಾಡಿದ ಅ. ಸುಂದರ ಅವರು ಇದಕ್ಕೆ ಸಂಬಂಧಿಸಿದ ಕೆಲವು ಆಕರಗಳನ್ನು ಒದಗಿಸಿದ್ದಾರೆ. ಇಲ್ಲಿಯ ಪಂಪಾಸರೋವರ, ಋಷ್ಯ ಮುಖ ಪರ್ವತ, ವಾಲಿಭಂಡಾರ, ಮತಂಗಪರ್ವತ, ಅಂಜನಾದ್ರಿ, ಇದಕ್ಕೆ ಹತ್ತಿರವಿದ್ದ ಕಾರ್ತೀಕೆಯವನ (ಕುಡತಿನಿ), ಋಷ್ಯಶೃಂಗಮುನಿ ಆಶ್ರಮ (ಸಿರಸಂಗಿ) ಇತಿಹಾಸ ಕಾಲದ ಅನೇಕ ಶಾಸನಗಳು ರಾಮಾಯಣದ ಕಿಷ್ಕಿಂದವಾಗಿತ್ತೆಂಬುದನ್ನು ಪುಷ್ಟೀಕರಿಸುತ್ತವೆ.

ಶಿರಸಂಗಿ ಕಾಳಮ್ಮ ದೇವಾಲಯದಲ್ಲಿರುವ ಶಾಸನದಲ್ಲಿ "..ಹಿಮವತ್ಪರ್ಬ್ವತ ವಿಂಧ್ಯಶೈಳಪತಿ ಕಿಷ್ಕಿಂಧಾದ್ರಿ ಈ ಮೂಮಿ ಭೂದ್ರಮೆ ಪೂರ್ವ್ವಾಂಪರ ವಾರ್ಧ್ಧಿಯಾಂಕೆ ನಿಜ ವಿಸ್ತಾರಕ್ಕೆನಲು ನೀಳ್ದವಾ ಹಿಮವದ್ವಿಂಧ್ಯಧರಾಧರಂಗಳೆಂರಡಕ್ಕಂ ತಾನೇ ಮೇಲಾದೆದೆ(ದುದು)ತ್ತಮ ಕಿಷ್ಕಿಂಧಗಿರೀಂದ್ರವೆ (ಉ)ತ್ತಮ ಜನೌಘಂ ತಂನೊಳೊಪುತ್ತಿರಲು ಅವರಾರೆನೆ ತರದಿಂ ಬಾಲಿಮರತ್ಸುತಾಂಗದದಿನೇಶಾಪತ್ಯತಾರಾ ಮನೋಹರಿ ವಿಪ್ರರ್ಷಿ ಮತಂಗ ಹಂಸ ಕಪಿಲ ಶ್ರೀಶೌನಕಾಗಸ್ತ್ಯ ಸಚ್ಚರಿತೋದ್ಭಾಸಿ ವಿಭಾಂಡಕ ಪ್ರಿಯಸುತ ಶ್ರೀರಿಶ್ಯಶ್ರೀಂಗ ಬ್ರತೀಶ್ವರರ್ಗಾಯಿತಾಶ್ರಯವಂತ ದೆಂಬೆನ ವಿ ಯೆಂ ಕಿಷ್ಕಿಂಧಮಂ ಬಣ್ಣಿಸಲು" ಎನ್ನುವುದರಿಂದ.

ಪೂರ್ವ ಪಶ್ಚಿಮ ಹಾಗೂ ಸಮುದ್ರ ಪರ್ಯಂತ ವಿಸ್ತಾರವಾದ ಭೂಮಿಗೆ ಹಿಮವತ್ಪರ್ವತ, ವಿಂಧ್ಯ ಹಾಗೂ ಕಿಷ್ಕಿಂಧ ಈ ಮೂರು ಪರ್ವತಗಳು ಉನ್ನತವಾದವು. ಮೂರು ಪರ್ವತಗಳಲ್ಲಿ ಅತ್ಯಂತ ಶ್ರೇಷ್ಠವಾದುದು, ಉತ್ತಮವಾದುದು ಎಂದರೆ ಕಿಷ್ಕಿಂಧಾಗಿರಿಯೇ. ಇದು ಜನನಿಬಿಡ ನಗರವಾಗಿತ್ತು. ಅದರಲ್ಲಿ ವಾಲಿ, ಮರುತ್ಸುತ, ಅಂಗದ, ದಿನೇಶ, ಮತಂಗ, ಹಂಸ, ಕಪಿ, ಶೌನಕ, ಅಗಸ್ತ್ಯ, ವಿಭಾಂಡಕನ ಪುತ್ರ ಋಷ್ಯಶೃಂಗ ಮೊದಲಾದ ಋಷಿಗಳಿಗೆ ಆಶ್ರಮಸ್ಥಾನವಾಗಿತ್ತೆಂದು ವರ್ಣಿಸುತ್ತದೆ. ಹಂಪಿಯಿಂದ ೧೦ ಕಿ.ಮೀ. ದೂರದಲ್ಲಿ ದೇವಿಘಾಟ್ ಎಂಬಲ್ಲಿ ಕ್ರಿ.ಶ. ೧೦೭೯ರ ಶಾಸನದಲ್ಲಿ. (Sundar A., "New light Trnds in Anegondi Region during Vijayanagara priod" Early Vijayanagar) 'ತುಂಗಭದ್ರಾ ತಟದ ಬಡಗ ಕಿಷ್ಕಿಂಧಾಮಿಪರ್ವತಂ' ಎಂದು ಉಲ್ಲೇಖವಿದೆ. ಸುಮಾರು ೧೦೦೦ ವರ್ಷಗಳಿಂದ ಶಾಸನಗಳಲ್ಲಿ ಉಲ್ಲೇಖವಾಗುತ್ತ ಬಂದಿರುವ ಈ ಸ್ಥಳವು ಅಂದಿನ ಜನರಿಗೆ ಹಿಂದಿನಿಂದಳು ಪರಿಚಯವಿರುವುದುನ್ನು ತೋರಿಸುತ್ತದೆ.

ಯಾವುದೇ ಒಂದು ಘಟನೆಗೆ ಮೂಲ ಪ್ರೇರಣೆ ಇದ್ದೇ ಇರುತ್ತದೆ. ಇದರಿಂದ ಬಾಯಿಂದ ಬಾಯಿಗೆ ಕಥೆಯ ರೂಪದಲ್ಲಿ ಬಂದಂಥ ಈ ಕಾವ್ಯಗಳು ನಂತರ ಇಡೀ ಭಾರತದ ಜನಸಾಮಾನ್ಯರನ್ನು ತಲುಪಲು ಸಾಧ್ಯವಾಯಿತು. ಭವಭೂತಿ, ಭಾಸ, ಕಾಳಿದಾಸ ಮೊದಲಾದ ಕವಿಗಳು, ಶಿಲ್ಪಿಗಳು, ಚಿತ್ರಕಾರರು, ಸಂಗೀತಗಾರರು ಇತಿಹಾಸದುದ್ದಕ್ಕೂ ತಮ್ಮ ಕೃತಿಗಳಲ್ಲಿ ಬಳಸಿಕೊಳ್ಳಲು ಕಾರಣವಾಯಿತು.

**ಆ. ಕಾರ್ತಿಕೇಯ ಕ್ಷೇತ್ರ**

ಕುಡತಿನಿ ಮತ್ತು ಸಂಡೂರು ಪ್ರದೇಶವನ್ನು ಕಾರ್ತಿಕೇಯ ಕ್ಷೇತ್ರವೆಂದು ಕರೆಯಲಾಗುತ್ತದೆ. ಸ್ಥಳಪುರಾಣದ ಉಲ್ಲೇಖದಂತೆ ಈ ಪರ್ವತಕ್ಕೆ ಕೃತಯುಗದಲ್ಲಿ 'ದೇವಗಿರಿ' ಎಂದೂ ತ್ರೇತಾಯುಗದಲ್ಲಿ 'ಸ್ವರ್ಣಗಿರಿ'ಯೆಂದೂ ದ್ವಾಪರಯುಗದಲ್ಲಿ 'ದ್ವಿವ್ಯಾಚಲ'ವೆಂದೂ ಕಲಿಯುಗದಲ್ಲಿ 'ಲೋಹಾಚಲ'ವೆಂದೂ ಕರೆಯಲಾಗುತ್ತಿತ್ತು. (ಬ್ರಹ್ಮಶ್ರೀ ಬಾಲಚಂದ್ರ ಶಾಸ್ತ್ರೀ, ಶ್ರೀ ಸ್ಕಂದ ಕ್ಷೇತ್ರ ಮಹಾತ್ಮೆ, ಪು. ೩) ತಾರಕಾದಿ ಅಸುರರ ಸಂಹಾರಕ್ಕಾಗಿ ಸ್ವಾಮಿ ಕಾರ್ತಿಕೇಯನು ಬ್ರಹ್ಮಾದಿ ದೇವತೆಗಳಿಂದ ಪ್ರಾರ್ಥನೆ ಮಾಡಿಸಿ ಕೊಂಡು ದೇವಸೇನಾಧಿಪತ್ಯವನ್ನು ವಹಿಸಿ ಒಂದು ಈ ಪರ್ವತದಲ್ಲಿ ನೆಲೆನಿಂತನೆಂಬ ಪ್ರತೀತಿ ಇದೆ. ರಾಮಾಯಣ ಕಾಲದಲ್ಲಿ ರಾಮಾಯಣ ಕಾಲದಲ್ಲಿ ರಾಮ, ಮಹಾಭಾರತದ ಕಾಲದಲ್ಲಿ ಪಾಂಡವರು ಮತ್ತು ಅಗಸ್ತ್ಯ ಋಷಿ ಮೊದಲಾದವರು ಈ ಸ್ಥಳಕ್ಕೆ ಭೇಟಿ ನೀಡಿದರೆಂಬ ನಂಬಿಕೆ ಇದೆ. ಕಾರ್ತಿಕೇಯ ದೇವಾಲಯದ ಮುಂಭಾಗದಲ್ಲಿರುವ ಪಂಚಲಿಂಗಗಳು ಪಂಚಪಾಂಡವರಿಂದ ಸ್ಥಾಪಿಸಲ್ಪಟ್ಟವೆಂದೂ, ಭೀಮತೀರ್ಥ ಭೀಮನ ಗದೆಯಿಮದ ಉಂಟಾದುದೆಂದೂ ಹೇಳಿಕೆಯಿದೆ. ಆದಿಕಾಲದಿಂದ ಅನೇಕ ನಂಬಿಕೆ, ಸಂಪ್ರದಾಯಗಳಿಗೆ ಒಳಗಾದ ಈ ಪ್ರದೇಶದಲ್ಲಿ ಉಲ್ಲೇಖಿತ ಕೈಫಿಯತ್ತನ್ನೇ ಆಧಾರವನ್ನಿಟ್ಟುಕೊಮಡು ಕ್ಷೇತ್ರಕಾರ್ಯ ಕೈಗೊಂಡಾಗ ಕೆಲವು ಮಾಹಿತಿಗಳು ಲಭ್ಯವಾದವು.

ಕೈಫಿಯತ್ತಿನ ಪ್ರಕಾರ (ಕಲಬುರ್ಗಿ ಎಂ.ಎಂ. (ಸಂ), ಕರ್ನಾಟಕದ ಕೈಫಿಯತ್ತುಗಳು, ಪು. ೫೪೦-೫೫೧) 'ಷಣ್ಮುಖನು ಕೈಲಾಸದಿಂದ ಒಂದು ಪಂಪಾಕ್ಷೇತ್ರಕ್ಕೆ ಅಗ್ನಿ ಭಾಗದಲ್ಲಿ ಹತ್ತು ಹರದಾರಿಯ ಮೇಲೆ ಕೆಲವು ಅರಣ್ಯವಾದ ಸ್ಥಳದ ಮಧ್ಯದಲ್ಲೊಂದು ಪಾತಾಳಗೃಹದ ಒಳಗೆ ಕುಳಿತು ಇರಲಾಗಿ, ಪಾರ್ವತಿ ಪ್ರತ್ರಮೋಹದಿಂದಾಗಿ ಹುಡುಕುತ್ತ ಬರಲಾಗಿ, ಆ ಷಣ್ಮುಖನು ತಾಯಿನ ಕಂಡು, ಗೃಹದ ಒಳಗಿಂದಾ ಇಲ್ಲಿ ನೈರುತ್ಯ ಭಾಗದಲ್ಲಿ ಏಳು ಹರದಾರಿಯಲ್ಲಿ ಇರುವಂತಾ ಅರಣ್ಯ ಪ್ರದೇಶಕ್ಕೆ ಹೋಗಿ, ಅಲ್ಲೊಂದು ಪರ್ವತದ ಮೇಲೆ ನಿಂತರು, ಇಲ್ಲಿಂದಾ ಷಣ್ಮುಖಸ್ವಾಮಿ ಬಿಲದ್ವಾರದಿಂದಾ ಹೋಗಿ ಆ ಬೆಟ್ಟದ ಮೇಲೆ ಹೋಗಿ ನಿಂತ ಕಾರಣ ಆ ಬೆಟ್ಟಕ್ಕೆ ದೇವದ್ವಾರ ಪರ್ವತವೆಂದು ನಾಮ ಪ್ರಸಿದ್ಧಿಯಾಗಿ ಇದೆ. ಅದಕ್ಕೆ ಸಾಮಾನ್ಯ ಜನರು ಅವರ ಅಜ್ಞಾನತತ್ವದಿಂದ ದೇವದಾರಿ ಬೆಟ್ಟವೆಂದು ಹೇಳಿಕೊಳ್ಳುತ್ತಿದ್ದಾರೆ. ಅದೇ ಜಾಗಕ್ಕೆ ಕೆಲವು ಜನರು ಪಾದ ಗಟ್ಟೆಯೆಂಬುವ ನಾಮವೆಂದು ಹೇಳಿಕೊಳ್ಳುತ್ತಾಯಿದ್ದಾರೆ.

ಅಲ್ಲಿ ನಿಂತವನಾಗಿ ಅಷ್ಟದಿಕ್ಕನ್ನು ನೋಡಿ ನಾನು ಇರುವುದಕ್ಕೆ ಆ ಪರ್ವತಕ್ಕೆ ದಕ್ಷಿಣ ಭಾಗದಲ್ಲೂ ಎರಡು ಹರದಾರಿ ಪರ್ವತದ ಅಗಸ್ತ್ಯ ಆಶ್ರಮಕ್ಕೆ ಪಶ್ಚಿಮ ಭಾಗಕ್ಕೆ ನಿಮ್ಮನ್ನು ಪಾರ್ವತಿ ಪರಮೇಶ್ವರನು ಆ ಪರ್ವತದ ಒಳಗೆ ಬಂದಲ್ಲಿ ಈ ಸ್ಥಳದಲ್ಲಿ ಪಾರ್ವತಿಗೆ ಮೊಲಿಯ ತೋರುತ್ತಾ ಈ ಸಾರೋಧಾರವಾಗಿ ಕ್ಷೀರವನ್ನು ಸುರಿಯಲಾಗಿ, ಆ ಸ್ಥಳ ಶ್ವೇತವರ್ಣವು ಇದ್ದುದರಿಂದ ಜನರು ವಿಭೂತಿ ಬೆಟ್ಟವೆಂದು ಪ್ರಸಿದ್ಧಿಯಾಯಿತು.

ನಮ್ಮ ಪುತ್ರನು ಇದ್ದಾನೆಂದು ನಿಶ್ಚಿಯಿಸಿ, ಹುಡುಕುತ್ತಾ ಇರಲಾಗಿ ಗುಪ್ತಾ ಗುಹ್ಯ ವೆಂಬುದರಲ್ಲಿ ಕಾಣಲಾಗಿ ಗುಪ್ತಸ್ವಾಮಿಯೆಂಬುವ ನಾಮಯಿಟ್ಟು.... ದೈತ್ಯರ ಸಂಹಾರ ಮಾಡಲಾಗಿ ಅವರ ಶ್ರೋಣಿತವನ್ನು ಹರಿಯಲಾಗಿ, ನದಿ ಪ್ರವಾಹವಾಗಿ ಹರಿಯಲಾಗಿ ಶ್ರೋಣಿಪುರ ಎಂಬುವವನಿದ್ದ ಪಟ್ಟಣ ಪ್ರದೇಶಕ್ಕೆ ನಾಮವಾಯಿತು. ಕುಮಾರಸ್ವಾಮಿ ಇದ್ದ ಕಾರಣ ಸ್ಕಂದ ಪುರಾಯಂಬೊ ನಾಮವೂ ಪ್ರಬಲವಾಯಿತು.

ಈ ಸ್ಥಳದಲ್ಲಿ ಕುಮಾರಸ್ವಾಮಿ ಕುಲಿತು ಹೋದ ತರಿವಾಯ, ಕಲಿಯುಗದಲ್ಲಿ ಕಲ್ರಿ(ರಿ)ರಿ ಚೋಳಮಹಾರಾಜರು... ಅರಸನ ಮಗಳಿಗೆ, ಬ್ರಹ್ಮರಾಕ್ಷಸನ ಘಟನೆಯಾದ್ದರಿಂದ, ಎಷ್ಟು ಸಮರ್ಥರಾಗಿದ್ದ ಮಂತ್ರದಿಂದ ಅಸಾಧ್ಯ ಆದುದರಿಂದ...ಯಿದೆ (ವೈದ್ಯ) ರಾದವರನ ಕರೆಸಿ ಇದಕ್ಕೆ ಸಾಧನವೇನೆಂದು ಕೇಳಲಾಗಿ ಅವರು ಹೇಳಿದ್ದು 'ದೇವರ ಸೇವೆಯಿಂದಲೇ ನಿರ್ವಾಹಕವಾಗಬೇಕೇ' ಹೊರತು ಮನುಷ್ಯ

ಮಾತ್ರದವರ ಕೈಯಿಂದಾ ನಿರ್ವಾಹವಾಗಲಿಕ್ಕಿಲ್ಲ. ಆದ್ದರಿಂದ ಒಂದು ದಿವಸಕ್ಕೆ ಈಶ್ವರ ದೇವಾಲಯವೊಂದು ಬಾವಿಯನ್ನು ಈ ಪ್ರಕಾರ ಕಟ್ಟಿಸಿದರೆ ಬ್ರಹ್ಮರಾಕ್ಷಸ ಬಿಟ್ಟುಹೋದಿತೆಂದು ಹೇಳಿದ ಕಾರಣ ದೇವಾಲಯಗಳು ಬಾವಿಗಳು ಕಟ್ಟಿಕೊಳ್ಳುತ್ತ ಈ ಸ್ಥಳಕ್ಕೆ ಬಂದು, ಈ ಸ್ಥಳದಲ್ಲೂ ಆ ವೇಳೆಗೆ ಇದ್ದ ಋಷಿಗಳನ್ನು ಕಂಡು ನಮಸ್ಕಾರ ಮಾಡಿ ಈ ಸ್ಥಳದ ಮಹತ್ವಯೇನು? 'ಎಂದು ವಿಚಾರಿಸಲಾಗಿ ಅವರು ಹೇಳಿದ್ದು, ಈ ಸ್ಥಳದಲ್ಲೊಂದು ಪಾತಾಳಗೃಹವಿದ್ದಿತು. ಅಲ್ಲಿ ಪೂರ್ವದಲ್ಲಿ ಈಶ್ವರನ ಪುತ್ರನಾದ ಕುಮಾರಸ್ವಾಮಿ ಬಂದು ಕುಳಿತನು. ಆದ್ದರಿಂದ ಈ ಸ್ಥಳಕ್ಕೆ ಕೊಮಾರ ಕ್ಷೇತ್ರವೆಂದು ತಪ್ಪಸ್ಸು ಮಾಡಿಕೊಳ್ಳುತ್ತ ಇದ್ದೇವೆ'... ಇದು ಮಹಾಕ್ಷೇತ್ರವೆಂದು ತಿಳಿದು ನೂರೊಂದು ದೇವಾಲಯಗಳ ಕಟ್ಟಿ ಆ ದೇವಾಲಯಗಳಿಗೆ ಈಶ್ವರಲಿಂಗ ಪ್ರತಿಷ್ಠೆ ಮಾಡಿಸಿ ಹಾಗೆ ನೂರೊಂದು ಬಾವಿಗಳನ್ನು ಕಟ್ಟಿಸಿ, ಆ ದೇವರುಗಳಿಗೆ ಧೂಪ, ದೀಪ ನೈವೇದ್ಯ ಅಮೃತಪಡಿ ನಂದಾದೀಪಾದಿಗಳು ನಡೆಸುವ ಹಾಗೆ ಭೂಸ್ವಾಸ್ತಿಯನ್ನು ನಿರ್ಣಯಿಸಿ ಹಾಗೆ ಕೆಲವು ಅಗ್ರಹಾರಗಳ ಏರ್ಪಾಡು ಮಾಡಿ ಬ್ರಹ್ಮರಿಗೆ ಧಾರಾಪೂರ್ವಕ ಮಾಡಿಬಿಟ್ಟರು.... "ಪೂರ್ವದಲ್ಲಿ ಕೊಮಾರಸ್ವಾಮಿ ಇಲ್ಲಿ ಕುಳಿತಾ" ಎಂದು ಋಷಿಗಳು ಹೇಳಿದ ಕಾರಣ ಕುಳಿತನೋಯೆಂಬ ಅಗ್ರಹಾರವೆಂದು ಗ್ರಾಮಕ್ಕೆ ವ್ಯವಹಾರ ನಾಮವೆಂದು ಪ್ರಸಿದ್ಧಿಯಾಯಿತು.

ಮೇಲಿನ ವಿಷಯವನ್ನು ಗಮನಿಸಿದಾಗ ಕುಡತಿನಿ ಗ್ರಾಮದ ಮೂಲ ಹೆಸರು ಕುಳಿತನೋಯೆಂಬ ಅಗ್ರಹಾರವಾಗಿದ್ದು, ರಾಷ್ಟ್ರಕೂಟರಿಂದ ವಿಜಯನಗರ ಕಾಲಾವಧಿಯಲ್ಲಿ ಅಗ್ರಹಾರ ಕೊಟ್ಟಿತೊನೆ ನಂತರ ಕುಡತಿನಿ (ಕುಳಿತನೋ> ಕೊಟ್ಟಿತೊನೆ>ಕುಡತಿನಿ) ಎಂದಾಯಿತು.

ಈ ಕೈಫಿಯತ್ತಿನಲ್ಲಿ ಹೆಸರಿಸಲಾದ ಸ್ಥಳಗಳನ್ನು ಪರಿಶೀಲಿಸಿದಾಗ, ಈ ಕೆಳಗಿನ ಅಂಶಗಳು ಕಂಡುಬರುತ್ತವೆ.

೧. ಕುಮಾರನು ಕೈಲಾಸದಿಂದ ಬಂದು ಪಂಪಾಕ್ಷೇತ್ರದಿಂದ ಹತ್ತು ಹರದಾರಿ ಆಗ್ನೇಯಕ್ಕೆ ಅರಣ್ಯ ಪ್ರದೇಶದಲ್ಲಿ ಪಾತಾಳಗೃಹದಲ್ಲಿ ಕುಳಿತುಕೊಳ್ಳುತ್ತಾನೆ. ಈ ಗ್ರಾಮದ ಮಧ್ಯದಲ್ಲಿರುವ ಕುಮಾರಸ್ವಾಮಿ ದೇವಾಲಯದಲ್ಲಿ ಒಂದೇ ಸಾಲಿನಲ್ಲಿ ಮೂರು ಗರ್ಭಗೃಹಗಳಿವೆ. ಅವುಗಳಲ್ಲಿ ಬಲಭಾಗ ಗಣೇಶ, ಮಧ್ಯೆ ಕುಮಾರಸ್ವಾಮಿ ಮತ್ತು ಎಡಭಾಗ ವಿಷ್ಣು ಅಥವಾ ನಾರಾಯಣನ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿತ್ತು. ಕುಮಾರಸ್ವಾಮಿ ಮತ್ತು ವಿಷ್ಣುವಿನ ಗರ್ಭಗೃಹಗಳ ಮಧ್ಯದ ಗೋಡೆಯಲ್ಲಿ ಒಂದು ಚಿಕ್ಕ ಕಿಂಡಿಯನ್ನು ಬಿಡಲಾಗಿದೆ. ಈ ಕಿಂಡಿಯನ್ನು ಪ್ರವೇಶಿಸಿದರೆ ಒಂದು ಚೌಕಾಕಾರದ ಗವಿ. ಅದರ ದಕ್ಷಿಣ ಭಾಗದಲ್ಲಿ ಅಂದರೆ ಕುಮಾರಸ್ವಾಮಿ ಗರ್ಭಗೃಹದ ತಳಭಾಗ ಅದು ಪಾತಾಳಕ್ಕೆ ಮುಂದುವರೆದುಕೊಂಡು ಹೋಗಿದೆ. ಸ್ಥಳೀಯ ಜನರು ಈ ಗವಿಯಲ್ಲಿ ಋಷಿಗಳು ತಪಸ್ಸು, ಮಾಡುತ್ತಿದ್ದರೆಂದು ಹೇಳುತ್ತಾರೆ. ಈ ಗವಿಯ ಮೇಲೆ ಕ್ರಿ.ಶ. ೯೬೭ರಲ್ಲಿ ಗದಾಧರನು ಒಂದು ಚಿಕ್ಕ ದೇವಾಲಯವನ್ನು ಕಟ್ಟಿಸಿ ಅದರಲ್ಲಿ ಸ್ಕಂದನ ಮೂರ್ತಿ ಪ್ರತಿಷ್ಠಾಪಿಸಿದನು. ನಂತರ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಮೂರು ಗರ್ಭಗೃಹಗಳನ್ನು ಹೊಂದಿದ ವಿಶಾಲವಾದ ದೇವಾಲಯವನ್ನು ಪುನಃ ನಿರ್ಮಿಸಲಾಯಿತು. ಈ ದೇವಾಲಯದ ಎರಡು ಗರ್ಭಗೃಹಗಳ ಪ್ರವೇಶ ದ್ವಾರದ ದ್ವಾರಪಾಲಕರ ಕೈಗಳಲ್ಲಿ ತ್ರಿಶೂಲ ಡಮರುಗಳಿದ್ದರೆ, ಒಂದು ಗರ್ಭಗೃಹದ ಪ್ರವೇಶದ್ವಾರದ ದ್ವಾರಪಾಲಕರ ಕೈಗಳಲ್ಲಿ ಶಂಕ, ಚಕ್ರಗಳಿವೆ. ಈಗ ಗರ್ಭಗೃಹದಲ್ಲಿ, ಗಣೇಶನ ಮೂರ್ತಿ ಇದ್ದು, ಮೊದಲಿದ್ದ ಕಾರ್ತಿಕೇಯ, ವಿಷ್ಣುವಿನ ಮೂರ್ತಿಗಳು ಹಾಳಾಗಿವೆ.

೧. ಕುಮಾರನು ಪಾತಾಳಗೃಹದ ಒಳಗಿಂದ ನೈರುತ್ಯ ಭಾಗದಲ್ಲಿ ಏಳು ಹರದಾರಿಯಲ್ಲಿರುವ ಪರ್ವತದ ಮೇಲೆ ನಿಂತುಕೊಳ್ಳುತ್ತಾನೆ. ಸಂಡೂರಿನ ಈಶಾನ್ಯ ಭಾಗದಲ್ಲಿರುವ ದೇವದಾರಿ ಬೆಟ್ಟ ಅಥವಾ ಪಾದಗಟ್ಟೆ ಎಂದು ಕರೆಯುವ ಪರ್ವತದ ಮೇಲೆ ದೊಡ್ಡ ದೊಡ್ಡ ಬಂಡೆಗಳ ಮೇಲೆ ಪಾದಗಳನ್ನು ಕೊರೆಯಲಾಗಿದೆ. ಮೂರು ದಿಕ್ಕುಗಳಲ್ಲಿರುವ ಪಾದಗಳ ಮೇಲೆ ದೇವಾಲಯಗಳನ್ನು ನಿರ್ಮಿಸಲಾಗಿದೆ. ಈ ಎಲ್ಲ ಪಾದಗಳು ಕುಮಾರಸ್ವಾಮಿಯವೆಂದು ಸ್ಥಳೀಯ ಜನರು ಕರೆಯುತ್ತಾರೆ. ಕೈಫಿಯತ್ತಿನಲ್ಲಿ ಉಲ್ಲೇಖಿಸಿದಂತೆ ಕುಮಾರನು ಪರ್ವತದ ಮೇಲೆ ನಿಂತು ಅಷ್ಟದಿಕ್ಕುಗಳನ್ನು ವೀಕ್ಷಿಸಿದನು ಎಂಬುದಕ್ಕೆ ನಾಲ್ಕು ದಿಕ್ಕುಗಳಿಗಿರುವ ಪಾದಗಳು ಸರಿಹೊಂದುತ್ತವೆ.

೨. ದೇವದಾರಿ ಬೆಟ್ಟದಿಂದ ಎರಡು ಹರದಾರಿ ದಕ್ಷಿಣಕ್ಕೆ ಪರ್ವತದ ಮೇಲೆ ನಿಂತು ಪಾರ್ವತಿಗೆ ಮೊಲೆ ತೋರುತ್ತ ಸಾರೋಧಾರವಾಗಿ ಕ್ಷೀರವನ್ನು ಸುರಿಯುತ್ತಾನೆ. ಪಾರ್ವತಿ, ಪರಮೇಶ್ವರರು ಕುಮಾರನಿಗೆ ಲಗ್ನವಾಗಲು ಹೇಳುತ್ತಾರೆ. ಅದಕ್ಕೆ ಕುಮಾರನು ಒಪ್ಪದಿದ್ದಾಗ

ಪಾರ್ವತಿ 'ಎಲೈ ಕುಮಾರ, ಚಿಕ್ಕಂದಿನಿಂದ ನಿನಗೆ ಸ್ತನ್ಯಪಾನ ಮಾಡಿಸಿ ಹಾಲು-ಬೆಣ್ಣೆ ಕೊಟ್ಟು ಪೋಷಿಸಿದ್ದಕ್ಕೆ ಚೆನ್ನಾಗಿ ಉಪಕಾರ ತೀರಿಸಿದೆ ಎಂದಳು. ಇದಕ್ಕೆ ಸ್ಕಂದನು, ತೆಗೆದುಕೋ ನಿನ್ನ ಹಾಲು-ಬೆಣ್ಣೆ ಎಂದು ವಾಂತಿ ಮಾಡಿಕೊಳ್ಳುತ್ತಾನೆ. ಈ ಸ್ಥಳವು ಸಂಡೂರು ಕುಮಾರಸ್ವಾಮಿ ಬೆಟ್ಟದಲ್ಲಿ ಅಗಸ್ತ್ಯ ತೀರ್ಥದಿಂದ ಒಂದು ಮೈಲು ಪೂರ್ವಭಾಗದಲ್ಲಿದೆ. ಕುಮಾರನು ಹಾಲು ವಾಂತಿ ಮಾಡಿಕೊಂಡಿದ್ದರಿಂದ ಕೆಂಪು-ಬಿಳಿ ಬಣ್ಣದ್ದಾಗಿದೆ ಎಂದು ನಂಬಿಕೆ ಮತ್ತು ಜನರು ಇದನ್ನು ವಿಭೂತಿ ಬೆಟ್ಟವೆಂದು ಕರೆಯುತ್ತಾರೆ.

೩. ಪಾರ್ವತಿ ಪರಮೇಶ್ವರರು ಕುಮಾರನನ್ನು ಹುಡುಕುತ್ತ ಇದ್ದಾಗ ಗುಪ್ತಗುಹೆಯಲ್ಲಿ ಕಾಣಿಸಿಕೊಂಡಿದ್ದರಿಂದ ಗುಪ್ತಸ್ವಾಮಿ ಎಂದು ಹೆಸರನ್ನಿಡುತ್ತಾರೆ ಕುಮಾರಸ್ವಾಮಿ ದೇವಾಲಯದಿಂದ ಸುಮಾರು ನಾಲ್ಕು ಮೇಲು ವಾಯವ್ಯಕ್ಕೆ ಒಂದೇ ಸ್ಥಳದಲ್ಲಿ ಪ್ರಕಟಸ್ವಾಮಿ ಮತ್ತು ಗುಪ್ತಸ್ವಾಮಿಯ ಗುಹೆಗಳಿವೆ. ಪಾರ್ವತಿಗೆ ಕುಮಾರನು ಇಲ್ಲಿ ಸಿಕ್ಕಿ (ಪ್ರಕಟ)ದ್ದರಿಂದ ಪ್ರಕಟಸ್ವಾಮಿ ಮತ್ತು ಗುಹೆಯಲ್ಲಿ ಕುಳಿತದ್ದರಿಂದ ಗುಪ್ತಸ್ವಾಮಿ ಎಂಬ ಹೆಸರುಗಳು ಬಂದವು. ಹೊರಮಲೈ ಸೀಮೆಯವರು ಈ ದೇವರುಗಳನ್ನು ಗುಪ್ತಸ್ವಾಮಿ, ಪ್ರಕಟಸ್ವಾಮಿಗಳೆಂದೇ ಕರೆಯುತ್ತಾರೆ. ಈಗಲೂ ಮಳೆ ಬರದೇ ಇದ್ದಾಗ ಈ ದೇವರುಗಳಿಗೆ ಪರವು ಮಾಡಿದರೆ ಗುಡ್ಡ ಇಳಿದು ಬರುವುದರೊಳಗೆ ಮಳೆ ಬರುತ್ತದೆಂದು ಅಲ್ಲಿಯ ಜನರ ನಂಬಿಕೆ.

೪. ಕುಮಾರ ದೈತ್ಯರನ್ನು ಸಂಹಾರ ಮಾಡಿದಾಗ ಅವರ ಶ್ರೋಣಿತವು ನದಿ ಪ್ರವಾಹವಾಗಿ ಹರಿಯುತ್ತದೆ ಈ ನದಿ ಸಂಡೂರು ಮತ್ತು ಕುಮಾರಸ್ವಾಮಿ ಬೆಟ್ಟದ ಮಧ್ಯದಲ್ಲಿದೆ. ಇದನ್ನು ಶ್ರೋಣಿತ ನದಿ ಎಂದು ಕರೆಯುತ್ತಾರೆ. ಇದನ್ನು ಗಮನಿಸಿದರೆ ದಂತಕಥೆ ಮತ್ತು ಪೌರಾಣಿಕ ಕಥೆಗಳಿಂದ ಕೂಡಿದ ಇವು ಮುಂದೆ ಚಾರಿತ್ರಿಕ ಸ್ಥಳಗಳಾಗಿ ಮಾರ್ಪಾಡುಗೊಂಡಿದ್ದು ಗಮನಾರ್ಹವಾಗಿದೆ.

**ಇ. ಶತಕೋಟಿ ತೀರ್ಥ**

ಕುಡತಿನಿ ಶಾಸನಗಳಲ್ಲಿ ಉಲ್ಲೇಖವಾದ ಶತಕೋಟಿ ತೀರ್ಥವು ಕುಮಾರ ಸ್ವಾಮಿ ದೇವಾಲಯದ ಅಂತರಾಳದಲ್ಲಿರುವ ತೀರ್ಥವೇ ಆಗಿದೆ. ಈ ತೀರ್ಥವನ್ನು ಸೇವಿಸಿದವರು ರೋಗಗಳಿಂದ ಮತ್ತು ಪಾಪಗಳಿಂದ ಮುಕ್ತರಾಗುವರೆಂಬ ನಂಬಿಕೆಯೂ ಕೂಡ ಇತ್ತು.

ಕರಿಕಾಲ ಜೋಳ ಮಹಾರಾಜನು ಇದು ಮಹಾಕ್ಷೇತ್ರವೆಂದು ತಿಳಿದು ನೂರೊಂದು ದೇವಾಲಯ ಮತ್ತು ಬಾವಿಗಳನ್ನು ಕಟ್ಟಿಸಿದನು. ಕರಿಕಾಲ ಚೋಳ ಮಹಾರಾಜನು ತಪೋವನದ ಋಷಿಗಳನ್ನು ಭೇಟಿಯಾದದ್ದು ಕುಡತಿನಿಯಲ್ಲಿ. ಈ ಪ್ರದೇಶದಲ್ಲಿಯೇ ನೂರೊಂದು ದೇವಾಲಯ ಮತ್ತು ಬಾವಿಗಳನ್ನು ಕಟ್ಟಿಸಿದನು. ಕುಡತಿನಿ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ನೂರಾ ಮೂವತ್ತಕ್ಕಿಂತಲೂ ಹೆಚ್ಚು ದೇವಾಲಯ ಮತ್ತು ನೂರಕ್ಕಿಂತಲೂ ಹೆಚ್ಚು ಬಾವಿಗಳಿದ್ದವೆಂದು ಸ್ಥಳೀಯ ಜನರಿಂದ ತಿಳಿದುಬರುತ್ತದೆ. ಈಗಲೂ ಕುಡತಿನಿ ಗ್ರಾಮದಲ್ಲಿ ಬಹಳಷ್ಟು ದೇವಾಲಯ ಮತ್ತು ಬಾವಿಗಳು ಇವೆ. ಅಲ್ಲದೆ ಗ್ರಾಮದ ಸುತ್ತಲಿನ ಪ್ರದೇಶದಲ್ಲಿ ಹಾಳಾದ ದೇವಾಲಯ, ಅದರ ಅವಶೇಷಗಳು ಕಂಡುಬರುತ್ತವೆ.

**ಈ. ಪಂಪಾ ಸರೋವರ**

ಪಂಪಾ ಸರೋವರ ನಿಸರ್ಗ ನಿರ್ಮಿತ ಗುಹೆಗಳಲ್ಲಿ ಎರಡು ಸಾವಿರ ವರ್ಷಗಳ ಪೂರ್ವದ ವರ್ಣಚಿತ್ರಗಳಿವೆ. ಆನೆಗುಂದಿ ಹತ್ತಿರ ಗವಿಯೊಂದರಲ್ಲಿ ಮನುಷ್ಯನಿಗೆ ಉದ್ದ ಬಾಲವಿರುವುದು ಗಮನಾರ್ಹ. ಇಂಥ ಬಾಲವುಳ್ಳ ಮನುಷ್ಯರ ಚಿತ್ರಗಳು ಇದಕ್ಕೆ ಹತ್ತಿರದಲ್ಲಿ ಹಿರೇಬೆನಕಲ್ಲು, ಮಲ್ಲಾಪುರಗಳಲ್ಲೂ ಕಂಡುಬರುತ್ತವೆ. ವಾಲಿಭಂಡಾರದ ಬಂಡೆಯ ಮೇಲೆ ಹಲವಾರು ವಾನರರು ಹಣ್ಣುಗಳನ್ನು ಕೀಳುವುದು ಮತ್ತು ತಿನ್ನುತ್ತಿರುವುದನ್ನು ಚಿತ್ರಿಸಲಾಗಿದೆ. ಇದು ತಕ್ಕಮಟ್ಟಿಗೆ ಹನುಮಂತನು ಸೀತೆಯನ್ನು ಹುಡುಕಿ ಸಂತೋಷದಿಂದ ಹಣ್ಣುಹಂಪಲುಗಳಿಂದ ನಿಬಿಡಲಾದ “ಮಧುವನ”ವನ್ನು ಪ್ರವೇಶಿಸಿದ ಸಂದರ್ಭವನ್ನು ಸೂಚಿಸುತ್ತದೆ. ನವ ಬೃಂದಾವನ ಸಮೀಪ ನದಿ ದಂಡೆಯ ಮೆಲೆ ಚಿಂಚಲಕೋಟೆ ಇದೆ. ನಂತರದ ಅವಧಿಯಲ್ಲಿ ಒಂದುವರೆ ಮೀಟರ್ನಷ್ಟು ಎತ್ತರ, ಒಂದು ಮೀಟರ್ನಷ್ಟು ಅಗಲವಾಗಿರುವ ಗೋಡೆಯನ್ನು ಕೆತ್ತಿದ ದೊಡ್ಡ ದೊಡ್ಡ ಕಲ್ಲುಗಳನ್ನು ಬಳಸಿ ನಿರ್ಮಿಸಿದ ಇದನ್ನು ಅದೇ ಹೆಸರಿನಿಂದ ಕರೆಯಲಾಗುತ್ತಿತ್ತೆಂದು “ಕಿಷ್ಕಿಂಧೆ ಹನುಮನ ತವರು” ಎನ್ನುವ ಲೇಖನದಲ್ಲಿ ಅ.ಸುಂದರ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಬಲಶಾಲಿಯಾದ ವಾಲಿಗೆ ಹೆದರಿ ಸುಗ್ರೀವ-ಹನುಮಂತಾದಿಗಳು ಆತಂಕದಿಂದ ಕಾಲಕಳೆಯುತ್ತಿದ್ದಾಗ, ದುಃಖತಪ್ತರಾದ ರಾಮ-ಲಕ್ಷ್ಮಣರು, ಸೀತೆಯ ಶೋಧನೆಗೆ ಬರುತ್ತಿರುವುದನ್ನು ಕಂಡು ಇವರು ವಾಲಿಯ ಕಡೆಯ ಗುಪ್ತಚಾರರಿರಬಹುದೆಂದು ಸಂದೇಹಗೊಂಡ ಮನಸ್ಸು ಚಂಚಲವಾಯಿತು. ಇದರಿಂದ ಚೆ(ಚ)ಚಲ ಕೋಟೆ ಎಂದು ಹೆಸರು ಬಂತೆಂದು ಸ್ಥಳೀಯರ ಪ್ರತೀತಿ. ಈ ಕಣಿವೆ ಪ್ರದೇಶದಲ್ಲಿ ಸುಮಾರು ೨೦೦೦ ವರ್ಷಗಳ ಹಿಂದೆ ಜನವಸತಿ ಇದ್ದ ಕುರುಹುಗಳಿವೆ. ರಾಮ-ಲಕ್ಷ್ಮಣ, ಸುಗ್ರೀವರ ಮೊದಲ ಭೇಟಿ ಮತಂಗ ಪರ್ವತದಲ್ಲಾಗುತ್ತದೆ. ಹೆಚ್ಚುಕಾಲ ಸುಗ್ರೀವ ಈ ಪರ್ವತದಲ್ಲಿಯೇ ಕಳೆಯುತ್ತಿದ್ದ ಕಾರಣ ವಾಲಿ, ದುಂದುಭಿ ಎಂಬ ಅಸುರನನ್ನು ಕೊಂದಾಗ, ಅವನ ರುಂಡ ಈ ಪರ್ವತದಲ್ಲಿ ತಪಸ್ಸು ಮಾಡಿಕೊಂಡಿದ್ದ ಮಾತಂಗ ಮುನಿಯ ಆಶ್ರಮದಲ್ಲಿ ಬಂದು ಬೀಳುತ್ತದೆ. ಕೋಪಗೊಂಡ ಮುನಿ ವಾಲಿ ಮರಳಿ ಇಲ್ಲಿಗೆ ಬಂದರೆ ಬದುಕಲಾರ ಎಂದು ಶಾಪಕೊಡುತ್ತಾನೆ. ಇದರಿಂದ ವಾಲಿ ಇಲ್ಲಿಗೆ ಬರುವಂತಿರಲಿಲ್ಲ ಎಂದು ಬೆನಕಲ್ ರಾಮರಾವ್ 'ಪುರಾಣನಾಮ ಚೂಡಾಮಣಿ' ಎಂಬ ಗ್ರಂಥದಲ್ಲಿ ದಾಖಲಿಸಿದ್ದಾರೆ.

ರಾಮ-ಲಕ್ಷ್ಮಣ, ಸುಗ್ರೀವರ ನಡುವೆ ನಡೆದ ಒಪ್ಪಂದದಂತೆ ವಾಲಿಯನ್ನು ಹತ್ಯೆಗೈಲು ರಾಮ ಒಪ್ಪಿಕೊಂಡನು. ಆದರೆ ಸುಗ್ರೀವನಿಗೆ ಬಲಿಷ್ಠನಾದ ವಾಲಿಯನ್ನು ಕೊಲ್ಲಲು ರಾಮನಲ್ಲಿರುವ ಶಸ್ತ್ರಾಸ್ತ್ರಗಳ ಬಗ್ಗೆ ಸಂದೇಹ ಉಂಟಾಗುತ್ತದೆ. ಅದಕ್ಕೆ ರಾಮನು ತನ್ನಲ್ಲಿರುವ ಶಕ್ತಿ ಸಾಮರ್ಥ್ಯವನ್ನು ಹೊಂದಿದ ಶಸ್ತ್ರಾಸ್ತ್ರಗಳ ಬಗ್ಗೆ ಅವನಿಗೆ ತಿಳಿಸುವಾಗ ತನ್ನ ಬಾಣಗಳು ಕಾರ್ತಿಕೇಯ ವನದಲ್ಲಿ ಸಿದ್ಧವಾದವು. ಅವು ಹೇಮವಿಭೂಷಿತಾ…. ಮಹೇಂದ್ರಾಶನಿಸನ್ನಿಭಾಃ… ಸುಪವರ್ಣ ಸುತೀಕ್ಷ್ಣಾಗ್ರಾಃ ಎಂದು ಹೇಳುತ್ತಾನೆ. ಇದು ರಂಗನಾಥ ಶರ್ಮಾ ಎನ್. ಸಂಪಾದಿಸಿರುವ "ಕಿಷ್ಕಿಂಧ ಕಾಂಡ" ಕೃತಿಯಲ್ಲಿ ಉಲ್ಲೇಖ ವಿದೆ.

ಹಂಪಿ-ಆನೆಗುಂದಿ ಮತ್ತು ಅದರ ಸುತ್ತಮುತ್ತಲಿನ ಸ್ಥಳಗಳಲ್ಲಿಯ ಪ್ರಾಗೈತಿಹಾಸ ಕಾಲದ ಅವಶೇಷಗಳು ಮತ್ತು ಕ್ರಿ.ಪೂ. ೩-೨ನೆಯ ಶತಮಾನದ ಅಶೋಕನ ಶಾಸನಗಳು ಹಾಗೂ ಹಂಪಿಯಲ್ಲಿ ಕಂಡುಬಂದಿರುವ ೨ನೇಯ ಶತಮಾನದ ಬೌದ್ಧಫಲಕಗಳಿಂದ ಕ್ರಿ.ಶ. ೧ನೇಯ ಶತಮಾನದ ವೇಳೆಗೆ ಒಂದು ನಗರವಾಗಿ ಪರಿಣಮಿಸಿದಂತೆ ಕಾಣುತ್ತದೆ. ಇದರಿಂದ ಕನಿಷ್ಠ ೪೦೦೦ ವರ್ಷಗಳ ಹಿಂದಿನಿಂದಾದರೂ ರಾಮಾಯಣ ಮಹಾಕಾವ್ಯದ ಕಿಷ್ಕಿಂದ ಎಂಬ ಹೆಸರಿಗೆ ಈ ಪ್ರದೇಶ ಒಳಪಟ್ಟಿರಬಹುದು.

**೩. ಬೂದಿದಿಬ್ಬಗಳು**

ನೂತನ ಶಿಲಾಯುಗ, ಶಿಲಾ ತಾಮ್ರಯುಗ ಮತ್ತು ಕಬ್ಬಿಣ ಬೃಹತ್ ಶಿಲಾಯುಗ ಕಾಲಗಳಲ್ಲಿ ಕಂಡುಬರುವ ಪ್ರಮುಖ ಅವಶೇಷವೆಂದರೆ ಬೂದಿದಿಬ್ಬಗಳು. ಈ ಹಂತದಲ್ಲಿ ಕೃಷಿಯಂತೆ ಪಶುಪಾಲನೆ ವೃತ್ತಿ ಆಭಿವೃದ್ಧಿ ಹೊಂದಿತ್ತು. ದನಗಳ ಸಗಣಿಯನ್ನು ಸುಡುವಿಕೆಯಿಂದ ನಿರ್ಮಾಣವಾದ ಬೃಹದಾಕಾರದ ಬೂದಿದಿಬ್ಬಳು ಪಶುಸಾಕಾಣಿಕೆಯ ಪ್ರಮಾಣವನ್ನು ಸೂಚಿಸುತ್ತವೆ. ಇವು ಕರ್ನಾಟಕ ಆಂಧ್ರ ಭಾಗಗಳಲ್ಲಿ ಅಂದರೆ ಭೀಮಾ, ಕೃಷ್ಣಾ, ತುಂಗಭದ್ರಾ ನದಿ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಈ ಪ್ರದೇಶದಲ್ಲಿ ಕಪ್ಪಗಲ್ಲು, ಸಂಗನಕಲ್ಲು, ಹಳೆನೆಲ್ಲುಡಿ, ಇಂಗಳಗಿ, ಕುರೆಕುಪ್ಪ, ಕುಡತಿನಿ, ಕಾಕುಬಾಳು, ಗಾದಿಗನೂರು, ನಿಂಬಾಪುರ, ಇದಕ್ಕೆ ಹೊಂದಿಕೊಂಡಂತೆ ತುಂಗಭದ್ರಾ ನದಿ ಎಡ ಪ್ರದೇಶದಲ್ಲಿ ಇಂದರ್ಗಿ, ಹಿರೇಬೆನಕಲ್ಲು, ಮುಸಲಾಪುರ, ವೆಂಕಟಾಪುರ ಮೊದಲಾದ ನೆಲೆಗಳಲ್ಲಿ ಕಾಣಸಿಗುತ್ತವೆ. ಅತಿ ಬೃಹದಾಕಾರ ಮತ್ತು ಹೆಚ್ಚಿನ ಪ್ರಮಾಣದಲ್ಲಿ ಸುಟ್ಟ ಬೂದಿಕಿಟ್ಟ ದಿನ್ನೆಗಳಾದ ಇವುಗಳಲ್ಲಿ ಬಹಳಷ್ಟು ಹಾಳಾಗಿವೆ. ಕೆಲವು ಸ್ವಲ್ಪಮಟ್ಟಿಗೆ ಮೊದಲಿನ ರೂಪದಲ್ಲಿರುವುದರಿಂದ ಅವು ಎಷ್ಟು ದೊಡ್ಡದಾಗಿದ್ದವು ಎಂದು ತಿಳಿಯಲು ಸಾಧ್ಯವಾಗಿದೆ. ಕುಡತಿನಿ (ಬಳ್ಳಾರಿ ಜಿಲ್ಲೆ) ಸಮೀಪ ಮತ್ತು ಹಟ್ಟಿಯಲ್ಲಿರುವ ಬೂದಿದಿನ್ನೆಗಳು ಈಗಲೂ ದೊಡ್ಡದಿವೆ. ೧೮೪೦ರ ದಶಕದಿಂದ ೧೯೬೩ರ ತನಕ ಸುಮಾರು ೭೦-೭೫ ನೆಲೆಗಳ್ಲಲಿ ಇಂಥ ಬೂದಿದಿನ್ನೆಗಳ ಅವಶೇಷಗಳು ಶೋಧವಾಗಿವೆ. ರಾಬರ್ಟ್ ಬ್ರೂಸ್ಫೂಟ್ ಅವರು ಕೆಲವು ಬೂದಿದಿನ್ನೆಗಳನ್ನು ಮತ್ತು ಸುತ್ತಮುತ್ತಲಿನ ನೂತನ ಶಿಲಾಸಂಸ್ಕೃತಿಗಳ ಅವಶೇಷಗಳನ್ನು ಪರಿಶೀಲಿಸಿ ಅವುಗಳನ್ನು India Pre-Proto. Antiquitesಎಂಬ ತಮ್ಮ ಕೃತಿಯಲ್ಲಿ ದಾಖಲಿಸಿ ಅವು ಅದೇ ಕಾಲದವೆಂದು ಅಭಿಪ್ರಾಯಪಟ್ಟಿದ್ದಾರೆ. ಅವರು ಒಬ್ಬ ರಸಾಯನಶಾಸ್ತ್ರಜ್ಞನ ಸಹಾಯದಿಂದ ಸಗಣಿಯನ್ನು ಅತಿ ಹೆಚ್ಚಿನ ಶಾಖದಲ್ಲಿ ಅಂದರೆ ಸುಮಾರು ೧೨೦೦ ಸೆಂಟಿಗ್ರೇಡ್‌ನಲ್ಲಿ ಸುಟ್ಟಿದ್ದರಿಂದ ಇವು ಇಂಥ ಬೂದಿಕಿಟ್ಟದ ದಿನ್ನೆಗಳಾಗಿವೆ ಎಂದು ಸಿದ್ಧಮಾಡಿದರು. ಇವುಗಳ ಹುಟ್ಟು ಮತ್ತು ಸಗಣಿಯನ್ನು ಇಷ್ಟು ದೊಡ್ಡ ಪ್ರಮಾಣದಲ್ಲಿ ಸುಡುವ ಉದ್ದೇಶ ಮತ್ತು ಇವುಗಳ ಕಾರಣಕರ್ತರ ಬಗ್ಗೆ ೧೯೬೫ ಮತ್ತು ನಂತರದಲ್ಲೂ

ಅಧ್ಯಯನ ಮುಂದುವರಿದಿದೆ. ಉತ್ತನೂರಿನ ಒಂದು ಬೂದಿದಿನ್ನೆಯನ್ನು ವೈಜ್ಞಾನಿಕವಾಗಿ ಉತ್ಖನನ ಮಾಡಲಾಗಿದೆ. ಇದಕ್ಕೂ ಮುಂಚೆ ಮಜುಮದಾರ ಮತ್ತು ರಾಜಗುರು ಅವರು ಸಂಗನಕಲ್ಲಿನ ಬೂದಿದಿಬ್ಬ ಹಾಗೂ ರಾಮರೆಡ್ಡಿ ಪಾಳ್ಯದಲ್ಲಿಯ ಬೂದಿದಿಬ್ಬಗಳನ್ನು ಉತ್ಖನನ ಮಾಡಿ ತಮ್ಮ ತಮ್ಮ ಅಧ್ಯಯನ ಆಧಾರಿತ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಈ ನಿಟ್ಟಿನಲ್ಲಿ ೧೯೯೨-೯೩ನೇ ಸಾಲಿನಲ್ಲಿ ಪದ್ದಯ್ಯ ಬೂದಿಹಾಳದಲ್ಲಿಯ ಬೂದಿದಿಬ್ಬವನ್ನು ಉತ್ಖನನ ಮಾಡಿದ್ದಾರೆ. ಇದರ ಫಲಿತಾಂಶವನ್ನು ಸಂಕ್ಷಿಪ್ತವಾಗಿ ಅ.ಸುಂದರ ಅವರು ಸಂಪಾದಿಸಿರುವ ಕರ್ನಾಟಕ ಚರಿತ್ರೆ ಸಂ.೧ರಲ್ಲಿ ಈ ಮುಂದಿನಂತೆ ದಾಖಲಿಸಿದ್ದಾರೆ.

೧. ಆಲ್ಚಿನ್ ಅವರ ಪ್ರಕಾರ, ಈ ಬೂದಿದಿನ್ನೆಗಳ ನೆಲೆಗಳು ಮೂಲತಃ ದನಕರುಗಳ ದೊಡ್ಡಿಗಳು. ಇಲ್ಲಿ ಕ್ರಮೇಣ ದೊಡ್ಡ ಪ್ರಮಾಣದಲ್ಲಿ ಸಗಣಿ ಸಂಗ್ರಹ ವಾಗುತ್ತಿತ್ತು. ಒಂದು ಹಂತದಲ್ಲಿ ಈ ದೊಡ್ಡ ಸಗಣಿ ರಾಶಿಯನ್ನು ತಮ್ಮ ಸಮಾಜದ ವಿಧಿ ವಿಧಾನದಂತೆ ಸುಡಲಾಗುತ್ತಿತ್ತು. ಮತ್ತೆ ಅದೇ ಸ್ಥಳದಲ್ಲಿ ದೊಡ್ಡಿಯನ್ನು ಕಟ್ಟಿ ಸಗಣಿ ಸಂಗ್ರಹಕ್ಕೆ ಎಡೆ ಮಾಡುತ್ತಿದ್ದರು. ಅದನ್ನು ಮತ್ತೆ ಸುಡಲಾಗುತ್ತಿತ್ತು. ಈ ದಹನಕ್ರಿಯೆ ಅತಿ ನಿಧಾನವಾಗಿ ಒಳಗೊಳಗೆ ನಡೆಯುತ್ತಿದ್ದರಿಂದ ಕ್ರಮೇಣ ಅಲ್ಲಿ ಬೂದಿ ಕಿಟ್ಟದ ಎರಡು ಮೂರು ಪದರುಗಳು ರಚನೆಯಾಗುತ್ತಿದ್ದವು. ಈ ಒಂದು ಧಾರ್ಮಿಕ ಕಟ್ಟಳೆ ಇಂದಿಗೂ ಉಳಿದು ಬಂದಿದ್ದು, ಅದನ್ನು ಹೋಳಿ, ದೀಪಾವಳಿ ಹಬ್ಬಗಳಲ್ಲಿ ಕಾಣಬಹುದು.

೨. ರಾಮಿರೆಡ್ಡಿ ಅವರ ಪ್ರಕಾರ, ಈ ಬೂದಿದಿನ್ನೆಗಳು ಮೂಲದಲ್ಲಿ ಕಬ್ಬಿಣ ಅದಿರನ್ನು ಸಂಗ್ರಹಿಸಿ ಲೋಹ ಮಾಡುವುದಕ್ಕೋಸ್ಕರ ಸುಟ್ಟಿದ್ದರಿಂದ ಉಂಟಾದವು.

೩. ಮಜುಮದಾರ ಮತ್ತು ರಾಜಗುರು ಅವರ ಪ್ರಕರ, ಇವು ಮೂಲತಃ ದೊಡ್ಡಿಗಳಲ್ಲ. ದೊಡ್ಡಿಗಳಿಂದ ಸಗಣಿಯನ್ನು ಸಂಗ್ರಹಿಸಿ ಬೇರೆಡೆಯಲ್ಲಿ ಒಟ್ಟುತ್ತಿದ್ದರು. ಅಂತಹ ಒಟ್ಟಿನ ನೆಲೆಗಳು ಇವು.

೪. ಪದ್ದಯ್ಯನವರ ಪ್ರಕಾರ, ದೊಡ್ಡಿ ಮತ್ತು ಸಗಣಿ ಒಟ್ಟಿದ ನೆಲೆಗಳು ಬೇರೆ ಬೇರೆ ಯಾಗಿದ್ದರೂ ಒಂದಕ್ಕೊಂದು ಹತ್ತಿರದಲ್ಲಿಯೇ ಇದ್ದವು. ಆಗಿನ ಕಾಲದಲ್ಲಿ ಕೃಷಿಗೆ ಸಗಣಿ ಗೊಬ್ಬರವನ್ನು ಉಪಯೋಗಿಸುತ್ತಿದ್ದುದಕ್ಕೆ ಪುರಾವೆಗಳಿಲ್ಲ. ಒಂದು ವೇಳೆ ಉಪಯೋಗಿಸಿದ್ದರೂ ಅದರ ಪ್ರಮಾಣ ಕಡಿಮೆ. ಆ ಜನರು ತಕ್ಕಮಟ್ಟಿಗೆ ದೊಡ್ಡ ಪ್ರಮಾಣದಲ್ಲಿ ದನಕರುಗಳನ್ನು ಸಾಕುತ್ತಿದ್ದುದರಿಂದ ಸಗಣಿಯ ಪ್ರಮಾಣ ಹೆಚ್ಚಾಗಿರುತ್ತಿತ್ತು. ಆದ್ದರಿಂದ ಉಪಯೋಗವಾಗದ ಸಗಣಿಯನ್ನು ಈ ರೀತಿ ಆಗಾಗ್ಗೆ ಸುಡಲಾಗುತ್ತಿತ್ತು. ಇದರ ಬೆಂಕಿಯು ದಿನಗಟ್ಟಲೆ ಇದ್ದುದರಿಂದ ಸಾಕಿದ ಪ್ರಾಣಿಗಳು ಹಾಗೂ ಮನುಷ್ಯರನ್ನು ಹಿಡಿಯಲು ಬರುತ್ತಿದ್ದ ಕಾಡುಪ್ರಾಣಿಗಳನ್ನು ದೂರವಿಡಲು ಇದೊಂದು ಕ್ರಮವಾಗಿತ್ತು.

೫. ಅ. ಸುಂದರ ಅವರ ಪ್ರಕಾರ, ಬಹಳ ಹಿಂದಿನ ಕಾಲದಲ್ಲಿ ಸುಡುವ ವಿಧಾನದಿಂದ ಶವಸಂಸ್ಕಾರ ಮಾಡುತ್ತಿದ್ದ ಜನವರ್ಗಗಳ ಪ್ರಸಿದ್ಧ ಶೂರರ ನೆನಪಿನಲ್ಲಿ ಆಗಾಗ್ಗೆ ಇಂಥ ದೊಡ್ಡ ಪ್ರಮಾಣದ ಸಗಣಿಯನ್ನು ಸುಡುವ ಆಚರಣೆ ಇದ್ದಿರಬೇಕು. ಕುಡತಿನಿ ಸಮೀಪದ ಬೂದಿಗುಡ್ಡೆಯ ಮಹಾಭಾರತದ ಹಿಡಿಂಬಾಸುರನನ್ನು ಸುಟ್ಟಿದ್ದರಿಂದಾಗಿ ಉಂಟಾಯಿತೆಂದು ಸ್ಥಳೀಯರ ಹೇಳಿಕೆ. ಹಿಂದಿನಿಂದ ಬಂದ ಸ್ಥಳೀಯರ ಹೇಳಿಕೆಯಂತೆ ವೆಂಕಟಾಪುರದಲ್ಲಿಯ ಬೂದಿದಿನ್ನೆಯನ್ನು ವಾಲಿ ದಿಬ್ಬವೆಂದು ಕರೆಯಲಾಗಿದೆ. ನಾಗಲಾಪುರದ (ತುಮಕೂರು ಜಿಲ್ಲೆ) ಇಂಥ ಬೂದಿದಿನ್ನೆಯನ್ನು 'ವಾಲಿದಿಬ್ಬ'ವೆಂದು ಹೇಳಲಾಗುತ್ತಿದೆ. ಆದ್ದರಿಂದ ಈ ದಿನ್ನೆಗಳು ದೊಡ್ಡ ಪ್ರಮಾಣದ ಸ್ಮಾರಕ ದಹನಗಳಿಂದ ಉಂಟಾದವು.

ಹೀಗೆ ಬೂದಿದಿನ್ನೆಗಳ ಬಗ್ಗೆ ವಿಭಿನ್ನ ಅಭಿಪ್ರಾಯಗಳಿವೆ. ಆದರೆ ಇವು ಕಂಡು ಬಂದಿರುವ ಭೌಗೋಳಿಕ ಪರಿಸರವನ್ನು ಗಮನಿಸಿದರೆ, ಬಳ್ಳಾರಿ, ರಾಯಚೂರು, ಗುಲಬರ್ಗಾ, ಆಂಧ್ರ ಭಾಗದಲ್ಲಿ ಕಾಡು-ಬೆಟ್ಟ, ಶಿಲೆಗಳಿಂದ ಆವೃತಗೊಂಡ ಈ ಪ್ರದೇಶಗಳಲ್ಲಿ ಒಂದು ಕಾಲದಲ್ಲಿ ಕೃಷಿಗೆ ಯೋಗ್ಯವಾದ ಭೂಮಿ ಇರಲಿಲ್ಲವೆಂದು ತೋರುತ್ತದೆ. ಬಹಳ ಪ್ರಯತ್ನದ ಮೂಲಕ ಅದನ್ನು ಬಳಕೆ ಮಾಡಿಕೊಳ್ಳಬೇಕಾಗುತ್ತಿತ್ತು. ಇದರಿಂದ ಇಲ್ಲಿಯ ಜನವರ್ಗ ಪಶುಪಾಲನೆ ವೃತ್ತಿಯನ್ನು ಪ್ರಮುಖವಾಗಿ ಅವಲಂಬಿಸಿದಂತೆ ಕಾಣುತ್ತದೆ. ಈ ಬೆಟ್ಟ ಕಾಡುಗಳಲ್ಲಿ ಸುಮಾರು ದಿನಗಳ ಕಾಲ ವಾಸಮಾಡುತ್ತ ದೊಡ್ಡಿಗಳನ್ನು ಕಟ್ಟಿ ದನಗಳನ್ನು ಸಾಕಿರಬೇಕು. ಪ್ರತಿದಿನ

ಸಂಗ್ರಹವಾಗುವ ಸಗಣಿಯನ್ನು ಪಕ್ಕದಲ್ಲಿ ಹಾಕಿ ನಿರಂತರವಾಗಿ ಅದರ ಮೇಲೆ ಚಲನವಲನಗಳು ನಡೆದು ಗಟ್ಟಿಗೊಳ್ಳುತ್ತಿತ್ತು. ನಂತರ ಈ ಸ್ಥಳವನ್ನು ಬಿಟ್ಟು ಹೋಗುವಾಗ ಬೆಂಕಿ ಹಚ್ಚುತ್ತಿದ್ದಂತೆ ಕಾಣುತ್ತದೆ. ದನಗಾಯಿಗಳು ಒಂದು ಪ್ರದೇಶದಿಂದ ಬೇರೆ ಹುಲ್ಲುಗಾವಲು ಪ್ರದೇಶವನ್ನು ಅರಸುತ್ತ ಹೋಗುವುದು ಸ್ವಾಭಾವಿಕ. ಇದು ನಿಧಾನವಾಗಿ ಸುಟ್ಟಿದ್ದರಿಂದ ಬೂದಿ ಉಂಡೆಗಳು ಉಂಟಾಗಿರಬೇಕು.

ಈ ಪ್ರದೇಶದಲ್ಲಿ ಕೈಗೊಂಡ ಅನ್ವೇಷಣೆ ಮತ್ತು ಉತ್ಖನನಗಳಲ್ಲಿ ದೊರೆತ ಪ್ರಾಗೈತಿಹಾಸ ಕಾಲದ ಅವಶೇಷಗಳಿಂದ ಆದಿಮಾನವನ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಬೂದಿದಿಬ್ಬಗಳ ಪಾತ್ರ ಗಮನಾರ್ಹವಾದುದು.

**೧. ಹಂಪಿ**




ಬಳ್ಳಾರಿ ಜಿಲ್ಲೆಯ ನಕ್ಷೆ

I. ಬಳ್ಳಾರಿ

II. ಸಿರಗುಪ್ಪ

III. ಹೊಸಪೇಟೆ

IV. ಸಂಡೂರು

V. ಕೂಡ್ಲಿಗಿ

VI. ಹಗರಿಬೊಮ್ಮನಹಳ್ಳಿ

VII. ಹೂವಿನಹಡಗಲಿ




ಕೊಪ್ಪಳ ಜಿಲ್ಲೆಯ ನಕ್ಷೆ

—- = ಗಡಿ

- = ತಾಲೂಕು ಕೇಂದ್ರ

I. = ಕೊಪ್ಪಳ

II. = ಗಂಗಾವತಿ

III. = ಯಲಬುರ್ಗಾ

IV. = ಕುಷ್ಠಗಿ

**ರೇಖಾ ಚಿತ್ರಗಳು**



ಹಂಪಿಯ ವಿರೂಪಾಕ್ಷ ದೇವಾಲಯದ ಹಿಂಬದಿ ರಸ್ತೆಯಲ್ಲಿರುವ ಬೆಟ್ಟದಲ್ಲಿನ ಚಿತ್ರಗಳು



ಹಂಪಿಯಿಂದ ರಘುನಂದನ ತೀರ್ಥಕ್ಕೆ (ಸುಗ್ರೀವ ಗುಹೆ ಹಿಂಬದಿ) ಹೋಗುವ ಕಾಲು ದಾರಿಯ ಬಳಿಯ ಗುಹಾಶ್ರಯದಲ್ಲಿನ ವರ್ಣಚಿತ್ರಗಳು



ಹಂಪಿಯ ಬ್ರಹ್ಮದೇವರ ಬಂಡೆಯ ಬಳಿಯ ವರ್ಣಚಿತ್ರಗಳು



ಹಂಪಿಯ ಮೊಸಳೆಯ್ಯನ ಗುಡ್ಡದಲ್ಲಿನ ವರ್ಣಚಿತ್ರಗಳು

***